₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಬುಧವಾರ 14.08.2024 ಸಂಪುಟ: 09 ಸಂಚಿಕೆ: 233 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ



ಫೋಗಾಟ್ ಬೆಳ್ಳಿ ತೀರ್ಪು ಇನ್ನೂ ದೂರ

ಬೆಳ್ಳಿ ಕೋರಿ ವಿನೇಶ್ ಅವರು ಸಿಎಎಸ್‌ಗೆ ಸಲ್ಲಿಸಿದ್ದ ಮನವಿಯ ತೀರ್ಪು ಅನ್ನು ಆ.16ಕ್ಕೆ ಮಂದೂಡಲಾಗಿದೆ

ಅರಣ್ಯ ಇಲಾಖೆ ಅಧಿಕಾರಿಗಳ ತೆರವು ಕಾರ್ಯಾಚರಣೆಗೆ ಸಣ್ಣ ಹಿಡುವಳಿದಾರರೇ ಟಾರ್ಗೆಟ್, ಎಸ್ಟೇಟ್, ರೆಸಾರ್ಟ್‌ಗಳಿಗಿಲ್ಲ ಆತಂಕ

ಇಷ್ಟು ದಿನವಿಲ್ಲದ ಒತ್ತುವರಿಗೆ ಈಗ ಯಾಕೆ ಒತ್ತು? ಹಸಿರು ಕಿತ್ತು ಬೋಳು ಮಾಡುವ ಅಗತ್ಯವೇನಿದೆ: ಮಲೆನಾಡು ಭಾಗದ ರೈತರ ಪ್ರಶ್ನೆ

ಸಚಿವರೇ, ಒತ್ತುವರಿ ತೆರವು ನೆಪದಲ್ಲಿ ರೈತರನ್ನು ಬೀದಿಗೆ ತರಬೇಡಿ

ರಂಜಿತ್ ಎಚ್. ಅಶ್ವತ್ಥ

ಬೆಂಗಳೂರು: ಅರಣ್ಯದ ಒತ್ತುವರಿ ಭೂಮಿಯನ್ನು ಮರಳಿ 'ಅರಣ್ಯ'ಕ್ಕೆ ಸೇರಿಸಿಕೊಳ್ಳುವ ಅತ್ಯುತ್ಸಾಹದಲ್ಲಿ, ಅಧಿಕಾರಿಗಳ ಕೈಗೆ ಒತ್ತುವರಿ ಭೂಮಿ ತೆರವುಗೊಳಿಸುವ ಅಧಿಕಾರವನ್ನು ಸಚಿವ ಈಶ್ವರ ಖಂಡ್ರೆ ನೀಡಿದ್ದಾರೆ. ಈ ಮೂಲಕ, ಮಲೆನಾಡು-ಕರಾವಳಿ ಭಾಗದ ಸಾವಿರಾರು ಕುಟುಂಬಗಳು ಮುಂದೇನು ಎನ್ನುವ ಚಿಂತೆಯಲ್ಲಿಯೇ ದಿನಗಳೆಯುವಂತಾಗಿದೆ.

ಹೌದು, ವಯನಾಡಿನ ಭೂಕುಸಿತದ ಬೆನ್ನಲ್ಲೇ 'ಎಚ್ಚೆತ್ತುಕೊಂಡಿರುವ' ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು, ಅರಣ್ಯ ಭೂಮಿಯ ಒತ್ತುವರಿಯನ್ನು ತೆರವು ಮಾಡುವಂತೆ ಸೂಚನೆ ನೀಡಿದ್ದಾರೆ. ಅಕ್ರಮವಾಗಿ ಕಟ್ಟಿಕೊಂಡಿರುವ ರೆಸಾರ್ಟ್, ಹೋಂ ಸ್ಟೇಗಳನ್ನು ತೆರವುಗೊಳಿಸುವುದಕ್ಕೆ ಯಾರದ್ದೂ ತಕರಾರಿಲ್ಲ. ಆದರೆ ಖಂಡ್ರೆಯವರ ಸೂಚನೆಯ ಒಂದು ಭಾಗವನ್ನಷ್ಟೇ ಗಂಭೀರವಾಗಿ ಪರಿಗಣಿಸಿರುವ ಅಧಿಕಾರಿಗಳು, ರೆಸಾರ್ಟ್, ಹೋಂ ಸ್ಟೇಗಳನ್ನು ಬಿಟ್ಟು ತೋಟಗಳನ್ನು 'ನಾಶ' ಮಾಡಲು ಹೊರಟ್ಟಿದ್ದಾರೆ.

ಸಂತ್ರಸ್ತರ ಈ ಪ್ರಶ್ನೆಗಳಿಗೆ ಸಚಿವರೇ ಉತ್ತರಿಸಿ

- ನ್ಯಾಯಾಲಯದಲ್ಲಿ ತಡೆಯಾಜ್ಞೆಯಿದ್ದರೂ, ಬಲವಂತದ ತೆರವು ಏಕೆ?
- ಹಸಿರೀಕರಣದ ವಕ್ತಾರರಿಗೆ 'ತೆರವಿನ ನೆಪದಲ್ಲಿ' ಮರಗಳಿಗೆ ಕೊಡಲಿ ತಪ್ಪೆನಿಸುವುದಿಲ್ಲವೇ ?
- ಕಾಫಿ ಗಿಡಗಳನ್ನು ಬುಡ ಸಮೇತ ಕಿತ್ತು ಹಾಕಿದಾಗ ಭೂ ಸವಕಳಿಯಾಗುವುದಿಲ್ಲವೇ?
- ಒತ್ತುವರಿ ತೆರವಿನ ನೆಪದಲ್ಲಿ ಖಾಲಿ ಮಾಡಿದ ಜಾಗದಲ್ಲಿ ಅರಣ್ಯ ಇಲಾಖೆಯಿಂದ ಸಸಿ ನೆಡಲಾಗುವುದೇ?
- ಮಾಹಿತಿ ನೀಡದೇ ಏಕಾಏಕಿ ತೆರವುಗೊಳಿಸಿದರೆ, ಸಂತ್ರಸ್ತ ಕುಟುಂಬ ಎಲ್ಲಿಗೆ ಹೋಗಬೇಕು?

ಅರಣ್ಯವನ್ನು ಉಳಿಸುವ ನಿಟ್ಟಿನಲ್ಲಿ ದಿಟ್ಟ ಹೆಜ್ಜೆ ಎನ್ನುತ್ತಿರುವ ಅರಣ್ಯ ಅಧಿಕಾರಿಗಳು, ಸಾವಿರಾರು ಎಕರೆ ಜಾಗದಲ್ಲಿ ದಶಕಗಳಿಂದ ಉಳುಮೆ ಮಾಡಿರುವ ತೋಟ, ಗದ್ದೆ, ಪ್ಲಾಂಟೇಷನ್‌ಗಳನ್ನು ಬುಡ ಸಮೇತ ಕಿತ್ತು ಹಾಕುವ ಕೆಲಸ ಆರಂಭಿಸಿದ್ದಾರೆ.

ಈ ರೀತಿ ಗಿಡ-ಮರಗಳನ್ನು ಕಿತ್ತುಹಾಕಿರುವ ಜಾಗದಲ್ಲಿ ಈ ಹಿಂದೆ ಇದ್ದ ಹಸಿರೀಕರಣವೂ ಇಲ್ಲ; ಅತ್ತ ಅರಣ್ಯ ಹೆಚ್ಚಿಸಲು ಸಸಿಗಳನ್ನು ನೆಟ್ಟಿಲ್ಲ. ಬದಲಿಗೆ ಹಸಿರಿನಿಂದ ಮೈತುಂಬಿದ್ದ ಜಾಗದಲ್ಲಿ ಇದೀಗ 'ಬೋಳು ಜಾಗ' ಮಾತ್ರ ಉಳಿದಿದೆ. ಈ ರೀತಿ ತೋಟವನ್ನು ಬೋಳು ಮಾಡಿ, ಖಾಲಿ ಜಾಗವನ್ನು ಸೃಷ್ಟಿಸುವುದಕ್ಕಾಗಿ ರೈತರ ಅನ್ನವನ್ನು ಕಿತ್ತುಕೊಳ್ಳುವ ಅಗತ್ಯವೇನಿತ್ತು ಎನ್ನುವುದು ಅನೇಕ ರೈತರ ಆಕ್ರೋಶವಾಗಿದೆ.

ಬೆಂಗಳೂರಲ್ಲಿ ಕೂತು ನೀಲನಕ್ಷೆ

ಕಾಡಿನ ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುವ ಬಗ್ಗೆ ಬೆಂಗಳೂರಿನ ಎಸಿ ಕೋಣೆಯಲ್ಲಿ ಕೂತು ಅಧಿಕಾರಿಗಳು ನೀಲನಕ್ಷೆ ಸಿದ್ಧಪಡಿಸಿದ್ದಾರೆ. ಆದರೆ ಈ ನೀಲನಕ್ಷೆ ಸಿದ್ಧವಾಗುವ ಮೊದಲೇ, ಸಾವಿರಾರು ಸಣ್ಣ-ಸಣ್ಣ ಹಿಡುವಳಿದಾರರು ತೋಟಗಳನ್ನು ಮಾಡಿಕೊಂಡಿದ್ದಾರೆ. ಈ ಸಣ್ಣ ಸಣ್ಣ ತೋಟದಲ್ಲಿ ದಶಕಗಳಿಂದ ಜೀವನವನ್ನು ಕಟ್ಟಿಕೊಂಡಿದ್ದಾರೆ. ರಾಜ್ಯ ಸರಕಾರ ಜಾರಿಗೊಳಿಸಿರುವ ಅಕ್ರಮ-ಸಕ್ರಮ, ಫಾರ್ಮ್ 53 ಸೇರಿದಂತೆ ಹಲವು ಕಾಯಿದೆಗಳಲ್ಲಿ ಜಮೀನ್ದಾರರು, ಪ್ರಭಾವಿಗಳು ಫಲಾನುಭವಿಗಳಾಗಿರುವುದರಿಂದ ಅವರಿಗೆ ಸಮಸ್ಯೆಯಾಗುವುದಿಲ್ಲ. ಆದರೆ ಯಾವುದೇ ಪ್ರಭಾವವಿಲ್ಲದ ಸಣ್ಣ ರೈತರ ಭೂಮಿಯನ್ನೇ ಅಧಿಕಾರಿಗಳು ಟಾರ್ಗೆಟ್ ಮಾಡಿರುವುದರಿಂದ ಇದೀಗ ಅವರ ಬದುಕು ಮೂರಾಬಟ್ಟೆಯಾಗಿದೆ.

ಒತ್ತುವರಿ ತೆರವಿನ ನೆಪದಲ್ಲಿ ಮನೆ, ತೋಟವನ್ನು ಕಳೆದುಕೊಂಡಿರುವ ರೈತರು ಮುಂದೇನು ಮಾಡಬೇಕು ಎನ್ನುವ ಆತಂಕದಲ್ಲಿದ್ದಾರೆ. ಸಚಿವ ಖಂಡ್ರೆ ಅವರು, ತೆರವಿನ ಆದೇಶ ನೀಡುವ ಮೊದಲು ಈ ನಿಟ್ಟಿನಲ್ಲಿ ಯೋಚಿಸಬೇಕಿತ್ತು. ಅದನ್ನು ಮಾಡದೇ, ಕಾಡನ್ನೇ ನೋಡದ ಅಧಿಕಾರಿಗಳ ಮಾತು ಕೇಳಿ, ಈ ರೀತಿಯ ತೀರ್ಮಾನ ಕೈಗೊಂಡರೆ ರೈತರು ಎಲ್ಲಿಗೆ ಹೋಗಬೇಕು ಎನ್ನುವ ಆಕ್ರೋಶದ ಮಾತುಗಳು ಮಲೆನಾಡು, ಕರಾವಳಿ ಭಾಗದಲ್ಲಿ ಕೇಳಿಬರುತ್ತಿದೆ.

→ 4

ಪುಟ ತೆರೆದಂತೆ...

ಪ್ರಾಚೀನ ಕಾಲದ ಗುಹಾ ಆಸ್ಪತ್ರೆಗಳು
ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ
ಸಂ.ಪುಟ | 6

ಮೂಗು ತೂರಿಸಲು ರಾಜಕಾರಣಿಗಳೇನು ಸರ್ವಜ್ಞರಾ?
ಪ್ರಕಾಶಪಥ
ಪ್ರಕಾಶ್ ಶೇಷರಾಘವಾಚಾರ್
ಸಂ.ಗಮ | 7

ಮಾತಂದ್ರೆ ಮಾತು

ಭಾರತದಲ್ಲಿ ಕೆಲವೊಂದು ತೆರಿಗೆಗಳನ್ನು ಬಹುತೇಕ ಶೂನ್ಯಕ್ಕೆ ನಾನು ಖಂಡಿತವಾಗಿ ಇಳಿಸುತ್ತಿದೆ. ಆದರೆ ಭಾರತದ ಎದುರಿಗೆ ಇರುವ ಸವಾಲುಗಳು ಯಾವ ದೇಶಗಳಿಗೂ ಇರದೇ ಇರುವಂಥದ್ದು. ಆ ಕಾರಣಕ್ಕಾಗಿ ತೆರಿಗೆ ಆದಾಯ ನಮ್ಮ ಪಾಲಿಗೆ ನಿರ್ಣಾಯಕವಾಗಿದೆ. ಜನರಿಗೆ ಹೊರೆಯಾಗದಂತೆ ಆದಾಯ ಗಳಿಸಲು ಸರ್ಕಾರ ಬದ್ಧವಾಗಿದೆ.

ನಿರ್ಮಲಾ ಸೀತಾರಾಮನ್
ಹಣಕಾಸು ಸಚಿವೆ

ದಾರಿದೀಪೋಕ್ತಿ

ನಾವು ಬೇರೆಯವರಿಗೆ ಉಪಕಾರ ಮಾಡಿದ್ದನ್ನು ನೆನಪಿನಲ್ಲಿ ಇಟ್ಟುಕೊಳ್ಳಬಾರದು. ನಾವು ಬೇರೆಯವರಿಂದ ಉಪಕಾರ ಪಡೆದಿದ್ದನ್ನು ಮರೆಯಬಾರದು. ಇವೆರಡೂ ಎಂದೂ ಅದಲು-ಬದಲಾಗದಂತೆ ನೋಡಿಕೊಳ್ಳಬೇಕು.

ವಕ್ರತುಂಡೋಕ್ತಿ

ಹಿಪ್ಪಿಯ ಹೆಂಡತಿಯನ್ನು 'ಮಿಸ್ಸಿಸಿಪ್ಪಿ' ಎಂದು ಕರೆಯಬಹುದು.

ಫನ್‌ತರಂಗ
- ರಘುಪತಿ ಶೃಂಗೇರಿ -



ಕ್ರಸ್ಟ್ ಗೇಟ್ ನೀರುಪಾಲು: ತುಂಗಭದ್ರಾ ಅಣೆಕಟ್ಟೆಗೆ ಮುಖ್ಯಮಂತ್ರಿ ಭೇಟಿ, ಪರಿಶೀಲನೆ

ನಾಳೆಯೊಳಗೆ ಡ್ಯಾಂ ಗೇಟ್ ಸಿದ್ಧ, ಮೂರು ಹಂತದಲ್ಲಿ ಗೇಟ್ ಅಳವಡಿಕೆ ಕಾರ್ಯ ಪೂರ್ಣ

ರೈತರ ಹಿತರಕ್ಷಣೆ: ಸಿಎಂ ಅಭಯ

ಹೊಸಪೇಟೆ: ತುಂಗಭದ್ರಾ ಜಲಾಶಯದ 19ನೇ ಕ್ರಸ್ಟ್ ಗೇಟ್ ನೀರಿನಲ್ಲಿ ಕೊಚ್ಚಿಹೋದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಜಲಾಶಯಕ್ಕೆ ಮಂಗಳವಾರ ಭೇಟಿ ನೀಡಿ ಪರಿಶೀಲಿಸಿದರು. ರಾಜ್ಯ ಹಿತರಕ್ಷಣೆಗೆ ತಮ್ಮ ಸರಕಾರ ಬದ್ಧವಾಗಿದ್ದು, ಅಣೆಕಟ್ಟೆಯಿಂದ ಸಾಕಷ್ಟು ನೀರು ಹರಿದುಹೋದರೂ ರೈತರ ಕನಿಷ್ಠ ಒಂದು ಬೆಳೆಗೆ ನೀರಿನ ಕೊರತೆ ಎದುರಾಗದು ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಇದೇ ವೇಳೆ 19ನೇ ಗೇಟ್ ಅಳವಡಿಕೆಗೆ 60 ಅಡಿ ಅಗಲದ ಕ್ರಸ್ಟ್‌ಗೇಟ್ ಸಿದ್ಧಗೊಳ್ಳುತ್ತಿದ್ದು, ತಜ್ಞ ಕನ್ನಯ್ಯ ನಾಯ್ಡು ನೇತೃತ್ವದಲ್ಲಿ ಮೂರು ಹಂತಗಳಲ್ಲಿ ಅಳವಡಿಸಲು ಅಧಿಕಾರಿಗಳು ಚಿಂತನೆ ನಡೆಸಿದ್ದಾರೆ. ಬುಧವಾರ ಇಲ್ಲವೇ ಗುರುವಾರ ಗೇಟ್ ಅಳವಡಿಕೆ ಕಾರ್ಯ ಆರಂಭಗೊಳ್ಳುವ ಸಾಧ್ಯತೆಯಿದೆ.

ತಾತ್ಕಾಲಿಕ ಗೇಟ್: ತುಂಗಭದ್ರಾ ಜಲಾಶಯಕ್ಕೆ ಭೇಟಿನೀಡಿದ ಸಿದ್ದರಾಮಯ್ಯ ಕಳಚಿದ ಚೈನ್‌ಲಿಂಕ್, ಕ್ರಸ್ಟ್‌ಗೇಟ್ ಇನ್ನಿತರ ವಿಚಾರಗಳ ಬಗ್ಗೆ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ್ ತಂಗಡಗಿ, ತಜ್ಞ ಕನ್ನಯ್ಯ ನಾಯ್ಡು ಸೇರಿದಂತೆ ಜಲಾಶಯದ ಅಧಿಕಾರಿಗಳಿಂದ ಮಾಹಿತಿ ನೀಡಿದರು. ಸಚಿವರಾದ ಎನ್.ಎಸ್ ಬೋಸರಾಜು, ಜಮೀರ್ ಅಹಮದ್, ಸಂಸದ ತುಕಾರಾಮ್ ಮೊದಲಾದವರು ಹಾಜರಿದ್ದರು. ಪರಿಶೀಲನೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ, ಅಣೆಕಟ್ಟೆಯ 70 ವರ್ಷದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಗೇಟ್ ಒಡೆದಿದೆ. ನೀರಿನ ರಭಸಕ್ಕೆ ಗೇಟ್ ಕೊಚ್ಚಿ ಹೋಗಿದ್ದು ಹೊಸ ಗೇಟ್ ಸಿದ್ಧಪಡಿಸುವ ಕಾರ್ಯ ನಡೆದಿದೆ ಎಂದರು. ಆ. 14ರಿಂದ ಗೇಟ್ ಅಳವಡಿಸುವ ಕಾರ್ಯಕ್ಕೆ ಚಾಲನೆ ನೀಡಲಾಗುತ್ತದೆ. ಕನ್ನಯ್ಯ ನಾಯ್ಡು ನೇತೃತ್ವದಲ್ಲಿ ತಾತ್ಕಾಲಿಕ ಗೇಟ್ ಕೂಡಿಸಲಾಗುತ್ತದೆ ಎಂದು ಸಿಎಂ ತಿಳಿಸಿದರು.

ತಜ್ಞರ ಸಲಹೆಯಂತೆ ಜಲಾಶಯ ನಿರ್ವಹಣೆ: ತಜ್ಞರ ಪ್ರಕಾರ 50 ವರ್ಷಕ್ಕೊಮ್ಮೆ ಗೇಟ್ ಬದಲಿಸಬೇಕು. ಇನ್ನು ಮುಂದೆ ತಜ್ಞರು ಹೇಳಿದಂತೆ, ಜಲಾಶಯ ನಿರ್ವಹಣೆ ಮಾಡಲಾಗುತ್ತದೆ ಎಂದರು.

→ 4

ಮೊದಲನೇ ಬೆಳೆಗೆ ನೀರಿನ ಸಮಸ್ಯೆ ಇಲ್ಲ

ಅಣೆಕಟ್ಟೆಗೆ ಗೇಟ್ ಅಳವಡಿಸಿದ ಬಳಿಕವೂ ನಮ್ಮ ಬಳಿ 63 ಟಿಎಂಸಿ ನೀರು ಉಳಿಯಲಿದೆ. ಮೊದಲನೇ ಬೆಳೆಗೆ ಯಾವುದೇ ತೊಂದರೆ ಇಲ್ಲ. ರೈತರು ಯಾವುದೇ ಕಾರಣಕ್ಕೂ ಆತಂಕ ಪಡುವ ಅಗತ್ಯವಿಲ್ಲ. ಮೊದಲನೇ ಬೆಳೆಗೆ ಬೇಕಾಗುಷ್ಟು ನೀರು ಇದೆ. ಮೊದಲ ಬೆಳೆಗೆ ಬೇಕಾದಷ್ಟು ನೀರು ನೀಡುತ್ತೇವೆ. ಆಂಧ್ರ, ತೆಲಂಗಾಣ ರಾಜ್ಯದ ನಾಯಕರು ನಾವು ಜಂಟಿಯಾಗಿದ್ದೇವೆ ಎಂದು ಹೇಳಿದರು. ಜಲಾಶಯ ವಿಚಾರದಲ್ಲಿ ರಾಜಕೀಯ ಮಾಡುವುದಿಲ್ಲ. ನಾಲ್ಕೈದು ದಿನಗಳಲ್ಲಿ ಗೇಟ್ ಕೂಡಿಸಲಾಗುತ್ತದೆ. ಮುಂದೆ ಮಳೆಯಾಗಲಿದೆ. ಜಲಾಶಯ ಭರ್ತಿಯಾಗುವ ನಿರೀಕ್ಷೆ ಇದ್ದು ಪುನಃ ಬಂದು ಬಾಗಿನ ಅರ್ಪಿಸುವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಂಪೂರ್ಣ ಸಹಕಾರ: ಆಂಧ್ರ ಸಚಿವ ಭರವಸೆ

ತುಂಗಭದ್ರ ಜಲಾಶಯದ ಕ್ರಸ್ಟ್ ಗೇಟ್ ಹಾನಿ ಹಿನ್ನೆಲೆ ಆಂಧ್ರ ಪ್ರದೇಶ ಸರಕಾರ ಕರ್ನಾಟಕದೊಂದಿಗೆ ನಿರಂತರ ಸಂಪರ್ಕದಲ್ಲಿದೆ. ಹೊಸ ಗೇಟ್ ಅಳವಡಿಕೆಗೆ ಸಂಬಂಧಿಸಿದಂತೆ ಆಂಧ್ರಪ್ರದೇಶದಿಂದ ಎಲ್ಲ ಸಹಕಾರ ನೀಡಲಾಗುವುದು. ಈ ವಿಚಾರದಲ್ಲಿ ಆಂಧ್ರ, ತೆಲಂಗಾಣ ಹಾಗೂ ಕರ್ನಾಟಕ ರಾಜ್ಯಗಳು ಒಗ್ಗೂಡಿ ಕೆಲಸ ಮಾಡುತ್ತೇವೆ ಎಂದು ಆಂಧ್ರಪ್ರದೇಶ ಜಲ ಸಂಪನ್ಮೂಲ ಸಚಿವ ನಿಮ್ಮಲ ರಾಮಾ ನಾಯ್ಡು ಹೇಳಿದರು. ಜಲಾಶಯಕ್ಕೆ ಮಂಗಳವಾರ ಭೇಟಿ ನೀಡಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವು ಕರ್ನಾಟಕ ಸರಕಾರದ ಜತೆ ನಿರಂತರ ಸಂಪರ್ಕದಲ್ಲಿದ್ದೇವೆ. ಟಿಬಿ ಬೋರ್ಡ್ ನಲ್ಲಿ 130 ಕೋಟಿ ರು. ಅನುದಾನವಿದೆ. ಸದ್ಯ ಗೇಟ್ ಅಳವಡಿಕೆ ಕಾರ್ಯಕ್ಕೆ 5 ಕೋಟಿ ರೂ. ಅನುದಾನ ಬಿಡುಗಡೆ ಮಾಡಲಾಗಿದೆ ಎಂದರು.

ಪ್ರಸ್ತುತ ಒಳಹರಿವು ಸರಾಸರಿ 35,425 ಕ್ಯೂಸೆಕ್ ಇದ್ದು, ಕಳಚಿದ ಕ್ರಸ್ಟ್ ಗೇಟ್ ಒಳಗೊಂಡಂತೆ ಇತರೆ ಗೇಟ್‌ಗಳಿಂದ 1,25,000 ರಿಂದ 1,40,000 ಕ್ಯುಸೆಕ್ ವರೆಗೆ ನೀರು ಹೊರಬಿಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಆಣೆಕಟ್ಟು ಗೇಟುಗಳ ವಿನ್ಯಾಸ ತಜ್ಞ ಹೈದರಾಬಾದ್‌ನ ಕನ್ನಯ್ಯ ನಾಯ್ಡು ಅವರಿಂದ ತಾತ್ಕಾಲಿಕ ಸ್ಟಾಫ್‌ಲಾಗ್ ಗೇಟ್‌ನ ವಿನ್ಯಾಸ ಪಡೆದು ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ರಾಮ್‌ದೇವ್ ವಿರುದ್ಧದ ನ್ಯಾ.ನಿಂದನೆ ಕೇಸ್ ಅಂತ್ಯ



ದೆಹಲಿ: ಪತಂಜಲಿ ಮುಖ್ಯಸ್ಥ ಬಾಬಾ ರಾಮ್‌ದೇವ್ ಮತ್ತು ಸಿಇಒ ಆಚಾರ್ಯ ಬಾಲಕೃಷ್ಣ ವಿರುದ್ಧದ ನ್ಯಾಯಾಂಗ ನಿಂದನೆ ಪ್ರಕರಣವನ್ನು ಸುಪ್ರೀಂ ಮಂಗಳವಾರ ಅಂತ್ಯಗೊಳಿಸಿದೆ. ಕೋರ್ಟ್ ಅವರ ಬೇಷರತ್ ಕ್ಷಮಾಪಣೆ ಹಾಗೂ ತಪ್ಪು ದಾರಿಗೆ ಎಳೆಯುವ ಜಾಹೀರಾತು ಪ್ರಕಟಿಸುವುದಿಲ್ಲ ಎಂಬ ಭರವಸೆ ಪತ್ರವನ್ನೂ ಅಂಗೀಕರಿಸಿದೆ. ಪತಂಜಲಿ ಮುಖ್ಯಸ್ಥರಿಬ್ಬರ ಕ್ಷಮಾಪಣೆ ಅಂಗೀಕರಿಸಿದ ನ್ಯಾಯಪೀಠ, ಭರವಸೆ ಪತ್ರದಲ್ಲಿ ಉಲ್ಲೇಖಿಸಿ ರುವ ಅಂಶಗಳನ್ನು ಉಲ್ಲಂಘಿಸಿದರೆ ಮತ್ತೆ ನ್ಯಾಯಾಂಗ ನಿಂದನೆ ಪ್ರಕರಣ ಆರಂಭಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದೆ.

ಇಂದಿರಾ ಕ್ಯಾಂಟೀನ್‌ಗೆ ಸದ್ಯವೇ ಡಿಜಿಟಲ್ ಸ್ಪರ್ಶ

ಬೆಂಗಳೂರು: ನಗರದ ಇಂದಿರಾ ಕ್ಯಾಂಟೀನ್‌ಗಳಿಗೆ ಡಿಜಿಟಲ್ ಸ್ಪರ್ಶ ನೀಡಲು ಬಿಬಿಎಂಪಿ ಮುಂದಾಗಿದ್ದು, ಊಟ , ಉಪಾಹಾರಗಳನ್ನು ಟಚ್ ಸ್ಕ್ರೀನ್ ಮೂಲಕ ಬುಕ್ ಮಾಡಬಹುದಾಗಿದೆ. ಆರ್‌ಆರ್ ನಗರದ ವಲಯದ 11 ಕ್ಯಾಂಟೀನ್‌ಗಳಲ್ಲಿ ಈ ಯೋಜನೆಯನ್ನು ಪ್ರಾಥಮಿಕವಾಗಿ ಆರಂಭಿಸಲಾಗುತ್ತಿದ್ದು, ಸಾಧಕ ಬಾಧಕಗಳನ್ನು ಅಧ್ಯಯನ ಮಾಡಿದ ಬಳಿಕ 169 ಇಂದಿರಾ ಕ್ಯಾಂಟೀನ್‌ಗಳನ್ನು ಡಿಜಿಟಲ್ ಆಗಿಸಲು ತೀರ್ಮಾನಿಸಲಾಗಿದೆ.

ಶೇಖ್ ಹಸೀನಾ ವಿರುದ್ಧ ಕೊಲೆ ಕೇಸ್

ಢಾಕಾ: ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ 76 ವರ್ಷದ ಶೇಖ್ ಹಸೀನಾ ವಿರುದ್ಧ ಕೊಲೆ ಪ್ರಕರಣ ದಾಖಲಾಗಿದೆ. ಢಾಕಾದ ಮೆಟ್ರೊ ಪಾಲಿಟನ್ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಾಗಿದ್ದು, ಕಿರಾಣಿ ಅಂಗಡಿ ಮಾಲೀಕ ಪೊಲೀಸ್ ಗೋಲಿಬಾರ್‌ನಲ್ಲಿ ಸಾವಿಗೀಡಾದ ಪ್ರಕರಣದಲ್ಲಿ ಅಂದಿನ ಶೇಖ್ ಹಸೀನಾ ಪಾತ್ರದ ಬಗ್ಗೆ ತನಿಖೆ ನಡೆಸುವಂತೆ ನ್ಯಾಯಾಲಯ ಪೊಲೀಸರಿಗೆ ಆದೇಶಿಸಿದೆ.

ಸೌಮ್ಯಾರೆಡ್ಡಿ ಕೆಪಿಸಿಸಿ ಮಹಿಳಾ ಅಧ್ಯಕ್ಷೆ

ಬೆಂಗಳೂರು: ಕೆಪಿಸಿಸಿ ಮಹಿಳಾ ಘಟಕದ ರಾಜ್ಯಾಧ್ಯಕ್ಷೆಯಾಗಿ ಮಾಜಿ ಶಾಸಕಿ ಸೌಮ್ಯಾರೆಡ್ಡಿ ಅವರನ್ನು ಆಯ್ಕೆ ಮಾಡಲಾಗಿದೆ. ಮಹಿಳಾ ಘಟಕದ ರಾಜ್ಯಾಧ್ಯಕ್ಷೆಯಾಗಿದ್ದ ಪುಷ್ಪಾ ಅಧಿಕಾರಕ್ಕೆ ಬಂದು ಮೂರು ವರ್ಷ ಕಳೆದಿತ್ತು. ಹೀಗಾಗಿ ಸೌಮ್ಯಾರೆಡ್ಡಿ ಅವರನ್ನು ನೂತನ ರಾಜ್ಯಾಧ್ಯಕ್ಷೆಯಾಗಿ ನೇಮಿಸಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮಂಗಳವಾರ ಆದೇಶ ಹೊರಡಿಸಿದ್ದಾರೆ.

ಚನ್ನಪಟ್ಟಣದಿಂದ ನಿಖಿಲ್ ಸ್ಪರ್ಧೆ ಇಲ್ಲ

ಮೈಸೂರು: ಚನ್ನಪಟ್ಟಣ ಉಪಚುನಾವಣೆಯಲ್ಲಿ ನಿಖಿಲ್ ಕುಮಾರಸ್ವಾಮಿ ಸ್ಪರ್ಧಿಸಲು ಸಿದ್ಧರಿಲ್ಲ ಎಂದು ಮಾಜಿ ಸಚಿವ ಸಾ.ರಾ. ಮಹೇಶ್ ಸ್ಪಷ್ಟಪಡಿಸಿದ್ದಾರೆ. ತಾವು ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ಈಗಾಗಲೇ ನಿಖಿಲ್ ತಿಳಿಸಿದ್ದಾರೆ. ಸ್ಪರ್ಧಿಸು ವಂತೆ ನಿಖಿಲ್ ಮೇಲೆ ಒತ್ತಡ ಇರುವುದು ನಿಜ. ಅವರು ಅದಕ್ಕೆ ಮಣಿಯುವ ಸ್ಥಿತಿಯಲ್ಲಿಲ್ಲ ಎಂದರು.

ವೈದ್ಯೆ ಹತ್ಯೆಗೆ ದೇಶಾದ್ಯಂತ ಭುಗಿಲೆದ್ದ ಪ್ರತಿಭಟನೆ, ನಿಮಾನ್ಸ್‌ನಲ್ಲೂ ಸಂಪು

ವೈದ್ಯೆಕೊಲೆ: ಸಿಬಿಐ ತನಿಖೆಗೆ ಹೈ ಆದೇಶ

ಕೋಲ್ಕತ್ತ: ಪಶ್ಚಿಮ ಬಂಗಾಳ ರಾಜ್ಯ ಸರಕಾರದ ಸ್ವಾಮ್ಯದ ಕೋಲ್ಕತ್ತದಲ್ಲಿನ ಆರ್‌ಜೆಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿನ ಕಿರಿಯ ವೈದ್ಯೆಯ ಅತ್ಯಾಚಾರ ಮತ್ತು ಬರ್ಬರ ಕೊಲೆ ಪ್ರಕರಣದ ತನಿಖೆಯನ್ನು ಕೇಂದ್ರ ತನಿಖಾ ದಳಕ್ಕೆ(ಸಿಬಿಐ) ವಹಿಸಿ ಕೋಲ್ಕತ್ತ ಹೈಕೋರ್ಟ್ ಮಂಗಳವಾರ ಆದೇಶಿಸಿದೆ.

ನ್ಯಾ.ಟಿ.ಎಸ್.ಶಿವಜ್ಞಾನಂ, ನ್ಯಾ. ಹಿರಣ್ಮಯಿ ಭಟ್ಟಾಚಾರ್ಯ ಅವರ ವಿಭಾಗೀಯ ಪೀಠ ಪ್ರಕರಣದ ತನಿಖೆ ಹೊಣೆಯನ್ನು ಸಿಬಿಐಗೆ ವಹಿಸಿದ್ದು, ಸಂಗ್ರಹಿಸಿದ ಸಾಕ್ಷ್ಯಗಳು, ದಾಖಲೆಗಳನ್ನು ಹಸ್ತಾಂತರಿಸುವಂತೆ ರಾಜ್ಯ ಪೊಲೀಸರಿಗೆ ನಿರ್ದೇಶನ ನೀಡಿದೆ.

ವೈದ್ಯಕೀಯ ಕಾಲೇಜು,ಆಸ್ಪತ್ರೆಯ ಪ್ರಾಂಶುಪಾಲ ಡಾ.ಸಂದೀಪ್ ಘೋಷ್ ರಾಜೀನಾಮೆ ನೀಡಿದ್ದರೂ ಅವರನ್ನು ತಕ್ಷಣವೇ ಸಿಎನ್‌ಎಂಸಿ ಮೆಡಿಕಲ್ ಕಾಲೇಜು ಪ್ರಾಂಶುಪಾಲರಾಗಿ ನೇಮಿಸಿದ ರಾಜ್ಯ ಸರಕಾರದ ಕ್ರಮವನ್ನೂ ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿದೆ. ಸಂದೀಪ್ ಘೋಷ್ ತಕ್ಷಣ ಕಡ್ಡಾಯ ರಜೆ ಮೇಲೆ ಹೋಗಬೇಕು ಎಂದು ಸೂಚಿಸಿದೆ. ಇದೇ ವೇಳೆ ಮುಷ್ಕರ ವೈದ್ಯರು ಸೇವೆಗೆ ಮರಳಬೇಕೆಂದು ವಿನಂತಿಸಿಕೊಂಡಿದೆ.

ರಾಷ್ಟ್ರೀಯ ಮಾನವ ಹಕ್ಕು ಆಯೋಗ ನೋಟಿಸ್

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ(ಎನ್‌ಎಚ್‌ಆರ್‌ಸಿ) ಕಿರಿಯ ವೈದ್ಯೆ ಹತ್ಯೆ ಪ್ರಕರಣದ ತನಿಖೆ ಯಲ್ಲಿ ನಿರ್ಲಕ್ಷ್ಯ ತೋರಿದ್ದಕ್ಕಾಗಿ ಪಶ್ಚಿಮ ಬಂಗಾಳ ಸರಕಾರ ಮತ್ತು ಪೊಲೀಸ್ ಇಲಾಖೆಗೆ ನೋಟಿಸ್ ನೀಡಿದೆ. ಮಾಧ್ಯಮಗಳ ವರದಿ ಆಧರಿಸಿ ಸ್ವಪ್ರೇರಿತ ಪ್ರಕರಣ ದಾಖಲಿಸಿರುವ ಎನ್‌ಎಚ್‌ಆರ್‌ಸಿ, ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಹಾಗೂ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ ನೋಟಿಸ್ ನೀಡಿದೆ.

ಶಿರೂರು: ನೀರುಪಾಲಾದ ಲಾರಿಯ ಜಾಕ್ ಪತ್ತೆ

ಮತ್ತೆ ಶೋಧ ಕಾರ್ಯಾಚರಣೆ

ಅಂಕೋಲಾ: ಉತ್ತರಕನ್ನಡ ಜಿಲ್ಲೆ ಅಂಕೋಲಾ ತಾಲೂಕಿನ ಶಿರೂರು ಬಳಿಯ ರಾಷ್ಟ್ರೀಯ ಹೆದ್ದಾರಿ 66 ರಲ್ಲಿ ನಡೆದಿದ್ದ ಗುಡ್ಡ ಕುಸಿತದಲ್ಲಿ ಕಾಣೆಯಾಗಿರುವ ಕೇರಳ ಮೂಲದ ಲಾರಿ ಚಾಲಕ ಅರ್ಜುನ್, ಶಿರೂರಿನ ಲೋಕೇಶ್ ನಾಯ್ಕ ಮತ್ತು ಜಗನ್ನಾಥ ನಾಯ್ಕರ ಪತ್ತೆಗೆ ಮತ್ತೆ ಕಾರ್ಯಾಚರಣೆ ಆರಂಭಿಸಲಾಗಿದೆ. ಈಜು ತಜ್ಞ ಈಶ್ವರ ಮಲ್ಪೆ ತಂಡ ಶೋಧ ಕಾರ್ಯ ಆರಂಭಿಸಿದ್ದು, ಗಂಗಾವಳಿ ನದಿಯಿಂದ ಲಾರಿಯ ಎರಡು ಬಿಡಿ ಭಾಗಗಳನ್ನು ಮೇಲಕ್ಕೆತ್ತಲಾಗಿದೆ.

ಕೇರಳ ಮೂಲದ ಚಾಲಕ ಅರ್ಜುನ್ ಓಡಿಸುತ್ತಿದ್ದ ಲಾರಿಯ ಜಾಕ್ ಗಂಗಾವಳಿ ನದಿಯಲ್ಲಿ ಸ್ಕೂಬಾ ಡೈವ್ ಕಾರ್ಯಾಚರಣೆ ವೇಳೆ ಪತ್ತೆಯಾಗಿದೆ. ಸಿಕ್ಕಿರುವ ಜಾಕ್ ಅರ್ಜುನ್ ಓಡಿಸುತ್ತಿದ್ದ ಲಾರಿಯದ್ದೆಂದು ಲಾರಿ ಮಾಲೀಕ ಮುಫೀನ್ ಖಚಿತಪಡಿಸಿದ್ದಾರೆ. ಇದರೊಂದಿಗೆ ಲಾರಿ ಬಾಗಿಲಿನ ಕೀಲು ಕೂಡ ಪತ್ತೆಯಾಗಿದೆ. ಜಿಲ್ಲಾಡಳಿತದಿಂದ ಇದುವರೆಗೂ ಅಧಿಕೃತ ಅನುಮತಿ ಸಿಕ್ಕಿಲ್ಲ. ಈ ಹಿನ್ನೆಲೆಯಲ್ಲಿ ಶಾಸಕ ಸತೀಶ್ ಸೈಲ್ ನೇತೃತ್ವದಲ್ಲಿ ಈಶ್ವರ್ ಮಲ್ಪೆ ಗಂಗಾವಳಿ ನದಿಗೆ ಇಳಿದಿದ್ದಾರೆ. ಇವರೊಂದಿಗೆ ಕೇರಳ ರಾಜ್ಯದ ಶಾಸಕ ಆಶ್ರಫ್ ಕೂಡ ಹಾಜರಿದ್ದರು.

ದಕ್ಷಿಣ ಕರ್ನಾಟಕದ ಹಲವೆಡೆ ವರುಣನ ಆರ್ಭಟ ಸಾಧ್ಯತೆ

ಬೆಂಗಳೂರು ಸೇರಿ ಹಲವು ಜಿಲ್ಲೆಗಳಲ್ಲಿ ಅಲರ್ಟ್

ರಾಜ್ಯದಲ್ಲಿ 5 ದಿನ ಭಾರಿ ಮಳೆ

ಬೆಂಗಳೂರು: ರಾಜ್ಯದಲ್ಲಿ ಕಳೆದ ಒಂದು ತಿಂಗಳಿಂದ ಅಬ್ಬರಿಸಿ ಸ್ವಲ್ಪ ದಿನಗಳ ಕಾಲ ಬಿಡುವು ಪಡೆದಿದ್ದ ವರುಣ ಮತ್ತೆ ಅಬ್ಬರಿಸಲಿದ್ದಾನೆ. ಮುಂದಿನ ಐದು ದಿನಗಳ ಕಾಲ ಬೆಂಗಳೂರು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಭಾರೀ ಮಳೆ ಹಿನ್ನೆಲೆಯಲ್ಲಿ ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ, ತುಮಕೂರು, ಮೈಸೂರು, ಮಂಡ್ಯ, ಚಾಮರಾಜನಗರ, ಜಿಲ್ಲೆಗಳಿಗೆ ಯಲ್ಲೋ ಅಲರ್ಟ್ ಘೋಷಿಸಲಾಗಿದೆ.

ಉತ್ತರ ಒಳನಾಡಿನಲ್ಲಿ ರಾಯಚೂರು, ಗದಗ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಪ್ರತ್ಯೇಕವಾಗಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಮಲೆನಾಡಿನ ಚಿಕ್ಕಮಗಳೂರು, ಶಿವಮೊಗ್ಗ, ಕೊಡಗು, ಹಾಸನ ಮತ್ತು ಕರಾವಳಿ ಜಿಲ್ಲೆಗಳಲ್ಲಿ ಚದುರಿದಂತೆ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ.

ಬೀದಿಬದಿ ಅಂಗಡಿಗಳ ತೆರವು

ಭಾನುವಾರ ಬೆಂಗಳೂರಿನಲ್ಲಿ ಸುರಿದ ಧಾರಾಕಾರ ಮಳೆಯಿಂದಾಗಿ ಹಲವೆಡೆ ಪ್ರವಾಹ ಪರಿಸ್ಥಿತಿ ಉಂಟಾಗಲು ಬೀದಿಬದಿ ಅಂಗಡಿಗಳೇ ಕಾರಣವಾದ ಹಿನ್ನೆಲೆಯಲ್ಲಿ ಅಂಗಡಿಗಳ ತೆರವಿಗೆ ಬಿಬಿಎಂಪಿ ಮುಂದಾಗಿದೆ. ಡಿಸಿಎಂ ಡಿ.ಕೆ. ಶಿವಕುಮಾರ್ ಸೂಚನೆ ಮೇರೆಗೆ ಪಾದಚಾರಿ ಮಾರ್ಗಗಳ ಲ್ಲಿರುವ ಅಂಗಡಿಗಳನ್ನು ತೆರವು ಗೊಳಿ ಸಲು ಮಹಾನಗರಪಾಲಿಕೆ ಶೀಘ್ರ ಕಾರ್ಯಾಚರಣೆ ಕೈಗೊಳ್ಳಲು ಸಿದ್ಧತೆ ನಡೆಸಿದೆ.

ರಿಯಲ್ ಎಸ್ಟೇಟ್‌ಗೆ ಕೊಡಲು ಹುನ್ನಾರ: ಸಚಿವ ಎಚ್ಡಿಕೆ ಆರೋಪ

ಎಚ್‌ಎಂಟಿ ಭೂಮಿ ಮರಳಿಸಲಾಗದು

ಬೆಂಗಳೂರು: ಕೇಂದ್ರ ಸರಕಾರಿ ಸ್ವಾಮ್ಯದ ಎಚ್‌ಎಂಟಿ ಕಾರ್ಖಾನೆಗೆ ನೀಡಿರುವ ಭೂಮಿಯನ್ನು ವಾಪಸು ಪಡೆಯುವ ಬಗ್ಗೆ ಸಚಿವ ಈಶ್ವರ್ ಖಂಡ್ರೆ ಹೇಳಿಕೆಗೆ ಕಿಡಿಕಾರಿರುವ ಕೇಂದ್ರ ಭಾರಿ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ, ಎಚ್‌ಎಂಟಿ ಅಧೀನದ ಲ್ಲಿರುವ ಭೂಮಿಯನ್ನು ರಾಜ್ಯ ಸರಕಾರಕ್ಕೆ ವಾಪಸು ಮಾಡುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರಕಾರ ದುರುದ್ದೇಶ ಪೂರಿತವಾಗಿ ಭೂಮಿ ವಿಷಯದಲ್ಲಿ ಕಿರುಕುಳ ನೀಡಿದರೆ ನಾವು ನ್ಯಾಯಾಲಯದ ಮೊರೆ ಹೋಗುತ್ತೇವೆ ಎಂದು ಎಚ್ಚರಿಕೆ ಕೊಟ್ಟರು. ಮೈಸೂರು ಮಹಾರಾಜರ ಕಾಲದಲ್ಲಿ ಸರ್ ಎಂ. ವಿಶ್ವೇಶ್ವರಯ್ಯ ಮಾರ್ಗದರ್ಶನದಲ್ಲಿ ಸ್ಥಾಪನೆಯಾದ ಎಚ್‌ಎಂಟಿ ಕಾರ್ಖಾನೆಗೆ ಯಾವುದೇ ಜಮೀನನ್ನು ಉಚಿತವಾಗಿ ನೀಡಿಲ್ಲ. ಬೇಕಿದ್ದರೆ ರಾಜ್ಯ ಅರಣ್ಯ ಸಚಿವರು ದಾಖಲೆ ಪರಿಶೀಲಿಸಲಿ ಎಂದು ವ್ಯಂಗ್ಯವಾಡಿದರು.

ಯಾವ ಬಿಲ್ಡರ್‌ಗೆ ಕೊಡುತ್ತೀರಿ..?

ಕಾರ್ಖಾನೆಯ ವಶದಲ್ಲಿರುವ ಜಮೀನು ತೆಗೆದು ಕೊಂಡು ಏನು ಮಾಡುತ್ತೀರಿ ಸಚಿವರೇ? ಯಾವ ಬಿಲ್ಡರ್‌ಗೆ ದಾನ ಮಾಡುತ್ತೀರಿ? ಹಿಂದೆ ಬೆಂಗಳೂರು ನಗರವನ್ನು ಸಿಂಗಾಪುರ ಮಾಡು ತ್ತೇವೆ ಎಂದು ಅಧಿಕಾರಕ್ಕೆ ಬಂದ ನಿಮ್ಮ ಪಕ್ಷದ ನಾಯಕರು ಮಾಡಿದ್ದೇನು ಎಂದು ವಾಗ್ದಾಳಿ ನಡೆಸಿದರು.

ಕಂಪನಿಯಿಂದ 299 ಎಕರೆ ವಿಸ್ತೀರ್ಣದ ಭೂಮಿಯನ್ನು ಕೂಡಲೇ ವಶಕ್ಕೆ ಪಡೆಯುವ ಬಗ್ಗೆ ಕರ್ನಾಟಕ ಅರಣ್ಯ ಇಲಾಖೆ, ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಮೊನ್ನೆ ಪತ್ರ ಬರೆದಿದೆ. ಯಾವ ಆಧಾರದ ಮೇಲೆ ಈ ಪತ್ರ ಬರೆಯಲಾಯಿತು ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ತಿಳಿಸಬೇಕು.

- ಎಚ್.ಡಿ. ಕುಮಾರಸ್ವಾಮಿ
ಕೇಂದ್ರ ಭಾರಿ ಕೈಗಾರಿಕಾ ಸಚಿವ

ಜಮೀನು ಮಾರಿದ್ದು ಎಚ್‌ಎಂಟಿ

ಎಚ್‌ಎಂಟಿ ಜಮೀನನ್ನು ರಿಯಲ್ ಎಸ್ಟೇಟ್‌ನವರಿಗೆ ನೀಡಲು ರಾಜ್ಯ ಸರಕಾರ ಯತ್ನಿಸುತ್ತಿದೆ ಎಂಬ ಕೇಂದ್ರ ಸಚಿವ ಕುಮಾರಸ್ವಾಮಿ ಹೇಳಿಕೆಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದಾರೆ. ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ಅವರು, ಜಮೀನು ಮಾರಾಟ ಮಾಡಿದ್ದು, ಎಚ್‌ಎಂಟಿಯೇ ಹೊರತು ರಾಜ್ಯ ಸರಕಾರವಲ್ಲ ಎಂದು ಸ್ಪಷ್ಟಪಡಿಸಿದರು.

ಕೇಂದ್ರ ಸರಕಾರಿ ಸ್ವಾಮ್ಯದ ಎಚ್‌ಎಂಟಿ ರಿಯಲ್ ಎಸ್ಟೇಟ್ ಸಂಸ್ಥೆಯಂತೆ ವರ್ತಿಸುತ್ತಿದೆ. 1997ರಿಂದ 2011ರವರೆಗೆ ಎಚ್‌ಎಂಟಿ ತನ್ನ ವಶದಲ್ಲಿದ್ದ ಅರಣ್ಯ ಭೂಮಿಯನ್ನು ಅಕ್ರಮವಾಗಿ ಹಲವು ಕಂಪನಿಗಳಿಗೆ ಮಾರಾಟ ಮಾಡಿದೆ. ಖಾಸಗಿ ಮತ್ತು ಸರಕಾರಿ ಸಂಸ್ಥೆಗಳಿಗೆ 165 ಎಕರೆ ಭೂಮಿಯನ್ನು 313 ಕೋಟಿಗೂ ಹೆಚ್ಚು ದರಕ್ಕೆ ಮಾರಾಟ ಮಾಡಿದೆ.

- ಈಶ್ವರ ಖಂಡ್ರೆ, ಅರಣ್ಯ ಸಚಿವ

→ 4

ರೈಲ್ವೆ ಟ್ರ್ಯಾಕ್‌ಗಿಳಿದ ಬಾಲಕನ ರಕ್ಷಣೆ

ಬೆಂಗಳೂರು: ಭಾನುವಾರ ನಗರದ ಕೆಂಪೇಗೌಡ ರೈಲ್ವೇ ನಿಲ್ದಾಣದಲ್ಲಿ ಹಳಿಗೆ ಜಿಗಿದ ಬಾಲಕನನ್ನು ಅಂಚೆ ಇಲಾಖೆಯ ಗುತ್ತಿಗೆ ನೌಕರರು ರಕ್ಷಿಸಿದ ಘಟನೆ ನಡೆದಿದೆ.

ಭಾನುವಾರ ಸಂಜೆ 6.15 ಗಂಟೆಗೆ ಬಾಲಕನೋರ್ವ ಬಲೂನ್ ಕೈ ತಪ್ಪಿಹೋಯಿತು ಎಂದು ಬೆನ್ನಟ್ಟಿ ಹೋಗಿ ರೈಲ್ವೆ ಹಳಿಗೆ ಜಿಗಿದಿದ್ದರಿಂದ ತೀವ್ರ ಆತಂಕ ಸೃಷ್ಟಿಯಾಗಿತ್ತು. ಈ ವೇಳೆ ರೈಲ್ವೆ ನಿಲ್ದಾಣದಲ್ಲಿದ್ದ ಭಾರತೀಯ ಅಂಚೆ ಇಲಾಖೆಯ ಗುತ್ತಿಗೆ ಕೆಲಸದಲ್ಲಿದ್ದ ದಿನಗೂಲಿ ನೌಕರರಾದ ಉಮೇಶ್ ಹಾಗೂ ಮುಕುಂದನ್ ತಕ್ಷಣ ಎಚ್ಚೆತ್ತುಕೊಂಡು ಹಳಿಗೆ ಜಿಗಿದಿದ್ದು, ನೌಕರರ ಸಮಯಪ್ರಜ್ಞೆ ಹಾಗೂ ತ್ವರಿತ ಕಾರ್ಯದಿಂದಾಗಿ ಪುಟ್ಟ ಬಾಲಕನ ಜೀವ ಉಳಿದಿದೆ.

ಅಪಘಾತ: ಸಾವಿನ ಸಂಖ್ಯೆ ಇಳಿಕೆ

ಕಳೆದ ಮೂರು ತಿಂಗಳಲ್ಲಿ 2,682 ಮಂದಿ ರಸ್ತೆ ಅಪಘಾತಕ್ಕೆ ಬಲಿ

ಬೆಂಗಳೂರು: ಅತಿ ವೇಗಕ್ಕೆ ಕಡಿವಾಣ, ಹೆಲ್ಮೆಟ್ ಹಾಗೂ ಸೀಟ್ ಬೆಲ್ಟ್ ಸೇರಿದಂತೆ ಸಂಚಾರ ನಿಯಮಗಳ ಪಾಲನೆಗೆ ಹೆಚ್ಚು ಒತ್ತು ನೀಡಿದ ಫಲದಿಂದಾಗಿ ರಾಜ್ಯದಲ್ಲಿ ಸಂಭವಿಸಿದ ಅಪಘಾತ ಪ್ರಕರಣಗಳಲ್ಲಿನ ಸಾವಿನ ಸಂಖ್ಯೆ ಇಳಿಕೆಯಾಗಿದೆ.

ಕಳೆದ 3 ತಿಂಗಳಲ್ಲಿ 2,682 ಮಂದಿ ರಸ್ತೆ ಅಪಘಾತದಲ್ಲಿ ಬಲಿಯಾಗಿದ್ದಾರೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಸಂಖ್ಯೆ ಕಡಿಮೆಯಾಗಿರುವುದು ಕೊಂಚ ಆಶಾದಾಯಕವಾಗಿದೆ. ರಾಜ್ಯದಲ್ಲಿ ವರ್ಷದಿಂದ ವರ್ಷಕ್ಕೆ ಸಂಭವಿಸುವ ರಸ್ತೆ ಅಪಘಾತ ಪ್ರಕರಣಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಸಾವನ್ನಪ್ಪುತ್ತಿದ್ದಾರೆ. ಅಧಿಕವಾಗುತ್ತಿರುವ ಮರಣ ಸಂಖ್ಯೆಯನ್ನು ಕಡಿಮೆಗೊಳಿಸಲು ರಸ್ತೆ ಹಾಗೂ ಸುರಕ್ಷತೆ ಇಲಾಖೆ ಕೈಗೊಂಡ ಸುಧಾರಣೆಗಳಿಂದ ಕಳೆದ ವರ್ಷಕ್ಕಿಂತ ಈ ಬಾರಿ ಅಪಘಾತದಲ್ಲಿ ಬಲಿಯಾಗುವವರ ಸಂಖ್ಯೆ ಇಳಿಕೆಯಾಗಿದೆ.

2023ರ ಮೇಯಿಂದ ಜುಲೈವರೆಗೆ 3,122 ಮಂದಿ ಸಾವನ್ನಪ್ಪಿದ್ದರೆ, ಪ್ರಸ್ತಕ ವರ್ಷದ ಇದೇ ಅವಧಿಯಲ್ಲಿ 2,682 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಪ್ರತಿದಿನ ಸರಾಸರಿ 29 ಮಂದಿ ಆ್ಯಕ್ಸಿಡೆಂಟ್‌ನಲ್ಲಿ ಸಾವನ್ನಪ್ಪಿದರೆ, ಕಳೆದ ವರ್ಷ ಸರಾಸರಿ 34 ಮಂದಿ ರಸ್ತೆ ಅಪಘಾತದಲ್ಲಿ ಬಲಿಯಾಗಿದ್ದರು ಎಂಬ ಅಂಶ ಬಹಿರಂಗವಾಗಿದೆ.

ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಲ್ಲಿ ಸಂಭವಿಸುತ್ತಿರುವ ಅಪಘಾತ ಪ್ರಕರಣಗಳಿಗೆ ಮಿತಿಮೀರಿದ ವೇಗದಲ್ಲಿ ವಾಹನ ಚಾಲನೆ ಹಾಗೂ ಸಂಚಾರ ನಿಯಮ ಉಲ್ಲಂಘಿಸುತ್ತಿರುವುದೇ ಕಾರಣ. ರಸ್ತೆ ಮೂಲಸೌಕರ್ಯ ಕೊರತೆ, ಅಜಾಗರೂಕತೆಯಿಂದ ವಾಹನ ಚಾಲನೆ ಎಂದು ಕಂಡುಕೊಂಡಿರುವ ಪೊಲೀಸರು ಇದನ್ನು ತಹಬದಿಗೆ ತರಲು ವೇಗದ ಮಿತಿ ನಿಗದಿ, ನಿರಂತರ ಡ್ರಂಕ್ ಅಂಡ್ ಡ್ರೈವ್ ತಪಾಸಣೆ, ಹೆಲ್ಮೆಟ್ ಹಾಗೂ ಸೀಟ್ ಬೆಲ್ಟ್ ಧರಿಸದವರ ವಿರುದ್ಧ ವಿಶೇಷ ಕಾರ್ಯಾಚರಣೆ ಹಾಗೂ ಗೂಡ್ಸ್ ವಾಹನಗಳಿಗೆ ಶಿಸ್ತುಪಥ, ಬ್ಲ್ಯಾಕ್ ಸ್ಪಾಟ್‌ಗಳಲ್ಲಿರುವ ರಸ್ತೆ ಲೋಪದೋಷಗಳ ನಿವಾರಣೆಯಿಂದಾಗಿ ಸಾವನ್ನಪ್ಪುವರ ಸಂಖ್ಯೆಯಲ್ಲಿ ಕಡಿಮೆಯಾಗಿದೆ ಎಂದು ಸಂಚಾರ ಹಾಗೂ ರಸ್ತೆ ಸುರಕ್ಷತೆ ಇಲಾಖೆಯ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಅಲೋಕ್ ಕುಮಾರ್ ತಿಳಿಸಿದ್ದಾರೆ.

ರಾಜಧಾನಿಯಲ್ಲಿ ಪ್ರತಿ ದಿನ ಇಬ್ಬರ ಸಾವು

ಕಳೆದ ವರ್ಷ ಮೇನಿಂದ ಜುಲೈವರೆಗೂ ನಗರದಲ್ಲಿ ನಡೆದಿದ್ದ ರಸ್ತೆ ಅಪಘಾತದಲ್ಲಿ 412 ಮಂದಿ ಸಾವನ್ನಪ್ಪಿದ್ದರು. ಈ ವರ್ಷದ ಇದೇ ಅವಧಿಯಲ್ಲಿ 192 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಪ್ರತಿದಿನ ಸಾವಿನ ಸಂಖ್ಯೆಯಲ್ಲಿ 4 ಮಂದಿಯಿಂದ 2ಕ್ಕೆ ಇಳಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ. ಅಜಾಗರೂಕತೆಯ ಚಾಲನೆ, ಓವರ್ ಸ್ಪೀಡ್, ಕಳಪೆ ರಸ್ತೆ ಸೇರಿದಂತೆ ವಿವಿಧ ಕಾರಣಗಳಿಂದಾಗಿ ನಗರದಲ್ಲಿ ಅಪಘಾತ ಸಂಖ್ಯೆ ಇಳಿಸಲು ನಗರ ಸಂಚಾರ ಪೊಲೀಸರು ಐಟಿಎಂಎಸ್ ತಂತ್ರಜ್ಞಾನ ಬಳಕೆ ಸೇರಿದಂತೆ ಕೈಗೊಂಡ ರಚನಾತ್ಮಕ ಕ್ರಮಗಳಿಂದ ಮರಣ ಪ್ರಮಾಣ ತಗ್ಗಿಸಲು ಸಹಕಾರಿಯಾಗಿದೆ ಎಂದು ಸಂಚಾರ ವಿಭಾಗ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಿವಿಧ ಕಾರಣಗಳಿಂದಾಗಿ ನಡೆದ ಅಪಘಾತ ಪ್ರಕರಣಗಳಲ್ಲಿ ಸಾವಿನ ಸಂಖ್ಯೆಯಲ್ಲಿ ಅಧಿಕವಾಗಿತ್ತು. ಅಪಘಾತ ಸಂಖ್ಯೆ ಕಡಿಮೆಗೊಳಿಸಲು ತಂತ್ರಜ್ಞಾನ ಬಳಸಿಕೊಂಡು ನಿರಂತರ ಸಂಚಾರ ಪೊಲೀಸರ ನಿಗಾ, ಸಂಚಾರ ನಿಯಮ ಪಾಲಿಸದವರ ವಿರುದ್ಧ ಪ್ರಕರಣ ದಾಖಲಿಸಿಕೊಂಡ ಪರಿಣಾಮ ಸಾವಿನ ಸಂಖ್ಯೆಯಲ್ಲಿ ಕಳೆದ ವರ್ಷಕ್ಕಿಂತ ಕಳೆದ ಮೂರು ತಿಂಗಳಲ್ಲಿ ಶೇ.16ರಷ್ಟು ಇಳಿಸಲಾಗಿದೆ.

– ಅಲೋಕ್‌ಕುಮಾರ್ ಎಡಿಜಿಪಿ, ಸಂಚಾರ ಹಾಗೂ ರಸ್ತೆ ಸುರಕ್ಷತೆ

ಖಾಸಗಿ ಕಂಪನಿಗೆ ಹುಸಿಬಾಂಬ್ ಕರೆ

ಬೆಂಗಳೂರು: ಬೆಂಗಳೂರಿನ ಜೆ.ಪಿ.ನಗರದ 4ನೇ ಹಂತದಲ್ಲಿರುವ ಬ್ರಾಡ್ ಕಾಂ ಕಂಪನಿಗೆ ಬೆಳಗ್ಗೆ 11:50ರ ಸುಮಾರಿಗೆ ಬಾಂಬ್ ಬೆದರಿಕೆ ಇ-ಮೇಲ್ ಬಂದಿದ್ದು, ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕಾಗಮಿಸಿದ ಬಾಂಬ್ ನಿಷ್ಕ್ರಿಯ ದಳ ಹಾಗೂ ಪೊಲೀಸರು ಬೆದರಿಕೆ ಮೇಲ್ ಬಗ್ಗೆ ಪರಿಶೀಲನೆ ನಡೆಸಿದ್ದಾರೆ. ಈ ಕುರಿತು ಪುಟ್ಟೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

ಕಳೆದ 2024 ಮೇ 23 ರಂದು ಕೂಡ ಬೆಂಗಳೂರಿನ ಪ್ರಮುಖ ಪ್ರದೇಶಗಳಲ್ಲಿರುವ ಮೂರು ಫೈವ್ ಸ್ಟಾರ್ ಹೋಟೆಲ್‌ಗಳಿಗೆ ಬಾಂಬ್ ಬೆದರಿಕೆಯ ಇ-ಮೇಲ್ ಬಂದಿತ್ತು. ನಗರದ ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಪ್ರಮುಖ ಒಟೆರಾ ಹೋಟೆಲ್ ಸೇರಿದಂತೆ ಬೆಂಗಳೂರಿನ ಮೂರು ಹೋಟೆಲ್‌ಗಳಿಗೆ ಮುಂಜಾನೆ ಬಾಂಬ್ ಬೆದರಿಕೆ ಬಂದಿದೆ.

ಇ-ಮೇಲ್ ನೋಡುತ್ತಿದ್ದಂತೆ ಸ್ಥಳೀಯ ಪೊಲೀಸ್ ಇನ್ನಿತರ ಸರಕಾರಿ ಅಧಿಕಾರಿಗಳಿಗೆ ಸಿಬ್ಬಂದಿ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದ ಪೊಲೀಸರು ಒಟೆರಾ ಹೋಟೆಲ್‌ನಲ್ಲಿ ಪೊಲೀಸ್ ಸಿಬ್ಬಂದಿ ನಿಯೋಜನೆ ಮಾಡಿ, ಬಾಂಬ್ ಸ್ಕ್ವಾಡ್ ಕರೆಯಿಸಿ ಪರಿಶೀಲನೆ ನಡೆಸಿದ್ದರು. ಈ ವೇಳೆ ಹೋಟೆಲ್ಗಳ ಮುಂದೆ ಕೆಲಹೊತ್ತು ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಈ ಘಟನೆ ಆಗಿ ಮೂರು ತಿಂಗಳ ಬಳಿಕ ಇದೀಗ ಮತ್ತೊಂದು ಬಾಂಬ್ ಬೆದರಿಕೆ ಇಮೇಲ್ ಖಾಸಗಿ ಕಂಪನಿಯೊಂದಕ್ಕೆ ಬಂದಿದೆ.

ಪ್ರೇಮ ವೈಫಲ್ಯ; ಯುವತಿ ಆತ್ಮಹತ್ಯೆ

ಬೆಂಗಳೂರು: ಪ್ರೇಮ ವೈಫಲ್ಯಕ್ಕೆ ಮನನೊಂದು ಯುವತಿ ರೈಲಿಗೆ ತಲೆ ಕೊಟ್ಟು ಆತ್ಮಹತ್ಯೆ ಮಾಡಿಕೊಂಡ ಘಟನೆ ಬೆಂಗಳೂರು ಉತ್ತರ ತಾಲೂಕಿನ ಸೋಲದೇವನಹಳ್ಳಿ ರೈಲ್ವೆ ನಿಲ್ದಾಣದ ಬಳಿ ನಡೆದಿದೆ. ಡಾರ್ಜಿಲಿಂಗ್ ಮೂಲದ ಲಿಖಿತ ಜಾಸ್ಮೀನ್(24) ಮೃತ ದುರ್ದೈವಿ. 10 ದಿನಗಳ ಹಿಂದೆ ತನ್ನ ಅಕ್ಕ ಕೃತಿಕ ಜಾಸ್ಮೀನ್ ಮನೆಗೆ ಬಂದಿದ್ದ ಯುವತಿ ಮಂಗಳವಾರ ರೈಲಿನಡಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಲಿಖಿತ ಜಾಸ್ಮೀನ್ ಬಿಹಾರಿ ಮೂಲದ ಯುವಕನನ್ನು 2 ವರ್ಷಗಳಿಂದ ಪ್ರೀತಿಸುತ್ತಿದ್ದಳು. ಇಬ್ಬರ ಪ್ರೇಮ ಚನ್ನಾಗಿಯೇ ಇತ್ತು. ಆದರೆ ಇತ್ತೀಚೆಗೆ ಕ್ಷುಲ್ಲಕ ಕಾರಣಗಳಿಗಾಗಿ ಬ್ರೇಕ್‌ಅಪ್ ಆಗಿತ್ತು. ಇದರಿಂದ ಲಿಖಿತ ಜಾಸ್ಮೀನ್ ಮನನೊಂದಿದ್ದಳು. ತಂಗಿ ಒಬ್ಬಳೇ ಇದ್ದರೆ ಸಮಸ್ಯೆಯಾಗುತ್ತದೆ ಎಂದು ಲಿಖಿತಾ ಅಕ್ಕ ಕೃತಿಕಾ ತಂಗಿಯ ನೋವು ಮರೆಸುವ ಸಲುವಾಗಿ ಬೆಂಗಳೂರಿನ ಸೋಲದೇವನಹಳ್ಳಿಯಲ್ಲಿದ್ದ ತನ್ನ ಮನೆಗೆ ಕರೆದುಕೊಂಡು ಬಂದು ಇರಿಸಿಕೊಂಡಿದ್ದರು. ಆದರೆ ಮಂಗಳವಾರ ಬೆಳಗ್ಗೆ 9 ಗಂಟೆ ಸುಮಾರಿಗೆ ಇದ್ದಕ್ಕಿದ್ದಂತೆ ಮನೆಯಿಂದ ಆಚೆ ಬಂದ ಲಿಖಿತಾ ರೈಲಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

ಅಪಘಾತ: ಬೈಕ್ ಸವಾರನಿಗೆ ಗಾಯ

ಬೆಂಗಳೂರು: ಅತಿ ವೇಗ ಹಾಗೂ ಅಜಾಗರೂಕತೆಯಿಂದ ಬಂದ ಬಿಎಂಟಿಸಿ ವೋಲ್ವೊ ಬಸ್‌ವೊಂದು ಬೈಕ್‌ಗೆ ಡಿಕ್ಕಿ ಹೊಡೆದು ನಂತರ ಮೂರು ಕಾರುಗಳಿಗೆ ಡಿಕ್ಕಿ ಹೊಡೆದು ಸಂಭವಿಸಿದ ಸರಣಿ ಅಪಘಾತದಲ್ಲಿ ಬೈಕ್ ಸವಾರ ಗಾಯಗೊಂಡಿದ್ದಾನೆ. ಹೆಬ್ಬಾಳ ಸಂಚಾರ ಠಾಣೆ ವ್ಯಾಪ್ತಿಯ ಫ್ಲೈ ಓವರ್‌ನಲ್ಲಿ ಬೆಳಗ್ಗೆ 9 ಗಂಟೆ ಸುಮಾರಿನಲ್ಲಿ ಬಿಎಂಟಿಸಿ ವೋಲ್ವೊ ಬಸ್ ಎಚ್‌ಎಸ್‌ಆರ್ ಲೇಔಟ್ ಕಡೆಗೆ ಹೋಗುತ್ತಿತ್ತು. ಅದೇ ಸಮಯದಲ್ಲಿ ಯಲಹಂಕ ಕಡೆಯಿಂದ ಆರ್‌ಟಿ ನಗರದ ಕಡೆಗೆ ಆಕಾಶ್ ಪಾಟೀಲ್ (27) ಬೈಕ್‌ನಲ್ಲಿ ಹೋಗುತ್ತಿದ್ದಾಗ ಎಸ್ಟೀಮ್ ಮಾಲ್ ಬಳಿ ಈ ಬಸ್ ಡಿಕ್ಕಿ ಹೊಡೆದು ನಂತರ ಮುಂದೆ ಚಲಿಸುತ್ತಿದ್ದ 3 ಕಾರುಗಳಿಗೆ ಅಪ್ಪಳಿಸಿದ ಪರಿಣಾಮ ಸರಣಿ ಅಪಘಾತ ಸಂಭವಿಸಿದೆ. ಅಪಘಾತದಲ್ಲಿ ಗಾಯಗೊಂಡ ಆಕಾಶ್‌ನನ್ನು ತಕ್ಷಣ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದ್ದು, ಆತ ಪ್ರಾಣಾ ಪಾಯದಿಂದ ಪಾರಾಗಿದ್ದಾನೆ. ಈ ಬಗ್ಗೆ ಹೆಬ್ಬಾಳ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು

ಬಿಜೆಪಿ ಕಾರ್ಯಾಲಯ ಭಾವುರಾವ್ ದೇಶಪಾಂಡೆ ಭವನದ ಹತ್ತಿರದ ಚಂದ್ರಶೇಖರ್ ಅಜಾದ್ ಪ್ರತಿಮೆ ಬಳಿ ನಡೆದ ಹರ್ ಘರ್ ತಿರಂಗಾ ಅಭಿಯಾನದಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಭಾಗವಹಿಸಿದ್ದರು. ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ್, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್, ಪಕ್ಷದ ಪದಾಧಿಕಾರಿ, ಕಾರ್ಯಕರ್ತರು ಭಾಗವಹಿಸಿದ್ದರು.

ಬಾಂಗ್ಲಾ ಹಿಂದೂಗಳ ಮೇಲೆ ದೌರ್ಜನ್ಯ

ಅಶ್ವತ್ಥನಾರಾಯಣ್ ಖಂಡನೆ

ಬೆಂಗಳೂರು: ಬಾಂಗ್ಲಾದೇಶದಲ್ಲಿ ಹಿಂದೂಗಳ ಕುಟುಂಬವನ್ನು ಗುರಿ ಮಾಡಿ ದೌರ್ಜನ್ಯ ಮಾಡುವುದು ಖಂಡನೀಯ ಎಂದು ರಾಜ್ಯ ಬಿಜೆಪಿ ಮುಖ್ಯ ವಕ್ತಾರ ಅಶ್ವತ್ಥನಾರಾಯಣ್ ತಿಳಿಸಿದ್ದಾರೆ.

ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಮಾತನಾಡಿದ ಅವರು, ಬಾಂಗ್ಲಾದೇಶದಲ್ಲಿ ಹಿಂದೂಗಳ ಮನೆಗಳಿಗೆ ನುಗ್ಗಿ ಅತ್ಯಾಚಾರ ಮಾಡುತ್ತಿದ್ದು, ತಾಯಿಯ ಎದುರೇ ಮಗಳ ರೇಪ್, ತಂದೆ ಎದುರುಗಡೆ ಮಗನ ಹತ್ಯೆಯಂಥ ದುರ್ಘಟನೆ ನಡೆಯುತ್ತಿದೆ. ಹಿಂದೂ ದೇವಸ್ಥಾನಗಳಿಗೆ ಹಾನಿ ಎಸಗಲಾಗುತ್ತಿದ್ದು, ಇದೊಂದು ಕೆಟ್ಟ ಸಂಪ್ರದಾಯ ಮತ್ತು ಕೆಟ್ಟ ಚಾಳಿ ಎಂದು ಆಕ್ಷೇಪಿಸಿದರು.

ಜಗತ್ತಿನ ಇತರ ಕಡೆ ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯದಂಥ ಘಟನೆ ಆದಾಗ ದೇಶದಲ್ಲಿ ಇರುವ ಎಡಚರರು ಮತ್ತು ಇಂಡಿ ಒಕ್ಕೂಟದ ಮಮತಾ ಬ್ಯಾನರ್ಜಿ, ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಸೇರಿ ಕೆಲವು ಸದಸ್ಯರು ಉಲ್ಲೇಖಿಸಿ, ಟೀಕೆ ಮಾಡಿ ರಕ್ಷಣೆಯ ಮಾತನಾಡುತ್ತಾರೆ. ಆದರೆ, ಈ ದೌರ್ಜನ್ಯದ ಬಗ್ಗೆ ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್, ಸಿದ್ದರಾಮಯ್ಯ ಮತ್ತಿತರರು ಮಾತನಾಡುತ್ತಿಲ್ಲ. ರಾಜಕೀಯ ಅರಾಜಕತೆ ಖಂಡಿಸುತ್ತಿಲ್ಲ ಎಂದು ಟೀಕಿಸಿದರು.

ಕೇಂದ್ರದ ಮಾಜಿ ಸಚಿವ ಸಲ್ಮಾನ್ ಖುರ್ಷಿದ್ ಭಾರತದಲ್ಲೂ ಇಂಥ ಘಟನೆ ಆಗಬಹುದೆಂದು ಬೇಜವಾಬ್ದಾರಿ ಹೇಳಿಕೆ ಕೊಟ್ಟಿದ್ದು, ಇದಲ್ಲದೆ ಜಮ್ಮು ಕಾಶ್ಮೀರದ ಮಾಜಿ ಸಿಎಂ ಮೆಹಬೂಬ ಮುಫ್ತಿ ಮಗಳು ರುಬಿಯ ಮುಫ್ತಿ ಕೂಡ ಇದೇ ಮಾದರಿಯ ಟ್ವೀಟ್ ಮಾಡಿರುವುದು ಖಂಡನೀಯ ಎಂದರು.

ತುಂಗಭದ್ರಾ ಡ್ಯಾಮ್ ಸುಮಾರು 25 ಲಕ್ಷ ರೈತರಿಗೆ ಜೀವನಾಡಿಯಾಗಿದ್ದು, ರೈತರ ಪರಿಸ್ಥಿತಿ ಬಗ್ಗೆ ಸಚಿವ ಡಿ.ಕೆ. ಶಿವಕುಮಾರ್, ಸರಕಾರ ಗಂಭೀರವಾಗಿ ಪರಿಗಣಿಸಿಲ್ಲ. ಇದು ಬೇಜವಾಬ್ದಾರಿ ಕ್ರಮ.

–ಅಶ್ವತ್ಥನಾರಾಯಣ್ ರಾಜ್ಯ ಬಿಜೆಪಿ ಮುಖ್ಯ ವಕ್ತಾರ

indegene®

INDEGENE LIMITED

Registered Office: Aspen G-4 Block, Manyata Embassy Business Park (SEZ), Outer Ring Road, Nagawara, Bengaluru - 560 045, Karnataka, India.
Corporate Identity Number (CIN): U73100KA1998PLC102040;
Tel: +91 80 4674 4567, +91 80 4644 7777; **E-mail:** info@indegene.com;
Website: www.indegene.com

NOTICE IS HEREBY GIVEN THAT THE 26TH ANNUAL GENERAL MEETING (AGM) OF THE MEMBERS OF INDEGENE LIMITED WILL BE HELD ON FRIDAY, 6 SEPTEMBER 2024, AT 16:30 HOURS IST THROUGH VIDEO CONFERENCE / OTHER AUDIO-VISUAL MEANS ("VC/OAVM") facility pursuant to General Circular no. 09/2023 dated September 25, 2023 issued by the Ministry of Corporate Affairs (MCA) and Circular Nos. SEBI/HO/CFD/CMD1/CIR/P/2020/79, SEBI/HO/CFD/CMD2/CIR/P/2021/11, SEBI/HO/CFD/CMD2/CIR/P/2022/62, SEBI/HO/CFD/PoD-2/P/CIR/2023/4 and SEBI/HO/CFD/CFD-PoD-2/P/CIR/2023/167 dated May 12, 2020, January 15, 2021, May 13, 2022, January 5, 2023 and October 7, 2023 respectively, issued by the Securities and Exchange Board of India, and in compliance with the provisions of the Companies, Act, 2013 ("the Act") and the Securities and Exchange Board of India (Listing Obligations and Disclosure Requirements) Regulations, 2015 ("Listing Regulations").

In light of the above circulars, copies of the Annual Report for 2023-24 including the AGM Notice and related documents required to be attached therewith has been sent only through electronic mode on 12 August 2024 to those Members whose email-IDs were registered with Link Intime Private Limited i.e. Registrar and Transfer Agent ("RTA") or respective Depository Participants ("DPs"). Members may note that, the notice of the AGM and the Annual Report for 2023-24 is also available on the Company's website https://www.indegene.com/investor-relations/annual-general-meeting, websites of the Stock Exchanges, National Stock Exchange of India Limited and BSE Limited at www.nseindia.com and www.bseindia.com respectively and on the website of National Securities Depository Limited ("NSDL") at https://www.evoting.nsdl.com.

As per Section 108 of the Act read with Rule 20 of Companies (Management and Administration) Rules, 2014, and Regulation 44 of the Listing Regulations, the Company is pleased to provide its Members the facility to cast their votes by electronic means in respect of the business set forth in the Notice, through electronic voting ("remote e-voting and e-voting during the AGM") facility extended by NSDL.

Members holding shares either in physical or dematerialized form, as on cut-off date, i.e. as on 29 August 2024, may cast their votes electronically.

The details prescribed by the provisions of the Act and the Rules made thereunder are given below:

a. Date of commencement of sending of Notices: Monday, 12 August 2024
b. Date and Time of commencement of remote e- voting: 9:00 a.m. IST, Tuesday, 3 September 2024
c. Date and time of end of remote e-voting: 5:00 p.m. IST, Thursday, 5 September 2024
d. Remote e-voting shall not be allowed beyond the 5:00 p.m. IST, Thursday, 5 September 2024
e. Members who are attending the AGM and have not cast their vote during the period above, can vote on the resolutions during the AGM.
f. Members who have cast their vote on resolutions by remote e-voting prior to the AGM will also be eligible to participate at the AGM through VC/OAVM but shall not be entitled to cast their vote on such resolution(s) again.
g. Persons whose names are recorded in the Register of Members or in the Register of Beneficial Owners maintained by the depositories as on the cut-off date shall only be entitled to avail the facility of remote e-voting or e-voting during the AGM.
h. Electronic Voting Event Number (EVEN): 129788
i. Any person, who acquires shares of the Company and becomes a Member of the Company after the date of sending the Notice and holds shares as on the cut-off date i.e. Thursday, 29 August 2024 may obtain the User ID and Password by sending a request at evoting@nsdl.com. However, if such person is already registered with NSDL for remote e-voting then he/she can use his/her existing User ID and Password for casting his/her votes.
j. For detailed procedure for remote e-voting/e-voting and for attending the AGM through VC/OAVM, Refer page. 22 of the Notice of the AGM and in case of any queries/grievances connected thereto the Members may refer to the Frequently Asked Questions (FAQs) available at https://www.evoting.nsdl.com. Members who need assistance before or during the AGM, can contact NSDL on evoting@nsdl.com or contact Mr. Amit Vishal, NSDL at 022-48867000 or Ms. Pallavi Mhatre, NSDL at 022 - 48867000.

For **Indegene Limited**
Sd/-
Srishti Ramesh Kaushik
Company Secretary and Compliance Officer

Date: 13 August 2024
Place: Bengaluru

PUBLIC NOTICE

This is to notify that I, **Jayanth.C,** No. 105/106, 2nd Floor, 13th Main, 4th Block, Bangalore North, Bangalore - 560096. **have lost the Registered Sale agreement, Document No.11274/2023-24,** A Complaint is lodged in Bangalore City Police on **dated 12.08.2024 vide Lost Report no. 1189767/2024.** If found, please contact me at- **7259432244.**

ಅನುಬಂಧ IV-ಎ

ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಮಾರಾಟದ ಸೂಚನೆ

ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ನಿಯಮ 8(6) ಮತ್ತು ನಿಯಮ 9(1)ರ ನಿಬಂಧನೆಗೊಂದಿಗೆ ಓದಲಾಗುವ ಸೆಕ್ಯುರೈಟೇಶನ್ ಆ್ಯಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಆ್ಯಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯ್ದೆ, 2002ರಡಿಯಲ್ಲಿ ಸ್ಥಿರಾಸ್ತಿಗಳ ಮಾರಾಟದ ಸಲುವಾಗಿ ಇ-ಹರಾಜು ಮಾರಾಟ ಸೂಚನೆ.

ಈ ಮೂಲಕ ಸಾರ್ವಜನಿಕರಿಗೆ ಮತ್ತು ಮುಖ್ಯವಾಗಿ ಸಾಲಗಾರರು (ಗಳು) ಮತ್ತು ಗ್ಯಾರಂಟರ (ಗಳು) ರಿಗೆ ಸೂಚನೆ ನೀಡುವುದೇನೆಂದರೆ, **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು) (CIN : L65922DL2005PLC136029) (''ಸೆಕ್ಯೂರ್ಡ್ ಕ್ರೆಡಿಟರ್'')** ಇವರಿಗೆ ಮಾರ್ಟ್‌ಗೇಜ್ ಮಾಡಲಾದ / ಚಾರ್ಜ್ ಮಾಡಲಾದ ಈ ಕೆಳಗೆ ವಿವರಿಸಲಾದ ಸ್ಥಿರಾಸ್ತಿ(ಗಳು)ಯ **ಭೌತಿಕ ಸ್ವಾಧೀನತೆಯನ್ನು** ಸೆಕ್ಯೂರ್ಡ್ ಕ್ರೆಡಿಟರರ ಅಧಿಕೃತ ಅಧಿಕಾರಿಯವರು ಪಡೆದುಕೊಂಡಿದ್ದು, ಸೆಕ್ಯೂರ್ಡ್ ಕ್ರೆಡಿಟರರಿಗೆ **ಅರುಣ ಕುಮಾರ್ ತವ್ವ ಮತ್ತು ಕೀರ್ತಿ ಪುಸರಾಳ** ಇವರಿಂದ **ಸಾಲ ಖಾತೆ ನಂ. HHLDUB00320977** ಇದರಲ್ಲಿನ ಅಸಲು, ಹಿಂದಿನ ಬಾಕಿ (ಸಂಚಯಿತ ವಿಳಂಬ ಶುಲ್ಕವನ್ನೊಳಗೊಂಡು) ಮತ್ತು **07.08.2024**ರ ತನಕದ ಬಡ್ಡಿ **ರೂ. 21,92,403/- (ರೂಪಾಯಿ ಇಪ್ಪತ್ತ ಒಂದು ಲಕ್ಷ ತೊಂಬತ್ತ ಎರಡು ಸಾವಿರದ ನಾಲ್ಕು ನೂರ ಮೂರು ಮಾತ್ರ)** ಸಾಲ ಒಪ್ಪಂದ ಮತ್ತು ಇತರ ಸಂಬಂಧಿತ ದಸ್ತಾವೇಜಿ(ಗಳು)ನಂತೆ ಕಾನೂನು ಸಂಬಂಧಿತ ವೆಚ್ಚಗಳು ಮತ್ತು ಸೆಕ್ಯೂರ್ಡ್ ಕ್ರೆಡಿಟರರಿಗೆ ಬರಬೇಕಾದ ಇತರ ಶುಲ್ಕಗಳೊಂದಿಗೆ **08.08.2024**ರಿಂದ ಭವಿಷ್ಯದ ಬಡ್ಡಿಯ ವಸೂಲಿಗಾಗಿ ''**ಎಲ್ಲಿದೆಯೊ ಹಾಗೆ**'', ''**ಏನಿದೆಯೊ ಹಾಗೆ**'', ಮತ್ತು ''**ಯಾವುದೇ ರಿಕೊರ್ಸ್ ಇಲ್ಲದ**'' ಆಧಾರದಲ್ಲಿ ತಾರೀಖು **31.08.2024**ರಂದು **ಸಂಜೆ 04.00 ರಿಂದ ಸಂಜೆ 05.00 ರವರೆಗೆ**ರ ತನಕ ಮಾರಾಟ ಮಾಡಲಿದ್ದಾರೆ.

ಸ್ಥಿರಾಸ್ತಿ(ಗಳ)ಯ ರಿಸರ್ವ್ ಬೆಲೆ **ರೂ. 8,50,000/- (ರೂಪಾಯಿ ಎಂಟು ಲಕ್ಷ ಐವತ್ತು ಸಾವಿರ ಮಾತ್ರ)** ಆಗಿದೆ ಮತ್ತು ಅರ್ನೆಸ್ಟ್‌ಮನಿ ಡಿಪಾಸಿಟ್ (''**ಇಎಮ್‌ಡಿ**'') **ರೂ. 85,000/- (ರೂಪಾಯಿ ಎಂಬತ್ತ ಐದು ಸಾವಿರ ಮಾತ್ರ)** ಅಂದರೆ, ರಿಸರ್ವ್ ಬೆಲೆಯ 10%ಕ್ಕೆ ಸಮನಾಗಿದೆ.

ಸ್ಥಿರಾಸ್ತಿ(ಗಳ) ವಿವರಣೆ

ಫ್ಲಾಟ್ ನಂ. ಬಿ-403, 31.25 **ಚದರ ಮೀಟರ್ ಅಳತೆಯ ''ಅರ್ಥಾ ಮೈಡಾಸ್ @ ಎನ್‌ಎಸ್‌ಸಿ''ಎಂದು ಕರೆಯಲ್ಪಡುವ ಯೋಜನೆಯಲ್ಲಿ 'ಬಿ' ಬ್ಲಾಕ್ನ** 3 **ನೇ ಮಹಡಿ. ಪ್ಲಾಟ್ ನಂ.** 1 ಮತ್ತು **ಪ್ಲಾಟ್ ಸಂಖ್ಯೆ.** 2, **ಮೈಡಾಸ್ ಅಪಾರ್ಟ್ಮೆಂಟ್, ಎಸ್ವೈ. ಸಂ.** 31/5 31/6, **ಬಾಗಲೂರು ಗ್ರಾಮ, ಸೂಲಿಬೆಲೆ ಹೋಬಳಿ, ಹೊಸಕೋಟೆ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು** 562114, **ಕರ್ನಾಟಕ.**

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ಸುರಕ್ಷಿತ ಸಾಲಗಾರರ ವೆಬ್‌ಸೈಟ್‌ನಲ್ಲಿ ಒದಗಿಸಲಾದ ಲಿಂಕ್ ಅನ್ನು ಉಲ್ಲೇಖಿಸಿ ಅಂದರೆ www.sammaancapital.com; ಸಂಪರ್ಕ ಸಂಖ್ಯೆ: 0124-6910910, +91 7065451024; ಇ-ಮೇಲ್ ಐಡಿ : auctionhelpline@sammaancapital.com. ಬಿಡ್ಡಿಂಗ್‌ಗಾಗಿ, www.auctionfocus.in ಗೆ ಲಾಗಿನ್ ಮಾಡಿ.

ಸಹಿ
ಅಧಿಕಾರಯುಕ್ತ ಅಧಿಕಾರಿ
ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್
(ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)

ದಿನಾಂಕ : 09.08.2024
ಸ್ಥಳ : ಬೆಂಗಳೂರು

ಕರ್ಣಾಟಕ ಬ್ಯಾಂಕ್ ಲಿಮಿಟೆಡ್
(ನೋಂದಾಯಿತ ಹಾಗೂ ಕೇಂದ್ರ ಕಛೇರಿ: ಮಂಗಳೂರು-575002)
ನಿಮ್ಮ ಕುಟುಂಬದ ಬ್ಯಾಂಕ್, ಭಾರತದಾದ್ಯಂತ

ಶಾಖೆ: ಕೆ.ಹೆಚ್. ರಸ್ತೆ
ನಂ. 21, ನೆಲ ಅಂತಸ್ತು
ರಾಜ ಗ್ಲಿಟ್ಝ್, ಕೆ.ಹೆಚ್. ರಸ್ತೆ
ಬೆಂಗಳೂರು-560027.

ದೂ: 080-22955866 - 867
ಇಮೇಲ್: blr.khroad@ktkbank.com
ವೆಬ್ ಸೈಟ್: www.karnatakabank.com
CIN: L85110KA1924PLC001128

ಲಾಕರ್ ಒಡೆದು ತೆರೆಯುವ ಸಾರ್ವಜನಿಕ ಸೂಚನೆ

ಲಾಕರ್ ಸೌಲಭ್ಯವನ್ನು ಪಡೆದಿರುವ ಈ ಕೆಳಗಿನ ವ್ಯಕ್ತಿಗಳು ನಮ್ಮ ಬೇಡಿಕೆಯ ಸೂಚನೆಯ ಹೊರತಾಗಿಯೂ 5 (ಐದು) ವರ್ಷಗಳಿಂದ ಲಾಕರ್ ಬಾಡಿಗೆಯನ್ನು ಬ್ಯಾಂಕಿಗೆ ಪಾವತಿಸಿಲ್ಲ. ಆದ್ದರಿಂದ ಲಾಕರ್ ಬಾಡಿಗೆಯನ್ನು **ದಿನಾಂಕ 20.08.2024 ರಂದು ಮಧ್ಯಾಹ್ನ 3.00 ಗಂಟೆಗೆ** ಅಥವಾ ಅದಕ್ಕೂ ಮೊದಲು ಪಾವತಿಸದಿದ್ದರೆ ನಿಯಮಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟು ಕೆಳಗೆ ನಮೂದಿಸಿರುವ ಶಾಖೆಯ ಆವರಣದಲ್ಲಿ ಸೂಚಿಸಲಾದ ದಿನಾಂಕದಂದು **ಮಧ್ಯಾಹ್ನ 3.00 ಗಂಟೆಗೆ** ಲಾಕರ್ ಅನ್ನು ಒಡೆದು ತೆರೆಯಲು ಬ್ಯಾಂಕ್ ನಿರ್ಧರಿಸಿರುತ್ತದೆ ಎಂಬುದನ್ನು ಗಮನಿಸಿ.
ಬ್ಯಾಂಕ್ ಯಾವುದೇ ಸೂಚನೆಯಿಲ್ಲದೆ ಮತ್ತು ಅದಕ್ಕೆ ಯಾವುದೇ ಕಾರಣಗಳನ್ನು ನೀಡದೆಯೇ ಯಾವುದೇ ಅನುಕೂಲಕರ ದಿನಾಂಕಕ್ಕೆ ಮುಂದೂಡುವ / ರದ್ದುಗೊಳಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ.

ಕ್ರಮ ಸಂಖ್ಯೆ	ಲಾಕರ್ ಸಂಖ್ಯೆ	ಲಾಕರ್ ಪಡೆದ ದಿನಾಂಕ	ಲಾಕರ್ ಪಡೆದವರ ಹೆಸರು	ಲಾಕರ್ ಬಾಡಿಗೆಯ ಬಾಕಿ ಜಿ.ಎಸ್.ಟಿ. ಮೊತ್ತವು ಸೇರಿ(ರೂ.ಗಳಲ್ಲಿ)	ಸ್ಥಳ ಮತ್ತು ಲಾಕರ್ ಒಡೆಯುವ ದಿನಾಂಕ ಮತ್ತು ಸಮಯ ಹಾಗೂ ಸಂಪರ್ಕಿಸಬೇಕಾದ ಸಂಖ್ಯೆ
01	95	03.11.2009	1) ಶ್ರೀ ರೇಣುಕ ವಿ. ಗಾಂಧಿ ನಂ. 176/5, ಫ್ಲಾಟ್ ನಂ. 202, 2ನೇ ಮಹಡಿ, 2ನೇ 'ಸಿ' ಮುಖ್ಯರಸ್ತೆ, 27ನೇ ಅಡ್ಡರಸ್ತೆ, 6ನೇ ಬ್ಲಾಕ್, ಜಯನಗರ, ಬೆಂಗಳೂರು-560011. 2) ಶ್ರೀಮತಿ ಹಸ್ತು ಬಾಯಿ ನಂ. 176/5, ಫ್ಲಾಟ್ ನಂ. 202, 2ನೇ ಮಹಡಿ, 2ನೇ 'ಸಿ' ಮುಖ್ಯರಸ್ತೆ, 27ನೇ ಅಡ್ಡರಸ್ತೆ, 6ನೇ ಬ್ಲಾಕ್, ಜಯನಗರ, ಬೆಂಗಳೂರು-560011. 3) ಶ್ರೀ ವಿನೋದ್ ಬಿ. ಗಾಂಧಿ ನಂ. 55, 1ನೇ ಮಹಡಿ, 2ನೇ ಅಡ್ಡರಸ್ತೆ, ಯಡಿಯೂರು ಕೆರೆ ಹತ್ತಿರ, ಜಯನಗರ 6ನೇ ಬ್ಲಾಕ್, ಬೆಂಗಳೂರು-560011.	ರೂ.27,902/-	ಕರ್ಣಾಟಕ ಬ್ಯಾಂಕ್ ಲಿಮಿಟೆಡ್ ಶಾಖೆ: ಕೆ. ಹೆಚ್. ರಸ್ತೆ ನಂ. 21, ನೆಲ ಅಂತಸ್ತು, ರಾಜ ಗ್ಲಿಟ್ಝ್, ಕೆ.ಹೆಚ್. ರಸ್ತೆ, ಬೆಂಗಳೂರು-560027. ಲಾಕರ್ ಒಡೆಯುವ ದಿನಾಂಕ: 20.08.2024 ಮಧ್ಯಾಹ್ನ 3.00 ಗಂಟೆಗೆ ಸಂಪರ್ಕಿಸಿ: ದೂರವಾಣಿ ಸಂಖ್ಯೆ: 080-22955866 - 867 ಮೊಬೈಲ್ ಸಂಖ್ಯೆ: 8951970701 / 8951970702

ದಿನಾಂಕ: 14.08.2024
ಸ್ಥಳ: ಬೆಂಗಳೂರು
ಸಹಿ/-
ಶಾಖಾ ವ್ಯವಸ್ಥಾಪಕರು, ಕರ್ಣಾಟಕ ಬ್ಯಾಂಕ್ ಲಿಮಿಟೆಡ್, ಕೆ.ಹೆಚ್. ರಸ್ತೆ ಶಾಖೆ, ಬೆಂಗಳೂರು.

Un-audited Financial Results for the Quarter Ended 30-06-2024

Statement of Consolidated Un-audited Financial Results for the Quarter 30-06-2024

(Rs. in Lakhs)

Sl. No.	Particulars	Quarter Ended Un-Audited 30.06.2024	Quarter Ended Audited 31.03.2024	Quarter Ended Un-Audited 30.06.2023	Year Ended Audited 31.03.2024	Year Ended Audited 31.03.2023
1	Revenue from Operation	4,758.01	5,028.84	4,149.16	18,674.83	15,382.69
2	Other Income	78.44	85.63	100.89	334.27	353.18
3	**Total Income**	**4,836.45**	**5,114.47**	**4,250.05**	**19,009.10**	**15,735.87**
4	**Profit/(Loss) for the period**	**602.75**	**903.74**	**501.09**	**2,605.06**	**2,001.64**
5	Total other Comprehensive Income	-	10.18	-	10.18	4.25
6	**Total Comprehensive Income for the Period**	**602.75**	**913.92**	**501.09**	**2,615.24**	**2,005.89**
7	Paid-up Equity Share Captial (Face value Rs.10/- per share)	1,414.80	1,411.36	1,342.19	1,411.36	1,339.16
8	Reserves	29,884.84	29,233.89	26,502.03	29,233.89	25,951.88
9	Earnings Per Share (Face value of share at Rs.10/-each)(not Annualised)					
	(a) Basic	4.27	6.40	3.73	19.30	14.96
	(b) Diluted	4.27	6.40	3.73	19.30	14.96
	See accompanying notes to the Financial Results.					

Statement of Stand alone Un-audited Financial Results for the Quarter ended 30-06-2024

(Rs. in Lakhs)

Sl. No.	Particulars	Quarter Ended Un-Audited 30.06.2024	Quarter Ended Audited 31.03.2024	Quarter Ended Un-Audited 30.06.2023	Year Ended Audited 31.03.2024	Year Ended Audited 31.03.2023
1	Revenue from Operation	1,092.74	1,147.03	937.29	4,261.94	3,458.42
2	Other Income	24.62	31.99	22.92	113.50	92.09
3	**Total Income**	**1,117.36**	**1,179.02**	**960.21**	**4,375.44**	**3,550.51**
4	**Profit/(Loss) for the period**	**8.44**	**1.60**	**7.25**	**19.07**	**17.20**
5	Total other Comprehensive Income	-	10.18	-	10.18	4.25
6	**Total Comprehensive Income for the Period**	**8.44**	**11.78**	**7.25**	**29.25**	**21.45**
7	Paid-up Equity Share Captial (Face value Rs.10/- per share)	1,414.80	1,411.36	1,342.19	1,411.36	1,339.16
8	Reserves	16,552.40	16,495.75	15,856.04	16,495.75	15,799.73
9	Earnings Per Share (Face value of share at Rs.10/-each)(not Annualised)					
	(a) Basic	0.06	0.01	0.05	0.14	0.13
	(b) Diluted	0.06	0.01	0.05	0.14	0.13
	See accompanying notes to the Financial Results.					

The above is an extract of the detailed format of Financial Results for the Quarter Ended 30.06.2024 filed with Stock Exchanges under Regulation 33 of the SEBI (Listing Obligations and Disclosures Requirements) Regulation, 2015. The complete format of Financial Results is available on the Stock Exchange websites at www.bseindia.com, www.nseindia.com and also on Company's website at www.izmoltd.com.

Notes to Financial Results:

1. The above Un-audited Q1 results for the quarter ended 30th June, 2024 have been reviewed by the Audit Committee and approved by the Board of Directors at its meeting held on 12-08-2024.
2. Limited Review of the above results has been carried out by the Auditors.
3. Investors Grievances during the quarter: Received - Nil, Attended - Nil, Pending - Nil.
4. The Company has added 166 new clients in the US. These included 135 clients for Frog Data. These include CarGurus Inc. and Polk Advertising.
5. Addition to client base in Europe has been 89 clients. This is the highest number of new clients added ever in a quarter in Europe.
6. The Company operates in one reportable segment only.
7. Increase in Share capital by Rs. 3.44 lakhs during Q1 ended 30.06.2024 is on account of allotment of ESOP shares (34,400 shares) to eligible employees.
8. **Employee benefit expenses for the quarter ended 30th June, 2024 includes Rs. 48.21 lakhs (Q1 ended 30.06.2023: Rs.49.06 lakhs) expenses recognised on account of Stock option offered to employees under ESOP Schemes, recognised over the vesting period.**
9. **The Company has collected US$ 66K (Rs.54.81 lakhs) from 10 companies towards image copyright infringement charges during period. This is part of the other income. This is a result of legal action taken by the company against several large international media companies using Izmo's automotive images illegally.**
10. Previous period figures have been re-grouped/reclassifed wherever necessary to conform to the current period presentation.

Bengaluru
12th August, 2024

For and on behalf of the Board
sd/-
Sanjay Soni
Managing Director
DIN : 00609097
Flat No. 9, Prestige Casablanca Apt. Airport Road, Bengaluru - 560017

*In Q1 FY 24-25 as compared to same quarter of PY, at consolidated level.

#177/2C, Bilekahalli Industrial Area,Off Bannerghatta Road, Bengaluru-560 076
Ph: +91 80 67125400, Fax: +91 80 67125408
www.izmoltd.com CIN : L72200KA1995PLC018734

ಸಮಾಚಾರ ಸಣ್ಣದಲ್ಲ

ರಮಣ ಶ್ರೀ ಶರಣ ಪ್ರಶಸ್ತಿ ಅರ್ಜಿ ಆಹ್ವಾನ

ಬೆಂಗಳೂರು: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮತ್ತು ರಮಣಶ್ರೀ ಪ್ರತಿಷ್ಠಾನದ ಸಹಯೋಗದೊಂದಿಗೆ ಪ್ರತಿವರ್ಷ ನಾಲ್ಕು ಹಿರಿಯ ಶ್ರೇಣಿ ಮತ್ತು ನಾಲ್ಕು ಉತ್ತೇಜನ ಶ್ರೇಣಿ ರಮಣ ಶ್ರೀ ಶರಣ ಪ್ರಶಸ್ತಿ ನೀಡಲಾಗುತ್ತಿದ್ದು, ಉನ್ನತಮಟ್ಟದ ಸಾಧನೆಗೈದಿರುವ ಹೆಸರನ್ನು ಶಿಫಾರಸ್ಸು ಮಾಡುವಂತೆ ಮನವಿ ಮಾಡಲಾಗಿದೆ. ಶರಣ ಸಾಹಿತ್ಯ ಅಧ್ಯಯನ ಮತ್ತು ಸಂಶೋಧನೆ, ಆಧುನಿಕ ವಚನ ರಚನೆ ವಚನ ಸಂಗೀತ, ಶರಣ ಸಂಸ್ಕೃತಿ ಪ್ರಸಾರ ಮತ್ತು ಸೇವಾ ಸಂಸ್ಥೆಗೆ ಅರ್ಜಿ ಆಹ್ವಾನಿಸಿದ್ದು, ಹಿರಿಯ ಶ್ರೇಣಿಗೆ ಪ್ರಶಸ್ತಿ ಮೊತ್ತ 40 ಸಾವಿರ ಹಾಗೂ ಉತ್ತೇಜನ ಶ್ರೇಣಿಗೆ 20 ಸಾವಿರ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಶಿಫಾರಸ್ಸಿನೊಂದಿಗೆ ಪೂರ್ಣ ವಿವರ, ಪ್ರಕಟಿತ ಪುಸ್ತಕ ಮತ್ತು ಇನ್ನಿತರ ಸಾಧನೆಯ ವಿವರಗಳನ್ನು ಆಗಸ್ಟ್ 31 ರೊಳಗೆ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಜಗದ್ಗುರು ಶ್ರೀ ಶಿವರಾತ್ರೀಶ್ವರ ವೃತ್ತ, 1ನೆಯ ಮುಖ್ಯರಸ್ತೆ, ಜಯನಗರ 8ನೇಯ ವಿಭಾಗ, ಬೆಂಗಳೂರು 560 070 ಅಥವಾ ನಾಡೋಜ ಎಸ್.ಷಡಕ್ಷರಿ, ಅಧ್ಯಕ್ಷರು, ರಮಣಶ್ರೀ ಪ್ರತಿಷ್ಠಾನ, ನಂ. 16, ರಾಜಾರಾಮ ಮೋಹನ ರಾಯ್ ರಸ್ತೆ, ಬೆಂಗಳೂರು 560 025, ಮೊ: 98450 32813 ಈ ವಿಳಾಸಕ್ಕೆ ಕಳುಹಿಸಿಕೊಡುವಂತೆ ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರತಿ ಶುಕ್ರವಾರ
ಸಿನಿಮಾಸ್
ಜಾಸ್ತಿ ಮಾಸ್ ಜಾಸ್ತಿ ಕ್ಲಾಸ್

ಸ್ವಾತಂತ್ರ್ಯೋತ್ಸವಕ್ಕೆ ಮಾಣಿಕ್ ಷಾ ಪರೇಡ್ ಮೈದಾನ ಸಜ್ಜು

ನಾಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಧ್ವಜಾರೋಹಣ | ಗ್ಯಾರಂಟಿ ಯೋಜನೆಗಳ ಅನಾವರಣ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಗರದ ಫೀಲ್ಡ್ ಮಾರ್ಷಲ್ ಮಾಣಿಕ್ ಷಾ ಪರೇಡ್ ಮೈದಾನ ಸ್ವಾತಂತ್ರ್ಯೋತ್ಸವದ ಆಚರಣೆಗೆ ಸಂಪೂರ್ಣವಾಗಿ ಸಿದ್ಧವಾಗಿದ್ದು, ಮೆರವಣಿಗೆ, ಸಾಂಸ್ಕೃತಿಕ ಕಾರ್ಯಕ್ರಮಗಳ ತಾಲೀಮು ನಡೆಸಲಾಗುತ್ತಿದೆ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಿಬಿಎಂಪಿ ಹಾಗೂ ಬೆಂಗಳೂರು ನಗರ ಜಿಲ್ಲಾಡಳಿತದ ವತಿಯಿಂದ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮವನ್ನು ನಡೆಸಲಾಗುತ್ತಿದ್ದು, ಗುರುವಾರ ಬೆಳಗ್ಗೆ 9.00 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಧ್ವಜಾರೋಹಣವನ್ನು ನೆರವೇರಿಸಲಿದ್ದಾರೆ. ಬಳಿಕ ಪರೇಡ್ ವೀಕ್ಷಿಸಿ ಗೌರವ ವಂದನೆ ಸ್ವೀಕರಿಸಿ ನಾಡಿನ ಜನತೆಯನ್ನುದ್ದೇಶಿಸಿ ಮಾತನಾಡಲಿದ್ದಾರೆ. ಈ ಬಾರಿ 400 ಮಂದಿ ಶಾಲಾ ಮಕ್ಕಳಿಂದ ರಾಜ್ಯಸರಕಾರದ ಐದು ಮಹತ್ವಾಕಾಂಕ್ಷೆ ಖಾತ್ರಿ ಯೋಜನೆ ಕುರಿತು ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಕಳೆದ ಮೂರು ದಿನಗಳಿಂದ ಈ ಬಾರಿಯ ಸ್ವಾತಂತ್ರ್ಯೋತ್ಸವವನ್ನು ಅದ್ಧೂರಿಯಾಗಿ ಆಚರಿಸಲು ಮೆರವಣಿಗೆ, ಸಾಂಸ್ಕೃತಿಕ ಕಾರ್ಯಕ್ರಮಗಳ ತಾಲೀಮು ನಡೆಯುತ್ತಿದೆ. 35 ತಂಡಗಳಿಂದ ಅಂತಿಮ ತಾಲೀಮು ನಡೆಸಲಾಗಿದ್ದು, ನಾಡಗೀತೆ, ರೈತಗೀತೆ ಹಾಗೂ ಮೋಟಾರ್ ಸೈಕಲ್ ಸಾಹಸ ತಂಡ ಪ್ರದರ್ಶನಕ್ಕೆ ತಯಾರಿ ನಡೆಸಲಾಗಿದೆ. ಈ ಬಾರಿ ಸುಮಾರು 8,000 ಜನರು ಭಾಗವಹಿಸಲಿದ್ದಾರೆ. ಸಾರ್ವಜನಿಕರಿಗಾಗಿ 3000 ಆಸನಗಳು, ಅತಿ ಗಣ್ಯರಿಗೆ 2000 ಆಸನಗಳು, ಸ್ವಾತಂತ್ರ್ಯ ಹೋರಾಟಗಾರರು, ಗಣ್ಯರು, ರಕ್ಷಣಾ ಇಲಾಖೆ ಅಧಿಕಾರಿಗಳಿಗೆ 750 ಆಸನಗಳು, ಇತರೆ ಇಲಾಖೆ ಅಧಿಕಾರಿಗಳು, ನಿವೃತ್ತ ಸೇನಾಧಿಕಾರಿಗಳಿಗಾಗಿ 2000 ಆಸನಗಳು ಸೇರಿದಂತೆ ಒಟ್ಟು ಎಂಟು ಆಸನ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ನಗರದ ಫೀಲ್ಡ್ ಮಾರ್ಷಲ್ ಮಾಣಿಕ್ ಷಾ ಪರೇಡ್ ಮೈದಾನ ಸ್ವಾತಂತ್ರ್ಯೋತ್ಸವದ ಆಚರಣೆ ಸಿದ್ಧತಾ ಕಾರ್ಯಗಳನ್ನು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಪರಿಶೀಲನೆ ನಡೆಸಿದರು.

ವಾಹನ ಸಂಚಾರ ನಿರ್ಬಂಧ: ದಯಾನಂದ

ನಗರ ಪೊಲೀಸ್ ಆಯುಕ್ತ ದಯಾನಂದ್ ಮಾತನಾಡಿ, ವಾಹನ ನಿಲುಗಡೆಗೆ ನಾಲ್ಕು ಬಣ್ಣದ ಪಾಸ್‌ಗಳನ್ನು ಮಾಡಲಾಗಿದ್ದು, ಅವುಗಳಲ್ಲಿ ಯಾವ ದ್ವಾರದಿಂದ ಮೈದಾನಕ್ಕೆ ಬರಬೇಕು, ವಾಹನಗಳನ್ನು ಎಲ್ಲಿ ನಿಲುಗಡೆ ಮಾಡಬೇಕು ಎಂದು ತಿಳಿಸಲಾಗಿದೆ. ಮೈದಾನ ಸುತ್ತಮುತ್ತ ಯಾವುದೇ ವಾಹನಗಳನ್ನು ನಿಲ್ಲಿಸುವಂತಿಲ್ಲ, ಬೆಳಗ್ಗೆ 8 ರಿಂದ 11 ಗಂಟೆವರೆಗೂ ಕಬ್ಬನ್ ರಸ್ತೆಯ ಬಿಆರ್‌ವಿ ಜಂಕ್ಷನ್‌ನಿಂದ ಕಾಮರಾಜ ರಸ್ತೆಯ ಜಂಕ್ಷನ್ ವರೆಗೂ ವಾಹನ ಸಂಚಾರ ನಿಷೇಧವಿರುತ್ತದೆ. ಪೊಲೀಸ್ ಸಿಬ್ಬಂದಿಗಳು ಮಾಹಿತಿ ನೀಡಿ ಮಾರ್ಗದರ್ಶನ ಮಾಡುತ್ತಾರೆ ಎಂದು ಹೇಳಿದರು. ಬೆಂಗಳೂರು ನಗರದ ಎಲ್ಲಾ ವಿಭಾಗಗಳಿಂದ 9-ಡಿಸಿಪಿ, 15-ಎಸಿಪಿ, 43-ಪಿಐ, 110-ಪಿಎಸ್‌ಐ, ಐಪಿಎಸ್‌ಐ, 72-ಎಎಸ್‌ಐ, 554-ಎಚ್ ಸಿ,ಪಿಸಿ, 77-ಮಹಿಳಾ ಸಿಬ್ಬಂದಿಯೊಂದಿಗೆ 157-ಸಾದಾ ಉಡುಪಿನ ಅಧಿಕಾರಿ ಮತ್ತು ಸಿಬ್ಬಂದಿ ಮತ್ತು 54 ಜನ ಕ್ಯಾಮೆರಾ ಸಿಬ್ಬಂದಿಯನ್ನು ಬಂದೋಬಸ್ತ್ ಕಣಕ್ಕೆ ನಿಯೋಜಿಸಲಾಗಿದೆ. ಸಂಚಾರ ನಿರ್ವಹಣೆಗಾಗಿ 3-ಡಿಸಿಪಿ, 6-ಎಸಿಪಿ, 22-ಪಿಐ, 31-ಪಿಎಸ್‌ಐ, 124-ಎಎಸ್‌ಐ, 507-ಎಚ್ ಸಿ, ಪಿಸಿ. ಒಟ್ಟಾರೆ ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮದ ಪ್ರಯುಕ್ತ ಒಟ್ಟು 1786 ಅಧಿಕಾರಿ ಹಾಗೂ ಸಿಬ್ಬಂದಿಯನ್ನು ಬಂದೋಬಸ್ತ್ ಕರ್ತವ್ಯಕ್ಕೆ ನಿಯೋಜಿಸಲಾಗಿದೆ. ಈ ಬಾರಿ ವಿಶೇಷವಾಗಿ ಸರಕಾರದ ವತಿಯಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿ ಅಂಗಾಂಗ ದಾನ ಮಾಡಿರುವ ಒಟ್ಟು 64 ಕುಟುಂಬದ ಸದಸ್ಯರಿಗೆ ಮುಖ್ಯಮಂತ್ರಿಗಳಿಂದ 'ಪ್ರಶಂಸಾ ಪತ್ರ' ನೀಡಿ ಗೌರವಿಸಲಾಗುವುದು.

ನಿಷೇಧಿಸಿರುವ ವಸ್ತುಗಳು

ಹೆಲ್ಮೆಟ್, ಕರಪತ್ರಗಳು, ಎಲ್ಲಾ ವಿಧದ ಕ್ಯಾಮೆರಾಗಳು, ನೀರಿನ ಬಾಟಲ್, ಸಿಗರೇಟ್, ಬೆಂಕಿ ಪೊಟ್ಟಣ, ಶಸ್ತ್ರಾಸ್ತ್ರಗಳು ಹರಿತವಾದ ವಸ್ತುಗಳು, ಕಪ್ಪು ಕರವಸ್ತ್ರತಿಂಡಿ ತಿನಿಸು, ಮದ್ಯದ ಬಾಟಲ್, ಬಾವುಟಗಳು, ಪಟಾಕಿ ಮತ್ತು ಸ್ಫೋಟಕ ವಸ್ತುಗಳನ್ನು ನಿಷೇಧಿಸಲಾಗಿದೆ. ಮಾಣಿಕ್ ಷಾ ಪರೇಡ್ ಮೈದಾನ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಭದ್ರತಾ ತಪಾಸಣೆ ನಡೆಸಲಾಗಿದೆ. ಮೈದಾನದ ಸಮೀಪದಲ್ಲಿರುವ ಎತ್ತರದ ಕಟ್ಟಡಗಳು, ಕಾಮಗಾರಿ ಸ್ಥಳಗಳನ್ನು ಪರಿಶೀಲನೆ ಮಾಡಲಾಗಿದೆ. ಜತೆಗೆ ನಗರದ 108 ಪೊಲೀಸ್ ಠಾಣೆಗಳ ಮೂಲಕ ಆಯಾ ವ್ಯಾಪ್ತಿಯಲ್ಲಿನ ರೈಲ್ವೆ ನಿಲ್ದಾಣ, ಹೋಟೆಲ್‌ಗಳು ಸೇರಿದಂತೆ ಎಲ್ಲೆಡೆಯೂ ಪರಿಶೀಲನೆ ನಡೆಸಲಾಗಿದೆ ಎಂದು ಮಾಹಿತಿ ನೀಡಿದರು.

ಫೋಟೊ ಕೃಪೆ : ಸುಧಾಕರ್ ದೇವರಾಜ್

ನಗರದ ಕಸ್ತೂರಬಾ ರಸ್ತೆಯಲ್ಲಿ 78ನೇ ಸ್ವಾತಂತ್ರ್ಯೋತ್ಸವದ ಹಿನ್ನಲೆ ಬೀದಿ ಬದಿ ವ್ಯಾಪಾರಿಗಳು ರಾಷ್ಟ್ರ ಧ್ವಜ ಮಾರಾಟದಲ್ಲಿ ತೊಡಗಿರುವುದು

ಅರಮನೆ ಮೈದಾನದಲ್ಲಿ ಆ.17,18ರಂದು ಕುಂದಾಪ್ರ ಹಬ್ಬ

ಕಾರ್ಯಕ್ರಮಕ್ಕೆ ನಾನಾ ಗಣ್ಯರು ಆಗಮನ |ನಟ ರಿಷಬ್ ಶೆಟ್ಟಿಗೆ ಊರ ಗೌರವದ ಸನ್ಮಾನ

ಬೆಂಗಳೂರು: ಬೆಂಗಳೂರಿನ ಅರಮನೆ ಮೈದಾನದ ವೈಟ್ ಪೆಟಲ್ಸ್‌ನಲ್ಲಿ ಆ.17 ಮತ್ತು 18ರಂದು ಆಯೋಜಿಸಲಾಗಿರುವ ಕುಂದಾಪ್ರ ಕನ್ನಡ ಹಬ್ಬವನ್ನು ಆ.17ರಂದು ಸಂಜೆ 5.00 ಗಂಟೆಗೆ ಡಿಸಿಎಂ ಡಿ.ಕೆ.ಶಿವಕುಮಾರ್ ಉದ್ಘಾಟಿಸಲಿದ್ದಾರೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಡಾ. ದೀಪಕ್ ಶೆಟ್ಟಿ ಬಾರ್ಕೂರು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಶನಿವಾರ ಖ್ಯಾತ ನಟ-ನಿರ್ದೇಶಕ ರಿಷಬ್ ಶೆಟ್ಟಿ ಅವರಿಗೆ ಊರ ಗೌರವದ ಸನ್ಮಾನ ಇರಲಿದೆ. ಅಂದು ಮುಖ್ಯ ಅತಿಥಿಗಳಾಗಿ ಉಡುಪಿ- ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ, ಕುಂದಾಪುರ ಶಾಸಕ ಕಿರಣ್ ಕುಮಾರ್ ಕೊಡ್ಗಿ, ಸಂಗೀತ ನಿರ್ದೇಶಕ ರವಿ ಬಸ್ರೂರು, ಮಾರಣಕಟ್ಟೆ ಎಂ.ಎಸ್. ಮಂಜ ಚಾರಿಟಬಲ್ ಟ್ರಸ್ಟ್‌ನ ಕೃಷ್ಣಮೂರ್ತಿ ಮಂಜ, ಲೈಫ್‌ಲೈನ್ ಫೀಡ್ಸ್ ಪ್ರೈ.ಲಿ. ಎಂಡಿ ಕಿಶೋರ್ ಕುಮಾರ್ ಹೆಗ್ಡೆ ಇರಲಿದ್ದಾರೆ.

ಭಾನುವಾರ ಸಂಜೆ 5ರ ಸಮರೋಪ ಸಮಾಂಭದಲ್ಲಿ ಪದ್ಮಶ್ರೀಮತ್ತು ಅರ್ಜುನ ಪ್ರಶಸ್ತಿ ಪುರಸ್ಕೃತ ಕ್ರೀಡಾಪಟು ಡಾ.ಮಾಲತಿ ಕೆ. ಹೊಳ್ಳರಿಗೆ ಊರ ಗೌರವದ ಸನ್ಮಾನ ಇರಲಿದೆ. ಆ ದಿನ ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ಕೆ. ಜಯಪ್ರಕಾಶ್ ಹೆಗ್ಡೆ, ಬೈಂದೂರು ಶಾಸಕ ಗುರುರಾಜ್ ಗಂಟಿಹೊಳೆ, ಎಂಆರ್‌ಜಿ ಸಮೂಹದ ಅಧ್ಯಕ್ಷ ಕೆ.ಪ್ರಕಾಶ್ ಶೆಟ್ಟಿ, ಯುನಿವರ್ಸಲ್ ಗ್ರೂಪ್‌ನ ಉಪೇಂದ್ರ ಶೆಟ್ಟಿ, ಬಸ್ರೂರು ಶ್ರೀಮಹಾಲಿಂಗೇಶ್ವರ ದೇವಸ್ಥಾನದ ಆಡಳಿತ ಧರ್ಮದರ್ಶಿ ಅಪ್ಪಣ್ಣ ಹೆಗ್ಡೆ, ಸೌತ್ ಫೀಲ್ಡ್ ಪೇಂಟ್ಸ್ ಪ್ರೈ. ಲಿ. ಎಂಡಿ ಶಿವರಾಮ ಹೆಗ್ಡೆ, ಚೆಫ್ ಟಾಕ್‌ನ ಗೋವಿಂದಬಾಬು ಪೂಜಾರಿ ಇರಲಿದ್ದಾರೆ.

ಕುಂದಾಪುರ ಕನ್ನಡ ಹಬ್ಬದಲ್ಲಿ ನಟಿ ಪ್ರಿಯಾಂಕಾ ಉಪೇಂದ್ರ, ನಿರ್ದೇಶಕ ರಾಜ್ ಬಿ. ಶೆಟ್ಟಿ, ಗೋಲ್ಡನ್ ಸ್ಟಾರ್ ಗಣೇಶ್ ಆಗಮಿಸಲಿದ್ದಾರೆ. ಶಿವರಾಜ್‌ಕುಮಾರ್, ರಿಯಲ್ ಸ್ಟಾರ್ ಉಪೇಂದ್ರರನ್ನು ಆಹ್ವಾನಿಸಲಾಗಿದ್ದು ಬರುವ ನಿರೀಕ್ಷೆ ಇದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಪ್ರತಿಷ್ಠಾನದ ಗೌರವಾಧ್ಯಕ್ಷ ಉದಯ ಹೆಗ್ಡೆ, ಉಪಾಧ್ಯಕ್ಷ ನರಸಿಂಹ ಬೀಜಾಡಿ, ವಿಜಯ್ ಶೆಟ್ಟಿ ಹಾಲಾಡಿ, ಅಜಿತ್ ಶೆಟ್ಟಿ ಉಳ್ತೂರು, ವಿಜಯ್ ಶೆಟ್ಟಿ, ಕ್ರೀಡಾ ಸಂಚಾಲಕ ಚಂದ್ರಶೇಖರ್ ಇದ್ದರು.

ಸುದ್ದಿಗೋಷ್ಠಿಯಲ್ಲಿ ಪ್ರತಿಷ್ಠಾನದ ಅಧ್ಯಕ್ಷ ಡಾ. ದೀಪಕ್ ಶೆಟ್ಟಿ ಬಾರ್ಕೂರು ಮಾತನಾಡಿದರು.

ಒಂದು ಲಕ್ಷ ಜನ ಸೇರುವ ನಿರೀಕ್ಷೆ

ಎರಡು ದಿನಗಳ ಹಬ್ಬದಲ್ಲಿ ಸುಮಾರು 1 ಲಕ್ಷ ಜನರು ಸೇರುವ ನಿರೀಕ್ಷೆ ಇದೆ. ಒಂದು ಸಾವಿರ ವಾಹನಗಳ ಪಾರ್ಕಿಂಗ್‌ಗೆ ಅವಕಾಶ ಕಲ್ಪಿಸಲಾಗಿದೆ. ಅದಾಗ್ಯೂ ಅನುಕೂಲದ ದೃಷ್ಟಿಯಿಂದ ಸಾರ್ವಜನಿಕ ಸಾರಿಗೆ ಮೂಲಕ ಆಗಮಿಸುವುದು ಉತ್ತಮ. ಶನಿವಾರ ಮಧ್ಯಾಹ್ನ 2ರಿಂದ ರಾತ್ರಿ 10.30 ಮತ್ತು ಭಾನುವಾರ ಬೆಳಗ್ಗೆ 9.30ರಿಂದ ರಾತ್ರಿ 10.30ರ ವರೆಗೆ ನಿರಂತರ ಕಾರ್ಯಕ್ರಮಗಳಿದ್ದು, ಈ ಹಬ್ಬಕ್ಕೆ ಯಾವುದೇ ಪ್ರವೇಶ ಶುಲ್ಕ ವಿಲ್ಲ ಎಂದು ದೀಪಕ್ ಹೇಳಿದರು. ಹೊಟ್ಟೆ ಕಂಡದ್ ನಾವೇ ಸೈ ಎಂಬ ಹೆಸರಿನಲ್ಲಿ ಕರಾವಳಿ ಖಾದ್ಯಮೇಳ ಇರಲಿದ್ದು, ವಿಶೇಷ ತಿಂಡಿ-ತಿನಿಸುಗಳು ಲಭ್ಯ ಇರಲಿವೆ. ಅಲ್ಲದೆ ಕಡಲೂರಿನ ವಸ್ತು, ಒಡವೆ, ವಸ್ತ್ರಪ್ರದರ್ಶನ ಮತ್ತು ಮಾರಾಟದ ಕುಂದಾಪ್ರ ಸಂತಿ ಕೂಡ ಇರಲಿದೆ.



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಕಾರ್ಮಿಕ ಇಲಾಖೆ
ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

78ನೇ ಸ್ವಾತಂತ್ರ್ಯೋತ್ಸವ ಸಂಭ್ರಮದಲ್ಲಿ ಕಾರ್ಮಿಕರ ಅಭ್ಯುದಯಕ್ಕಾಗಿ ಸರ್ಕಾರ ಅನುಷ್ಟಾನಗೊಳಿಸಿದ ವಿವಿಧ ಕಾರ್ಯಕ್ರಮಗಳು

ಕಾರ್ಮಿಕ ಆಯುಕ್ತಾಲಯ
- ಕರ್ನಾಟಕ ಕಡ್ಡಾಯ ಉಪಧನ ವಿಮಾನಿಯಮಗಳು 2024ರ (The Karnataka Compulsory Gratuity Insurance Policy Rules 2024) ಅನ್ನು ಅಧಿಸೂಚನೆ ಮೂಲಕ ಜಾರಿಗೆ ತರಲಾಗಿದೆ.
- ಕೈಗಾರಿಕಾ ವಿವಾದಗಳಗೆ ಸಂಬಂಧಿಸಿದಂತೆ ವಿವಿಧ ಕಾರ್ಮಿಕ ನ್ಯಾಯಾಲಯ / ಔದ್ಯೋಗಿಕ ನ್ಯಾಯಾಧಿಕರಣಗಳು ನೀಡಿದ 2069 ಐತೀರ್ಪುಗಳನ್ನು ಪ್ರಕಟಿಸಲಾಗಿದೆ.
- ವಿವಿಧ ಕಾರ್ಮಿಕ ಕಾಯ್ದೆಗಳಡಿ ಒಟ್ಟು 98,066 ತಪಾಸಣೆಗಳನ್ನು ಕೈಗೊಂಡು ಕಾಯ್ದೆ ಉಲ್ಲಂಘಿಸಿದ ಮಾಲೀಕರ ವಿರುದ್ಧ ಮೊಕದ್ದಮೆಗಳನ್ನು ಹೂಡಲಾಗಿದೆ. ವಿವಿಧ ನ್ಯಾಯಾಲಯಗಳಲ್ಲಿ ವಿಲೇವಾರಿಯಾದ ಒಟ್ಟು 1998 ಪ್ರಕರಣಗಳಲ್ಲಿ ರೂ. 1,06,53,831/- ದಂಡ ವಿಧಿಸಲಾಗಿದೆ.
- ಕೈಗಾರಿಕಾ ವಿವಾದಗಳ ಕಾಯ್ದೆ, 1947ರಡಿಯಲ್ಲಿ ದಾಖಲಾದ 2026 ಪುಕರಣಗಳಲ್ಲಿ 1613 ಪ್ರಕರಣಗಳ ವಿಲೇವಾರಿ ಮಾಡಲಾಗಿದೆ.
- ಖಾಸಗಿ ವಲಯಗಳಲ್ಲಿ ದುಡಿಯುತ್ತಿರುವ ಮಹಿಳೆಯರಿಗೆ ಋತುಚಕ್ರದ ಮೊದಲ ದಿನ ಒಂದು ದಿನದ ವೇತನ ಸಹಿತ ರಜೆಯನ್ನು ಮಂಜೂರು ಮಾಡಲು Menstrual Leave Policy ಅನ್ನು ಅನುಷ್ಠಾನಗೊಳಿಸುವ ಕ್ರಮ ಅಂತಿಮ ಹಂತದಲ್ಲಿರುತ್ತದೆ.

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಹಾಗೂ ಮಾನ್ಯ ಕಾರ್ಮಿಕ ಸಚಿವರು ಮತ್ತು ಮಂಡಳಿಯ ಅಧ್ಯಕ್ಷರಾದ ಶ್ರೀ ಸಂತೋಷ್ ಎಸ್. ಲಾಡ್ ರವರು ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆಯ ಸಂದರ್ಭದಲ್ಲಿ ಮಕ್ಕಳೊಂದಿಗಿರುವ ಸಾಂದರ್ಭಿಕ ಚಿತ್ರ.

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
- ಮಂಡಳಿಯ ವತಿಯಿಂದ ನಿರ್ಮಾಣ ಕಾರ್ಮಿಕರ ಶ್ರೇಯೋಭಿವೃದ್ಧಿಗಾಗಿ ಪಿಂಚಣಿ ಸೌಲಭ್ಯಗಳು, ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಸಹಾಯಧನ, ವೈದ್ಯಕೀಯ ಸೌಲಭ್ಯಗಳು ಮುಂತಾದ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.
- 2023-24 ನೇ ಸಾಲಿನಲ್ಲಿ 24.26 ಲಕ್ಷ ಫಲಾನುಭವಿಗಳಿಗೆ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಒದಗಿಸಲಾಗಿದೆ.
- ಕಾರ್ಮಿಕ ಇಲಾಖೆಯ 37 ಉಪವಿಭಾಗಗಳಲ್ಲಿ ಮುನ್ನೆಚ್ಚರಿಕಾ ಆರೋಗ್ಯ ತಪಾಸಣಾ ಶಿಬಿರಗಳನ್ನು ಆಯೋಜಿಸಲಾಗಿದ್ದು, 10.05 ಲಕ್ಷ ಕಾರ್ಮಿಕರು ಯೋಜನೆಯ ಪ್ರಯೋಜನವನ್ನು ಪಡೆದಿರುತ್ತಾರೆ.
- ಮಂಡಳಿಯ ವತಿಯಿಂದ ನೋಂದಾಯಿತ ನಿರ್ಮಾಣ ಕಾರ್ಮಿಕರ ಆರೋಗ್ಯದ ಹಿತದೃಷ್ಟಿಯಿಂದ ಸಂಚಾರಿ ಆರೋಗ್ಯ ಕ್ಲಿನಿಕ್ ಯೋಜನೆಯನ್ನು ರಾಜ್ಯಾದ್ಯಂತ ಜಾರಿಗೆ ತರಲಾಗಿದ್ದು, 2.97 ಲಕ್ಷ ಕಾರ್ಮಿಕರು ಯೋಜನೆಯ ಪ್ರಯೋಜನವನ್ನು ಪಡೆದಿರುತ್ತಾರೆ.

ಕಾರ್ಖಾನೆಗಳು, ಬಾಯ್ಲರುಗಳು ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ
- ಕಾರ್ಖಾನೆಗಳ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ, ಮಹಿಳಾ ಕಾರ್ಮಿಕರಿಗೆ 3 ಪಾಳಿಗಳಲ್ಲಿ 24/7 ಕೆಲಸ ನಿರ್ವಹಿಸಲು ಮತ್ತು ಹೆಚ್ಚುವರಿ ಕೆಲಸ ನಿರ್ವಹಿಸಲು ಅನುವು ಮಾಡಲಾಗಿದೆ.
- ಹೆಚ್ಚುವರಿ ಕೆಲಸದ ಮಿತಿಯನ್ನು 144 ಗಂಟೆಗಳವರೆಗೆ ವಿಸ್ತರಿಸಲಾಗಿದೆ, ವಾರದ 48 ಗಂಟೆಗಳ ಕೆಲಸದ ಅವಧಿಯನ್ನು ಬದಲಾಯಿಸದೆ, ದೈನಂದಿನ ಕೆಲಸದ ಅವಧಿಯನ್ನು ಸಡಿಲಗೊಳಿಸಲು ಅನುವು ಮಾಡಲಾಗಿದೆ.
- ಕಾರ್ಮಿಕರಿಗಾಗಿ 147 ತರಬೇತಿ ಕಾರ್ಯಕ್ರಮಗಳನ್ನು ಹಾಗೂ ಆಡಳಿತ ವರ್ಗದವರಿಗೆ 16 ವಿಚಾರಸಂಕಿರಣಗಳನ್ನು ಆಯೋಜಿಸಿ, ಸುರಕ್ಷತೆ, ಆರೋಗ್ಯ ಹಾಗೂ ವಿಪತ್ತು ನಿರ್ವಹಣೆ ಬಗ್ಗೆ ಅರಿವು ಮೂಡಿಸಲಾಗಿದೆ.

ಕಾರ್ಮಿಕ ಕಲ್ಯಾಣ ಮಂಡಳಿ
- 27212 ಫಲಾನುಭವಿಗಳಿಗೆ ರೂ. 2459.12 ಲಕ್ಷಗಳ ಶೈಕ್ಷಣಿಕ ಪ್ರೋತ್ಸಾಹಧನ ವಿತರಣೆ.
- ಸಂಘಟಿತ ಕಾರ್ಮಿಕರಿಗೆ ವೈದ್ಯಕೀಯ ನೆರವು ಯೋಜನೆಯಡಿ 6 ಫಲಾನುಭವಿಗಳಿಗೆ ಧನ ಸಹಾಯವಾಗಿ ನೀಡಲಾಗಿದೆ.
- ಮೃತ ಕಾರ್ಮಿಕರ ಅಂತ್ಯ ಸಂಸ್ಕಾರಕ್ಕೆ ಒಟ್ಟು 394 ಫಲಾನುಭವಿಗಳಿಗೆ ರೂ.39.40 ಲಕ್ಷಗಳನ್ನು ಧನ ಸಹಾಯವಾಗಿ ನೀಡಲಾಗಿದೆ.
- ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ ಧನ ಸಹಾಯವಾಗಿ 663 ಫಲಾನುಭವಿಗಳಿಗೆ ರೂ.66.30 ಲಕ್ಷಗಳನ್ನು ನೀಡಲಾಗಿದೆ.

ಕರ್ನಾಟಕ ರಾಜ್ಯ ಬಾಲಕಾರ್ಮಿಕ ನಿರ್ಮೂಲನಾ ಯೋಜನಾ ಸೊಸೈಟಿ
- ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಹಾಗೂ ನಿಯಂತ್ರಣ) ಕಾಯ್ದೆ, 1986ರಡಿಯಲ್ಲಿ ಮೇ-2023 ರಿಂದ ಮೇ-2024ರವರೆಗೆ 44981 ತಪಾಸಣೆಗಳನ್ನು ನಡೆಸಲಾಗಿರುತ್ತದೆ.
- 715 ಬಾಲಕಾರ್ಮಿಕರನ್ನು ಪತ್ತೆಹಚ್ಚಿ ಪುನರ್ವಸತಿಗೊಳಿಸಲಾಗಿರುತ್ತದೆ. 302 ಪ್ರಕರಣಗಳನ್ನು ವಿವಿಧ ನ್ಯಾಯಾಲಯಗಳಲ್ಲಿ ಮೊಕದ್ದಮೆ ದಾಖಲಿಸಲಾಗಿದ್ದು, 19 ಪ್ರಕರಣಗಳಲ್ಲಿ ಶಿಕ್ಷೆಯಾಗಿರುತ್ತದೆ. ರೂ. 11,37,000/-ಗಳ ದಂಡ ವಸೂಲಾತಿಯಾಗಿರುತ್ತದೆ.
- ಬೆಂಗಳೂರು ನಗರ ಹಾಗೂ ಮೈಸೂರು ಜಿಲ್ಲೆಯಲ್ಲಿ ರಸ್ತೆಬದಿಗಳಲ್ಲಿ ಭಿಕ್ಷೆ ಬೇಡುವ ಹಾಗೂ ಪೆನ್ನು ಪೆನ್ಸಿಲ್‌ಗಳು ಹಾಗೂ ಇತರೆ ವಸ್ತುಗಳನ್ನು ಮಾರಾಟ ಮಾಡುವ ಕುರಿತು ಕಾರ್ಯಪಡೆಯ ತಂಡಗಳು 375 ಸ್ಥಳಗಳಲ್ಲಿ ತಪಾಸಣೆ ನಡೆಸಿ 13 ಮಕ್ಕಳನ್ನು ರಕ್ಷಣೆ ಮಾಡಲಾಗಿರುತ್ತದೆ.

ಕಾರ್ಮಿಕ ಸಹಾಯವಾಣಿ 155214

ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ
- ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆಯಡಿ, 222 ಅಪಘಾತ ಪ್ರಕರಣಗಳಲ್ಲಿ ಒಟ್ಟು ರೂ. 1074.37 ಲಕ್ಷಗಳ ಅಪಘಾತ ಪರಿಹಾರವನ್ನು ವಿತರಿಸಲಾಗಿದೆ.
- ಅಪಘಾತದಿಂದ ಮರಣ ಹೊಂದಿದ/ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ 242 ಫಲಾನುಭವಿ ಮಕ್ಕಳಿಗೆ ತಲಾ ರೂ.10,000/-ಗಳಂತೆ ಒಟ್ಟು ರೂ.24.20 ಲಕ್ಷಗಳ ಶೈಕ್ಷಣಿಕ ಸಹಾಯಧನ ಸೌಲಭ್ಯ ನೀಡಲಾಗಿದೆ.
- 2023-24 ಅಯವ್ಯಯದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಘೋಷಿಸಿದಂತೆ, "ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ"ಯನ್ನು ಹೊಸದಾಗಿ ರೂಪಿಸಿ ಒಟ್ಟು 4543 ಕಾರ್ಮಿಕರನ್ನು ನೋಂದಾಯಿಸಲಾಗಿದೆ.
- ಕರ್ನಾಟಕ ರಾಜ್ಯ ದಿನಪತ್ರಿಕೆ ವಿತರಣಾ ಕಾರ್ಮಿಕರ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಯೋಜನೆಯನ್ನು ಹೊಸದಾಗಿ ರೂಪಿಸಿ ಒಟ್ಟು 6339 ಕಾರ್ಮಿಕರನ್ನು ನೋಂದಾಯಿಸಲಾಗಿದೆ.

ಆಶಾದೀಪ ಯೋಜನೆ
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಒಟ್ಟು 1121 ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಮಾಲೀಕರು ಪಾವತಿಸಿದ ಇ.ಎಸ್.ಐ. ಹಾಗೂ ಭವಿಷ್ಯನಿಧಿ ವಂತಿಕೆರೂ. 182.55 ಲಕ್ಷಗಳನ್ನು ಮಾಲೀಕರಿಗೆ ಮರುಪಾವತಿಸಲಾಗಿದೆ.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಒಟ್ಟು 729 ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಮಾಲೀಕರು ಪಾವತಿಸಿದ ಶಿಷ್ಯವೇತನ ರೂ. 332.12 ಲಕ್ಷಗಳನ್ನು ಮಾಲೀಕರಿಗೆ ಮರುಪಾವತಿಸಲಾಗಿದೆ.

78ನೇ ಸ್ವಾತಂತ್ರ್ಯೋತ್ಸವದ ಶುಭಾಶಯಗಳು

ನುಡಿದಂತೆ ನಡೆದಿದ್ದೇವೆ...
ಶಕ್ತಿ ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಗೃಹಜ್ಯೋತಿ ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ
ಅನ್ನಭಾಗ್ಯ ಬಡವರಿಗೆ ಪ್ರತಿ ತಿಂಗಳು 10kg
ಗೃಹಲಕ್ಷ್ಮಿ ₹2000
ಯುವನಿಧಿ ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 | ₹1500

ಎಲ್ಲ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿಯನ್ನು ಸಾಧಿಸಲು ನಿರಂತರ "ಪ್ರಯತ್ನಿಸಿ ಶ್ರಮಿಸುವುದು" – ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.
PARLIAMENT OF INDIA

ಶ್ರೀಮತಿ ಭಾರತಿ ಡಿ., ಭಾ.ಆ.ಸೇ
ಸಿಇಓ ಮತ್ತು ಕಾರ್ಯದರ್ಶಿಗಳು,
ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ಡಾ॥ ಹೆಚ್.ಎನ್. ಗೋಪಾಲಕೃಷ್ಣ, ಭಾ.ಆ.ಸೇ
ಆಯುಕ್ತರು,
ಕಾರ್ಮಿಕ ಇಲಾಖೆ

ಶ್ರೀ ಮೊಹಮ್ಮದ್ ಮೊಹಸಿನ್, ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಕಾರ್ಮಿಕ ಇಲಾಖೆ

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾರ್ಪೊರೇಟ್ ಕಚೇರಿ, "ಮೆಸ್ಕಾಂ ಭವನ", ಬಿಜೈ, ಮಂಗಳೂರು-575004
ದೂರವಾಣಿ: 0824-2885810 CIN: U40109 KA 2002 SGC 030425

ವಿಚಾರಣೆ ಸಂ. MESCOM/2024-25/SE0038 ದಿನಾಂಕ: 12.08.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮಂ.ವಿ.ಸ. ಕಂಪೆನಿ ವ್ಯಾಪ್ತಿಯಲ್ಲಿ ಎ.ಟಿ.ಪಿ ಸೇವೆಯನ್ನು ನೀಡಲು ಟೆಂಡರನ್ನು ಆಹ್ವಾನಿಸುತ್ತಿದ್ದು, ಆಸಕ್ತಿಯುಳ್ಳ ಅರ್ಹ ಬಿಡ್ಡುದಾರರು ದಿನಾಂಕ: 15.08.2024 ರಂದು ಅಥವಾ ನಂತರ https://kppp.karnataka.gov.in ಗೆ ಲಾಗ್‌ಆನ್ ಮಾಡಿ ವಿವರಗಳನ್ನು ಪಡೆಯಬಹುದಾಗಿದೆ.

ಸಹಿ/-
ಅಧೀಕ್ಷಕ ಇಂಜಿನಿಯರ್ (ವಿ) (ವಾಣಿಜ್ಯ),
ಕಾರ್ಪೊರೇಟ್ ಕಚೇರಿ

DIPR/ADM/KSMCA/415/24-25 dt: 13.08.2024

ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ 1912ಕ್ಕೆ ಕರೆ ಮಾಡಿ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರರ ಕಛೇರಿ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮಂಡ್ಯ.

ಸಂಖ್ಯೆ:ಕಾ.ಇಂ:ಗ್ರಾಕುನೀ&ನೈ:ವಿ.ಮಂ:ಹೊರಗುತ್ತಿಗೆಟೆಂ21:2024-25/880
ದಿನಾಂಕ:12.08.2024

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ:02/2024-25
(ದ್ವಿ-ಲಕೋಟೆ ಪದ್ಧತಿ) 2ನೇ ಕರೆ

(e-procurement portal)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರಿಂದ ಮಂಡ್ಯ ವಿಭಾಗ ಮತ್ತು ವಿಭಾಗದ ವ್ಯಾಪ್ತಿಯ ಉಪ-ವಿಭಾಗ ಕಛೇರಿಗಳಿಗೆ ಅಗತ್ಯವಿರುವ ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ 1 ವರ್ಷದ ಅವಧಿಗೆ ಪಡೆಯುವ ಸಲುವಾಗಿ, ಅರ್ಹ ನೊಂದಾಯಿತ ಮತ್ತು ಪರವಾನಗಿಯುಳ್ಳ ಮಾನವ ಸಂಪನ್ಮೂಲ ಏಜೆನ್ಸಿ/ಸಂಸ್ಥೆಗಳಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಪೂರ್ವಭಾವಿ ಸಭೆ ದಿ: 17.08.2024 ಸಮಯ: ಬೆಳಿಗ್ಗೆ 11:00 ಗಂಟೆಗೆ (ಸ್ಥಳ:ಕಾ.ಇಂ ಕಛೇರಿ, ಗ್ರಾ.ಕು.ನೀ&ನೈ ವಿಭಾಗ, ಮಂಡ್ಯ), ಟೆಂಡರ್ ಸಲ್ಲಿಸಲು ಕೊನೆಯ ದಿ: 21.08.2024 ಸಂಜೆ:5:25 ಗಂಟೆಗೆ, ತಾಂತ್ರಿಕ ಬಿಡ್ ತೆರೆಯುವ ದಿ: 22.08.2024 ಸಂಜೆ 5:30 ಗಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿ: 26.08.2024 ಬೆಳಿಗ್ಗೆ 11:00 ಗಂಟೆಗೆ. ಹೆಚ್ಚಿನ ವಿವರಗಳಿಗಾಗಿ https:// kppp.karnataka.gov.in ವೆಬ್‌ಸೈಟ್‌ನಲ್ಲಿ ಅಥವಾ ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. ದೂರವಾಣಿ ಸಂಖ್ಯೆ: 08232-222363.

ಸಹಿ/- ಕಾರ್ಯಪಾಲಕ ಇಂಜಿನಿಯರರು, ಗ್ರಾ.ಕು.ನೀ.&ನೈ.ವಿಭಾಗ, ಮಂಡ್ಯ.
DIPR/ADMDY-244/2024-25

ಮೀನುಗಾರಿಕೆ ಇಲಾಖೆ

ಮೀನುಗಾರಿಕೆ ಸಹಾಯಕ ನಿರ್ದೇಶಕರು, ಬಾದಾಮಿರವರ ಕಛೇರಿ, ಬಾದಾಮಿ

ಸಂಖ್ಯೆ: ಮೀಇ/ಬಾದಾಮಿ/ರಾ.ವ & ಜಿ.ವ/ಮೀ.ಸ.ಕಿಟ್ಟು/1/2024-25 ದಿ: 13-08-2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಮೀನುಗಾರಿಕೆ ಇಲಾಖೆಯ ವ್ಯಾಪ್ತಿಯ ತಾಲ್ಲೂಕು ಮಟ್ಟದ ಸನ್: 2024-25ನೇ ಸಾಲಿನ ರಾಜ್ಯ ವಲಯ ಮತ್ತು ಜಿಲ್ಲಾ ವಲಯ ಮೀನುಗಾರಿಕೆ ಸಲಕರಣೆ ಕಿಟ್ಟು/ ಫೈಬರ್ ಗ್ಲಾಸ್ ಮತ್ತು ಹರಿಗೋಲು ವಿತರಣೆ ಯೋಜನೆಯಡಿಯಲ್ಲಿ ಸಾಮಗ್ರಿಗಳನ್ನು ಪೂರೈಸಲು ದರ ಪಟ್ಟಿಗಳನ್ನು ಸಲ್ಲಿಸುವ ಕುರಿತು.

1) **ಟೆಂಡರ್ ಫಾರಂನ ಬೆಲೆ:** ರೂ. 200/-(ನಗದು ಮೊತ್ತವನ್ನು ಪಾವತಿಸಿ ರಸೀದಿ ಪಡೆಯುವುದು.) 2) **ದರಪಟ್ಟಿ ಪೂರೈಸ ಬೇಕಾದ ಸಾಮಗ್ರಿಗಳ ವಿವರ:** ಅನುಬಂಧ-4 ರಲ್ಲಿ ಸೂಚಿಸಿರುವಂತೆ. 3) **ಕಛೇರಿವಾರು ಟೆಂಡರ್ ಅರ್ಜಿಗಳನ್ನು/ಫಾರಂಗಳನ್ನು ವಿತರಿಸುವ ಕೊನೆಯ ದಿನಾಂಕ/ಸಮಯ:** ದಿನಾಂಕ:-23-08-2024 ರಂದು ಸಾಯಂಕಾಲ 5.00ಗಂಟೆ ವರೆಗೆ 4) **ಕಛೇರಿವಾರು ಟೆಂಡರ್ ಫಾರಂನ್ನು ಅಗತ್ಯ ದಾಖಲಾತಿಗಳೊಂದಿಗೆ ಸಲ್ಲಿಸಲು ಕೊನೆಯ ದಿನಾಂಕ/ಸಮಯ:** ದಿ: 26-08-2024 ರಂದು ಸಾಯಂಕಾಲ 5.00 ಗಂಟೆ ವರೆಗೆ 5) **ಕಛೇರಿವಾರು ಟೆಂಡರ್ ಅರ್ಜಿಗಳನ್ನು/ಫಾರಂಗಳನ್ನು ತೆರೆಯುವ ದಿನಾಂಕ/ಸಮಯ/ಸ್ಥಳ:** ದಿ: 27-08-2024 ರಂದು 11.00 ಗಂಟೆಗೆ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿ, ಬಾದಾಮಿ. 6) **ಇ.ಎಂ.ಡಿ (ಮುಂಗಡ ಠೇವಣಿ):** ಮೀನುಗಾರಿಕೆ ಸಹಾಯಕ ನಿರ್ದೇಶಕರು, ಬಾದಾಮಿ. (Assistant Director of Fisheries, Badami) ಇವರ ಹೆಸರಿಗೆ ಟೆಂಡರ್ ಮೊತ್ತದ ಶೇಕಡಾ2.5% ರಷ್ಟು ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕನಿಂದ ಡಿ.ಡಿ ಯನ್ನು ಪಡೆದು ಸಲ್ಲಿಸತಕ್ಕದ್ದು.

ಸೂಚನೆ: ಟೆಂಡರ್ ಪ್ರಕಟಣೆಯ ಮಾಹಿತಿಯ ವಿವರ ಮತ್ತು ಇತರೆ ನಿಯಮಗಳ ಬಗ್ಗೆ ಕಛೇರಿಗೆ ಸಂಪರ್ಕಿಸಿ ಮಾಹಿತಿಯನ್ನು ಪಡೆದುಕೊಳ್ಳಬಹುದು. ಮೊ.ನಂ: 8095303104

ಸಹಿ/-
ಮೀನುಗಾರಿಕೆ ಸಹಾಯಕ ನಿರ್ದೇಶಕರು,
ಬಾದಾಮಿ

ಡಿಐಪಿಆರ್/ಬಾಗಲಕೋಟೆ/175/ಮಣಿಪಾಲ್/2024-25

KARNATAKA NEERAVARI NIGAM LIMITED
(A Government of Karnataka Enterprises)

ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ ಕನೀನಿನಿ,ಘಬದಂಕಾನಿ ವಿಭಾಗ ಸಂ.3 ಗೋಕಾಕ ಫೋನ ನಂ. 08332-225213.

ಸಂಖ್ಯೆ: ಕನೀನಿನಿ/ಜಿಆರ್‌ಬಿಸಿಸಿವಿ-3/ಡಿಬಿ/ಟೆಂಡರ/ಲೆ.ಶಿ.4701 ಎಂ& ಎಂ.ಆಯ್/ಟೆಂಡರ್/2024-25/01 ದಿನಾಂಕ:12-08-2024

ಅಲ್ಪಾವಧಿ ಶೇಕಡಾವಾರ ಟೆಂಡರ್ ಅಧಿಸೂಚನೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕನೀನಿನಿ, ಘ.ಬ.ದಂ.ಕಾ.ನಿ. ವಿಭಾಗ ಸಂ.3, ಗೋಕಾಕ ಕಚೇರಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000 ರ ಪ್ರಕಾರ act 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ ಕೆ.ಡಬ್ಲ್ಯೂ- I,II, III & IV ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆಪಿಪಿ ಪೋರ್ಟಲ್ ಮುಖಾಂತರ ಶೇಕಡಾ ವಾರು ಪ್ರತಿಶತ ದರಗಳ (Percentage Rate) ಆಧಾರದ ಮೇಲೆ ಟೆಂಡರ ಕರೆಯಲಾಗಿದ್ದು ಕೆಟಿಪಿಪಿ ಕಾಯ್ದೆಯ ರೂಲ್ 28 ರನ್ವಯ ದ್ವಿ ಲಕೋಟೆ ವಿಧಾನವನ್ನು ಅನುಸರಿಸಿ ಅರ್ಹ ಗುತ್ತಿಗೆದಾರರು ತಮ್ಮ ಟೆಂಡರನ್ನು ದ್ವಿ ಲಕೋಟೆ ವಿಧಾನದಲ್ಲಿ ಸಲ್ಲಿಸಬೇಕು. (ಕಿತ್ತೂರ ವಿಧಾನಸಭಾ ಮತಕ್ಷೇತ್ರದಡಿ)

1.ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮೀಸಲಾತಿ ಕಾಮಗಾರಿಗಳು (03). ಕಾಮಗಾರಿಗಳ ಇಂಡೆಂಟ್ ನಂಬರುಗಳು, 1216, 1218 & 1243 ಟೆಂಡರಿಗಿಟ್ಟ ಮೊತ್ತವು (ಜಿ.ಎಸ್.ಟಿ. ಒಳಗೊಂಡಿರುತ್ತದೆ) ರೂ. 14.995 ಲಕ್ಷಗಳು, ರೂ. 19.99 ಲಕ್ಷಗಳು, ರೂ. 48.47 ಲಕ್ಷಗಳು ಕ್ರಮವಾಗಿ ಇರುತ್ತವೆ. 2.ಸಾಮಾನ್ಯ ಕಾಮಗಾರಿಗಳು (02). ಕಾಮಗಾರಿಗಳ ಇಂಡೆಂಟ್ ನಂಬರುಗಳು. 1346 & 1347 ಇಟ್ಟ ಅಂದಾಜು ಟೆಂಡರ ಮೊತ್ತವು (ಜಿ.ಎಸ್.ಟಿ. ಒಳಗೊಂಡಿರುತ್ತದೆ) ರೂ. 63.11 ಲಕ್ಷಗಳು & ರೂ. 117.94 ಲಕ್ಷಗಳು ಕ್ರಮವಾಗಿ ಇರುತ್ತವೆ

ಕಾರ್ಯನಿರ್ವಾಹಕ ಅಭಿಯಂತರರು, ಕನೀನಿನಿ, ಜಿ.ಆರ್.ಬಿ.ಸಿ.ಸಿ. ವಿಭಾಗ ನಂ.3, ಗೋಕಾಕ ಕಚೇರಿಯ ಟೆಂಡರಗಳನ್ನು ದಿ: 16-08-2024 ರಿಂದ ದಿ:23-08-2024 ರಂದು 16.00 ಘಂಟೆಯವರೆಗೆ ಸಲ್ಲಿಸಬಹುದಾಗಿದೆ. ಟೆಂಡರ ಪೂರ್ವಭಾವಿ ಸಭೆ (ಇಂಡೆಂಟ್ ನಂಬರ 1347 ಕ್ಕೆ ಮಾತ್ರ) ದಿನಾಂಕ 19-08-2024 11.00 ಗಂಟೆಗೆ. ಟೆಂಡರ ಕುರಿತ ಪ್ರಶ್ನೆಗಳಿಗಾಗಿ/ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ & ಸಮಯವು ದಿನಾಂಕ 21-08-2024, 17.00 ಗಂಟೆಯವರೆಗೆ. ಟೆಂಡರ ಸಲ್ಲಿಸಲು ಕೊನೆಯ ದಿನಾಂಕ & ಸಮಯವು 23-08-2024 ರಂದು 16.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 26-08-2024, 11.00 ಗಂಟೆಗೆ, ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದು.

ಇತರೆ ವಿವರಗಳನ್ನು ಕರ್ನಾಟಕ ಸರ್ಕಾರದ https://www.kppp.karnataka.gov.in ವೆಬ್‌ಸೈಟನಲ್ಲಿ ಪಡೆಯಬಹುದು. ಇನ್ನು ಮುಂದೆ ಸದರಿ ಟೆಂಡರಗಳಲ್ಲಿ ಯಾವುದೇ ಬದಲಾವಣೆಗಳು/ ಮಾರ್ಪಾಡುಗಳು ಅಥವಾ ಅವಧಿ ವಿಸ್ತರಣೆ ಇತ್ಯಾದಿ ತಿದ್ದುಪಡಿಗಳಾದಲ್ಲಿ, ಕೆಪಿಪಿ -ಪೋರ್ಟಲ್ ವೆಬ್‌ಸೈಟನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/-(ಹೆಚ್.ಎಸ್.ಕಾಖಂಡಕಿ)
ಕಾರ್ಯನಿರ್ವಾಹಕ ಇಂಜಿನೀಯರು,
ಕನೀನಿನಿ ಜಿಆರ್‌ಬಿಸಿಸಿ ವಿಭಾಗ ನಂ-3, ಗೋಕಾಕ.

DIPR/BGM/RO-NO-604/KSMCA/2024-25

3 ವರ್ಷದಲ್ಲಿ 5 ಮದುವೆ ಆರೋಪಿಗಳು ಅಂದರ್

ಗುಬ್ಬಿ ಪೊಲೀಸರ ಕಾರ್ಯಾಚರಣೆ | ಅಸಲಿ ಮದುವೆ, ನಕಲಿ ಹೆಣ್ಣು

ತುಮಕೂರು: ವಯಸ್ಸು ಮೀರಿದ ಅವಿವಾಹಿತರನ್ನು ಮದುವೆಯಾಗುವುದಾಗಿ ನಂಬಿಸಿ ವಂಚಿಸುತ್ತಿದ್ದ ಮಹಿಳೆ ಸೇರಿದಂತೆ ಬ್ರೋಕರ್‌ಗಳನ್ನು ಗುಬ್ಬಿ ಪೊಲೀಸರು ಬಂಧಿಸಿದ್ದಾರೆ. ಗುಬ್ಬಿ ಪೊಲೀಸರ ಭರ್ಜರಿ ಕಾರ್ಯಾಚರಣೆಯಲ್ಲಿ ಜಿಲ್ಲೆ ಸೇರಿ ರಾಜ್ಯದ ಹಲವೆಡೆ ಹಲವರನ್ನು ವಂಚಿಸಿದ್ದ ತಂಡ ಅಂದರ್ ಆಗಿದೆ. 3 ವರ್ಷದಲ್ಲಿ 5 ಮದುವೆ ಮಾಡಿಕೊಂಡಿದ್ದ ಮದುಮಗಳು ಜೈಲು ಸೇರಿದ್ದಾಳೆ.

ಏನಿದು ಪ್ರಕರಣ: ಜಿಲ್ಲೆಯ ಗುಬ್ಬಿ ತಾಲೂಕಿನ ಅತ್ತಿಗಟ್ಟೆ ಗ್ರಾಮದ ಪಾಲಾಕ್ಷಯ್ಯ, ತಮ್ಮ ಮಗ ದಯಾನಂದಮೂರ್ತಿಗೆ 37 ವರ್ಷ ದಾಟಿದರೂ ಹೆಣ್ಣು ಸಿಗದೇ ನೊಂದಿದ್ದರು. ಕುಷ್ಟಗಿ ಮೂಲದ ಬಸವರಾಜು ಎಂಬಾತನ ಮೂಲಕ ಹುಬ್ಬಳ್ಳಿಯ ಲಕ್ಷ್ಮೀ ಎಂಬಾಕೆಯ ಪರಿಚಯವಾಗಿತ್ತು. ಮದುವೆ ಬ್ರೋಕರ್ ಕೆಲಸ ಮಾಡುತ್ತಿದ್ದ ಲಕ್ಷ್ಮೀ ಬಳಿ ಮಗನಿಗೆ ಹೆಣ್ಣು ತೋರಿಸುವಂತೆ ಪಾಲಾಕ್ಷಯ್ಯ ಕೇಳಿಕೊಂಡಿದ್ದರು. ಇವರ ಪರಿಸ್ಥಿತಿ ನೋಡಿದ ಲಕ್ಷ್ಮೀ, ಹುಬ್ಬಳ್ಳಿಯಲ್ಲಿ ಒಬ್ಬ ಹುಡುಗಿ ಇದ್ದಾಳೆ. ಆಕೆಗೆ ತಂದೆ-ತಾಯಿ ಇಲ್ಲ. ನೀವೇ ಮದುವೆ ಮಾಡಿಕೊಳ್ಳಬೇಕೆಂದು ಸುಳ್ಳು ಹೇಳಿದ್ದಳು. ಹುಡುಗಿಯ ಫೋಟೊ ಕಳುಹಿಸಿದ್ದಳು. ಬಳಿಕ ಹುಡುಗಿಯನ್ನು ಗಂಡಿನ ಮನೆಗೆ ಕರೆದುಕೊಂಡು ಬಂದಿದ್ದಳು. ಆಕೆಯ ಸಂಬಂಧಿಕರು ಎಂದು ಇನ್ನೂ ಐದಾರು ಜನರನ್ನು ಕರೆತಂದಿದ್ದಳು. ಕಳೆದ ವರ್ಷ ನವೆಂಬರ 11ರಂದು ಅತ್ತಿಗಟ್ಟೆಗೆ ಬಂದಿದ್ದ ನಕಲಿ ಕುಟುಂಬ ಅಂದೇ ಮದುವೆ ಮಾತುಕತೆ ನಡೆಸಿತ್ತು.

ಮಹಾರಾಷ್ಟ್ರ, ಹುಬ್ಬಳ್ಳಿಯಲ್ಲಿ ಸೆರೆ

ವಾಪಸ್ ಗುಬ್ಬಿಗೆ ಬಂದ ಪಾಲಾಕ್ಷಯ್ಯ ಎಲ್ಲರ ವಿರುದ್ಧ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡ ಗುಬ್ಬಿ ಪೊಲೀಸರು ತನಿಖೆ ನಡೆಸಿದ್ದರು. ಒಂದು ವರ್ಷದಿಂದ ದೋಖಾ ಕುಟುಂಬ ತಲೆ ಮರೆಸಿಕೊಂಡಿತ್ತು. ಮಹಾರಾಷ್ಟ್ರ, ಹುಬ್ಬಳ್ಳಿ, ಇತರೆ ಕಡೆ ಒಟ್ಟು ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ. ಮದುಮಗಳು ಕೋಮಲಾ ಲಕ್ಷ್ಮೀ ಬಾಳಸಾಬ್ ಜನಕರ, ಸಿದ್ದಪ್ಪ, ಲಕ್ಷ್ಮೀಬಾಯಿ, ಬ್ರೋಕರ್ ಲಕ್ಷ್ಮಿ ಬಂಧಿತರು.

ಮರುದಿನ ಮುಂಜಾನೆಯೇ ಮದುವೆ ಮಾಡಿ ಮುಗಿಸಿದ್ದರು. ಮಗನಿಗೆ ಹೆಣ್ಣು ಸಿಗದೇ ಹೈರಾಣಾಗಿದ್ದ ದಯಾನಂದಮೂರ್ತಿ ಕುಟುಂಬ ಒಪ್ಪಿಕೊಂಡು ಗ್ರಾಮದಲ್ಲಿ ಮದುವೆ ಮಾಡಿತ್ತು. ಮದುವೆಗೆ ಸುಮಾರು 200ಕ್ಕೂ ಹೆಚ್ಚು ಜನ ಸೇರಿದ್ದು, ಹೆಣ್ಣಿಗೆ ಚಿನ್ನದ ಸರ, ತಾಳಿ, ಕಿವಿಗೆ ಓಲೆ ನೀಡಿದ್ದರು. ವಧುವಿಗೆ 25 ಗ್ರಾಂ ಚಿನ್ನಾಭರಣ ಹಾಕಲಾಗಿತ್ತು. ಹೆಣ್ಣು ತೋರಿಸಿದ ಲಕ್ಷ್ಮೀಗೆ 1.5 ಲಕ್ಷ ಹಣ ನೀಡಿದ್ದರು. ಮದುವೆ ಮುಗಿದ ಎರಡು ದಿನದ ನಂತರ ಸಂಪ್ರದಾಯದ ನೆಪ ಹೇಳಿ ಹಣ-ಒಡವೆ ಸಹಿತ ಮಧು ಮಗಳನ್ನು ಕರೆದುಕೊಂಡು ಹೋಗಿದ್ದರು. ವಾರ ಕಳೆದರೂ ಸೊಸೆ ವಾಪಸ್ ಬಂದಿರಲಿಲ್ಲ. ಆತಂಕಗೊಂಡ ಪಾಲಾಕ್ಷಯ್ಯ ಹುಬ್ಬಳ್ಳಿಗೆ ಹೋಗಿ ವಿಚಾರಿಸಿದಾಗ, ನಡೆದದ್ದು ನಕಲಿ ಮದುವೆ, ಬಂದವರು ದೋಖಾ ಗಿರಾಕಿಗಳು ಎಂಬ ಸತ್ಯ ಬಯಲಾಗಿದೆ.

ರಾಜ್ಯದ ಜಲಾಶಯಗಳ ಮಟ್ಟ

	ಜಲಾಶಯ	ಗರಿಷ್ಠ ಮಟ್ಟ	ಇಂದಿನ ಮಟ್ಟ	ಒಳಹರಿವು
1.	ಕೆಆರ್‌ಎಸ್	124.80	123.02	14190
2.	ಕಬಿನಿ	2284	2282.71	5526
3.	ಹಾರಂಗಿ	2859	2857.20	3325
4.	ಹೇಮಾವತಿ	2922	2920.80	9977
5.	ಆಲಮಟ್ಟಿ	1704.81	1704.11	37089
6.	ತುಂಗಭದ್ರಾ	1633	1629.26	35425
7.	ನಾರಾಯಣಪುರ	1615	1614.84	14534
8.	ಲಿಂಗನಮಕ್ಕಿ	1819.12	1816.65	7741

ಹೆಚ್ಚಿನ ಲಾಭಾಂಶ ಆಮಿಷ 3.50 ಕೋಟಿ ವಂಚನೆ

ಹುಬ್ಬಳ್ಳಿ: ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭಾಂಶ ನೀಡುವುದಾಗಿ ನಂಬಿಸಿ ಜನರಿಗೆ 3 ಕೋಟಿಗೂ ಹೆಚ್ಚು ಹಣ ಪಡೆದು ವಂಚನೆ ಮಾಡಿರುವ ಪ್ರಕರಣ ತಡವಾಗಿ ಬೆಳಕಿಗೆ ಬಂದಿದೆ.

ಇಲ್ಲಿನ ವಿದ್ಯಾನಗರ ಶಿರೂರ್ ಪಾರ್ಕ್‌ನ ಆರ್. ಆರ್. ಈಜಿ ಟ್ರೇಡಿಂಗ್ ಕಂಪನಿ ಹಾಗೂ ಅಕ್ಯೂಮನ್ ಕ್ಯಾಪಿಟಲ್ ಟ್ರೇಡಿಂಗ್ ಕಂಪನಿಯ ಪಾಲುದಾರರಿಬ್ಬರು ಹಣ ಹೂಡಿಕೆ ಮಾಡಿದರೆ ಶೇ.4ರಿಂದ 5ರಷ್ಟು ಲಾಭಾಂಶ ನೀಡುವುದಾಗಿ ಹೇಳಿ, ಹಲವರಿಂದ 3.52 ಕೋಟಿ ರು. ಹೂಡಿಕೆ ಮಾಡಿಕೊಂಡಿದ್ದರು. ಬಳಿಕ ನಂಬಿಕೆ ದ್ರೋಹವೆಸಗಿರುವ ಬಗ್ಗೆ ಸಿಇಎನ್ ಕ್ರೈಂ ಠಾಣೆಯಲ್ಲಿ ದೂರು ದಾಖಲಾಗಿದೆ.

ಕಂಪನಿಯ ಸಂತೋಷ ಮುರುಡೇಶ್ವರ, ಆನಂದ ಹೆಬಸೂರು ತಮ್ಮ ಪಾಲುದಾರಿಕೆ ಕಂಪನಿಯಲ್ಲಿ ಹೂಡಿಕೆ ಮಾಡಿ ಹೆಚ್ಚಿನ ಲಾಭ ಪಡೆಯಬಹುದೆಂದು ನಂಬಿಸಿ, 2022 ರ ಏಪ್ರಿಲ್‌ನಿಂದ 2024 ರ ಜನವರಿ ನಡುವೆ 2 ಲಕ್ಷ ರು. ಹೂಡಿಕೆ ಮಾಡಿಕೊಂಡಿದ್ದರು. ಕೆಲ ತಿಂಗಳವರೆಗೆ ಲಾಭಾಂಶ ಕೊಟ್ಟು ನಂಬಿಕೆ ಬರುವಂತೆ ಮಾಡಿದ್ದರು. ನಂತರ ಹೂಡಿಕೆ ಮಾಡಿಕೊಂಡ ಹಣ ಮತ್ತು ಲಾಭಾಂಶ ಕೊಡದೆ ವಂಚಿಸಿದ್ದಾರೆ. ಸಿಇಎನ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಅಇಂವಿ/ಪ್ರ(ನಿ)/ಬೆಂಮಕ್ಷೇವ(ಉ)/ಕಾನಿಇಂ(ಕ)/ಸಕಾನಿಇಂ/ಕ-82(15)/23-24/3481-83 ದಿನಾಂಕ: 13.08.2024

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು, ವಿಚಾರಣೆ ಸಂಖ್ಯೆ: **ಕವಿಪ್ರನಿನಿ/ಅಇಂ(ವಿ)/ಪ್ರ(ನಿ)/ಬೆಂ.ಮ.ಕ್ಷೇ.ವ.(ಉ)/ರೈಲ್ವೆ_ಕ್ರಾಸಿಂಗ್‌ನ/ಕಾನಿಇಂ(ಕ)/ಸಇಂ/23-24/ಇಪಿಆರ್-21/3ನೇ ಕರೆ ದಿನಾಂಕ: 05.03.2024,** ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ ಟಿ.ಎಲ್.&ಎಸ್.ಎಸ್. ವಿಭಾಗ, ಎಸ್.ಆರ್.ಎಸ್. ಪೀಣ್ಯ, ಪ್ರಸರಣ (ನಿರ್ವಹಣೆ), ಬೆಂ.ಮ.ಕ್ಷೇ.ವ ಉತ್ತರ ವೃತ್ತದ ವ್ಯಾಪ್ತಿಯಲ್ಲಿ ಬರುವ ರೈಲ್ವೆ ಕ್ರಾಸಿಂಗ್‌ನ ವಿವಿಧ ಸ್ಥಳಗಳಲ್ಲಿ ಅದೇ ಸಾಮರ್ಥ್ಯದ ಹೊಸ ಕಂಡಕ್ಟರ್‌ನೊಂದಿಗೆ ಹಳೆಯ ರೈಲ್ವೆ ಕ್ರಾಸಿಂಗ್ ಕಂಡಕ್ಟರ್‌ಗಳನ್ನು ಬದಲಿಸಲು ಬಿಡ್‌ಗಳನ್ನು ಆಹ್ವಾನಿಸಿದೆ.

ಇ-ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಬಗ್ಗೆ ವಿವರಗಳನ್ನು ದಿನಾಂಕ **14.08.2024** ರಂದು ಅಥವಾ ಆನಂತರ ಕವಿಪ್ರನಿನಿ ವೆಬ್‌ಸೈಟ್ **https://kptcl.karnataka.gov.in.** ಗೆ "E Procurement KPTCL" ಹೈಪರ್‌ಲಿಂಕ್‌ನಲ್ಲಿ ಅಥವಾ **https://kppp.karnataka.gov.in** ಇಲ್ಲಿಗೆ ಲಾಗ್‌ಇನ್ ಆಗಿ ಪಡೆದುಕೊಳ್ಳಬಹುದು.

ಸಹಿ/- ಅಧೀಕ್ಷಕ ಇಂಜಿನಿಯರ್ (ವಿ),
ಪ್ರಸರಣ (ನಿರ್ವಹಣೆ), ಬೆಂ.ಮ.ಕ್ಷೇ.ವ., ಉತ್ತರ ವೃತ್ತ, ನೆಲಮಹಡಿ,
ಕ.ವಿ.ಪ್ರ.ನಿ.ನಿ, ಕಛೇರಿ ಸಂಕೀರ್ಣ, ಆನಂದರಾವ್ ವೃತ್ತ, ಬೆಂಗಳೂರು-09.

ಕರ್ನಾಟಕ ಸರ್ಕಾರ

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಕೊಪ್ಪ ವಿಭಾಗ, ಕೊಪ್ಪ-577126.

Ph: 08265-221266, ಇ-ಮೇಲ್:-dcfkoppa@gmail.com
ಸಂಖ್ಯೆ:ಟಿಬಿಆರ್:ಹರಾಜು:ಸಿಆರ್:15/2024-25 ದಿನಾಂಕ: 07.08.2024

ಅರಣ್ಯ ಉತ್ಪನ್ನಗಳ ಇ-ಹರಾಜಿಗೆ ಸಂಬಂಧಪಟ್ಟ ಟೆಂಡರ್ ಪ್ರಕಟಣೆ

ಕೊಪ್ಪ ವಿಭಾಗದ ಸಂಗಮೇಶ್ವರಪೇಟೆ ಮತ್ತು ನರಸಿಂಹರಾಜಪುರ ಸರ್ಕಾರಿ ನಾಟಾ ಸಂಗ್ರಹಾಲಯಗಳಲ್ಲಿ ದಾಸ್ತಾನು ಇರುವ ಅರಣ್ಯ ಉತ್ಪನ್ನಗಳನ್ನು ದಿನಾಂಕ: 10-09-2024 ರಿಂದ 23-09-2024 (ಸರ್ಕಾರಿ ರಜಾ ದಿನಗಳನ್ನು ಹೊರತುಪಡಿಸಿ) ರಂದು ಇ-ಹರಾಜು ಮೂಲಕ ವಿಲೇವಾರಿ ಮಾಡಲು ದಿನಾಂಕವನ್ನು ನಿಗದಿಪಡಿಸಲಾಗಿರುತ್ತದೆ. ಸದರಿ ಹರಾಜಿನಲ್ಲಿ ಈ ಕಛೇರಿಯ ಸವಿಸ್ತಾರ ಹರಾಜು ಪ್ರಕಟಣೆ ಸಂಖ್ಯೆ ಟಿಬಿಆರ್:ಹರಾಜು:ವಿವ:15/2024-25, ದಿನಾಂಕ: 07-08-2024 ರಲ್ಲಿ ತಿಳಿಸಿರುವ ಎಲ್ಲಾ ಷರತ್ತಿಗೊಳಪಟ್ಟು ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಇ-ಹರಾಜಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ ಹಾಗೂ ಇ-ಹರಾಜಿನ ಕುರಿತು ವಿವರಗಳನ್ನು ಕರ್ನಾಟಕ ಸರ್ಕಾರದ ಅಧಿಕೃತ ವೆಬ್ ಸೈಟ್ www.mstcecommerce.com & www.etimber.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ, ಕೊಪ್ಪ ವಿಭಾಗ, ಕೊಪ್ಪ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಚಿ/24-25/45/461

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಹಾಸನ

ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಆಯುಷ್ ಇಲಾಖೆ, ಹೊಸಲೈನ್ ರಸ್ತೆ, ಹಾಸನ-573201

E-mail: dao.hassan09@gmail.com ದೂರವಾಣಿ ಸಂ:08172-272272
ಸಂಖ್ಯೆ: ಜಿಆಕಹಾ/26/ಹೊರಗುತ್ತಿಗೆ/2024-25 ದಿನಾಂಕ:09-08-2024

ಇ-ಟೆಂಡರ್ ಪ್ರಕಟಣೆ

ಜಿಲ್ಲಾ ಆಯುಷ್ ಕಛೇರಿ, ಹಾಸನ ವ್ಯಾಪ್ತಿಯ ಆಸ್ಪತ್ರೆ/ಚಿಕಿತ್ಸಾಲಯಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಗ್ರೂಪ್ ಡಿ ನೌಕರರ ಸೇವೆಯನ್ನು ಒದಗಿಸಲು ನೊಂದಾಯಿತ ಹೊರ ಸಂಪನ್ಮೂಲ ಏಜೆನ್ಸಿಯವರಿಂದ 1 ವರ್ಷದ ಅವಧಿಯವರೆಗೆ ಇ-ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್ ಮೂಲಕ ಅಲ್ಪಾವಧಿ ಇ-ಟೆಂಡರ್ ಆಹ್ವಾನಿಸಲಾಗಿದೆ. ದಿನಾಂಕ: 09-08-2024 ರಿಂದ 23-08-2024 ರವರೆಗೆ ಆನ್ ಲೈನ್ ನಲ್ಲಿ ಅರ್ಜಿಯನ್ನು ಪಡೆದು ಸಲ್ಲಿಸುವುದು. ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಾಗಿ www.kppp.karnataka.gov.in ವೆಬ್‌ಸೈಟ್ ಅಧಿಸೂಚನೆ ಸಂ: AYD/2024-25/SE0078/CALL-2 ನಲ್ಲಿ ನೋಡಬಹುದಾಗಿದೆ.

ಸಹಿ/- ಜಿಲ್ಲಾ ಆಯುಷ್ ಅಧಿಕಾರಿಗಳು,
ಜಿಲ್ಲಾ ಆಯುಷ್ ಕಛೇರಿ, ಹಾಸನ ಜಿಲ್ಲೆ.

ವಾಸಾಸಂಇ/ಹಿಸನಿ/ಹಾಸನ/291/ಕೆಎಸ್‌ಎಂಸಿಎ/2024-25

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಶಿವಮೊಗ್ಗ

ಐ.ಎಫ್.ಟಿ. ಸಂ: 04/2024-25 ದಿನಾಂಕ: 01.08.2024

ಸೆಕ್ಷನ್ 1: ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್)-ಕೆ.ಡಬ್ಲೂ-4

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಶಿವಮೊಗ್ಗ ರವರ ಕಛೇರಿಯಿಂದ ಸ್ಟ್ಯಾಂಡರ್ಡ್ ಟೆಂಡರ್ ಕೆ.ಡಬ್ಲೂ-4 ರ ಅನ್ವಯ ಚಿಕ್ಕಮಗಳೂರು ಜಿಲ್ಲೆ, ಎನ್.ಆರ್.ಪುರ ತಾಲ್ಲೂಕು, ಬಾಳೆಹೊನ್ನೂರು ಹತ್ತಿರ ಸರ್ವೆ ನಂ. 177ರಲ್ಲಿ ಸಂರಕ್ಷಣಾ ಕಾಮಗಾರಿಯ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಟೆಂಡರ್‌ಗೆ ಇಡಲಾದ ಮೊತ್ತ ರೂ. 297.67 ಲಕ್ಷಗಳು. (ಜಿ.ಎಸ್.ಟಿ ಒಳಗೊಂಡಂತೆ) ಸದರಿ ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ಟೆಂಡರ್‌ನ್ನು ಒಪ್ಪಿಕೊಳ್ಳುವ ಕನಿಷ್ಠ ಅರ್ಹತಾ ಪ್ರಮಾಣಗಳನ್ನು ಹಾಗೂ ಇತರೆ ಹೆಚ್ಚಿನ ವಿವರಗಳನ್ನು ಕೆ.ಪಿ.ಪಿ.ಪಿ ವೆಬ್ ಸೈಟ್ ವಿಳಾಸ: https://kppp.karnataka.gov.in ನಲ್ಲಿ ದಿನಾಂಕ 06.08.2024 ರಿಂದ ಲಾಗಿನ್ ಆಗುವ ಮೂಲಕ ಪಡೆದುಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸುವ ಕಡೆಯ ದಿನಾಂಕ 16.08.2024. ಇನ್ನುಳಿದಂತೆ ವೈಬ್ ಸೈಟ್‌ನಲ್ಲಿರುವ ವಿವರಗಳೇ ಅಂತಿಮ.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/24-25/61/08/465

..ತೆರವು ನೆಪದಲ್ಲಿ ರೈತರನ್ನು ಬೀದಿಗೆ ತರಬೇಡಿ

← ಮೊದಲಪುಟದಿಂದ

ಬೀದಿಗೆ ಬರುವ ನೂರಾರು ಕುಟುಂಬ: ಒತ್ತುವರಿಯಾಗಿರುವ ಅರಣ್ಯ ಭೂಮಿಯನ್ನು ತೆರವುಗೊಳಿಸುವಂತೆ ಈಶ್ವರ್ ಖಂಡ್ರೆ ಸೂಚನೆಯ ಬೆನ್ನಲ್ಲೇ, ಅರಣ್ಯ ಇಲಾಖೆಯ ಅಧಿಕಾರಿಗಳು 'ಚಳಿಬಿಟ್ಟು' ಎದ್ದಿದ್ದಾರೆ.

ಎಸಿ ಕೋಣೆಯಲ್ಲಿ ಕುಳಿತು ಸಿದ್ಧಪಡಿಸಿರುವ ನೀಲನಕ್ಷೆಯನ್ನು ಮುಂದಿಟ್ಟುಕೊಂಡು ತೆರವುಗೊಳಿಸಲು ಮುಂದಾಗುತ್ತಿದ್ದಾರೆ. ಈ ತೆರವು ಕಾರ್ಯಚರಣೆಯಲ್ಲಿ ನೂರಾರು ಎಕರೆ ಕಾಫಿ ಎಸ್ಟೇಟ್ ಹೊಂದಿರುವವರಿಗಿಂತ ಸಣ್ಣ-ಸಣ್ಣ ಹಿಡುವಳಿದಾರರೇ ಟಾರ್ಗೆಟ್ ಆಗಿದ್ದಾರೆ. ಎರಡು ಮೂರು ಎಕರೆ ವ್ಯಾಪ್ತಿಯಲ್ಲಿ ತೋಟದಲ್ಲಿಯೇ ಗೂಡು ಕಟ್ಟಿಕೊಂಡು ದಶಕಗಳಿಂದ ಜೀವನ ಸಾಗಿಸುತ್ತಿರುವ ಅದೆಷ್ಟೋ ತೋಟ-ಮನೆಗಳನ್ನು ತೆರವುಗೊಳಿಸಲಾಗಿದೆ. ಈ ರೀತಿ ತೆರವುಗೊಳಿಸುವ ವೇಳೆ, ತೋಟದಲ್ಲಿರುವ ಎಲ್ಲ ಗಿಡ-ಮರಗಳನ್ನು ಬುಡ ಸಮೇತ ಕಿತ್ತುಹಾಕಿದ್ದಾರೆ. ಇದೀಗ ಈ ತೋಟವನ್ನೇ ನೆಚ್ಚಿಕೊಂಡು ಕುಟುಂಬದ ಬೆಳಕನ್ನು ಕಂಡಿರುವ ಅದೆಷ್ಟೋ ಕುಟುಂಬಗಳು ಬೀದಿಗೆ ಬೀಳುವ ಸ್ಥಿತಿಗೆ ಬಂದಿವೆ. ಕಾಡನ್ನು ರಕ್ಷಿಸುವುದು ಎಷ್ಟು ಮುಖ್ಯವೋ, ಅರಣ್ಯವನ್ನೇ ದೇವರೆಂದು ಪೂಜಿಸಿಕೊಂಡು, ಅದರ ನೆರಳಲ್ಲಿಯೇ ಜೀವನ ಸಾಗಿಸುತ್ತಿರುವ ಈ ಜನರ ರಕ್ಷಣೆಯೂ ಸರಕಾರದ ಆದ್ಯ ಜವಾಬ್ದಾರಿ ಎನ್ನುವುದನ್ನು ಸಚಿವರು ಮರೆಯಬಾರದು.

ಒತ್ತುವರಿಯಾಗುವಾಗ ಏಕೆ ಮೌನ?

ವಯನಾಡಿನಲ್ಲಿ ಸಂಭವಿಸಿದ ಭೂ ಕುಸಿತದಿಂದ ಎಚ್ಚರಿಕೆ ವಹಿಸಿ ಒತ್ತುವರಿ ತೆರವು ಮಾಡುವುದಕ್ಕೆ 'ಖಂಡ್ರೆ ಸಾಹೇಬರು' ಆರ್ಡರ್ ಕೊಟ್ಟಿದ್ದಾರೆ. ಆದರೆ ಈಗಿರುವ ಬಹುದೊಡ್ಡ ಪ್ರಶ್ನೆಯೆಂದರೆ, ಒತ್ತುವರಿಯಾಗಿರುವ ಭೂಮಿಯಲ್ಲಿ ಬಹುತೇಕರು ಕಾಫಿ, ರಬ್ಬರ್ ಪ್ಲಾಂಟೇಷನ್, ತೋಟ ಅಥವಾ ಗದ್ದೆ ಮಾಡಿಕೊಂಡಿರುತ್ತಾರೆ. ಈ ಎಲ್ಲವೂ ರಾತ್ರೋರಾತ್ರಿಯಾಗುವುದಿಲ್ಲ. ಕಾಫಿ ಪ್ಲಾಂಟ್ ಸಿದ್ಧಪಡಿಸುವುದಕ್ಕೆ ಕನಿಷ್ಠ ಐದು ವರ್ಷ ಬೇಕು. ಇನ್ನು ಯಾವುದೇ ರೀತಿಯ ತೋಟ ಮಾಡಿದರೂ ಮೂರು ವರ್ಷವಾದರೂ ಬೇಕೇಬೇಕು. ಅಂದರೆ ಇಂದು ಬೆಳೆ ಸಿಗುತ್ತಿದೆ ಎಂದರೆ ಕನಿಷ್ಠ ಐದು ವರ್ಷದ ಹಿಂದೆಯೇ ರೈತರು ಭೂಮಿಯನ್ನು ಹದ ಮಾಡಿಕೊಂಡಿರುತ್ತಾರೆ. ಈ ರೀತಿ ಹದ ಮಾಡಿಕೊಳ್ಳುವಾಗ 'ಕಣ್ಣು' ಮುಚ್ಚಿಕೊಂಡಿದ್ದ ಅರಣ್ಯ ಇಲಾಖೆ ಅಧಿಕಾರಿಗಳು ಈಗ ರೋಷಾವೇಷ ಹೊರಹಾಕುತ್ತಿರುವುದೇಕೆ? ಒತ್ತುವರಿ ಮಾಡಿಕೊಂಡ ರೈತನಿಗೆ 'ಶಿಕ್ಷೆ' ಎನ್ನುವುದಾದರೆ, ಅದಕ್ಕೆ ಅವಕಾಶ ಮಾಡಿಕೊಟ್ಟ ಅಧಿಕಾರಿಗಳಿಗೂ ಶಿಕ್ಷೆ ನೀಡಬೇಕಲ್ಲವೇ ?

ರೈತರ ಹಿತರಕ್ಷಣೆ: ಸಿಎಂ ಅಭಯ

← ಮೊದಲಪುಟದಿಂದ

ಈ ಹಿಂದೆ ಗೇಟ್ ಒಡೆದಿದೆ ಎಂಬ ಆರೋಪದ ಬಗ್ಗೆ ಸ್ಪಷ್ಟನೆ ನೀಡಿದ ಸಿದ್ದರಾಮಯ್ಯ, ಇತಿಹಾಸದಲ್ಲಿ ಈ ಹಿಂದೆ ಯಾವತ್ತೂ ಗೇಟ್ ಒಡೆದಿಲ್ಲ. ಸದ್ಯಕ್ಕೆ ನೀರು ನಿಲ್ಲಿಸುವುದೇ ನಮ್ಮ ಗುರಿಯಾಗಿದೆ.

ಗೇಟ್ ಕೊಚ್ಚಿ ಹೋಗಿರುವ ಪ್ರಕರಣಕ್ಕೆ ಯಾರನ್ನೋ ಹೊಣೆಮಾಡುವುದಕ್ಕಿಂತ ಸದ್ಯದ ಪರಿಸ್ಥಿತಿ ನಿಭಾಯಿಸಿ, ಮುಂದೆ ಉಳಿದ ವಿಷಯ ಆಲೋಚಿಸುವುದಾಗಿ ಸ್ಪಷ್ಟಪಡಿಸಿದರು.

ಟಿಬಿ ಬೋರ್ಡ್ ಯಾರ ಅಧೀನದಲ್ಲಿ ಇದೆ?

ಕೊಪ್ಪಳ: ತುಂಗಭದ್ರಾ ಜಲಾಶಯ ಪರಿಶೀಲನೆಗೂ ಮೊದಲು ಕೊಪ್ಪಳದ ಬಸಾಪೂರ ವಿಮಾನ ನಿಲ್ದಾಣದಲ್ಲಿ ಮಾತನಾಡಿ, ಸರಕಾರದ ಹೊಣೆಗೇಡಿತನದಿಂದ ಡ್ಯಾಂ ಗೇಟ್ ಗೆ ಹಾನಿಯಾಗಿದೆ ಎಂಬುದು ಬಿಜೆಪಿಯ ರಾಜಕೀಯ ಹೇಳಿಕೆ. ತುಂಗಭದ್ರಾ ಮಂಡಳಿಯಿಂದ ಜಲಾಶಯದ ಕ್ರಸ್ಟ್ ಗೇಟ್ ನಿರ್ವಹಿಸಲಾಗುತ್ತದೆ. ಬೋರ್ಡ್‌ಗೆ ಕಾರ್ಯದರ್ಶಿ ಮತ್ತು ಅಧ್ಯಕ್ಷರನ್ನು ಕೇಂದ್ರ ಸರಕಾರದ ಜಲ ಆಯೋಗ ನೇಮಕ ಮಾಡುತ್ತದೆ. ಸದ್ಯ ಕೇಂದ್ರದಲ್ಲಿ ಯಾವ ಪಕ್ಷದ ಸರಕಾರ ಅಧಿಕಾರದಲ್ಲಿ ಇದೆ ಎಂಬುದನ್ನು ಬಿಜೆಪಿಗರು ಮೊದಲು ಹೇಳಲಿ ಎಂದು ತಿರುಗೇಟು ನೀಡಿದರು.

ಗಂಗಾವಳಿ ನದಿಯಲ್ಲಿ ಲಾರಿಯ ಅವಶೇಷ ಪತ್ತೆ

ಕಾರವಾರ: ಕಾರವಾರದ ಶಾಸಕ ಸತೀಶ್ ಸೈಲ್ ಅವರ ಸೂಚನೆಯಂತೆ ಉಡುಪಿಯ ಮುಳುಗು ತಜ್ಞ ಈಶ್ವರ್ ಮಲ್ಪೆಯವರು ಗಂಗಾವಳಿ ನದಿಯಲ್ಲಿ ಮಂಗಳವಾರ ಸಂಜೆ ವೇಳೆಯಲ್ಲಿ ಶೋಧಕಾರ್ಯಕ್ಕಿಳಿದಿದ್ದು, ಗ್ಯಾಸ್ ಟ್ಯಾಂಕರ್‌ನ ಚಿಕ್ಕ ಭಾಗವನ್ನು ಶೋಧ ನಡೆಸಿ ಹೊರತೆಗೆದಿದ್ದಾರೆ.

ಕೇರಳದ ಲಾರಿ ಚಾಲಕ ಅರ್ಜುನ್, ಶಿರೂರಿನ ಜಗನ್ನಾಥ್, ಗಂಗೆಕೊಳ್ಳದ ಲೋಕೇಶ್ ಶವಕ್ಕಾಗಿ ಶೋಧ ನಡೆಸಬೇಕಿದ್ದು, ಇದೀಗ ಗಂಗಾವಳಿ ನದಿಯಲ್ಲಿ ಜಿಲ್ಲಾಡಳಿತದ ತಡೆಯ ಮಧ್ಯೆಯೇ ಶೋಧ ಕಾರ್ಯ ಮುಂದುವರೆದಿದೆ.

ಸೇನಾ ತಂಡ ಈ ಹಿಂದೆ ಗುರುತಿಸಿದ ಜಾಗದಲ್ಲಿ ಮತ್ತೊಮ್ಮೆ ಮುಳುಗಿ ಈಶ್ವರ ಮಲ್ಪೆ ಶೋಧ ನಡೆಸಿದ್ದಾರೆ. ಶೋಧ ಕಾರ್ಯಾಚರಣೆ ವೇಳೆ

ಶಾಸಕ ಸತೀಶ್ ಸೈಲ್ ಖುದ್ದು ಸ್ಥಳಕ್ಕೆ ಆಗಮಿಸಿದ್ದರು. ಇವರೊಂದಿಗೆ ಕೇರಳ ರಾಜ್ಯದ ಶಾಸಕ ಅಶ್ರಫ್ ಕೂಡ ಹಾಜರಿದ್ದರು.

ಶೋಧ ಕಾರ್ಯಾಚರಣೆ ವೇಳೆ ಲಾರಿಯ ಜಾಕ್ ಪತ್ತೆಯಾಗಿದೆ. ಸಿಕ್ಕಿರುವ ಜಾಕ್ ಅರ್ಜುನ್ ಓಡಿಸುತ್ತಿದ್ದ ಲಾರಿಯದ್ದೇ ಎಂದು ಲಾರಿ ಮಾಲೀಕ ಮುಫಿನ್ ಖಚಿತ ಪಡಿಸಿದ್ದಾರೆ.

ಕೆಆರ್‌ಎಸ್ ಡ್ಯಾಂ ಸುಭದ್ರವಾಗಿದೆ

ಮಂಡ್ಯ: 100 ವರ್ಷಗಳು ಸಮೀಪಿಸುತ್ತಿರುವ ಹಳೆ ಮೈಸೂರು ಭಾಗದ ಜೀವನಾಡಿ ಕೆಆರ್‌ಎಸ್ ಅಣೆಕಟ್ಟು ಸುಭದ್ರವಾಗಿದೆ. ಆತಂಕ ಪಡುವ ಅವಶ್ಯಕತೆ ಇಲ್ಲ ಎಂದು ಸಚಿವ ಚಲುವರಾಯಸ್ವಾಮಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಟಿಬಿ ಡ್ಯಾಂನ ಕ್ರಸ್ಟ್ ಗೇಟ್ ಕಿತ್ತು ಬಂದಿರುವ ಬೆನ್ನಲ್ಲೇ ರಾಜ್ಯದ ಎಲ್ಲಾ ಡ್ಯಾಂಗಳ ನಿರ್ವಹಣೆ ಮತ್ತು ಸ್ಥಿತಿಗತಿ ಹರಿಯಲು ಸಿಎಂ ಸಮಿತಿ ರಚನೆ ಮಾಡಿದ್ದಾರೆ. ಈಗಾಗಲೇ ನಾವು ಕೆಆರ್‌ಎಸ್ ಡ್ಯಾಂ ವಿಚಾರವಾಗಿ ಒಂದು ಸಮಿತಿ ಮಾಡಿದ್ದು, ಆ ಸಮಿತಿ ಈಗಾಗಲೇ ನಮಗೆ ವರದಿ ನೀಡಿದೆ ಡ್ಯಾಂ ಸುಭದ್ರ ಸ್ಥಿತಿಯಲ್ಲಿದೆ ಎಂದು ತಿಳಿಸಿದರು.

ರಾಜಕೀಯ ಬೆರೆಸುವುದು ಸರಿಯಲ್ಲ: ಟಿಬಿ ಡ್ಯಾಂನ ಕ್ರಸ್ಟ್ ಗೇಟ್ ಕಟ್ ವಿಚಾರವಾಗಿ ಪ್ರತಿಕ್ರಿಯೆ ನೀಡಿ, ನನಗೆ ಇದರ ಸಂಪೂರ್ಣ ಮಾಹಿತಿ ಇಲ್ಲ, ಆರೋಗ್ಯದ ವ್ಯತ್ಯಾಸದಿಂದ ಯಾರ ಬಳಿಯೂ ಮಾತನಾಡಿಲ್ಲ. ಮಾಹಿತಿ ಪಡೆಯಲು ಸಾಧ್ಯವಾ ಗಿಲ್ಲ. ರಿಪೋರ್ಟ್ ಬಂದ ನಂತರ ಮಾತನಾಡುತ್ತೇನೆ ಎಂದರು

ಮಹಾನಗರ ಪಾಲಿಕೆ, ಕಲಬುರಗಿ
ದೂ.: 08472/278675 ಫ್ಯಾಕ್ಸ : 08472/260776 ಇ ಮೇಲ್- itstaff_ulb_gulbarga@yahoo.com

No:KMP/EE/TS-02/15THFC/NMPC/06/2024-25 ದಿನಾಂಕ: 12/08/2024

:: ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಟೆಂಡರ್ ಪ್ರಕಟಣೆ ::

1) ಕಾಮಗಾರಿಯ ವಿವರ : ಕಲಬುರಗಿ ಮಹಾನಗರ ಪಾಲಿಕೆಯಿಂದ 2021-22ನೇ ಸಾಲಿನ Million Plus city (BBMP) ಗೆ ಹಂಚಿಕೆಯಾದ 15ನೇ ಹಣಕಾಸು ಆಯೋಗದ ಅನುದಾನವನ್ನು Non-Million Plus city ಗಳಿಗೆ ಮರು ಹಂಚಿಕೆ ಮಾಡಿ ಬಿಡುಗಡೆಗೊಳಿಸಿರುವ ಹಾಗೂ 2023-24ನೇ ಸಾಲಿನ 15ನೇ ಹಣಕಾಸು ಅನುದಾನದಲ್ಲಿ ಅನುಮೋದನೆಗೊಂಡ ಈ ಕೆಳಕಂಡ ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಕೆ.ಪಿ.ಪಿ.ಪಿ ಪ್ರೋರ್ಟಲ್-2.0 ನಲ್ಲಿ ಕೆ.ಟಿ.ಪಿ.ಪಿ ರ ಪ್ರಕಾರ ಕೆ.ಡಬ್ಲ್ಯೂ-2&3 ರ ಮೂಲಕ ಟೆಂಡರನ್ನು ದ್ವಿ ಲಕೋಟೆಯಲ್ಲಿ (Two Cover)ನಲ್ಲಿ ಕರೆಯಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಅಥವಾ ಯಾವುದೇ ತರಹದ ಬದಲಾವಣೆಯನ್ನು www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದು. 2) ಪ್ರತಿ ಕಾಮಗಾರಿ ಅಂದಾಜು ಮೊತ್ತ ಗರಿಷ್ಠ ಮೊತ್ತ ರೂ. 51.00 ಲಕ್ಷಗಳು ಹಾಗೂ ಕನಿಷ್ಠ ಮೊತ್ತ ರೂ. 15.00 ಲಕ್ಷಗಳು. 3) ಗುತ್ತಿಗೆದಾರರ ಅರ್ಹತೆ ವಿವರಃ 3ನೇ ದರ್ಜೆ, 4ನೇ ದರ್ಜೆ ಮತ್ತು ಅದಕ್ಕಿಂತ ಹೆಚ್ಚು. 4) ಟೆಂಡರ ಅರ್ಜಿಯ ಬೆಲೆ ರೂ. ಕೆ.ಪಿ.ಪಿ.ಪಿ ಪ್ರೋರ್ಟಲ್-2.0 ನ ಪ್ರತಿ ಕಾಮಗಾರಿಗೆ ಮತ್ತು ಇ.ಎಂ.ಡಿ. ಗರಿಷ್ಠ ಮೊತ್ತ ರೂ. 51,000.00 ಗಳು ಹಾಗೂ ಕನಿಷ್ಠ ಮೊತ್ತ ರೂ. 37,500.00 ಗಳು, 5) ಪೂರ್ವಭಾವಿ ಸಭೆ ದಿನಾಂಕ: 29.08.2024 ರಂದು ಬೆಳಿಗ್ಗೆ 11:00 ಗಂಟೆಗೆ. 6) ಬಿಡ್ ಸಲ್ಲಿಸುವ ಕೊನೆಯ ದಿನಾಂಕ: 29.08.2024 ರಂದು ಸಾಯಂಕಾಲ 4:30 ಗಂಟೆಗೆ. 7) ತಾಂತ್ರಿಕ ಬಿಡ್ ತೆರೆಯುವ ಕೊನೆಯ ದಿನಾಂಕ: 30.08.2024 ರಂದು ಸಾಯಂಕಾಲ 04:35 ಗಂಟೆಗೆ. 8) ಆರ್ಥಿಕ ಬಿಡ್ ತೆರೆಯುವ ದಿನಾಂಕ: 31.08.2024 ರಂದು ಬೆಳಿಗ್ಗೆ 11:30 ಗಂಟೆಗೆ. ನಿಗದಿಪಡೆಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದು. 9) ಹೆಚ್ಚಿನ ವಿವರಗಳಿಗೆ : ಕಾರ್ಯಾಪಾಲಕ ಅಭಿಯಂತರರು, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿರವರನ್ನು ಸಂಪರ್ಕಿಸಬಹುದಾಗಿದೆ. 10) ಹೆಚ್ಚಿನ ಮಾಹಿತಿಯು ಪಾಲಿಕೆಯ ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತದೆ http://www.kalaburagicity.mrc.gov.in/

Note: All subsequent corrigendum/amendment shall be published only on website and not in press. Hence, tenderers are advoised to always be in touch with our said website until the tender is finally opened.

ಸಹಿ/- ಕಾರ್ಯಪಾಲಕ ಅಭಿಯಂತರರು,
ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/328/ಕೆ.ಎಸ್.ಎಂ.ಸಿ.&ಎ/2024-25

ಎಚ್‌ಎಂಟಿ ಭೂಮಿ ಮರಳಿಸಲಾಗದು

← ಮೊದಲಪುಟದಿಂದ

ಕೇಂದ್ರ ಸರ್ಕಾರಿ ಸ್ವಾಮ್ಯದ ಎಚ್ ಎಂಟಿ ರಿಯಲ್ ಎಸ್ಟೇಟ್ ಸಂಸ್ಥೆಯಂತೆ ವರ್ತಿಸುತ್ತಿದೆ. 1997ರಿಂದ 2011ರವರೆಗೆ ಎಚ್.ಎಂ.ಟಿ. ಸಂಸ್ಥೆ ತನ್ನ ವಶದಲ್ಲಿದ್ದ ಅರಣ್ಯ ಭೂಮಿಯನ್ನು ಅಕ್ರಮವಾಗಿ ಡಾಲರ್ಸ್ ಕನ್‌ಸ್ಟ್ರಕ್ಷನ್ಸ್ ಆ್ಯಂಡ್ ಎಂಜಿನಿಯರ್ಸ್ ಪ್ರೈ.ಲಿ., ಯು.ಎಸ್. ಸ್ಟೀಲ್ ಕಂಪನಿ, ಸಿಲ್ವರ್ ಲೈನ್ ಎಸ್ಟೇಟ್ಸ್, ಮನೆ ಕನ್‌ಸ್ಟ್ರಕ್ಷನ್ಸ್ ಲಿ, ಎಂ.ಎಂ.ಆರ್. ಕನ್‌ಸ್ಟ್ರಕ್ಷನ್ಸ್, ಬ್ರಿಗೇಡ್ ಎಂಟರ್‌ಪ್ರೈಸಸ್, ಬಾಗಮನೆ ಡೆವಲಪರ್ಸ್ ಪ್ರೈ.ಲಿ. ಸೇರಿದಂತೆ ಹಲವು ಖಾಸಗಿ ಮತ್ತು ಸರ್ಕಾರಿ ಸಂಸ್ಥೆಗಳಿಗೆ 165 ಎಕರೆ ಭೂಮಿಯನ್ನು 313 ಕೋಟಿಗೂ ಹೆಚ್ಚು ಹಣಕ್ಕೆ ಮಾರಾಟ ಮಾಡಿದೆ ಎಂದು ಆರೋಪಿಸಿದರು.

ಟ್ವೀಟೂ-ಖಾರಾ



ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷರು

ಚುನಾವಣಾ ಸಿದ್ಧತೆ , ಸಂಘಟನೆ ಮತ್ತು ಇತರ ರಾಷ್ಟ್ರೀಯ ವಿಷಯಗಳ ಬಗ್ಗೆ ಚರ್ಚಿಸಲು ಎಐಸಿಸಿ ಪ್ರಧಾನ ಕಾರ್ಯದರ್ಶಿಗಳು, ರಾಜ್ಯ ಕಾಂಗ್ರೆಸ್ ಉಸ್ತುವಾರಿಗಳ ಜತೆ ದೆಹಲಿಯಲ್ಲಿ ಮಹತ್ವದ ಸಭೆ ನಡೆಸಿದ್ದೇವೆ. ಸೆಬಿ ಮತ್ತು ಅದಾನಿ ಸಮೂಹದ ನಡುವಣ ಅಪವಿತ್ರ ಮೈತ್ರಿ ಕುರಿತ ಆಘಾತಕಾರಿ ಬಹಿರಂಗದ ಬಗ್ಗೆ ಮೋದಿ ಸರಕಾರ ಕೂಡಲೇ ಸೆಬಿ ಮುಖ್ಯಸ್ಥರ ರಾಜೀನಾಮೆ ಪಡೆಯಬೇಕು. ಸಣ್ಣ ಹೂಡಿಕೆದಾರರ ಹಿತಾಸಕ್ತಿಗಳನ್ನು ಮರೆಯುವಂತಿಲ್ಲ.



ಬಲಿಯಾನ್, ರಾಜಕೀಯ ವಿಶ್ಲೇಷಕ

ಕಾಂಗ್ರೆಸ್ ಪಕ್ಷ 2023ರ ಅಕ್ಟೋಬರ್ 10 ರಂದು ಕಾರ್ಯಕಾರಿಣಿಯ ತುರ್ತು ಸಭೆ ನಡೆಸಿತ್ತು. ಗಾಜಾ ಪರಿಸ್ಥಿತಿಯಲ್ಲಿ ಪ್ಯಾಲೆಸ್ತೀನ್ ಬೆಂಬಲಿಸಿ ನಿರ್ಣಯ ಕೈಗೊಳ್ಳಲಾಗಿತ್ತು. ಆದರೆ ಈಗ ಬಾಂಗ್ಲಾದ ಹಿಂದುಗಳಿಗೆ ಬೆಂಬಲಿಸುವ ಬಗ್ಗೆ ಒಂದೇ ಒಂದು ಪದ ಇಲ್ಲ..!

ಸಮಾಚಾರ ಸಣ್ಣದಲ್ಲ

ಒಂದೇ ಕುಟುಂಬದ ಮೂವರ ಶವ ಪತ್ತೆ

ಶಿವಮೊಗ್ಗ: ಹಳೆಯ ಶಿವಮೊಗ್ಗ ಕ್ಲಾರ್ಕ್ ಪೇಟೆಯಲ್ಲಿ ಒಂದೇ ಕುಟುಂಬದ ಮೂವರು ಸಾವನ್ನಪ್ಪಿರುವ ಘಟನೆ ನಡೆದಿದೆ. ಮೃತರನ್ನು ಭುವನೇಶ್ವರಿ, ಮಾರುತಿ ಹಾಗೂ ದರ್ಶನ್ ಎಂದು ತಿಳಿದು ಬಂದಿದೆ. ಇವರು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಶಂಕಿಸಲಾಗಿದ್ದು, ಸಾವಿಗೆ ಕಾರಣ ಸ್ಪಷ್ಟವಾಗಿಲ್ಲ. ಭುವನೇಶ್ವರಿ ಹಾಗೂ ಅವರ ತಮ್ಮ ಹಾಗೂ ಮಗ ಸಾವನ್ನಪ್ಪಿದವರು. ಇವರು ವಿಷ ಸೇವಿಸಿ ಕಳೆದ ಭಾನುವಾರವೇ ಆತ್ಮಹತ್ಯೆ ಮಾಡಿಕೊಂಡಿರುವ ಸಾಧ್ಯತೆ ಇದೆ ಎನ್ನಲಾಗಿದೆ. ವಿಜಯ್ ಗ್ಯಾರೇಜ್ ಬಳಿ ಇರುವ ಮನೆಯಲ್ಲಿ ಮೂವರು ವಿಷ ಸೇವಿಸಿದ್ದಾರೆ. ಇವರ ಮನೆಯ ಕಡೆಯಿಂದ ಯಾವುದೇ ಸಂಪರ್ಕ ಸಾಧ್ಯವಾಗದ ಹಿನ್ನೆಲೆಯಲ್ಲಿ ಸಂಬಂಧಿಕರೊಬ್ಬರು ಮನೆಯ ಬಳಿಗೆ ವಿಚಾರಿಸಲು ಬಂದಿದ್ದಾರೆ. ಈ ವೇಳೆ ಮೂವರು ಸಾವನ್ನಪ್ಪಿರುವ ವಿಷಯ ಗೊತ್ತಾಗಿದೆ. ತಕ್ಷಣವೇ ದೊಡ್ಡಪೇಟೆ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ದೊಡ್ಡಪೇಟೆ ಪೊಲೀಸ್ ಠಾಣೆ ಪೊಲೀಸರು ಪರಿಶೀಲನೆ ನಡೆಸಿದ್ದಾರೆ.

ಅಪಘಾತ: ಸ್ಥಳದಲ್ಲೇ ಇಬ್ಬರ ಸಾವು

ತೀರ್ಥಹಳ್ಳಿ: ಪಿಕಪ್ ವಾಹನ ಹಾಗೂ ಬೈಕ್ ನಡುವೆ ಡಿಕ್ಕಿ ಸಂಭವಿಸಿ ಸ್ಥಳದಲ್ಲೇ ಇಬ್ಬರು ಮೃತಪಟ್ಟ ಘಟನೆ ಮಂಗಳವಾರ ಅಗಸರಕೋಣೆ ಬಳಿ ನಡೆದಿದೆ. ಅಗಸರಕೋಣೆಯ ಶರತ್ ಹಾಗೂ ಕೇರಳದ ಸಂತೋಷ್ ಮೃತಪಟ್ಟವರು. ಆಗುಂಬೆ ವ್ಯಾಪ್ತಿಯ ಬಿದರಗೋಡು ಸಮೀಪದ ಅಗಸರ ಕೋಣೆಯ ಬಳಿ ಮಂಗಳವಾರ ಮಧ್ಯಾಹ್ನ ತೀರ್ಥಹಳ್ಳಿ ಕಡೆಗೆ ಬರುತ್ತಿದ್ದ ಬೈಕ್ ಹಾಗೂ ಎದುರಿನಿಂದ ಬರುತ್ತಿದ್ದ ಪಿಕಪ್ ನಡುವೆ ಅಪಘಾತ ನಡೆದಿದೆ. ವೇಗದ ಚಾಲನೆಯಿಂದ ಈ ಅವಘಡ ಸಂಭವಿಸಿದೆ.

ಸಾಲಬಾಧೆ: ರೈತ ಆತ್ಮಹತ್ಯೆ

ಹುಣಸೂರು: ತಾಲೂಕಿನ ಹರೀನಹಳ್ಳಿಯ ಪ್ರಗತಿಪರ ರೈತ ಗುರು (41) ಸಾಲಬಾಧೆ ತಾಳಲಾರದೇ ಮಂಗಳವಾರ ಬೆಳಿಗ್ಗೆ ನೇಣು ಹಾಕಿಕೊಂಡು ಮೃತಪಟ್ಟರು. ಮನೆಯಲ್ಲಿ ಯಾರೂ ಇಲ್ಲದ ವೇಳೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಗುರು ಅವರು ಬ್ಯಾಂಕ್ ಆಫ್ ಇಂಡಿಯಾದಲ್ಲಿ 5 ಲಕ್ಷ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯಲ್ಲಿ 3 ಲಕ್ಷ ಸೇರಿದಂತೆ ಕೈ ಸಾಲ ಮಾಡಿದ್ದರು. ಈ ಸಾಲಿನಲ್ಲಿ ಮಳೆ ಹೆಚ್ಚಾದ್ದರಿಂದ 2 ಎಕರೆ ಪ್ರದೇಶದಲ್ಲಿ ಬೆಳೆದಿದ್ದ ತಂಬಾಕು ಸಂಪೂರ್ಣ ನಷ್ಟವಾಗಿತ್ತು. ಸಾಲಬಾಧೆ ಸಹಿಸದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪತ್ನಿ ಅಶ್ವಿನಿ ದೂರಿನಲ್ಲಿ ತಿಳಿಸಿದ್ದಾರೆ. ಮೃತರಿಗೆ ಪುತ್ರಿ, ಪುತ್ರ ಇದ್ದಾರೆ.

{ಯದುವೀರ್ ಒಡೆಯರ್} ಸಂಸದ

ರಾಜ್ಯದಲ್ಲಿ ಉತ್ತಮ ಮಳೆಯಾಗಿದೆ. ಕೆಆರ್‌ಎಸ್‌ಗೆ ಆ. 15ರಂದು ಬಾಗಿನ ಅರ್ಪಿಸುತ್ತೇವೆ. ರಾಜ್ಯದಲ್ಲಿರುವ ಎಲ್ಲಾ ಡ್ಯಾಂಗಳ ನಿರ್ವಹಣೆಯನ್ನು ಉತ್ತಮ ರೀತಿಯಲ್ಲಿ ಮಾಡಬೇಕಿದೆ. ಕೆಆರ್‌ಎಸ್ ಜಲಾಶಯ ತುಂಬಾ ಹಳೆಯದು. ಅದರ ನಿರ್ವಹಣೆ ಯನ್ನು ಉತ್ತಮ ರೀತಿಯಲ್ಲಿ ಅಧಿಕಾರಿಗಳು ನೋಡಿಕೊಳ್ಳಬೇಕು. ಈ ಬಾರಿ ನಾಡಹಬ್ಬ ದಸರಾವನ್ನು ಅದ್ದೂರಿಯಾಗಿ ಆಚರಿಸುತ್ತೇವೆ.

ತುಂಗಭದ್ರಾ ಜಲಾಶಯ ಮತ್ತೆ ತುಂಬಲಿದೆ: ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ | ರೈತರಿಗೆ ತೊಂದರೆಯಾಗದಂತೆ ಕ್ರಮ

ಮತ್ತೆ ಬಾಗಿನ ಅರ್ಪಿಸುವುದಕ್ಕೆ ನಾನೇ ಬರ್ತೀನಿ

ಹೊಸಪೇಟೆ: ತುಂಗಭದ್ರಾ ಜಲಾಶಯ ಮತ್ತೆ ತುಂಬುವ ವಿಶ್ವಾಸವಿದ್ದು, ಬಾಗಿನ ಅರ್ಪಿಸಲು ನಾನು ಮತ್ತೊಮ್ಮೆ ಆಗಮಿಸುವುದಾಗಿ ಮುಖ್ಯಮಂತ್ರಿಗಳು ತಿಳಿಸಿದರು.

ಅವರು ತುಂಗಭದ್ರಾ ಜಲಾಶಯ ಗೇಟ್ ಮುರಿದಿರುವ ಸ್ಥಳವನ್ನು ಪರಿಶೀಲನೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ತುಂಗಭದ್ರಾ ಜಲಾಶಯ ಗೇಟ್ ನ ದುರಸ್ತಿಯನ್ನು ತ್ವರಿತವಾಗಿ ಮುಗಿಸಲು ಸಂಬಂಧಪಟ್ಟವರಿಗೆ ಸೂಚಿಸಲಾಗಿದ್ದು, ರೈತರು ಆತಂಕಪಡುವ ಅಗತ್ಯವಿಲ್ಲ. ನಮ್ಮ ರೈತರು ಬೇರೆಯಲ್ಲ, ನಿಮ್ಮ ರಾಜ್ಯದ ರೈತರು ಬೇರೆಯಲ್ಲ. ರೈತರಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಸ್ಥಳದಲ್ಲಿ ಉಪಸ್ಥಿತರಿದ್ದ ಆಂಧ್ರ, ತೆಲಂಗಾಣ ರಾಜ್ಯಗಳ ಕೃಷಿ ಸಚಿವರಿಗೆ ಸಿಎಂ ಭರವಸೆ ನೀಡಿದರು.

ತುಂಗಭದ್ರಾ ಜಲಾಶಯದ ನೀರನ್ನು ಗೇಟ್ ಗಳ ಮೂಲಕ ಬಿಡಲಾಗುತ್ತಿತ್ತು. ನೀರಿನ ಹರಿವನ್ನು ತಡೆಯುವಂತಹ ಗೇಟ್ ಗಳಲ್ಲಿ19ನೇ ಗೇಟ್ ತುಂಡಾಗಿದೆ. ಜಲಾಶಯ ಗೇಟ್ ಗಳ ನಿರ್ಮಾಣ ತಜ್ಞ ಹಾಗೂ ಸುರಕ್ಷತೆ ತಜ್ಞ ಎಂಜಿನಿಯರ್ ಕನ್ನಯ್ಯ ನಾಯ್ಡು ಅವರ ಜತೆ ಚರ್ಚಿಸಿದ್ದೀನಿ. ಅವರಿಂದ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗಿದೆ. ತುಂಗಭದ್ರಾ ಜಲಾಶಯದ ಸಂಪೂರ್ಣ ನಿರ್ವಹಣೆಯ ಜವಾಬ್ದಾರಿ ತುಂಗಭದ್ರಾ ಜಲಶಾಯ ಮಂಡಳಿಯದಾಗಿದ್ದು, ಭಾರತ ಸರಕಾರ ನೇಮಿಸಿದ ಅಧ್ಯಕ್ಷರು, ಕೇಂದ್ರ ಜಲ ಆಯೋಗ, ಆಂಧ್ರ, ತೆಲಂಗಾಣ ಮತ್ತು ಕರ್ನಾಟಕದ ಸದಸ್ಯರು ಮಂಡಳಿಯಲ್ಲಿರುತ್ತಾರೆ. ಈ ಜಲಾಶಯದ ನಿರ್ಮಾಣ ದೇಶಕ್ಕೆ ಸ್ವಾತಂತ್ರ್ಯ ಬಂದ ಮರು ವರ್ಷವೇ ಕೈಗೆತ್ತಿಕೊಂಡು 1948 ರಲ್ಲಿ ಪ್ರಾರಂಭವಾಗಿ 1953 ರಲ್ಲಿ ಪೂರ್ಣಗೊಂಡು, 1954 ರಿಂದ ಜಲಾಶಯದಿಂದ ನಾಲೆಗಳಿಗೆ ನೀರು ಬಿಡಲು ಪ್ರಾರಂಭಿಸಲಾಯಿತು. ಸುಮಾರು 70 ವರ್ಷಗಳಷ್ಟು ಹಳೆಯದಾದ ಡ್ಯಾಂನಲ್ಲಿ ಇಲ್ಲಿನವರೆಗೆ ಯಾವುದೇ ಗೇಟ್‌ನ ಚೈನ್ ತುಂಡಾಗಿರಲಿಲ್ಲ ಎಂದು ವಿವರಿಸಿದರು.

ನವಲಿ ಜಲಾಶಯ; ಒಪ್ಪಿಗೆ ನಂತರ ಕಾಮಗಾರಿ ಪ್ರಾರಂಭ: ನವಲಿ ಜಲಾಶಯ ನಿರ್ಮಾಣಕ್ಕೆ15 ಸಾವಿರ ಕೋಟಿ ರು.ಗಳ ಡಿಪಿಆರ್ ತಯಾರಾಗಿದ್ದು, ಇದು ಅಂತರರಾಜ್ಯ ಯೋಜನೆಯಾಗಿದೆ. ಡಿಪಿಆರ್ ಗೆ ಒಪ್ಪಿಗೆ ದೊರೆತ ನಂತರ ಕಾಮಗಾರಿ ಪ್ರಾರಂಭಿಸಲಾಗುವುದು ಎಂದರು.

ಕರ್ನಾಟಕ ದಲ್ಲಿ ಸುಮಾರು 9 ಲಕ್ಷ ಹಾಗೂ ಆಂಧ್ರ ತೆಲಂಗಾಣ ಗಳಲ್ಲಿ ಸುಮಾರು 3 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾಕಿರುವ ರೈತರಿಗೆ ಯಾವುದೇ ತೊಂದರೆಯಾಗು ವುದಿಲ್ಲ. ಅದಲ್ಲದೇ, ಆ. 17 ರಿಂದ ರಾಜ್ಯದಲ್ಲಿ ವಾಡಿಕೆಗಿಂತ ಹೆಚ್ಚಿನ ಮಳೆ ಬರುವ ನಿರೀಕ್ಷೆ ಇದೆ ಎಂದರು.

ತುಂಗಭದ್ರಾ ಜಲಾಶಯ ಗೇಟ್ ಮುರಿದಿರುವ ಸ್ಥಳವನ್ನುಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪರಿಶೀಲನೆ ನಡೆಸಿದರು.

ತಜ್ಞರ ಸಲಹೆ ಮೇರೆಗೆ ದುರಸ್ತಿ ಕಾರ್ಯ

ಜಲಾಶಯದಲ್ಲಿ ಈ ವರ್ಷ 115 ಟಿಎಂಸಿ ನೀರಿದ್ದು, ಈಗಾಗಲೇ 25 ಟಿಎಂಸಿ ನೀರನ್ನು ರೈತರ ಜಮೀನಿಗೆ ಬಿಡಲಾಗಿದೆ. ರೈತರ ಮೊದಲನೇ ಬೆಳೆಗೆ 90 ಟಿಎಂಸಿ ನೀರು ಬೇಕಾಗಿದ್ದು, ಈ ಪ್ರಮಾಣದ ನೀರು ಜಲಾಶಯದಲ್ಲಿ ಲಭ್ಯವಿದೆ. ಆದರೆ ಜಲಾಶಯದ 19 ನೇ ಗೇಟ್ ತುಂಡಾಗಿರುವುದರಿಂದ 35 ಸಾವಿರ ಕ್ಯೂಸೆಕ್ ನೀರು ಹೋಗುತ್ತಿದೆ. ಜಲಾಶಯದ ನೀರನ್ನು ಬಿಡದೇ ದುರಸ್ತಿ ಕಾರ್ಯವನ್ನು ಕೈಗೊಳ್ಳಲು ಸಾಧ್ಯವಿಲ್ಲ. ನೀರಿನ ಮಟ್ಟವನ್ನು ಕಡಿಮೆ ಮಾಡಲಾಗುತ್ತಿದ್ದು, ನಂತರವೂ 64 ಟಿಎಂಸಿ ನೀರು ಉಳಿಯುತ್ತದೆ. ಗೇಟ್ ನ ದುರಸ್ತಿ ಕಾರ್ಯಕ್ಕೆ ಕನಿಷ್ಟ 4 ರಿಂದ 5 ದಿನಗಳು ಬೇಕಾಗುತ್ತವೆ. ಹಿಂದುಸ್ಥಾನ್ ಎಂಜಿನಿಯರಿಂಗ್ಸ್ ಹಾಗೂ ನಾರಾಯಣ ಎಂಜಿನಿಯರಿಂಗ್ಸ್ ವರಿಗೆ ಹೊಸ ಗೇಟ್ ತಯಾರಿ ಹೊಣೆ ವಹಿಸಲಾಗಿದ್ದು, ಕನ್ನಯ್ಯ ನಾಯ್ಡು ಅವರ ಸಲಹೆ ಮೇರೆಗೆ ದುರಸ್ತಿ ಕಾರ್ಯ ನಿರ್ವಹಿಸಲಾಗುತ್ತಿದೆ ಎಂದು ಸಿಎಂ ತಿಳಿಸಿದರು.

2019 ಜಲಾಶಯದ ನೀರು ಬಿಡುವ ಕಾಲುವೆಗಳಲ್ಲಿ ಸಮಸ್ಯೆ ಆಗಿತ್ತೇ ಹೊರತು, ಜಲಾಶಯದ ಗೇಟ್ ಗಳಲ್ಲಿ ಯಾವುದೇ ಸಮಸ್ಯೆ ಆಗಿರಲಿಲ್ಲ . 70 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಗೇಟ್ ನ ಸರಪಳಿ ತುಂಡಾಗಿರುವ ಘಟನೆ ನಡೆದಿದೆ. ತಜ್ಞರ ಸಲಹೆಯಂತೆ 50 ವರ್ಷಗಳಿಗೊಮ್ಮೆ ಗೇಟ್ ಹಾಗೂ ಸರಪಳಿಗಳನ್ನು ಬದಲಾಯಿಸಬೇಕಾಗಿದ್ದು, ಇನ್ನು ಮುಂದೆ ತಜ್ಞರ ಸಲಹೆಯಂತೆ ತುಂಗಭದ್ರಾ ಮಂಡಳಿ ಹಾಗೂ ಸಂಬಂಧಪಟ್ಟ ಸರಕಾರಗಳು ಕ್ರಮ ಕೈಗೊಳ್ಳಲಿದೆ.

ಸಿದ್ದರಾಮಯ್ಯ, ಮುಖ್ಯಮಂತ್ರಿ

ಮುಡಾ ಹಗರಣ ರಾಜಕೀಯ ಪ್ರೇರಿತ: ಪ್ರಿಯಾಂಕ್ ಖರ್ಗೆ

ಅಣೆಕಟ್ಟುಗಳ ಸುರಕ್ಷತೆ ಸಮೀಕ್ಷೆ

ಕಲಬುರಗಿ: ತುಂಗಭದ್ರಾ ಡ್ಯಾಂ ಗೇಟ್ ಕೊಚ್ಚಿ ಹೋದ ಪ್ರಕರಣ ಹಿನ್ನೆಲೆಯಲ್ಲಿ ಅಗತ್ಯಕ್ರಮ ಕೈಗೊಳ್ಳಲಾಗುವುದು. ಡಿಸಿಎಂ ಅವರು ಭೇಟಿ ನೀಡಿದ್ದಾರೆ. ಜತೆಗೆ ಆಣೆಕಟ್ಟುಗಳ ಗಟ್ಟಿತನದ ಸಮೀಕ್ಷೆ ನಡೆಸಲಾಗುತ್ತದೆ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಈ ಬಿಜೆಪಿ ಅಧಿಕಾರದಲ್ಲಿ ಬೊಮ್ಮಾಯಿ ನೀರಾವರಿ ಸಚಿವರಾಗಿದ್ದಾಗ ಎಷ್ಟು ಆಣೆಕಟ್ಟುಗಳಿಗೆ ಭೇಟಿ ನೀಡಿದ್ದರು.? ಗಟ್ಟಿತನದ ಸಮೀಕ್ಷೆ ನಡೆಸಿದ್ದೀರಾ ಎಂದು ಪ್ರಶ್ನಿಸಿದ ಸಚಿವರು ತಾಂತ್ರಿಕ ಸಮಸ್ಯೆಯಿಂದ ಘಟನೆ ನಡೆದಿದೆ. ಏನಾದರೂ ಲೋಪದೋಷವಾಗಿದ್ದರೆ ಕ್ರಮ ಕೈಗೊಳ್ಳಲಾಗುವುದು. ಮೊದಲ ಬೆಳೆಗೆ ನೀರಿನ ತೊಂದರೆ ಇಲ್ಲ, ಎರಡನೆಯ ಬೆಳೆಗೂ ತೊಂದರೆಯಾಗದು. ತುಂಗಾಭದ್ರ ಡ್ಯಾಂಗೆ ಸಮನಾಂತರ ಸೇತುವೆ ನಿರ್ಮಾಣಕ್ಕೆ ಸಮೀಕ್ಷೆ ನಡೆಸಲಾಗಿದೆ ಎಂದರು.

ಮುಡಾ ಹಗರಣ ರಾಜಕೀಯ ಪ್ರೇರಿತ: ಮೂಡಾ ಪ್ರಕರಣ ರಾಜಕೀಯ ದುರುದ್ದೇಶದಿಂದ ಮಾಡಮಾಗುತ್ತಿದೆ. ರಾಜ್ಯಪಾಲರ ಕಚೇರಿ ಬಿಜೆಪಿಯ ಪ್ರಾದೇಶಿಕ ಕಚೇರಿಯಾಗಿ ಮಾರ್ಪಟ್ಟಿದೆ. ಎಲ್ಲೆಲ್ಲಿ ಬಿಜೆಪಿ ಬಲಹೀನವಾಗಿದೆ ಅಲ್ಲಲ್ಲಿ ರಾಜಭವನದ ದುರುಪಯೋಗ ಮಾಡಿಕೊಳ್ಳಲಾಗುತ್ತಿದೆ ಎಂದು ಗುಡುಗಿದರು.

ರಾಜಭವನ ದುರ್ಬಳಕೆ

ಜುಲೈ 5 ರಂದು ಸಿಎಂ ಗೆ ರಾಜ್ಯಪಾಲರು ಪತ್ರ ಬರೆಯುತ್ತಾರೆ. ಮತ್ತೆ 15ನೇ ತಾರೀಖಿಗೆ ಮತ್ತೊಂದು ಪತ್ರ ಬರೆಯುತ್ತಾರೆ. 26 ರಂದು ಈ ಬಗ್ಗೆ ಸರಕಾರ ನೂರು ಪುಟಗಳ ಉತ್ತರ ಸಲ್ಲಿಸಿದೆ. ಅದೇ ದಿನ ಅಬ್ರಾಹಂ ದೂರು ದಾಖಲಿಸಿದ ಕೂಡಲೇ ರಾಜ್ಯಪಾಲರು ಸಿಎಂಗೆ ನೋಟಿಸ್ ಕೊಡುತ್ತಾರೆ. ಸರಕಾರದ ಉತ್ತರವನ್ನು ಕೂಡಾ ಪರಿಶೀಲನೆ ನಡೆಸದೆ, ಕೇವಲ ಖಾಸಗಿ ದೂರು ದಾಖಲಿಸಿದ ತಕ್ಷಣ ಶೋಕಾಸ್ ನೋಟಿಸು ನೀಡಲಾಗಿದೆ. ದೂರದಾರರ ಬಗ್ಗೆ ಎಲ್ಲರಿಗೂ ಗೊತ್ತಿರುವ ವಿಚಾರ, ಪ್ರಕರಣವೊಂದರಲ್ಲಿಅವರಿಗೆ ಸುಪ್ರಿಂ ಕೋರ್ಟ್ ದಂಡ ಹಾಕಿದೆ. ಅಂತವರ ಮಾತು ರಾಜ್ಯಪಾಲರು ಕೇಳುತ್ತಾರೆ ಎಂದರೆ ಮೇಲಿನಿಂದ ಅವರಿಗೆ ಆದೇಶ ಬಂದಿದೆ. ರಾಜ್ಯಪಾಲರು ಅವರ ಕೈಗೊಂಬೆಯಂತೆ ವರ್ತಿಸುತ್ತಿದ್ದಾರೆ. ರಾಜಭವನ ದುರುಪಯೋಗವಾಗುತ್ತಿದೆ ಎಂದು ಸಚಿವ ಖರ್ಗೆ ಆರೋಪಿಸಿದರು.

ಶಿಕಾರಿಪುರದ ಜನರ ಆಶೀರ್ವಾದದಿಂದ ಶಾಸಕನಾಗಿದ್ದೇನೆ; ಯಾರದ್ದೋ ಭಿಕ್ಷೆಯಿಂದಲ್ಲ: ವಿಜಯೇಂದ್ರ

ಪ್ರತ್ಯೇಕ ಪಾದಯಾತ್ರೆಗೆ ನನ್ನ ವಿರೋಧವಿಲ್ಲ

ಬೆಂಗಳೂರು: ಬಿಜೆಪಿಯಲ್ಲಿನ ಬಂಡಾಯ ಬಣದಿಂದ ಪಾದಯಾತ್ರೆಯ ಅಸ್ತ್ರಕ್ಕೆ ಪ್ರತಿಕ್ರಿಯಿಸಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಪ್ರತಿಕ್ರಿಯಿಸಿದ್ದು, 'ಪ್ರತ್ಯೇಕ ಪಾದಯಾತ್ರೆ ನನ್ನ ವಿರೋಧವಿಲ್ಲ' ಎನ್ನುವ ಮೂಲಕ ಎಚ್ಚರಿಕೆಯ ಹೆಜ್ಜೆ ಇಡಲು ಮುಂದಾಗಿದ್ದಾರೆ. ಅತೃಪ್ತ ನಾಯಕರ ಪಡೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಬೆನ್ನಲ್ಲೇ, ಎಲ್ಲರನ್ನು ವಿಶ್ವಾಸಕ್ಕೆ ಪಡೆಯುವ ಕಾರ್ಯಕ್ಕೆ ಮುಂದಾಗಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಅತೃಪ್ತ ನಾಯಕರ ಪಾದಯಾತ್ರೆಗೂ ತಮ್ಮ ತಕರಾರೇನೂ ಇಲ್ಲ ಎಂದಿದ್ದಾರೆ. ರಾಜ್ಯಾಧ್ಯಕ್ಷನಾಗಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವುದು ನನ್ನ ಆದ್ಯ ಕರ್ತವ್ಯ. ಅದರಂತೆ ನಾನು ಅಧ್ಯಕ್ಷನಾದಾಗಿನಿಂದಲೂ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡೆ ಕೆಲಸಗಳನ್ನು ಮಾಡಿದ್ದೇನೆ ಎಂದು ಸ್ಪಷ್ಟಪಡಿಸಿದ್ದಾರೆ.

ಪಕ್ಷದ ಕೆಲ ಮುಖಂಡರು ವಾಲ್ಮೀಕಿ ನಿಗಮದ ಹಗರಣದ ವಿರುದ್ಧ ಕೂಡಲಸಂಗಮದಿಂದ ಬಳ್ಳಾರಿಯ ವರೆಗೆ ಪಾದಯಾತ್ರೆ ನಡೆಸುವ ಅಪೇಕ್ಷೆ ವ್ಯಕ್ತಪಡಿಸಿದ್ದಾರೆ. ಈ ಪಾದಯಾತ್ರೆ ಪಕ್ಷಕ್ಕೆ ಶಕ್ತಿ ತರುತ್ತದೆ ಎನ್ನುವುದಾದರೇ ನಾನೇಕೆ ತಕರಾರು ಎತ್ತಲಿ? ಯಾವುದೇ ಪಾದಯಾತ್ರೆಗಳು ಪಕ್ಷಕ್ಕೆ ಶಕ್ತಿ ತುಂಬುತ್ತವೆ. ಪಕ್ಷದ ಸಂಘಟನೆಗೆ ಪೂರಕವಾಗಿವೆ ಎಂದಾದರೆ ಅದಕ್ಕೆ ವರಿಷ್ಠರು ಅನುಮತಿ ಕೊಡುತ್ತಾರೆ. ವರಿಷ್ಠರು ಅನುಮತಿ ನೀಡಿದರೆ ಪಾದಯಾತ್ರೆಗೆ ನನ್ನ ತಕರಾರಿಲ್ಲ ಎಂದಿದ್ದಾರೆ.

ನಾಯಕರುಗಳು ಏನೇ ಮಾಡಿದರೂ ಪಕ್ಷಕ್ಕೆ ಪೂರಕವಾಗಿರಬೇಕು. ಅದರಿಂದ ಪಕ್ಷಕ್ಕೆ ಲಾಭವಾಗಬೇಕು. ಯಾರೂ ಏನೇ ಮಾಡಿದರೂ ಅದು ಪಕ್ಷ ಸಂಘಟನೆಗೆ ಒಳ್ಳೆಯದಾಗುವುದಾದರೆ ಅದಕ್ಕೆ ವರಿಷ್ಠರು ಒಪ್ಪಿಗೆ ಕೊಡುತ್ತಾರೆ. ವರಿಷ್ಠರು ಒಪ್ಪಿಗೆ ನೀಡಿದರೆ ಅದಕ್ಕೆ ಯಾರ ತಕರಾರು ಇರುವುದಿಲ್ಲ ಎಂದರು.

ಶಿಕಾರಿಪುರದ ಜನತೆ ಆಶೀರ್ವಾದ: ಶಿಕಾರಿಪುರ ಕ್ಷೇತ್ರದಿಂದ ಬಿ.ವೈ. ವಿಜಯೇಂದ್ರ ಗೆದ್ದಿರುವುದು ಕಾಂಗ್ರೆಸ್‌ನ ಭಿಕ್ಷೆ ಎಂಬುದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ಡಿಕೆಶಿ ಈ ರೀತಿ ಮಾತನಾಡಿ ಗೊಂದಲ ಸೃಷ್ಟಿಸುವುದು ಸರಿಯಲ್ಲ. ನಾನು ಈ ಬಗ್ಗೆ ಹೆಚ್ಚು ಪ್ರತಿಕ್ರಿಯೆ ನೀಡಲ್ಲ. ಶಿಕಾರಿಪುರ ಕ್ಷೇತ್ರದ ಜನರ ಆಶೀರ್ವಾದದಿಂದ ನಾನು ಶಾಸಕನಾಗಿದ್ದೇನೆ. ಯಾರೋ ಏನೋ ಹೇಳಿದರೆ ನಾನು ಅದಕ್ಕೆಲ್ಲಾ ತಲೆಕೆಡಿಸಿಕೊಳ್ಳಲ್ಲ ಎಂದು ವಿಜಯೇಂದ್ರ ಹೇಳಿದರು.

ಚನ್ನಪಟ್ಟಣ ಅಭ್ಯರ್ಥಿ ಚರ್ಚಿಸಿ ನಿರ್ಧಾರ

ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಯ ಆಯ್ಕೆ ಬಗ್ಗೆ ಪಕ್ಷದ ವರಿಷ್ಠರು ಚರ್ಚೆ ನಡೆಸಿ ತೀರ್ಮಾನ ಕೈಗೊಳ್ಳುತ್ತಾರೆ. ಮಾಜಿ ಸಚಿವ ಸಿ.ಪಿ. ಯೋಗೇಶ್ವರ್ ಅವರು ಟಿಕೆಟ್ ಆಕಾಂಕ್ಷಿಯಾಗಿದ್ದಾರೆ. ಅದು ತಪ್ಪೇನಲ್ಲ. ಅವರಿಗೆ ಚನ್ನಪಟ್ಟಣದಲ್ಲಿ ಅವರದೇ ಆದ ಶಕ್ತಿಯಿದೆ. ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿ ಮಾಡಿಕೊಂಡು ಚುನಾವಣೆ ಎದುರಿಸಿದ್ದೇವೆ. ಚನ್ನಪಟ್ಟಣದಲ್ಲಿ ಮಾಜಿ ಮುಖ್ಯಮಂತ್ರಿ ಜೆಡಿಎಸ್‌ನ ಕುಮಾರಸ್ವಾಮಿ ಗೆದ್ದಿದ್ದರು. ಈಗ ಲೋಕಸಭೆಗೆ ಆಯ್ಕೆಯಾಗಿದ್ದಾರೆ. ಈಗ ಉಪಚುನಾವಣೆ ನಡೆಯುತ್ತಿದೆ. ಇಲ್ಲಿ ಯಾರನ್ನು ಅಭ್ಯರ್ಥಿಯನ್ನಾಗಿಸಬೇಕು ಎಂಬ ಬಗ್ಗೆ ದೆಹಲಿಯಲ್ಲಿ ಬಿಜೆಪಿ ಮತ್ತು ಜೆಡಿಎಸ್‌ನ ವರಿಷ್ಠರು ಕುಳಿತು ಚರ್ಚೆ ಮಾಡಿ ತೀರ್ಮಾನ ಮಾಡುತ್ತಾರೆ. ವರಿಷ್ಠರ ತೀರ್ಮಾನವೇ ಅಂತಿಮವಾಗುತ್ತದೆ ಎಂದರು.

ಅಣೆಕಟ್ಟೆಗಳು ಭರ್ತಿಯಾದ ಬಗ್ಗೆ ರೈತರು ಸಂತಸದಲ್ಲಿದ್ದರೇ, ತುಂಗಭದ್ರಾ ಡ್ಯಾಮಿಗೆ ಮುಖ್ಯ ಎಂಜಿನಿಯರ್ ನೇಮಿಸದೇ ಜಲಾಶಯದ ಗೇಟ್ ಮುರಿದ ಘಟನೆಗೆ ರಾಜ್ಯ ಸರಕಾರದ ನಿರ್ಲಕ್ಷ್ಯವೇ ಕಾರಣ. ಮುಖ್ಯಮಂತ್ರಿಗಳು ರೈತರಿಗೆ ಪರಿಹಾರವಾಗಿ ಪ್ರತಿ ಹೆಕ್ಟೇರ್‌ಗೆ ಕನಿಷ್ಠ 50 ಸಾವಿರ ಕೊಡಬೇಕು.

-ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ ವಿರೋಧಿ ಪಡೆಯ ಶಕ್ತಿ | ಬೆಲ್ಲದ್ ಜತೆಗೆ ಸಿಟಿ ರವಿ ಅಸಮಾಧಾನ

ಬಿಜೆಪಿಯಲ್ಲಿ ಮುಗಿಯದ ಬಣ ಬಡಿದಾಟ

ಬೆಂಗಳೂರು: ರಾಜ್ಯ ಬಿಜೆಪಿಯಲ್ಲಿ ದಿನದಿಂದ ದಿನಕ್ಕೆ ಬಣಬಡಿದಾಟ ಹೆಚ್ಚಾಗುತ್ತಿದೆ. ಒಂದೆಡೆ ವಿಜಯೇಂದ್ರ ವಿರುದ್ಧ ಬಂಡಾಯ ಸಾರಿರುವ ಅತೃಪ್ತರ ಗುಂಪಿನ ಬಲ ಹೆಚ್ಚಾಗುತ್ತಿದ್ದರೆ, ಇನ್ನೊಂದೆಡೆ ವಿಜಯೇಂದ್ರ ಅವರು 'ಡಿಫೆನ್ಸ್' ಮೋಡ್‌ಗೆ ಹೋಗುತ್ತಿರುವುದು ಭಾರಿ ಕುತೂಹಲಕ್ಕೆ ಕಾರಣವಾಗಿದೆ.

ಕೆಲವರ್ಷಗಳಿಂದ ಯಡಿಯೂರಪ್ಪ ಕುಟುಂಬದ ವಿರುದ್ಧ ಕಿಡಿಕಾರುತ್ತಿರುವ ಬಸನಗೌಡ ಯತ್ನಾಳ್ ಅವರ ನೇತೃತ್ವದಲ್ಲಿ ಹಲವು ಪ್ರಮುಖ ನಾಯಕರು ಇದೀಗ ಒಂದಾಗಿದ್ದು, ರಾಜ್ಯ ಬಿಜೆಪಿ ವಿರುದ್ಧ ನಿತ್ಯ ವಾಗ್ದಾಳಿ ನಡೆಸುತ್ತಿದ್ದಾರೆ. ಈ ಹಿಂದೆ ಅತೃಪ್ತರ ತಂಡದಲ್ಲಿ ಕೆಲವೇ ಕೆಲವರಿದ್ದರು. ಆದರೀಗ ಈ ಸಂಖ್ಯೆ ಬೆಳೆಯುತ್ತಿದೆ. ವಿಜಯೇಂದ್ರ ಹಾಗೂ ಯತ್ನಾಳ್ ಬಣದ ನಡುವಿನ ಬಡಿದಾಟದಲ್ಲಿ ಪಕ್ಷದ ಸಂಘಟನೆ ನೆಲಕಚ್ಚುತ್ತಿದೆ ಎನ್ನುವುದು ಪಕ್ಷ ನಿಷ್ಠರ ಆತಂಕವಾಗಿದೆ.

ರಾಜ್ಯದಲ್ಲಿ ಸರಕಾರದ ವಿರುದ್ಧ ಕೇಳಿಬರುತ್ತಿರುವ ಹಲವು ಲೋಪಗಳ ವಿರುದ್ಧ ಹೋರಾಡುವ ಬದಲು ಬಿಜೆಪಿ ನಾಯಕರು ತಮ್ಮಲ್ಲಿಯೇ ಬಡಿದಾಡಿಕೊಳ್ಳುತ್ತಿದ್ದಾರೆ.

ಈ ಬಣ ಬಡಿದಾಟಕ್ಕೆ ಬ್ರೇಕ್ ಹಾಕಲು ಈ ಹಂತ ದಲ್ಲಿಯೂ ಹೈಕಮಾಂಡ್ ಮಧ್ಯಪ್ರವೇಶ ಮಾಡ ದಿದ್ದರೆ ಪಕ್ಷಕ್ಕೆ ಬಹುದೊಡ್ಡ ಸಮಸ್ಯೆಯಾಗಲಿದೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆಯ್ಕೆಯಾಗಿ ವರ್ಷ ಕಳೆಯುತ್ತಾ ಬಂದರೂ, ಪಕ್ಷದಲ್ಲಿನ ಅಸಮಾಧಾನವಿನ್ನೂ ಆರಿಲ್ಲ. ಯತ್ನಾಳ್ ಸೇರಿದಂತೆ ರಮೇಶ್ ಜಾರಕಿಹೊಳಿ ಬಹಿರಂಗವಾಗೇ ವಿಜಯೇಂದ್ರ ವಿರುದ್ಧ ಗುಡುಗುತ್ತಿದ್ದಾರೆ. ಈ ತಂಡಕ್ಕೆ ಮಾಜಿ ಸಚಿವ ಅರವಿಂದ ಲಿಂಬಾವಳಿ, ಮಾಜಿ ಸಂಸದ ಪ್ರತಾಪ ಸಿಂಹ, ಕುಮಾರ ಬಂಗಾರಪ್ಪ, ಶಾಸಕ ಬಿಪಿ ಹರೀಶ್ ಕೂಡಾ ಸೇರ್ಪಡೆಯಾಗಿದ್ದರು. ಇದೀಗ ಸೋಮವಾರವಷ್ಟೇ ವಿಧಾನಸಭೆ ಉಪ ನಾಯಕ ಅರವಿಂದ ಬೆಲ್ಲದ ಪರೋಕ್ಷ ಬೆಂಬಲ ನೀಡಿದ್ದಾರೆ. ಇದೀಗ ಇವರಿಗೆ 'ಹೊಂದಾಣಿಕೆ ರಾಜಕೀಯಕ್ಕೆ ನಾನೂ ಬಲಿಯಾದೆ ಎನ್ನುವ ಮೂಲಕ ಸಿ.ಟಿ. ರವಿಯೂ ಧ್ವನಿಗೂಡಿಸಿದ್ದಾರೆ.

ಸಿಎಂ ಸಿದ್ದರಾಮಯ್ಯ ವಿರುದ್ಧದ ಹೋರಾಟ ಹಾಗೂ ಪಾದಯಾತ್ರೆಯಿಂದ ವಿಜಯೇಂದ್ರಗೆ ಒಂದಿಷ್ಟು ರಾಜಕೀಯ ಲಾಭವಾದರೂ ಪಕ್ಷದಲ್ಲಿರುವ ಭಿನ್ನಮತೀಯರು ಇದಕ್ಕೆ ಅವಕಾಶ ನೀಡುತ್ತಿಲ್ಲ. ಅಲ್ಲದೇ ಪಾದಯಾತ್ರೆ ಹಿಂದೆ ಡಿಕೆಶಿ ಸೂತ್ರಧಾರ ಎಂದು ಪ್ರಚಾರ ಮಾಡುತ್ತಿದ್ದು, ಈ ನಡುವೆ ಯತ್ನಾಳ್ ನೇತೃತ್ವದ ಭಿನ್ನರ ಗುಂಪು ಬಳ್ಳಾರಿಗೆ ಪಾದಯಾತ್ರೆ ಹಮಿಕೊಳ್ಳಲು ಸಿದ್ಧತೆ ನಡೆಸುತ್ತಿದೆ. ಆದರೆ ಇದಕ್ಕೆ ಹೈಕಮಾಂಡ್ ಅನುಮತಿ ಕೊಡುತ್ತಾ? ಇದರಲ್ಲಿ ಬಿ.ವೈ. ವಿಜಯೇಂದ್ರ ಬಣ ಭಾಗಿಯಾಗುತ್ತಾ? ಎಂಬುವುದು ಯಕ್ಷ ಪ್ರಶ್ನೆಯಾಗಿದೆ.

ಹೊಂದಾಣಿಕೆ ರಾಜಕಾರಣ: ಹೊಂದಾಣಿಕೆ ರಾಜಕಾರಣ ರಾಜ್ಯ ಬಿಜೆಪಿಯಲ್ಲಿ ಭಾರಿ ಸದ್ದು ಮಾಡುತ್ತಿದ್ದು, ವಿಜಯೇಂದ್ರ ಡಿಸಿಎಂ ಡಿಕೆ ಶಿವಕುಮಾರ್ ಜತೆಗೆ ಹೊಂದಾಣಿಕೆ ರಾಜಕಾರಣ ನಡೆಸುತ್ತಿದ್ದು, ಅಲ್ಲದೇ ವಿರೋಧ ಪಕ್ಷದ ನಾಯಕ ಆರ್ ಅಶೋಕ್ ವಿರುದ್ಧ ಕೂಡ ಯತ್ನಾಳ್ ತಂಡ ಅಡಜಸ್ಟ್‌ಮೆಂಟ್ ರಾಜಕಾರಣ ಕುರಿತು ಸದನದಲ್ಲೂ ಕೂಡ ಯತ್ನಾಳ್ ಆರೋಪಿಸಿದ್ದರು.

ಒತ್ತಡಕ್ಕೆ ಮಣಿದು ಪ್ರತಿಭಟನೆ ನಡೆಸಿದ್ದಾರೆ ಎಂಬ ಅರ್ಥದಲ್ಲೂ ಹೇಳಿಕೆ ನೀಡುವ ಮೂಲಕ ವಿಜಯೇಂದ್ರ ಬಣಕ್ಕೆ ಮುಜುಗರ ಉಂಟು ಮಾಡಿದ್ದರು.

ಹೊಂದಾಣಿಕೆ ರಾಜಕೀಯ ಕೊನೆಯಾಗಲಿ: ಸಿ.ಟಿ. ರವಿ

ಮಂಗಳವಾರ ಹೊಂದಾಣಿಕೆ ರಾಜಕೀಯಕ್ಕೆ ಸಂಬಂಧಿಸಿದಂತೆ ಕಿಡಿ ಕಾರಿರುವ ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ, ರಾಜ್ಯದಲ್ಲಿ ಹೊಂದಾಣಿಕೆ ರಾಜಕಾರಣಕ್ಕೆ ಅಂತ್ಯ ಹಾಡಲೇಬೇಕಿದೆ. ಹೊಂದಾಣಿಕೆ ರಾಜಕಾರಣಕ್ಕೆ ನಾನು ಬಲಿಪಶು. ಯಾರೇ ಆಗಲಿ ಸಿದ್ಧಾಂತಬದ್ಧ ರಾಜಕಾರಣ ಮಾಡಬೇಕು. ಹೊಂದಾಣಿಕೆ ರಾಜಕಾರಣ ಒಳ್ಳೆಯದಲ್ಲ. ಈ ಹೊಂದಾಣಿಕೆ ರಾಜಕಾರಣದಿಂದ ಸರಕಾರದ ಬೊಕ್ಕಸವನ್ನು ಲೂಟಿ ಮಾಡುವ ಕೆಲಸಗಳಾಗುತ್ತಿವೆ. ಯಾವುದೇ ಪಕ್ಷ ಇರಲಿ ಹೊಂದಾಣಿಕೆ ರಾಜಕಾರಣ ಇರಬಾರದು. ನಾನು ಕೇವಲ ಪಕ್ಷದ ದೃಷ್ಟಿಯಿಂದ ಮಾತ್ರವಲ್ಲ ರಾಜ್ಯದ ಜನರ ಹಿತದೃಷ್ಟಿಯಿಂದಲೂ ಈ ಹೊಂದಾಣಿಕೆ ರಾಜಕಾರಣಕ್ಕೆ ಇತಿಶ್ರೀ ಹಾಡಬೇಕಿದೆ ಎಂದು ಅವರು ಹೇಳಿದರು.

ಪರಶುರಾಮ್ ಪ್ರಕರಣದಲ್ಲಿ ಶಾಸಕ ಚೆನ್ನಾರೆಡ್ಡಿ ಹೆಸರು

ಪರಂ ಭೇಟಿಯಾದ ಚನ್ನಾರೆಡ್ಡಿ

ಬೆಂಗಳೂರು: ರಾಜ್ಯದಲ್ಲಿ ಭಾರಿ ವಿವಾದಕ್ಕೆ ಕಾರಣವಾಗಿರುವ ಯಾದಗಿರಿ ಪಿಎಸ್‌ಐ ಪರಶುರಾಮ್ ಸಾವಿನ ಪ್ರಕರಣದಲ್ಲಿ ಹೆಸರು ಕೇಳಿ ಬರುತ್ತಿರುವ ಶಾಸಕ ಚೆನ್ನಾರೆಡ್ಡಿ ಅವರು ಮಂಗಳವಾರ ಬೆಳಗ್ಗೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರನ್ನು 'ಹಿಂಬಾಗಿಲ' ಮೂಲಕ ಭೇಟಿಯಾಗಿರುವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ. ಯಾದಗಿರಿ ಪಿಎಸ್‌ಐ ಪರಶುರಾಮ್ ಸಾವು ಪ್ರಕರಣದಲ್ಲಿ ಶಾಸಕ ಚನ್ನಾರೆಡ್ಡಿ ಪಾಟೀಲ್ ವಿರುದ್ಧ ಪಿಎಸ್‌ಐ ಪತ್ನಿ ನೇರ ಆರೋಪವನ್ನುಮಾಡಿದ್ದರು. ಈ ಹಿನ್ನೆಲೆಯಲ್ಲಿ ಅವರ ವಿರುದ್ಧ ಪ್ರಕರಣ ದಾಖಲು ಮಾಡಬೇಕು ಹಾಗೂ ತನಿಖೆ ನಡೆಸಬೇಕು ಎಂಬ ಆಗ್ರಹ ಕೇಳಿಬರುತ್ತಿದೆ. ಇದರೊಂದಿಗೆ ಚೆನ್ನಾರೆಡ್ಡಿ ಶಾಸಕತ್ವ ವನ್ನು ವಜಾ ಮಾಡುವಂತೆ ಸಾಮಾಜಿಕ ಕಾರ್ಯಕರ್ತ ಮಾನಪ್ಪ ಹಡಪದ ಎಂಬುವವರು ಸ್ಪೀಕರ್ ಯುಟಿ ಖಾದರ್ ಅವರಿಗೆ ಪತ್ರ ವನ್ನು ಬರೆದಿದ್ದಾರೆ. ಈ ಎಲ್ಲದರ ನಡುವೆ ಮಂಗಳವಾರ ಬೆಳಗ್ಗೆ ಗೃಹ ಸಚಿವ ಡಾ.ಜಿ ಪರಮೇಶ್ವರ್ ಅವರನ್ನು ಶಾಸಕ ಚೆನ್ನಾರೆಡ್ಡಿ ಭೇಟಿಯಾಗಿದ್ದಾರೆ. ಆದರೆ, ಭೇಟಿ ಬಳಿಕ ಮಾಧ್ಯಮಗಳ ಕಣ್ತಪ್ಪಿಸಿ ಹಿಂಬದಿ ಗೇಟ್‌ನಿಂದ ತೆರಳಿದ್ದಾರೆ ಇದೀಗ ಭಾರಿ ಕುತೂಹಲಕ್ಕೆ ಕಾರಣವಾಗಿದೆ.

ಚೆನ್ನಾರೆಡ್ಡಿ ಬಂದು ಭೇಟಿ ಮಾಡಿದ್ದರು. ನನ್ನ ಹುಟ್ಟುಹಬ್ಬದ ದಿನ ಸಿಕ್ಕಿರಲಿಲ್ಲ. ಹೀಗಾಗಿ ಬಂದು ಭೇಟಿ ಮಾಡಿ ಹೋಗಿದ್ದಾರೆ. ಪಿಎಸ್‌ಐ ಸಾವಿನ ಕೇಸ್ ತನಿಖೆ ನಡೆಯುತ್ತಿದೆ. ಅದರ ಬಗ್ಗೆ ಯಾವುದೇ ಚರ್ಚೆ ಇವತ್ತು ಮಾಡಲಿಲ್ಲ.

-ಡಾ.ಜಿ.ಪರಮೇಶ್ವರ್, ಗೃಹ ಸಚಿವ

ಕೇಂದ್ರ ಸಮಿತಿ ಸಲಹೆ ಧಿಕ್ಕರಿಸಿದೆ ರಾಜ್ಯ ಸರಕಾರ: ಜೋಶಿ

ಜಲಾಶಯಗಳ ನಿರ್ವಹಣೆ ಗಂಭೀರವಾಗಿ ಪರಿಗಣಿಸಿ

ಹುಬ್ಬಳ್ಳಿ: ಜಲಾಶಯಗಳ ಸಮರ್ಪಕ ನಿರ್ವಹಣೆಗೆ ಕೇಂದ್ರ ಸಮಿತಿ ನೀಡಿದ ಸಲಹೆಗಳನ್ನು ರಾಜ್ಯ ಸರಕಾರ ಧಿಕ್ಕರಿಸಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಆರೋಪಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ತುಂಗಭದ್ರಾ ಡ್ಯಾಂ ಕ್ರಸ್ಟ್ ಗೇಟ್ ಬಿರುಕು ಬಿಟ್ಟು ಆತಂಕ ಸೃಷ್ಟಿಸಿರುವ ಬಗ್ಗೆ ಪ್ರತಿಕ್ರಿಯಿಸಿ, ಜಲಾಶಯಗಳ ನಿರ್ವಹಣೆಯನ್ನು ರಾಜ್ಯ ಸರಕಾರ ಗಂಭೀರವಾಗಿ ಪರಿಗಣಿಸಬೇಕು ಎಂದು ಆಗ್ರಹಿಸಿದ್ದಾರೆ. ಬೇಸಿಗೆಯಲ್ಲಿ ಜಲಾಶಯ ಖಾಲಿ ಇದ್ದಾಗಲೆ ನಿರ್ವಹಣೆ ಕಾರ್ಯ ಕೈಗೊಳ್ಳಬೇಕಿತ್ತು. ಆದರೆ, ರಾಜ್ಯ ಸರಕಾರ ಉದಾಸೀನ ತೋರಿದೆ. ಈಗದರ ಪರಿಣಾಮ ಎದುರಿಸುವಂತಾಗಿದೆ. ಕಳೆದ ಆರು ತಿಂಗಳ ಕಾಲ ಜಲಾಶಯ ಖಾಲಿ ಆಗಿತ್ತು. ರಾಜ್ಯ ಸರಕಾರ ಆಗಲೇ ಸಮರ್ಪಕ ನಿರ್ವಹಣೆ ಕೈಗೊಳ್ಳಬೇಕಿತ್ತು. ಆದರೆ ಅದನ್ನ ಮಾಡಲಿಲ್ಲ ಎಂದು ಜೋಶಿ ಆರೋಪಿಸಿದ್ದಾರೆ.

ರಾಜ್ಯ ಸರಕಾರದ ಬಳಿ ರಸ್ತೆ ರಿಪೇರಿಗೂ ಹಣವಿಲ್ಲ. ಇನ್ನು ಸಮಾನಾಂತರ ಜಲಾಶಯ ಹೇಗೆ ನಿರ್ಮಾಣ ಮಾಡುತ್ತಾರೆ?. ಬೇಕಾಬಿಟ್ಟಿ ಆಡಳಿತ, ಭ್ರಷ್ಟಾಚಾರದ ಫಲವಾಗಿ ರಾಜ್ಯ ಸರಕಾರ ದಿವಾಳಿಯಾಗಿದೆ. ಹಾಗಾಗಿ ಜಲಾಶಯಗಳ ವ್ಯವಸ್ಥಿತ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ತೋರಿದೆ. ರಾಜ್ಯ ಸರಕಾರ ಕೂಡಲೇ ತುಂಗಭದ್ರಾ ಜಲಾಶಯದ ಕ್ರಸ್ಟ್ ಗೇಟ್ ಸರಿಪಡಿಸಲು ಮುಂದಾಗಬೇಕು.

-ಪ್ರಲ್ಹಾದ್ ಜೋಶಿ, ಕೇಂದ್ರ ಸಚಿವ

ನೋಡಲ್ ಜಿಲ್ಲೆಯಾಗಿ ಆಯ್ಕೆ | ಪ್ರವಾಸಿ ತಾಣಗಳ ಅಭಿವೃದ್ಧಿ | ನಾನಾ ಮೂಲ ಸೌಕರ್ಯ ಒದಗಿಸಲು ಕ್ರಮ

ವಿಜಯಪುರ ಸರ್ವಾಂಗೀಣ ಅಭಿವೃದ್ಧಿ: ಸುಧಾಮೂರ್ತಿ

ವಿಜಯಪುರ: ಜಿಲ್ಲೆಯ ಗೋಲಗುಂಬಜ್, ಬಾರಾ ಕಮಾನ್, ಗಗನ ಮಹಲ, ಇಬ್ರಾಹಿಮ್ ರೋಜಾ, ಬಸವನ ಬಾಗೇವಾಡಿ ಹಾಗೂ ಜಿಲ್ಲೆಯಲ್ಲಿರುವ ಪ್ರವಾಸಿ ತಾಣಗಳನ್ನು ಸ್ವಚ್ಛತೆಯನ್ನು ಕಲ್ಪಿಸಿ ಪ್ರವಾಸಿಗರಿಗೆ ಕುಡಿಯುವ ನೀರು, ಶೌಚಾಲಯ, ಮಾಹಿತಿ ಕೇಂದ್ರ, ಉತ್ತಮ ಮೂಲ ಸೌಕರ್ಯಗಳನ್ನು ಒದಗಿಸುವುದಕ್ಕಾಗಿ ಸಂಸದರ ಪ್ರದೇಶಾಭಿವೃದ್ಧಿ (ಎಂಪಿಲ್ಯಾಡ್ಸ್) ಯೋಜನೆ ಬಳಸಲಾಗುವುದು ಎಂದು ರಾಜ್ಯಸಭೆ ಸಂಸದೆ ಸುಧಾಮೂರ್ತಿ ಅವರು ಹೇಳಿದರು.

ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಸತಿನಿಲಯಗಳಲ್ಲಿ ಓದುತ್ತಿರುವ ಹೆಣ್ಣು ಮಕ್ಕಳ ಸಮಗ್ರ ವ್ಯಕ್ತಿತ್ವದ ಬೆಳವಣಿಗೆಗ ಪೂರಕವಾಗುವಂತೆ, ಗ್ರಂಥಾಲಯದ ಅನುಕೂಲ, ವ್ಯಕ್ತಿತ್ವ ವಿಕಸನ, ಈಜು, ಕ್ರೀಡೆಯಂತಹ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು.

-ಸುಧಾಮೂರ್ತಿ, ರಾಜ್ಯಸಭೆ ಸಂಸದೆ

ನಗರದ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಮಂಗಳವಾರ ನಡೆದ ವಿವಿಧ ಇಲಾಖೆಗಳ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ಅವರು, ವಿಜಯಪುರ ನಗರ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಸ್ಮಾರಕಗಳಿಗೆ ಹೆಸರುವಾಸಿಯಾಗಿದೆ. ವಿಜಯಪುರ ಜಿಲ್ಲೆಯ ಜತೆ ನನಗೆ ಭಾವನಾತ್ಮಕ ಸಂಬಂಧ ಇರುವುದರಿಂದ ನೋಡಲ್ ಜಿಲ್ಲೆಯನ್ನಾಗಿ ವಿಜಯಪುರ ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡಿದ್ದು ಜಿಲ್ಲೆಯ ಅಭಿವೃದ್ಧಿಗೆ ಪೂರಕವಾಗಿ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಬಳಸಿಕೊಂಡು ಸಮಗ್ರ ಅಭಿವೃದ್ಧಿಗೆ ಕ್ರಮ ವಹಿಸಲು ಜಿಲ್ಲೆಯ ಎಲ್ಲ ಅಧಿಕಾರಿಗಳು ಸಮನ್ವಯತೆ ಸಾಧಿಸಿ ಸಾರ್ವಜನಿಕರಿಗೆ ಉತ್ತಮ ಸೇವೆ ಒದಗಿಸಿ ಜನರ ಜೀವನಮಟ್ಟ ಸುಧಾರಣೆಗೆ ಶ್ರಮಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ಜಿ.ಪಂ ಸಿಇಒ ರಿಷಿ ಆನಂದ, ಎಡಿಸಿ ಸೋಮಲಿಂಗ ಗೆಣ್ಣೂರು, ಡಿಎಸ್‌ಒ ಡಾ. ಶಿವಾನಂದ ಮಾಸ್ತಿಹೊಳಿ, ಡಿಎಚ್‌ಒ ಡಾ. ಬಸವರಾಜ ಹುಬ್ಬಳ್ಳಿ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಪುಂಡಲಿಕ ಮಾನವರ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಪ್ರಶಾಂತ ಪೂಜಾರಿ ಸೇರಿದಂತೆ ಜಿಲ್ಲಾಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ನಗರದ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಮಂಗಳವಾರ ನಡೆದ ವಿವಿಧ ಇಲಾಖೆಗಳ ಅಧಿಕಾರಿಗಳ ಸಭೆಯಲ್ಲಿ ರಾಜ್ಯಸಭೆ ಸಂಸದೆ ಸುಧಾಮೂರ್ತಿ ಮಾತನಾಡಿದರು.

ಜಿಲ್ಲಾಸ್ಪತ್ರೆ ಆವರಣದಲ್ಲಿ ಧರ್ಮಶಾಲೆ ಆರಂಭ

ಜಿಲ್ಲಾಸ್ಪತ್ರೆ ಆವರಣದಲ್ಲಿ ಧರ್ಮಶಾಲೆಯನ್ನು ತೆರೆದು ಸಾರ್ವಜನಿಕರಿಗೆ ಅನೂಕೂಲ ಕಲ್ಪಿಸುವುದು ಹಾಗೂ ತಾಳಿಕೋಟೆ, ಬಸವನ ಬಾಗೇವಾಡಿ, ಸಿಂದಗಿಯಲ್ಲಿ ಸುಸಜ್ಜಿತವಾದ ಗ್ರಂಥಾಲಯ ನಿರ್ಮಾಣ, ಸರಕಾರಿ ಜಾಗದಲ್ಲಿ ಸುಸಜ್ಜಿತವಾದ ಜಿಮ್ ನಿರ್ಮಾಣ ಮಾಡಲು ಸಿದ್ಧತೆ ನಡೆಸಲಾಗಿದೆ.

ಕುಮಟಗಿಯಲ್ಲಿರುವ ವಾಟರ್ ಪೆವಿಲಿಯನ್‌ನ್ನು ಸುಮಾರು ಎರಡು ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಿ ಅಲ್ಲಿನ ಕೆರೆಯ ಸಂರಕ್ಷಣೆ ಹಾಗೂ ಅರಮನೆ, ಕೋಟೆಯನ್ನು ಪ್ರೇಕ್ಷಣೆಯ ಸ್ಥಳವಾಗಿ ಅಭಿವೃದ್ಧಿಪಡಿಸಲು ಯೋಜನೆ ಹಮ್ಮಿಕೊಳ್ಳಲಾಗಿದ್ದು, ಅಧಿಕಾರಿ ಗಳು ಅಗತ್ಯ ಸಹಕಾರ ಒದಗಿಸಬೇಕು ಎಂದು ರಾಜ್ಯಸಭೆ ಸಂಸದೆ ಸುಧಾಮೂರ್ತಿ ಹೇಳಿದರು.

ವಿಶ್ವವಾಣಿ

ಸಂಪಾದಕೀಯ

ಸುರಕ್ಷತೆಗೆ ತುರ್ತು ಕ್ರಮ ಅಗತ್ಯ

ತುಂಗಭದ್ರಾ ಅಣೆಕಟ್ಟೆಯ 19ನೇ ಕ್ರಸ್ಟ್‌ಗೇಟ್ ಭಾರೀ ನೀರಲ್ಲಿ ಕೊಚ್ಚಿಕೊಂಡು ಹೋದ ಹಿನ್ನೆಲೆಯಲ್ಲಿ ರಾಜ್ಯದ ಇತರ ಜಲಾಶಯಗಳ ಸುರಕ್ಷತೆ ಪ್ರಶ್ನೆ ಈಗ ಮುನ್ನೆಲೆಗೆ ಬಂದಿದೆ. ರಾಜ್ಯದಲ್ಲಿ ಶಿಥಿಲಾವಸ್ಥೆಯಲ್ಲಿರುವ ಕ್ರಸ್ಟ್‌ಗೇಟ್‌ಗಳನ್ನು ಪತ್ತೆ ಹಚ್ಚಿ ವರದಿ ನೀಡಲು ತಜ್ಞರ ಸಮಿತಿ ರಚಿಸುವುದಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ. ದುರಸ್ತಿ ಅಗತ್ಯವಿರುವ ಕ್ರಸ್ಟ್ ಗೇಟ್‌ಗಳ ಪತ್ತೆಗೆ ತಜ್ಞರ ಸಮಿತಿ ಯಾಕೆ ಬೇಕೆನ್ನುವುದು ಕೇಳಬೇಕಾದ ಪ್ರಶ್ನೆ. ಪ್ರತಿಯೊಂದು ಅಣೆಕಟ್ಟೆಯ ನಿರ್ವಹಣೆಗೆ ಪ್ರತ್ಯೇಕವಾದ ಮಂಡಳಿ ಇದೆ. ಈ ಮಂಡಳಿಯಲ್ಲಿ ನೀರಾವರಿ ಇಲಾಖೆಯ ಅಧಿಕಾರಿಗಳಲ್ಲದೆ ತಜ್ಞ ಇಂಜಿನಿಯರ್‌ಗಳೂ ಇದ್ದಾರೆ. ಅಣೆಕಟ್ಟೆಯ ಸುರಕ್ಷತೆಯನ್ನು ಕಾಲಕಾಲಕ್ಕೆ ಪರೀಕ್ಷಿಸಿ ವರದಿ ನೀಡಬೇಕಿರುವುದು ಇವರ ಕರ್ತವ್ಯ. ನಾನಾ ಜಲಾಶಯಗಳ 70ಕ್ಕೂ ಹೆಚ್ಚು ಕ್ರಸ್ಟ್ ಗೇಟ್‌ಗಳ ಬದಲಾವಣೆ/ದುರಸ್ತಿ ಅಗತ್ಯ ಎಂದು ಸರಕಾರವೇ ಈ ಹಿಂದೆ ಸದನದಲ್ಲಿ ಮಾಹಿತಿ ಹಂಚಿಕೊಂಡಿತ್ತು. ಈಗ ಅಗತ್ಯವಿರುವುದು ಅಣೆಕಟ್ಟೆಗಳ ದುರಸ್ತಿಗೆ ತುರ್ತು ಯೋಜನೆ ಮತ್ತು ಹಣಕಾಸಿನ ನೆರವು. ನೀರಾವರಿ ನಿಗಮದ ಮೂಲಗಳ ಪ್ರಕಾರ ಸರಕಾರದ ಅನುದಾನದ ಕೊರತೆಯಿಂದಲೇ ಹಲವು ಅಣೆಕಟ್ಟೆಗಳ ಸುರಕ್ಷತೆ ಅಪಾಯದಲ್ಲಿದೆ. ದಕ್ಷಿಣ ಕರ್ನಾಟಕದ ಜೀವನದಿ ಕಾವೇರಿಗೆ ಕನ್ನಂಬಾಡಿಯಲ್ಲಿ ಕಟ್ಟಲಾದ ಅಣೆಕಟ್ಟೆಯ ಸುರಕ್ಷತೆಯು ಬಗ್ಗೆಯೂ ಆಗಾಗ ಅನುಮಾನಗಳು ವ್ಯಕ್ತವಾಗುತ್ತಲೇ ಇದೆ. ಈ ಭಾಗದಲ್ಲಿ ಗಣಿಗಾರಿಕೆಗೆ ಅವಕಾಶ ನೀಡುವ ವಿಚಾರದಲ್ಲಿ ಟ್ರಯಲ್ ಬ್ಲಾಸ್ಟ್ ನಡೆಸಲು ರಾಜ್ಯ ಹೈಕೋರ್ಟ್ ಅನುಮತಿ ನೀಡಿದೆ. ಇದರ ನಡುವೆಯೇ ಸ್ವಯಂಚಾಲಿತ ಗೇಟ್‌ಗಳನ್ನು ಅಳವಡಿಸುವ ಕಾರ್ಯ ಮಂದಗತಿಯಲ್ಲಿ ಸಾಗಿದೆ. ಕಬಿನಿ ಜಲಾಶಯದಲ್ಲೂ ಅಲ್ಲಲ್ಲಿ ನೀರು ಸೋರಿಕೆಯಾಗುತ್ತಿದ್ದು ಇದರ ದುರಸ್ತಿಗಾಗಿ 92 ಕೋಟಿ ರೂ.ಗಳ ಅನುದಾನ ಕೋರಿ 2020-21ರಲ್ಲೇ ಕ್ರಿಯಾ ಯೋಜನೆ ಸಲ್ಲಿಸಲಾಗಿದೆ. ಆದರೆ ಇದುವರೆಗೆ ಹಣ ಬಿಡುಗಡೆಯಾಗಿಲ್ಲ. ಯಾದಗಿರಿ ಜಿಲ್ಲೆಯ ನಾರಾಯಪುರ ಬಸವಸಾಗರ ಜಲಾಶಯದ 30 ಕ್ರಸ್ಟ್‌ಗೇಟ್‌ಗಳನ್ನು ಪ್ರತೀವರ್ಷ ದುರಸ್ತಿ ಮಾಡಬೇಕಾಗಿದೆ. ಈ ಬಗ್ಗೆ ಕಾಯಂ ಪರಿಹಾರ ಆಗಿಲ್ಲ. ಶಿವಮೊಗ್ಗದ ಭದ್ರಾ ಜಲಾಶಯದ ಎಡದಂಡೆ ಕಾಲುವೆಯಲ್ಲಿ ಪ್ರತೀದಿನ 150 ಕ್ಯೂಸೆಕ್ ನೀರು ಸೋರಿಕೆಯಾಗುತ್ತಿದ್ದು , ನದಿ ಮಟ್ಟದ ಸ್ಲೈಸ್ ಗೇಟ್ ತಾತ್ಕಾಲಿಕ ರಿಪೇರಿಯಷ್ಟೇ ಕಂಡಿದೆ. ಇನ್ನು ತುಂಗಭದ್ರಾ ಅಣೆಕಟ್ಟೆಯಲ್ಲಿರುವ ಸುಮಾರು 30 ಅಡಿ ಹೂಳನ್ನು ತೆಗೆಯುವ ಕೆಲಸವೂ ನನೆಗುದಿಗೆ ಬಿದ್ದಿದೆ. ಸಮಾನಾಂತರ ಕಾಲುವೆ ನಿರ್ಮಿಸುವ ಪ್ರಸ್ತಾಪಗಳು ಇನ್ನೂ ಕಡತದಲ್ಲಿವೆ. ಸರಕಾರ ಈಗ ನಮ್ಮ ಅಣೆಕಟ್ಟೆಗಳ ಸುರಕ್ಷತೆಯತ್ತ ತುರ್ತು ಗಮನಹರಿಸಬೇಕಾಗಿದೆ.

ಸೊಂಪಾದಕೀಯ

ಬೈಗುಳವೋ ಬೌಗುಳವೋ?

'ಮಾತು ಮನೆ ಕೆಡಿಸಿತು, ತೂತು ಒಲೆ ಕೆಡಿಸಿತು' ಅನ್ನೋ ಮಾತು ಎಲ್ಲರಿಗೂ ಗೊತ್ತು. ಮಾತು ಅನ್ನೋದು ಅದೆಷ್ಟು ಮನೆ, ಮನಸ್ಸುಗಳನ್ನು ಕೆಡಿಸಿದ್ದರೂ ಜನ ಮಾತಾಡುವ ಮುನ್ನ ಎಚ್ಚರಿಕೆ ವಹಿಸೋ ಪ್ರಜ್ಞೆ ಇನ್ನೂ ನಮ್ಮ ಸಮಾಜದಲ್ಲಿ ಕಾಣುತ್ತಿಲ್ಲ. ಅದರಲ್ಲೂ ರಾಜಕೀಯ ವಲಯದಲ್ಲಿ ವಿವಿಧ ಪಕ್ಷಗಳ ನಾಯಕರ ಅರಚಾಟ, ಕೆಸರೆರಚಾಟ ನೋಡಿದರೆ ಮಾತಿನ ಮೇಲೇ ಜಿಗುಪ್ಸೆ ಬರೋದು ಖಂಡಿತ. ಇತ್ತೀಚೆಗಂತೂ ಈ ಬೆಳವಣಿಗೆ ತೀರಾ ಅಸಹ್ಯ ಮಟ್ಟಕ್ಕೆ ಹೋಗುತ್ತಿದೆ. ಇನ್ನೊಬ್ಬರ ಬಗ್ಗೆ ಮಾತಾಡುವಾಗ ಹೆಚ್ಚುಕಮ್ಮಿ ಮಾತಾಡಿದ್ರೆ ಅವರು ಮಾನನಷ್ಟ ಮೊಕದ್ದಮೆ ಹೂಡಬಹುದು ಅನ್ನೋ ಭಯ ಕೂಡಾ ಇತ್ತೀಚೆಗೆ ಇದ್ದಂತಿಲ್ಲ. ಯಾಕಂದ್ರೆ, ಇಲ್ಲಿ ಇನ್ನೊಬ್ಬರಿಂದ ಬೈಗುಳ ಕೇಳಿದವನು ಕೂಡಾ ಮತ್ತೊಬ್ಬರ ಮೇಲೆ ಮಾತುಗಳ ಬಾಣಪ್ರಯೋಗ ಮಾಡಿದವನೇ. ಹಾಗಾಗಿ ಅವನು ಕೇಸು ಹಾಕುವ ಮಟ್ಟಕ್ಕೆ ಹೋಗಲಾರ ಅನ್ನೋ ಭಂಡ ನಂಬಿಕೆ. ಆದರೆ ಸಾರ್ವಜನಿಕ ವೇದಿಕೆಗಳಲ್ಲಿ 'ಸೋ ಕಾಲ್ಡ್' ದೊಡ್ಡ ನಾಯಕರು ಇನ್ನೊಂದು ಪಕ್ಷದವರ ಬಗ್ಗೆ ತೀರಾ ಕೀಳು ಪದಗಳನ್ನು ಬಳಸುತ್ತಿರೋದು ಮಾತ್ರ ನಾಗರಿಕ ಸಮಾಜಕ್ಕೆ ಸವಾಲು ಹಾಕುವಂತಿದೆ. ಮಗ್ಗದಲ್ಲಿ ನೇಕಾರರು ಬಟ್ಟೆ ನೇಯುವುದು ಕಷ್ಟದ ಕೆಲಸ ಅಂತ ಎಲ್ಲರಿಗೂ ಗೊತ್ತು. ಆದರೆ ನಮ್ಮ ನೇತಾರರಿಗೆ ಮಾತ್ರ ಬೈಗುಳಗಳ ಮೂಲಕ ಕಗ್ಗವನ್ನೇ ಸೃಷ್ಟಿ ಮಾಡೋದು ಮಾತ್ರ ತೀರಾ ಸುಲಭ ಆಗಿಬಿಟ್ಟಿದೆ. ಒಂದು ಲೆಕ್ಕದಲ್ಲಿ ಇವರು ಸಭ್ಯತೆಯ ಎಲ್ಲೆ ಮೀರಿ ಮಾತಾಡೋದು ನೋಡಿದ್ರೆ, ಇನ್ನೊಬ್ಬರ ಬಗ್ಗೆ ಇವರು ಆಡೋ ಬೈಗುಳದ ಮಾತುಗಳು ನಿಜಕ್ಕೂ ಬೈಗುಳಗಳೋ ಇಲ್ಲಾ ಬೌಗುಳಗಳೋ ಅನ್ನೋ ಅನುಮಾನ ಮೂಡುತ್ತದೆ. ಹಾಗಂತ ಯಾವುದೋ ಪಕ್ಷದ ತಳಮಟ್ಟದ ಕಾರ್ಯಕರ್ತ ಈ ಮಾತುಗಳನ್ನು ಆಡುತ್ತಿಲ್ಲ. ಬದಲಾಗಿ ಶಾಸಕ, ರಾಜ್ಯ ಮಂತ್ರಿ, ಕೇಂದ್ರ ಮಂತ್ರಿ ಸ್ಥಾನದಲ್ಲಿರುವ ದೊಡ್ಡವರು ಅನ್ನಿಸಿಕೊಂಡವರೇ ಈ ರೀತಿ ಓಪನ್ ಆಗಿ ಸಾರ್ವಜನಿಕರ ಮುಂದೆ ತಮ್ಮ ನಾಲಿಗೆ ಹರಿಬಿಡುತ್ತಿರೋದು ನೋಡಿದ್ರೆ, ಮಾತು ಕೇವಲ ಅವರ ಮನೆಯನ್ನಷ್ಟೇ ಅಲ್ಲ, ರಾಜಕಾರಣಿಗಳ ಅಖಾಡಗಳಾದ ಮೇಲ್ಮನೆ, ಕೆಳಮನೆಗಳನ್ನೂ ಕೆಡಿಸುತ್ತದೆ ಅನ್ನಿಸಿದರೆ ತಪ್ಪಿಲ್ಲ.

ಸಂಪಾದಕರ ಸದ್ಯಶೋಧನೆ

ಬಿಕನಾಸಿ ಮತ್ತು ಲೋಫರ್

ಕೆಲವು ದಿನಗಳ ಹಿಂದೆ, 'ಬೇವರ್ಸಿ' ಪದದ ಬಗ್ಗೆ ಇಲ್ಲಿ ಚರ್ಚಿಸಿದ್ದೆ. 'ಕೋರಾ' ವೆಬ್‌ಸೈಟಿನಲ್ಲಿ ಯಾರೋ ಕೇಳಿದ ಪ್ರಶ್ನೆಗೆ ಭೌತಶಾಸ್ತ್ರ ಉಪನ್ಯಾಸಕರಾದ ಗುರುಬಸವೇಶ್ವರಸ್ವಾಮಿ ಜಿ.ಎಂ. ಎನ್ನುವವರು ಉತ್ತರಿಸಿದ್ದರು. ಬೇವರ್ಸಿ ಪದದ ಕುರಿತು ಅನೇಕ ಮಂದಿ ತಮ್ಮ ಸಹಮತವನ್ನು ವ್ಯಕ್ತಪಡಿಸಿ ಬರೆದಿದ್ದಾರೆ. ಬೇವರ್ಸಿ ಪದದ ಹಾಗೆ ಅಷ್ಟೇ ಪ್ರಚಲಿತದಲ್ಲಿರುವ ಇನ್ನೊಂದು ಬೈಗುಳ ಅಂದ್ರೆ ಬಿಕನಾಸಿ. ಅನೇಕ ಮಂದಿಗೆ ಈ ಪದದ ಸರಿಯಾದ ಅರ್ಥ ಗೊತ್ತಿಲ್ಲ. ಆದರೂ 'ಬಿಕನಾಸಿ' ಎಂದು ಬೈಯುವುದನ್ನು ಕೇಳುತ್ತೇವೆ. ಯಾರು ಹಾಗೆ ಬೈದರೋ, ಅದರ ಅರ್ಥವೇನು ಎಂದು ಅವರನ್ನೇ ಕೇಳಿದರೆ, ಗೊತ್ತಿಲ್ಲ ಎಂದು ಹೇಳುತ್ತಾರೆ. ಗುರುಬಸವೇಶ್ವರಸ್ವಾಮಿಯವರೇ 'ಬಿಕನಾಸಿ' ಪದದ ಅರ್ಥದ ಬಗ್ಗೆ 'ಕೋರಾ'ದಲ್ಲಿ ಹೀಗೆ ಹೇಳುತ್ತಾರೆ- ಕನ್ನಡದಲ್ಲಿ ನಾಸಿ ಎಂಬ ಪ್ರತ್ಯಯದಿಂದ ಕೊನೆಗೊಳ್ಳುವ ಕೆಲವು ಬೈಗುಳಗಳಿವೆ. ಉದಾಹರಣೆಗೆ, ಚಂಡಿನಾಸಿ. ಅದರ ಅರ್ಥ ನೀಚ ಮನುಷ್ಯ, ವಿಧ್ವಂಸಕ ಪ್ರವೃತ್ತಿಯುಳ್ಳವ ಎಂದರ್ಥ. ಇನ್ನೊಂದು, ಸುಡನಾಸಿ. ಅದರ ಅರ್ಥ- ನಾಶಮಾಡುವ ಹೆಣ್ಣು, ಕಿಚ್ಚು ಹಚ್ಚುವವಳು ಎಂದರ್ಥ. ಇಲ್ಲಿ ಬಳಸಲಾಗಿರುವ ನಾಸಿ ಎಂಬುದು ಸಂಸ್ಕೃತದ ನಾಶಿ/ನಾಶಿನಿ (ಹಾಳು ಮಾಡುವವ/ವಳು) ಪದದ ತದ್ಭವವೆಂದು ಕಾಣುತ್ತದೆ. ಆದರೆ ಇದೇ ತರ್ಕವನ್ನು ಬಿಕನಾಸಿಗೆ ಹೇಳಲು ಕೊಂಚ ಯೋಚಿಸಬೇಕಿದೆ. ಮೊದಲು ಈ ಪದದ ಅರ್ಥ ತಿಳಿಯುವ. ಬಿಕನಾಸಿ ಅಂದರೆ ಭಿಕ್ಷೆ ಎತ್ತುವವ, ಅಲ್ಪ, ದರಿದ್ರ, ಅಯೋಗ್ಯ, ದುರಾಸೆಯ ಹೆಣ್ಣು ಎಂದರ್ಥ. ಇಲ್ಲಿ ಬಿಕ/ಬಿಕ್ಕೆ ಎಂಬುದು ಭಿಕ್ಷಾ ಎಂಬ ಸಂಸ್ಕೃತ ಪದದ ತದ್ಭವ. ಇಲ್ಲಿ ಸಹ ಬಳಸಿರುವ ನಾಸಿ ಪ್ರತ್ಯಯವು ನಾಶಿ ಎಂದೇ ಸೂಚನೆಯನ್ನು ಹೊಂದಿದೆ ಎನ್ನುವುದಾದರೆ, ಭಿಕ್ಷಾನಾಶಿ ಅಂದರೆ ಭಿಕ್ಷೆಹಾಳು ಮಾಡುವವ ಎಂಬ ಅರ್ಥ ಮೂಡುತ್ತದೆ. ಅದು ಅಷ್ಟು ಸಮರ್ಪಕವಾದ ಬೈಗುಳವಲ್ಲ. ಹೀಗಾಗಿ, ಇಲ್ಲಿ ಬಂದಿರುವ ನಾಸಿಯು ಬಹುಶಃ ನಾಸ್ತಿ ಎಂಬುದರ ತದ್ಭವವಿರಬೇಕು. ಭಿಕ್ಷಾ-ನಾಸ್ತಿ- ಭಿಕ್ಷೆಯೂ ಸಿಗದವ, ಭಿಕ್ಷೆಯೂ ದಕ್ಕದವ, ಭಿಕ್ಷೆಗೂ ಅಯೋಗ್ಯನಾದವ ಎಂಬ ಅರ್ಥವನ್ನು ಹೊಂದಬಹುದು. ಹೀಗಾಗಿ, ಬಿಕನಾಸಿ ಎಂಬುದು ಪ್ರಾಯಶಃ ಭಿಕ್ಷಾನಾಸ್ತಿ ಎಂಬುದರ ಆಡುಮಾತಿನ ಪ್ರಯೋಗವಿರಬೇಕೆಂದು ತೋರುತ್ತದೆ. ಭಿಕ್ಷೆ ಎಂಬುದು ಎಂಥ ಪತಿತನಿಗೂ, ದಿಕ್ಕಿಲ್ಲದವನಿಗೂ, ಅಸಹಾಯಕನಿಗೂ ಸಮಾಜ ತೋರಿಸುವ ಅನುಕಂಪದ ಪ್ರತೀಕ. ಇಂಥ ಕನಿಷ್ಠ ಮಾನ್ಯತೆಗೂ ಅರ್ಹನಾಗದಷ್ಟು ನೀಚವ್ಯಕ್ತಿಯು ಬಿಕನಾಸಿ ಎನಿಸಿಕೊಳ್ಳುತ್ತಾನೆ/ತ್ತಾಳೆ ಅಥವಾ ನಾಸಿ ಎಂಬ ಪ್ರತ್ಯಯವು ಸಾಮಾನ್ಯವಾಗಿ ಅಲ್ಪವ್ಯಕ್ತಿಗಳಿಗೆ, ಅಯೋಗ್ಯ ವ್ಯಕ್ತಿಗಳಿಗೆ ಬಳಸಲಾಗುವ ಕಾರಣ, ಜನರು ನಾಸಿ ಪದದ ಅರ್ಥವನ್ನು ಪರ್ಯಾಲೋಚನೆ ಮಾಡದೇ, ಆಡುಮಾತಿನಲ್ಲಿ ಭಿಕಾರಿಗೆ ಸಹ ರೂಢಿಯಿಂದ ಕರೆದಿರಬಹುದು, ಭಿಕ್ಷೆ ಎತ್ತುವ ಅಯೋಗ್ಯ ಎಂದು. ಪ್ರಸ್ತುತದಲ್ಲಿ ಬಿಕನಾಸಿ ಮತ್ತು ಬೇವರ್ಸಿ ಎರಡೂ ಹೆಚ್ಚುಕಮ್ಮಿ ಒಂದೇ ಅರ್ಥದಲ್ಲಿ, ಅತ್ಯಂತ ಸಾಮಾನ್ಯ ಬೈಗುಳಗಳಾಗಿ ಬಳಕೆಯಾಗುತ್ತಿವೆ. ಬೇವರ್ಸಿ ಮತ್ತು ಬಿಕನಾಸಿ ಎಂಬ ಪದದ ಹಾಗೆ ಬಳಕೆಯಾಗುವ ಮತ್ತೊಂದು ಪದವಿದೆ. ಅದು ಲೋಫರ್. ಅನೇಕರು ಇದೊಂದು ಕನ್ನಡ ಬೈಗುಳ ಎಂದೇ ಭಾವಿಸಿದ್ದಾರೆ. ಆದರೆ ಇದು ಇಂಗ್ಲಿಷ್ ಪದ. ಆದರೆ ಈ ಪದದ ಜತೆಗೆ ಕನ್ನಡ ಬೈಗುಳ (ಉದಾಹರಣೆಗೆ, ಲೋಫರ್ ನನ್ಮಗ, ಲೋಫರ್ ಸೂಳೆ ಮಗ..)ವನ್ನೂ ಸೇರಿಸುವುದರಿಂದ, ಇದೂ ಕೂಡ ಕನ್ನಡ ಪದವಿದ್ದಿರಬಹುದು ಎಂದು ಭಾವಿಸಿರುವ ಸಾಧ್ಯತೆ ಇದೆ. loafer ಅಂದರೆ ಸೋಮಾರಿಯ ಹಾಗೆ ನಿರರ್ಥಕವಾಗಿ ಸಮಯವನ್ನು ಹಾಳು ಮಾಡುವವ ಎಂದರ್ಥ. ಉದ್ದೇಶವಿಲ್ಲದೇ ಅಲೆದಾಡುವವನಿಗೂ ಲೋಫರ್ ಎಂದು ಕರೆಯುವುದುಂಟು. ಇಂಗ್ಲಿಷ್ ನಿಘಂಟಿನಲ್ಲಿ, loafer ಪದವನ್ನು ಹೀಗೆ ವಿವರಿಸಿದ್ದಾರೆ - People will call you a loafer if you spend most of your time in a reclining position, take frequent breaks for snacks and naps, or obviously avoid anything resembling hard work.

ಪ್ರಾಚೀನ ಕಾಲದಲ್ಲಿದ್ದ ಗುಹಾ ಆಸ್ಪತ್ರೆಗಳು

ಹಿಂದಿರುಗಿ ನೋಡಿದಾಗ

ಡಾ.ನಾ.ಸೋಮೇಶ್ವರ

vveditoped@gmail.com

ಕ್ರಿ.ಪೂ. 60,000-ಕ್ರಿ.ಪೂ. 10,000 ವರ್ಷಗಳ ಹಿಂದಿನ ಅವಧಿಯನ್ನು ಇತಿಹಾಸಪೂರ್ವ ಕಾಲ ಎಂದು ಕರೆಯಬಹುದು. ಈ ಅವಧಿಯಲ್ಲಿ ಮನುಷ್ಯನ ಆಯಸ್ಸು ಹೆಚ್ಚೆಂದರೆ 25-40 ವರ್ಷಗಳು ಮಾತ್ರವಿತ್ತು. ಈ ಕಾಲಘಟ್ಟದ ನಮ್ಮ ಪೂರ್ವಜರು ಪ್ರಾಕೃತಿಕ ವಿಕೋಪಗಳಾದ ಚಳಿ, ಮಳೆ, ಗಾಳಿ, ಬೆಂಕಿ, ಭೂಕಂಪ, ಪ್ರವಾಹಗಳಿಂದ, ತಮಗಿಂತಲೂ ಬಲಶಾಲಿಯಾದ ಹಿಂಸ್ರ ಪಶುಗಳಿಂದ, ಮಾನವ ಗುಂಪು-ಗುಂಪುಗಳ ನಡುವೆ ನಡೆಯುತ್ತಿದ್ದ ಘರ್ಷಣೆಗಳಿಂದ ಹಾಗೂ ನಾನಾ ರೋಗ-ರುಜಿನಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಬೇಕಾಗಿತ್ತು. ಈ ಅಸ್ತಿತ್ವದ ಹೋರಾಟದಲ್ಲಿ ಸಾವು ನೋವುಗಳಾಗುತ್ತಿದ್ದವು. ಅಪಘಾತ ಹಾಗೂ ಅನಾರೋಗ್ಯಗಳಿಗೆ ಅಗತ್ಯ ವೈದ್ಯಕೀಯ ಚಿಕಿತ್ಸಾ ತಂತ್ರಗಳನ್ನು ಅವರು ಒಂದೊಂದಾಗಿ ಕಲಿತರು. ಚಿಕಿತ್ಸೆಯ ನಂತರ ಅವರಿಗೆ ವಿಶ್ರಾಂತಿಯನ್ನು ತೆಗೆದುಕೊಳ್ಳಲು ಅನುವು ಮಾಡಿಕೊಟ್ಟರು. ತಾವು ಗಳಿಸಿದ್ದ ತಿಳಿವನ್ನು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ವರ್ಗಾಯಿಸಿದರು. ಬಹುಶಃ ಹೀಗೆ ಆದಿ ವೈದ್ಯಕೀಯ ಹಾಗೂ ಆಸ್ಪತ್ರೆಗಳು ಹುಟ್ಟಿಕೊಂಡವು. ಈ ಆದಿವೈದ್ಯಕೀಯ ಜತೆ ಜತೆಯಲ್ಲಿಯೇ ಆಸ್ಪತ್ರೆಗಳೆನ್ನುವ ಪರಿಕಲ್ಪನೆಯು ಬೆಳೆದು ಇಂದಿನ ಮಟ್ಟವನ್ನು ತಲುಪಿರುವ ಇತಿಹಾಸವು, ಕುತೂಹಲಕರವೂ, ಬೋಧಪ್ರದವೂ ಹಾಗೂ ರೋಚಕವೂ ಆಗಿದೆ.

ಪ್ರಾಚೀನ ಜಗತ್ತಿನಲ್ಲಿ ಆಸ್ಪತ್ರೆಗಳು ಬೆಳೆದು ಬಂದ ದಾರಿ ಎನ್ನುವ ವಿಚಾರವನ್ನು ಕುರಿತು ನಾವು ಚರ್ಚಿಸುವಾಗ ಒಂದು ಕಾಲಘಟ್ಟವನ್ನು ಹಾಕಿಕೊಳ್ಳಬೇಕಾಗುತ್ತದೆ. ಕ್ರಿ.ಪೂ. 6000 ವರ್ಷಗಳ ಹಿಂದಿನಿಂದ ಹಿಡಿದು ಕ್ರಿ.ಶ. 650ರವರೆಗೆ ಕಾಲವನ್ನು ನಾವು ಪ್ರಾಚೀನ ಜಗತ್ತು ಎಂದು ಪರಿಗಣಿಸಬಹುದು. ಈ ಅವಧಿಯಲ್ಲಿ ಆಸ್ಪತ್ರೆಗಳು ಬೆಳೆದು ಬಂದ ಪ್ರಮುಖ ಮೈಲಿಗಲ್ಲುಗಳನ್ನು ಗುರುತಿಸಬಹುದು.

ಪ್ರಾಚೀನ ಗುಹಾ ಆಸ್ಪತ್ರೆಗಳು

ಯಾವುದೇ ಒಂದು ಇತಿಹಾಸವನ್ನು ರಚಿಸಬೇಕಾದರೆ, ಅದಕ್ಕೆ ಅಗತ್ಯ ಆಕರಗಳು ಬೇಕಾಗುತ್ತವೆ. ಪಳೆಯುಳಿಕೆಗಳು, ಮೂಳೆಗಳು, ಗುಹಾಚಿತ್ರಗಳು, ಆಯುಧಗಳು, ದೈನಂದಿನ ಬಳಕೆಯ ವಸ್ತುಗಳು ಇತ್ಯಾದಿ. ನಮ್ಮ ಪೂರ್ವಜರ ವೈದ್ಯಕೀಯ ಇತಿಹಾಸ ಹಾಗೂ ಆಸ್ಪತ್ರೆಗಳ ವ್ಯವಸ್ಥೆಯ ಬಗ್ಗೆ ಹುಡುಕಹೊರಟರೆ ನಮಗೆ ಅತ್ಯಂತ ಕನಿಷ್ಠ ಪ್ರಮಾಣದ ಆಕರಗಳು ದೊರೆಯುತ್ತವೆ. ಹಾಗಾಗಿ ಲಭ್ಯ ಆಕರಗಳನ್ನು ಸಂಗ್ರಹಿಸಿ, ಅವುಗಳನ್ನು ಕ್ರಮಬದ್ಧವಾಗಿ ಜೋಡಿಸಿ, ಚುಕ್ಕಿ ರಂಗೋಲಿಯನ್ನು ಬಿಡಿಸುವಂತೆ, ಲಭ್ಯ ಅಂಶಗಳನ್ನು ಜೋಡಿಸಿ ಒಂದು ಸಮಗ್ರ ಚಿತ್ರವನ್ನು ನೀಡುವ ಪ್ರಯತ್ನವನ್ನು ಮಾಡಬೇಕಾಗುತ್ತದೆ.

ಮಾನವ ಜನಾಂಗವು ಆಫ್ರಿಕಾದಲ್ಲಿ ಹುಟ್ಟಿ ಜಗತ್ತಿನ ಎಲ್ಲೆಡೆ ಹರಡಿತು ಎನ್ನುವ ವಾದದ ಜತೆಯಲ್ಲಿ, ಜಗತ್ತಿನ ಹಲವು ಭೌಗೋಳಿಕ ಪ್ರದೇಶಗಳಲ್ಲಿ ಒಮ್ಮೆಲೇ ಮಾನವ ಜನಾಂಗಗಳು ಅಸ್ತಿತ್ವದಲ್ಲಿದ್ದವು ಎನ್ನುವ ವಿಚಾರವು ಪ್ರಚಲಿತದಲ್ಲಿದೆ. ಆದರೆ ವೈದ್ಯಕೀಯ ವಿಚಾರಕ್ಕೆ ಬಂದಾಗ, ಜಗತ್ತಿನ ಹಲವು ಭೌಗೋಳಿಕ ಪ್ರದೇಶಗಳಲ್ಲಿ ತಮ್ಮದೇ ಆದ ಸಂಸ್ಕೃತಿಯನ್ನು ಕಟ್ಟಿಕೊಂಡ ನಮ್ಮ ಪೂರ್ವಜರು, ತಮ್ಮದೇ ಆದ ಚಿಕಿತ್ಸಾ ಪದ್ಧತಿಗಳನ್ನು ರೂಪಿಸಿಕೊಂಡಿರುವುದನ್ನು ನಾವು ಗಮನಿಸಿದ್ದೇವೆ. ಮನುಷ್ಯರ ಮನಸ್ಸು ಬಹುಶಃ ಏಕರೀತಿಯಲ್ಲಿ ವಿಕಾಸವಾಗುತ್ತದೆ ಎನ್ನುವುದಕ್ಕೆ ಪೂರಕವಾಗಿ ಈ ವಿಭಿನ್ನ ಚಿಕಿತ್ಸಾ ಪದ್ಧತಿಗಳಲ್ಲಿ ಕೆಲವು ಸಾಮ್ಯಗಳನ್ನು ಕಾಣಬಹುದಾಗಿದೆ.

ಆಸ್ಪತ್ರೆ

ಮೊದಲು ಆಸ್ಪತ್ರೆ ಎಂಬ ಶಬ್ದದ ಅರ್ಥವನ್ನು ತಿಳಿಯೋಣ. ನಮ್ಮ ಕನ್ನಡದ ಆಸ್ಪತ್ರೆ ಮತ್ತು ಹಿಂದಿ ಹಾಗೂ ಉರ್ದು ಭಾಷೆಯ ಅಸ್ಪತಾಲ್ ಎಂಬ ಶಬ್ದದ ಮೂಲ ಇಂಗ್ಲಿಷಿನ ಹಾಸ್ಪಿಟಲ್ ಎಂಬ ಶಬ್ದ. ಇದಕ್ಕೆ ಮೂಲ ಲ್ಯಾಟಿನ್ ಭಾಷೆಯ ಹಾಸ್ಪೆಸ್ ಎಂಬ ಪದ. ಈ ಮೂಲ ಹಾಸ್ಪೆಸ್ ಶಬ್ದವು ಹಾಸ್ಪಿಟಾಲಿಸ್ ಆಗಿ ಹಾಸ್ಪಿಟೇಲ್ ಆಗಿ ಕೊನೆಗೆ ಹಾಸ್ಪಿಟಲ್ ಎಂಬ ರೂಪವನ್ನು ತಳೆಯಿತು. ಲ್ಯಾಟಿನ್ ಭಾಷೆಯಲ್ಲಿ ಹಾಸ್ಪೆಸ್ ಎಂಬ ಶಬ್ದಕ್ಕೆ ಅಪರಿಚಿತ, ವಿದೇಶೀಯ ಅಥವಾ ಅತಿಥಿ ಎಂಬ ಮೂಲ ಅರ್ಥವಿದೆ. ಈ ಹಿನ್ನೆಲೆಯಲ್ಲಿಯೇ ಹಾಸ್ಪೆಸ್ ಶಬ್ದದಿಂದ ಹಾಸ್ಟೆಲ್, ಹೋಟೆಲ್ ಹಾಗೂ ಹಾಸ್ಪಿಟಾಲಿಟಿ (ಅತಿಥಿ ಸತ್ಕಾರ) ಎನ್ನುವ ಶಬ್ದಗಳು ರೂಪುಗೊಂಡವು. ಹಾಗಾಗಿ ಆಸ್ಪತ್ರೆ ಎಂದರೆ ಅಪರಿಚಿತ ರೋಗಿಯೊಬ್ಬನು ಅತಿಥಿ ರೂಪದಲ್ಲಿ ಆಗಮಿಸಿ, ದಾಖಲಾಗಿ, ವೈದ್ಯ ಹಾಗೂ ವೈದ್ಯಕೀಯ ಸಿಬ್ಬಂದಿಯ ಚಿಕಿತ್ಸೆ, ಉಪಚಾರ, ಸತ್ಕಾರಗಳಿಂದ ತನ್ನ ಆರೋಗ್ಯವನ್ನು ಮರಳಿ ಪಡೆಯುವ ಸ್ಥಳ ಎಂಬ ಅರ್ಥದಲ್ಲಿ ಆಸ್ಪತ್ರೆ ಎನ್ನುವ ಶಬ್ದವು ಬಳಕೆಯಲ್ಲಿ ಬಂದಿದೆ ಎನ್ನಬಹುದು.

ನಮ್ಮನ್ನು ನಾವು ಬುದ್ಧಿವಂತ ಮಾನವ (ಹೋಮೋ ಸೆಪಿಯನ್ಸ್) ಎಂದು ಕರೆದುಕೊಂಡಿದ್ದೇವೆ. ಈ ಬುದ್ಧಿವಂತಿಕೆಯ ಫಲವಾಗಿ ನಮ್ಮಲ್ಲಿ ಸ್ವ-ಎಚ್ಚರವು (ಸೆಲ್ಫ್-ಅವೇರ್ನೆಸ್) ಜಾಗೃತವಾಗಿದೆ. ಈ ಪ್ರಕೃತಿಯಲ್ಲಿ ನಮ್ಮ ಅಸ್ತಿತ್ವ, ನಮ್ಮ ಸ್ಥಾನ ಹಾಗೂ ನಮ್ಮ ಸುತ್ತಮುತ್ತಲಿನ ಪರಿಸರದೊಡನೆ ನಾವು ನಡೆಸುವ ಕೊಡು-ಕೊಳ್ಳುವ ವ್ಯಾಪಾರಗಳ ಅರಿವು ನಮಗಾಗಿದೆ. ನಾವು ಮೂಲತಃ ಸಂಘಜೀವಿಗಳಾಗಿರುವ ಕಾರಣ, ನಮ್ಮ ನಮ್ಮ ವೈಯುಕ್ತಿಕ ಯೋಗಕ್ಷೇಮದ ಬಗ್ಗೆ ಹೇಗೆ ಕಾಳಜಿ ವಹಿಸುತ್ತೇವೆಯೋ, ಹಾಗೆಯೇ ನಮ್ಮವರ ಯೋಗಕ್ಷೇಮದ ಬಗ್ಗೆಯೂ ಕಾಳಜಿ ವಹಿಸುತ್ತೇವೆ. ಅವರಿಗೆ ಯಾವುದೇ ರೀತಿಯ ತೊಂದರೆಗಳಾದಾಗ, ಅವರ ನೆರವಿಗೆ ಧಾವಿಸುತ್ತೇವೆ. ನಮ್ಮ ಈ ಉದಾತ್ತ ಭಾವನೆಯು ವೈದ್ಯಕೀಯ ವಿಜ್ಞಾನ ಹಾಗೂ ಆಸ್ಪತ್ರೆಗಳ ಸೇವೆಯು ಆರಂಭವಾಗಲು ಮುಖ್ಯವಾಗಿ ಕಾರಣವಾಗಿದೆ ಎನ್ನಬಹುದು.

ಅಭಿಚಾರಿಗಳು

ಇತಿಹಾಸಪೂರ್ವ ಕಾಲದಲ್ಲಿ ಮನೆಯ ಪರಿಕಲ್ಪನೆಯೇ ಇರದಿದ್ದಾಗ ನಮ್ಮ ಪೂರ್ವಜರು ಗುಹಾವಾಸಿಗಳಾಗಿದ್ದರು. ಗುಹೆಯಲ್ಲಿ ವಾಸ ಮಾಡುವುದರಿಂದ ಬಿಸಿಲು, ಮಳೆ, ಚಳಿ, ಗಾಳಿಗಳಿಂದ ರಕ್ಷಣೆ ದೊರೆಯುವುದರ ಜತೆಯಲ್ಲಿ ಕಾಡು ಪ್ರಾಣಿಗಳಿಂದ ರಕ್ಷಣೆ ದೊರೆಯುತ್ತಿತ್ತು. ಹಾಗೆಯೇ ಗುಹೆಯ ಬಾಗಿಲಲ್ಲಿ ಬೆಂಕಿಯನ್ನು ಹಾಕಿದರೆ, ಕಾಡುಪ್ರಾಣಿಗಳು ದೂರ ಉಳಿಯುತ್ತಿದ್ದವು. ನಮ್ಮ ಪೂರ್ವಜರು ನೆಮ್ಮದಿಯಿಂದ ನಿದ್ರಿಸುತ್ತಿದ್ದರು. ಬೆಂಕಿಯ ನಿಯಂತ್ರಣವು ಸುಲಭವಾದಾಗ ಗುಹೆಯಲ್ಲಿಯೇ ಒಲೆಯನ್ನು ಹೂಡಿದರು. ಅಲ್ಲಿಯೇ ಅಡುಗೆಯನ್ನು ಮಾಡಿದರು. ಅಲ್ಲಿಯೇ ಆಹಾರ ಪದಾರ್ಥಗಳನ್ನು ಸಂಗ್ರಹಿಸಿದರು. ಹಾಗಾಗಿ ಗಾಯಾಳುಗಳಿಗೆ ವಿಶ್ರಾಂತಿಯನ್ನು ನೀಡಲು ಗುಹೆಗಳು ಸೂಕ್ತವೆನಿಸಿದವು. ಅವರು ವಾಸ ಮಾಡುತ್ತಿದ್ದ ಗುಹೆಗಳೇ ಪ್ರಾಥಮಿಕ ಆಸ್ಪತ್ರೆಗಳಾದವು.

ನಮ್ಮ ಪೂರ್ವಜರಲ್ಲಿ ಕೆಲವರು ಈ ಆದಿವೈದ್ಯಕೀಯದ ಬಗ್ಗೆ ಕುತೂಹಲವನ್ನು ತಳೆದು, ಅವುಗಳನ್ನು ಕರಗತ ಮಾಡಿಕೊಂಡರು. ಅವರೇ ಆದಿವೈದ್ಯರು. ಇವರನ್ನು ಅಭಿಚಾರರು (ಶಮನ್ಸ್) ಎಂದು ಕರೆಯುತ್ತಿದ್ದರು. ಮಾನವ ಜನಾಂಗದಲ್ಲಿ ಅಭಿಚಾರದ ಬೀಜವು ಪ್ರಾಚೀನ ಶಿಲಾಯುಗದಲ್ಲಿಯೇ ಆರಂಭವಾಯಿತು ಎನ್ನುವ ವಾದವಿದೆ. ಅಭಿಚಾರವನ್ನು ನಡೆಸುತ್ತಿದ್ದ ಅಭಿಚಾರಿಗಳು ಕ್ರಿ.ಪೂ. 30,000 ವರ್ಷಗಳ ಹಿಂದೆ ಅಸ್ತಿತ್ವದಲ್ಲಿದ್ದರು ಎನ್ನುವುದಕ್ಕೆ ನಿಖರ ಪುರಾವೆಯು ಜೆಕ್ ದೇಶದಲ್ಲಿ ದೊರೆತಿದೆ. ಸಂಸ್ಕೃತ ವಿದ್ವಾಂಸ ಹಾಗೂ ಪುರಾಣಗಳ ತಜ್ಞ ಮೈಕೇಲ್ ವಿಟ್ಜಲ್ ಅನ್ವಯ, ಎಲ್ಲ ಅಭಿಚಾರ ಸ್ವರೂಪಗಳು ಗೊಂಡ್ವಾನ (ಕ್ರಿ.ಪೂ. 65,000) ಹಾಗೂ ಲಾರೇಶಿಯ (ಕ್ರಿ.ಪೂ. 40,000) ಖಂಡಗಳಲ್ಲಿ ವಾಸಿಸುತ್ತಿದ್ದ ಜನರಲ್ಲಿ ಹುಟ್ಟಿದವಂತೆ. ನವಶಿಲಾಯುಗಕ್ಕೆ ಸೇರಿದ, ಅಂದರೆ ಕ್ರಿ.ಪೂ. 12,000 ವರ್ಷಗಳಷ್ಟು ಹಿಂದಿನ ಸಮಾಧಿಯೊಂದು ಇಸ್ರೇಲಿನ ಗೆಲಿಲಿಯಲ್ಲಿ ದೊರೆತಿದೆ. ಇದರಲ್ಲಿ ಓರ್ವ ಹಿರಿಯ ಮಾಟಗಾತಿಯ ಅಸ್ಥಿಪಂಜರವಿದೆ. ಈಕೆಯನ್ನು ಹತ್ತು ಬೃಹತ್ ಶಿಲಾಫಲಕಗಳ ಕೆಳಗೆ ಹೂಳಲಾಗಿದೆ. ಜತೆಗೆ 50 ಆಮೆಯ ಚಿಪ್ಪುಗಳು, ಮನುಷ್ಯನ ಪಾದಮೂಳೆ, ಹಸುವಿನ ಬಾಲ, ಹದ್ದಿನ ರೆಕ್ಕೆ ಮುಂತಾದ ಅಭಿಚಾರ ವಸ್ತುಗಳೂ ದೊರೆತಿವೆ. ಕ್ರಿ.ಪೂ. 15,000-ಕ್ರಿ.ಪೂ. 11,500 ವರ್ಷಗಳ ನಡುವೆ ಅಸ್ತಿತ್ವದಲ್ಲಿದ್ದ ನಚೂಫಿಯನ್ ಸಂಸ್ಕೃತಿಗೆ ಈ ಸಮಾಧಿಗಳು ಸೇರಿವೆ. ಈ ಅಭಿಚಾರಿಗಳು ವಾಸ ಮಾಡುವ ಗುಹೆಯೇ ಮೊದಲ ಸಾರ್ವಜನಿಕ ಆಸ್ಪತ್ರೆ ಎನಿಸಿರಬೇಕು. ಕಾಡುಪ್ರಾಣಿಗಳ ದಾಳಿಗೆ ಒಳಗಾದವರನ್ನು, ಮರದಿಂದ ಕೆಳಗೆ ಬಿದ್ದು ಗಾಯಗೊಂಡವರನ್ನು, ಯುದ್ಧದಲ್ಲಿ ಹೋರಾಡಿ ತಲೆ ಒಡೆಸಿಕೊಂಡವರನ್ನು ಈ ಸಾರ್ವಜನಿಕ ಆಸ್ಪತ್ರೆಗೆ ತರುತ್ತಿದ್ದರು. ಅಲ್ಲಿ ಆದಿವೈದ್ಯರು ಚಿಕಿತ್ಸೆಯನ್ನು ಕೊಡುತ್ತಿದ್ದರು. ಇವರಿಂದ ಚಿಕಿತ್ಸೆಯನ್ನು ಪಡೆಯುತ್ತಿದ್ದ ಎಲ್ಲರೂ ಬದುಕುಳಿಯುತ್ತಿದ್ದರು ಎಂದೇನೂ ಭಾವಿಸಬೇಕಾಗಿಲ್ಲ, ಆದರೆ ಈ ಅನಾದಿ ಚಿಕಿತ್ಸೆಯನ್ನು ಪಡೆದ ನಂತರವೂ ಸಾಕಷ್ಟು ಜನರು ಬದುಕುತ್ತಿದ್ದರು ಎನ್ನುವುದಕ್ಕೆ ನಮಗೆ ಪುರಾವೆಯು ದೊರೆತಿದೆ.

ಗುಹಾಚಿತ್ರಗಳಲ್ಲಿ ಅಭಿಚಾರಿಗಳು

ಕಪಾಲರಂಧ್ರನ

ಗುಹಾ ಆಸ್ಪತ್ರೆಗಳಲ್ಲಿ ನಮ್ಮ ಪೂರ್ವಜರು ನಡೆಸುತ್ತಿದ್ದ ಪ್ರಮುಖ ಶಸ್ತ್ರಚಿಕಿತ್ಸೆಯಲ್ಲಿ ಕಪಾಲರಂಧ್ರನವು ಮುಖ್ಯವಾದದ್ದು. ಯುರೋಪ್, ಏಷ್ಯಾ, ನ್ಯೂಜಿಲೆಂಡ್, ಉತ್ತರ ಅಮೆರಿಕಗಳಲ್ಲಿ ವಾಸವಾಗಿದ್ದ ನಮ್ಮ ಪೂರ್ವಜರು ಕಪಾಲ ರಂಧ್ರನವನ್ನು ಪರಿಣಾಮಕಾರಿಯಾಗಿ ನಡೆಸುತ್ತಿದ್ದರು ಎನ್ನುವುದಕ್ಕೆ ಪುರಾವೆಯು ದೊರೆತಿದೆ. ಕಪಾಲರಂಧ್ರನ (ಟ್ರೆಪಾನಿಂಗ್, ಟ್ರೆಫೈನೇಷನ್, ಟ್ರಿಫೈನಿಂಗ್, ಬರ್ ಹೋಲ್) ಎನ್ನುವುದು, ಹೆಸರೇ ಸೂಚಿಸುವ ಹಾಗೆ ಮನುಷ್ಯನ ಕಪಾಲದಲ್ಲಿ ರಂಧ್ರವನ್ನು ಕೊರೆಯುವ ಶಸ್ತ್ರಚಿಕಿತ್ಸೆ. ಯಾವುದೇ ರೀತಿಯ ಅಂಗರಚನ ಇಲ್ಲವೇ ಅಂಗಕ್ರಿಯ ವಿಜ್ಞಾನದ ಬಗ್ಗೆ ಮಾಹಿತಿಯಿಲ್ಲದ ಶಿಲಾಯುಗದಲ್ಲಿ ಕಪಾಲವನ್ನು ಯಶಸ್ವಿಯಾಗಿ ಕೊರೆದು ರಂಧ್ರ ಮಾಡುತ್ತಿದ್ದರು, ಹಾಗೆ ರಂಧ್ರ ಮಾಡಿಸಿಕೊಂಡವರು ಮತ್ತೆ ಬದುಕುತ್ತಿದ್ದರು. ಇದು ಕುತೂಹಲಕರವಾಗಿದೆ ಹಾಗೂ ಆಶ್ಚರ್ಯಕರವಾಗಿದೆ.

ಕಪಾಲರಂಧ್ರನವನ್ನು ಹೆಚ್ಚಾಗಿ ಪೆರು ಮತ್ತು ಬೊಲೀವಿಯಗಳಲ್ಲಿ ಮಾಡುತ್ತಿದ್ದರು ಎಂದು ಅಲ್ಲಿ ನಡೆಸಿದ ಉತ್ಖನನಗಳಿಂದ ತಿಳಿದುಬಂದಿದೆ. ಯುರೋಪ್, ಏಷ್ಯಾ, ನ್ಯೂಜಿಲೆಂಡ್, ಉತ್ತರ ಅಮೆರಿಕದಲ್ಲಿಯೂ ಇದನ್ನು ನಡೆಸುತ್ತಿದ್ದರು ಎನ್ನುವುದಕ್ಕೆ ಪುರಾವೆ ದೊರೆತಿದೆ. ಫ್ರಾನ್ಸಿನಲ್ಲಿ ಸುಮಾರು ಕ್ರಿ.ಪೂ. 6500 ವರ್ಷಗಳಷ್ಟು ಹಳೆಯದಾದ 120 ತಲೆಬುರುಡೆಗಳನ್ನು ಸಂಗ್ರಹಿಸಿದಾಗ, ಅವುಗಳಲ್ಲಿ ಸುಮಾರು 40 ಬುರುಡೆಗಳ ಕಪಾಲದಲ್ಲಿ ರಂಧ್ರಗಳಿದ್ದವು. ಸಿಂಧೂ-ಸರಸ್ವತಿ ಸಂಸ್ಕೃತಿಯಲ್ಲೂ ಕಪಾಲ ರಂಧ್ರನವನ್ನು ಮಾಡುತ್ತಿದ್ದರು. ಕಪಾಲರಂಧ್ರನವನ್ನು ಏಕೆ ಮಾಡುತ್ತಿದ್ದರು ಎಂಬ ಪ್ರಶ್ನೆಗೆ ಬಹುಶಃ ಮೂರು ಉತ್ತರಗಳಿವೆ.

1) ಧಾರ್ಮಿಕ ವಿಧಿ: ಕಪಾಲವನ್ನು ಕೊರೆದ ನಂತರ ಉಳಿಯುತ್ತಿದ್ದ ದುಂಡನೆಯ ಚೂರನ್ನು ತಾಯತದ ಹಾಗೆ ಬಳಸುತ್ತಿದ್ದರು.

2) ನಂಬಿಕೆ: ಒಳ್ಳೆಯ ಶಕ್ತಿಗಳು ತಲೆಯ ಮೂಲಕ ಒಳಬರುತ್ತವೆ ಹಾಗೂ ದುಷ್ಟಶಕ್ತಿಗಳನ್ನು ತಲೆಯ ಮೂಲಕ ಹೊರಗಟ್ಟಬಹುದು ಎಂಬ ನಂಬಿಕೆ ಅನಾದಿಕಾಲದಲ್ಲಿತ್ತು. ಹಾಗಾಗಿ ಶಿಷ್ಟ ಶಕ್ತಿಗಳನ್ನು ಆಕರ್ಷಿಸಲು ಇಲ್ಲವೇ ದುಷ್ಟ ಶಕ್ತಿಗಳನ್ನು ಉಚ್ಚಾಟಿಸಲು ಕಪಾರರಂಧ್ರನವನ್ನು ಮಾಡುತ್ತಿದ್ದಿರಬೇಕು.

3) ಚಿಕಿತ್ಸೆ: ತಲೆಗೆ ಪೆಟ್ಟು ಬಿದ್ದು, ಮೂಳೆಯ ಕೆಳಗೆ ರಕ್ತಸಂಗ್ರಹವಾದಾಗ ಇಲ್ಲವೇ ಕಪಾಲಮೂಳೆ ಮುರಿದಾಗ, ಅದರ ಕೆಳಗೆ ಸಂಗ್ರಹವಾಗಿದ್ದ ರಕ್ತವನ್ನು ಹೊರತೆಗೆಯಲು ಬಹುಶಃ ಕಪಾಲರಂಧ್ರನವನ್ನು ಮಾಡುತ್ತಿದ್ದರು. ತಲೆನೋವನ್ನು ಕಡಿಮೆ ಮಾಡಲು, ಅಪಸ್ಮಾರದಿಂದ ಮುಕ್ತಿಯನ್ನು ದೊರಕಿಸಲು ಈ ಚಿಕಿತ್ಸೆಯನ್ನು ನೀಡುತ್ತಿದ್ದಿರಬಹುದು.

ಕಪಾಲರಂಧ್ರನವನ್ನು ಸತ್ತವರ ಮೇಲೂ ಹಾಗೂ ಬದುಕಿದ್ದವರ ಮೇಲೂ ಮಾಡುತ್ತಿದ್ದರು. ಗಂಡಸರ ಕಪಾಲದಲ್ಲಿ ಹೆಚ್ಚು ರಂಧ್ರಗಳು ಕಂಡುಬಂದಿವೆ. ಕೆಲವು ಹೆಂಗಸರು ಹಾಗೂ ಮಕ್ಕಳ ಕಪಾಲದಲ್ಲೂ ರಂಧ್ರಗಳಿರುವುದನ್ನು ಗಮನಿಸಲಾಗಿದೆ. ಕಪಾಲರಂಧ್ರನವನ್ನು ಮೂರು ರೀತಿಯಲ್ಲಿ ಮಾಡುತ್ತಿದ್ದರು. ಚಾಕುವಿನಂಥ ಹರಿತ ಕಲ್ಲಿನಿಂದ ಕಪಾಲವನ್ನು ಹೆರೆದು ರಂಧ್ರ ಮಾಡುತ್ತಿದ್ದರು. ಚಾಕುವಿನಂಥ ಕಲ್ಲಿನಿಂದ ಚೌಕಾಕಾರದ ರಂಧ್ರವನ್ನು ಕೊರೆಯುತ್ತಿದ್ದರು ಹಾಗೂ ವೃತ್ತಾಕಾರದ ರಂಧ್ರವನ್ನು ಮಾಡುತ್ತಿದ್ದರು. ಕೆಲವು ತಲೆಬುರುಡೆಗಳಲ್ಲಿ ಒಂದಕ್ಕಿಂತ ಹೆಚ್ಚಿನ ರಂಧ್ರಗಳಿರುವುದನ್ನು ಇಂದಿಗೂ ನೋಡಬಹುದು.

ನೌಪಾ ಇಗ್ಲೀಸಿಯ

ಆಂಡಿಯನ್ ಪ್ರಸ್ಥಭೂಮಿಯ ಕುಸ್ಕೋ ಪ್ರದೇಶ, ಇದು ಇಂಕಾ ಸಂಸ್ಕೃತಿಯ ತವರೂರು. ಇಲ್ಲಿ ಅತ್ಯಂತ ಕುತೂಹಲಕರವಾದ ನೌಪ ಇಗ್ಲೀಸಿಯಗಳು ಕಂಡುಬಂದಿವೆ. ಒಂದು ಯಂತ್ರದಿಂದ ನಯಗೊಳಿಸಿದಂತೆ ಕಾಣುವ ವಿವಿಧ ಜಿಯಾಮಿತಿ ಆಕೃತಿಗಳು ಬೆರಗುಗೊಳಿಸುತ್ತವೆ. ಇವು ಅವರ ಗುಹಾ ಆಸ್ಪತ್ರೆಗಳಾಗಿರಬೇಕು, ಇಲ್ಲಿಯೇ ಶಸ್ತ್ರಚಿಕಿತ್ಸೆಗಳನ್ನು ನಡೆಸುತ್ತಿರಬೇಕು ಎನ್ನುವ ತರ್ಕವನ್ನು ಮಂಡಿಸಿರುವುದುಂಟು.

ಆದಿ-ದಂತವೈದ್ಯಕೀಯ

ನಮ್ಮ ದೇಶದಲ್ಲಿ ಸಿಂಧೂ-ಸರಸ್ವತಿ ಸಂಸ್ಕೃತಿಯು ಮೂಲತಃ ಮೆಹರ್ಘಡ ಸಂಸ್ಕೃತಿಯಿಂದ (ಕ್ರಿ.ಪೂ. 7000-ಕ್ರಿ.ಪೂ. 2,000) ಆರಂಭವಾಯಿತೆಂಬುದು ತಜ್ಞರ ಅಭಿಮತ. ಈ ಸಂಸ್ಕೃತಿಯ ಮೊದಲ ಘಟ್ಟವು ಕ್ರಿ.ಪೂ. 7000-ಕ್ರಿ.ಪೂ. 5500ರವರೆಗೆ ನಡೆಯಿತು. ಈ ಅವಧಿಯಲ್ಲಿ ಆದಿ-ದಂತವೈದ್ಯಕೀಯವು (ಪ್ರೋಟೋ ಡೆಂಟಿಸ್ಟ್ರಿ) ಅಸ್ತಿತ್ವದಲ್ಲಿತ್ತು. 2006ರಲ್ಲಿ ನೇಚರ್ ಪತ್ರಿಕೆಯಲ್ಲಿ ಒಂದು ಲೇಖನವು ಪ್ರಕಟವಾಯಿತು. ಒಂಬತ್ತು ಪುರುಷರ 11 ದವಡೆ ಹಲ್ಲುಗಳನ್ನು ಕೊರೆದು ರಂಧ್ರಮಾಡಿ, ಅದರಲ್ಲಿ ಯಾವುದೋ ಜಡವಸ್ತು ತುಂಬಿರುವುದರ ಕುರಿತು ಅದು ಮಾಹಿತಿಯನ್ನು ನೀಡುತ್ತದೆ. ಜೀವಂತ ವ್ಯಕ್ತಿಗಳಲ್ಲಿ ನಮ್ಮ ಪೂರ್ವಜರು ನಡೆಸಿದ ರೂಟ್ ಕೆನಾಲ್ ಟ್ರೀಟ್‌ಮೆಂಟ್ ನಮ್ಮನ್ನು ಆಶ್ಚರ್ಯಗೊಳಿಸುತ್ತದೆ. ಈಜಿಪ್ಟಿನವರ ಸಂಸ್ಕೃತಿಯಲ್ಲಿ ಸುನ್ನತಿಯನ್ನು ಮಾಡುತ್ತಿದ್ದ ವಿಚಾರವೂ ನಮಗೆ ತಿಳಿದಿದೆ.

ಸಾರ್ಥಕ ಬದುಕಿಗೆ ಭಾರತೀಯ ಚಿಂತನೆಗಳು

ಅವಲೋಕನ

ಡಾ. ಎಂ.ರವೀಂದ್ರ

vveditoped@gmail.com

ಜೀವನದ ಶಾಶ್ವತ ಸುಖದ ಹಾದಿ ತೋರುವಲ್ಲಿ ಜ್ಞಾನ ಮಹತ್ವದ ಪಾತ್ರ ವಹಿಸುತ್ತದೆ. ನೈತಿಕತೆಗೂ ಜ್ಞಾನವೇ ತಳಹದಿ. ಜ್ಞಾನವಿಲ್ಲದೆ ಸದ್ಗುಣ ಲಭಿಸಲಾರದು. ಜ್ಞಾನ ಸಂಪಾದನೆ ಮನುಷ್ಯ ಜೀವನದ ಸೂತ್ರವಾಗಬೇಕು. ಮನುಷ್ಯ ಜೀವನದ ಸಾರ್ಥಕತೆಯ ಹೆಗ್ಗುರುತು ಜ್ಞಾನವೇ. ಈ ಅಂಶಗಳ ಹಿನ್ನೆಲೆಯಲ್ಲಿ ಭಾರತೀಯ ತತ್ವಶಾಸ್ತ್ರದ ಅಧ್ಯಯನ ಮಾಡಿದರೆ ಸಾಕಷ್ಟು ಕುತೂಹಲಕಾರಿಯಾದ ಅಂಶಗಳು ಕಾಣಸಿಗುತ್ತವೆ.

ಮಾನವನ ಬದುಕಿನ ಅರ್ಥವೇನು ಮತ್ತು ಪರಮೋದ್ದೇಶವೇನು ಎಂಬ ಪ್ರಶ್ನೆಯನ್ನು ಸಾವಿರಾರು ವರ್ಷಗಳ ಹಿಂದೆಯೇ ಭಾರತೀಯ ಉಪನಿಷತ್ತುಗಳು ಆಳವಾದ ಚಿಂತನೆ ಮತ್ತು ಅರ್ಥಾನ್ವೇಷಣೆಗೆ ಆಯ್ದುಕೊಂಡವು ಎಂಬುದು ಗಮನಾರ್ಹ. ವೇದಕಾಲದಲ್ಲಿ (ಕ್ರಿ.ಪೂ. 1500ರಿಂದ ಕ್ರಿ.ಪೂ.900) ಪ್ರಾರಂಭವಾದ ಮನುಷ್ಯ, ಪ್ರಕೃತಿ ಮತ್ತು ಪರಮಾತ್ಮನ ಸಂಬಂಧಗಳ ಅನ್ವೇಷಣೆಯು ಉಪನಿಷತ್ತಿನ ಗುರು-ಶಿಷ್ಯರ ನಡುವಿನ ಪ್ರಶ್ನೋತ್ತರ ರೂಪದ ಸಂವಾದಗಳ ಮೂಲಕ ಮುಂದುವರೆದು, ರಾಮಾಯಣ, ಮಹಾಭಾರತ, ಭಗವದ್ಗೀತೆ ಮೊದಲಾದವುಗಳಲ್ಲಿ ಅರ್ಥಪೂರ್ಣವಾಗಿ ವಿವರಿಸಲ್ಪಟ್ಟಿವೆ.

ವೇದಗಳು ಅಪೌರುಷೇಯಗಳೆಂದು ತಿಳಿದು ಅವುಗಳ ಪ್ರಮಾಣವನ್ನು ಒಪ್ಪಿದ ಹಿಂದೂ ಧರ್ಮಪ್ರಚಾರಕರಾದ ಶಂಕರ, ರಾಮಾನುಜ, ಮಧ್ವರೇ ಮೊದಲಾದ ಆಚಾರ್ಯ ಪುರುಷರು, ವೇದಪ್ರಾಮಾಣ್ಯ ಒಪ್ಪದ ಬೌದ್ಧರು, ಜೈನರನ್ನು ಒಳಗೊಂಡಂತೆ ಹಲವರು, ಭಾರತೀಯ ಪರಂಪರೆ, ಸಂಸ್ಕೃತಿ ಮತ್ತು ಜೀವನಪದ್ಧತಿಯ ಹಿನ್ನೆಲೆಯಲ್ಲಿ ಮಾನವ ಬದುಕಿನ ಅರ್ಥಾನ್ವೇಷಣೆಯನ್ನಷ್ಟೇ ಅಲ್ಲದೆ, ಮಾನವ ಬದುಕಿನ ದುಃಖ ನಿವಾರಣೆಯ ಮಾರ್ಗಗಳು, ಶಾಶ್ವತ ಸುಖದ ಮಾರ್ಗಗಳ ಬಗ್ಗೆಯೂ ಚಿಂತನೆಗಳನ್ನು ನಡೆಸಿದರು.

ಭಾರತೀಯ ತತ್ವಜ್ಞಾನ ಪರಂಪರೆಯಲ್ಲಿ ದೇವರು, ಪುನರ್ಜನ್ಮ, ಸ್ವರ್ಗ, ನರಕ, ಮೋಕ್ಷ ಇತ್ಯಾದಿಗಳನ್ನು ಒಪ್ಪದೆ, ಇವು ಮೂಢನಂಬಿಕೆಗಳೆಂದೂ, ಇವುಗಳಿಗೆ ಬೆಲೆಕೊಡದೆ ತಿಂದು-ಕುಡಿದು, ಖುಷಿಯ ಜೀವನ ನಡೆಸುವ ಉಪದೇಶ ನೀಡಿದ ಚಾರ್ವಾಕ ವಾದವೂ ಇದೆ. ಆದರೆ ಅನೈತಿಕ ಜೀವನ ನಡೆಸಲು ಪ್ರಚೋದನೆ ನೀಡುವುದು ಈ ವಾದದ ಎದ್ದುಕಾಣುವ ದೌರ್ಬಲ್ಯ.

ಧರ್ಮ ಮತ್ತು ಸಾತ್ವಿಕ ಜೀವನದ ಪಾತ್ರ

ಭಾರತೀಯ ತತ್ವಜ್ಞಾನ ಪರಂಪರೆಯಲ್ಲಿ ಜೀವನದ ಪರಮೋದ್ದೇಶವೆಂದರೆ ಮೋಕ್ಷ ಸಾಧನೆ, ಅಂದರೆ, ಹುಟ್ಟು-ಸಾವಿನ ಸಂಸಾರ ಚಕ್ರದಿಂದ ಬಿಡುಗಡೆ ಹೊಂದುವುದೇ ಆಗಿದೆ. ಈ ಸಾಧನೆಗಾದರೋ ಆತ್ಮಜ್ಞಾನ ಗಳಿಸಬೇಕಾಗುತ್ತದೆ. ಇದರ ಮೊದಲ ಹೆಜ್ಜೆಯೇ ಧರ್ಮಸಮ್ಮತ ಜೀವನ ನಡೆಸುವುದು. ಸಾಧಾರಣ ಧರ್ಮದಲ್ಲಿ ಕ್ಷಮೆ, ದಮೆ, ದಯೆ, ಅಸ್ತೇಯ, ನಿರ್ಮಲತೆ, ಇಂದ್ರಿಯಗಳ ಮೇಲಿನ ಹತೋಟಿ, ಸತ್ಯಶೀಲತೆ, ಅಹಿಂಸೆ, ಶಾಂತಿಯಿಂದ ಇರುವುದು ಇನ್ನೂ ಮೊದಲಾದವು ಹೇಳಲ್ಪಟ್ಟಿವೆ. ಸತ್ಕರ್ಮಗಳು ಮತ್ತು ಫಲಾಪೇಕ್ಷೆ ಇಲ್ಲದೆ ಕರ್ಮ ಮಾಡುವುದರ ನಿಜಾರ್ಥ ಹಾಗೂ ವಿಧಾನಗಳು, ಆತ್ಮಜ್ಞಾನ ಗಳಿಸುವ ವಿಧಾನಗಳನ್ನು ತಿಳಿಸಲು ಭಗವದ್ಗೀತೆಯೂ ಸೇರಿದಂತೆ ಹಲವು ಧರ್ಮಗ್ರಂಥಗಳಿವೆ. ಮೋಕ್ಷಸಾಧನೆಯ ಗುರಿ ಸಾಧಿಸಲು ಕೇವಲ ಸತ್ಕರ್ಮಗಳನ್ನು ಮಾಡಿದರೆ ಸಾಲದು; ನಿಸ್ವಾರ್ಥ ದೃಷ್ಟಿಯಿಂದ, 'ಸರ್ವೇ ಜನಾಃ ಸುಖಿನೋಭವಂತು' ಎಂಬ ಧ್ಯೇಯದೊಂದಿಗೆ ಸಮಾಜಸೇವೆ ಮಾಡುವುದೂ ಬೋಧಿಸಲ್ಪಟ್ಟಿದೆ. ಇದು ಜೀವನದ ಪರಮೋದ್ದೇಶ ಸಾಧನೆಗೆ ಆಸ್ತಿಕವಾದಿಗಳು ಬೋಧಿಸುವ ಮಾರ್ಗದ ಸಂಕ್ಷಿಪ್ತ ನೋಟ.

ಉತ್ತಮ ಜೀವನಮೌಲ್ಯಗಳ ಬಗ್ಗೆ ಭಾರತೀಯ ತತ್ವಜ್ಞಾನ ಬೋಧಿಸುವ ಹಲವು ವಿಚಾರಗಳಿಂದ ಸ್ಫೂರ್ತಿ ಪಡೆದು ತಮ್ಮ ಜೀವನದಲ್ಲಿ ಅಳವಡಿಸಿಕೊಂಡ ಹಲವಾರು ಜಗತ್‌ಪ್ರಸಿದ್ಧ ಭಾರತೀಯ ವ್ಯಕ್ತಿಗಳಲ್ಲಿ ಮಹಾತ್ಮ ಗಾಂಧಿ, ವಿವೇಕಾನಂದ, ಎಸ್.ರಾಧಾಕೃಷ್ಣನ್, ರವೀಂದ್ರನಾಥ ಟ್ಯಾಗೋರ್, ಅರಬಿಂದೋ ಮುಖ್ಯರು. ತಮ್ಮ ಬದುಕು ಮತ್ತು ಬೋಧನೆಗಳಿಂದ ಇವರು ಸಾರಿದ ಭಾರತೀಯ ಸಂಸ್ಕೃತಿಯ ಉತ್ತಮ ಮೌಲ್ಯಗಳು ಹಾಗೂ ಸಾಧನೆಗಳು ಹೀಗಿವೆ:

ಸತ್ಯ, ಅಹಿಂಸೆ ಮತ್ತು ಸರ್ವೋದಯ ತತ್ವಗಳು

'ನನ್ನ ಬದುಕೇ ನನ್ನ ಸಂದೇಶ' ಎಂದು ಸಾರಿದವರು, ನುಡಿದಂತೆ ನಡೆದ ಮತ್ತು ನಡೆದಂತೆ ನುಡಿದ ಧೀರೋದಾತ್ತ ನಾಯಕರು ಮಹಾತ್ಮ ಗಾಂಧೀಜಿ. ಭಗವದ್ಗೀತೆ ಅವರಿಗೆ ಹೆತ್ತತಾಯಿಗಿಂತ ಮಿಗಿಲಾದುದಾಗಿತ್ತು. ಅವರ ಜೀವನದ ಅತ್ಯಂತ ಕಠಿಣ ಸಂದರ್ಭಗಳಲ್ಲಿ, ದಿಕ್ಕುತೋಚದ ಪರಿಸ್ಥಿತಿಗಳಲ್ಲಿ ಅವರ ಕೈಹಿಡಿದು ನಡೆಸಿ ಶಕ್ತಿಕೊಟ್ಟಿದ್ದು ಭಗವದ್ಗೀತೆ. ತುಳಸಿ ರಾಮಾಯಣವೂ ಅವರ ಅಚ್ಚುಮೆಚ್ಚಿನ ಗ್ರಂಥವೇ.

ನಿರಂತರ ಆತ್ಮಶೋಧನೆ, ಸತ್ಯಾನ್ವೇಷಣೆ, ಅಹಿಂಸಾ ಮಾರ್ಗದ ಮೂಲಕ ಹರಿಜನೋದ್ಧಾರ, ಸಮಾಜೋನ್ನತಿಯ ಚಿಂತನೆ ಹಾಗೂ ಭಾರತ ಸಂಗ್ರಾಮದಲ್ಲಿ ಮಹತ್ವದ ಪಾತ್ರ ವಹಿಸಿ, ಸರಳ ಜೀವನ ನಡೆಸುತ್ತಾ, ಭಗವದ್ಗೀತೆಯ ಬೋಧನೆಗಳ ಅರ್ಥಾನುಸಂಧಾನ ನಡೆಸುತ್ತಾ, ಭಾರತೀಯರ ಬದುಕಿನಲ್ಲಿ ಅರ್ಥ ತುಂಬಿ 'ರಾಷ್ಟ್ರಪಿತ' ಎಂದು ಗೌರವಿಸಲ್ಪಟ್ಟವರು ಗಾಂಧೀಜಿ. ಭಾರತೀಯ ತತ್ವಜ್ಞಾನ ಸಿದ್ಧಾಂತವನ್ನು ತಮ್ಮ ಬದುಕಿನ ಅರ್ಥಪೂರ್ಣತೆಗಾಗಿ ಅಳವಡಿಸಿಕೊಂಡವರು ಅವರು ಎಂಬುದು ನಿರ್ವಿವಾದ. ಗಮನಿಸಬೇಕಾದ ಅಂಶವೆಂದರೆ, ಹಿಂದೂ ಧರ್ಮದಲ್ಲಿ ಹರಿಜನೋದ್ಧಾರ ಹಾಗೂ ಇನ್ನಿತರ ಸುಧಾರಣೆಗಳು ಆಗಬೇಕಾದರೆ ಮಾಡಬೇಕಾದ ಕೆಲಸಗಳ ಬಗ್ಗೆ ಗಾಂಧಿಯವರಲ್ಲಿ ಸಂಪ್ರದಾಯ ಶರಣತೆ ಇರಲಿಲ್ಲ ಹಾಗೂ ಪರಧರ್ಮ ಸಹಿಷ್ಣುತೆ ಕೂಡ ಅವರು ನಂಬಿದ ತತ್ವಸಿದ್ಧಾಂತದ ಒಂದು ಭಾಗವಾಗಿತ್ತು.

ಜ್ಞಾನದಿಂದ ಮೋಕ್ಷ

ರಾಷ್ಟ್ರ ಕಂಡ ಶ್ರೇಷ್ಠ ದಾರ್ಶನಿಕ ಹಾಗೂ ಶಿಕ್ಷಕರು ಎಸ್. ರಾಧಾಕೃಷ್ಣನ್. ಭಾರತದ ಪ್ರಪ್ರಥಮ ಉಪರಾಷ್ಟ್ರಪತಿ ಹಾಗೂ ಎರಡನೆಯ ರಾಷ್ಟ್ರಪತಿಗಳೆನಿಸಿಕೊಂಡ ಇವರು, ಸ್ವತಃ ಶಿಕ್ಷಕರಾಗಿ ಹಲವು ವರ್ಷ ಸೇವೆ ಸಲ್ಲಿಸಿದ ಮಹಾಜ್ಞಾನಿ. ಶಂಕರರ ಅದ್ವೈತ ವೇದಾಂತವು ಇವರ ಆಯ್ಕೆಯ ತತ್ವಜ್ಞಾನ ಸಿದ್ಧಾಂತವಾಗಿತ್ತು. ಸ್ವತಃ ಅನುಭವಿಸಿದ ಜೀವನ ಮೌಲ್ಯಗಳ ಜತೆಗೆ ಭಗವದ್ಗೀತೆ, ಉಪನಿಷತ್ತುಗಳು ಬೋಧಿಸುವ ಮೌಲ್ಯಾಧಾರಿತ ಧಾರ್ಮಿಕ, ಸಾಮಾಜಿಕ, ಮಾನಸಿಕ ಮತ್ತು ವೈಜ್ಞಾನಿಕ ತತ್ವಗಳನ್ನು ಜನರಿಗೆ ಬೋಧಿಸುವುದು ಮುಖ್ಯವೆಂದು ಸಾರಿದ ವಿಶ್ವವಿಖ್ಯಾತ ತತ್ವಜ್ಞಾನಿ ಇವರು.

ಆತ್ಮ ಸಾಕ್ಷಾತ್ಕಾರಕ್ಕಾಗಿ ಯೋಗಮಾರ್ಗ

ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಹೋರಾಟದಲ್ಲಿ 1910ರವರೆಗೆ ಸಕ್ರಿಯರಾಗಿ ಭಾಗವಹಿಸಿದರೂ, ತರುವಾಯದಲ್ಲಿ ತಮಗುಂಟಾದ ಅಲೌಕಿಕ ಅನುಭವಗಳ ಕಾರಣದಿಂದ ರಾಜಕೀಯ ಚಟುವಟಿಕೆಗಳಿಂದ ದೂರವುಳಿದು ಪಾಂಡಿಚೆರಿಗೆ ತೆರಳಿ, ಅಂತರಂಗದ ಶೋಧನೆಯ ಯೋಗಮಾರ್ಗದಲ್ಲಿ ಸಂಪೂರ್ಣ ತೊಡಗಿಸಿಕೊಂಡು ಜಗದ್ವಿಖ್ಯಾತರಾದವರು ಅರವಿಂದ ಘೋಷ್. ಭಾರತೀಯ ತತ್ವಜ್ಞಾನದ ವಿಚಾರಗಳ ಬಗ್ಗೆ ಅಷ್ಟೇ ಅಲ್ಲದೆ, ಪ್ಲೆಟೋ, ಪ್ಲುಟೋನಿಸ್ ಮುಂತಾದ ಪಾಶ್ಚಾತ್ಯ ತತ್ವಜ್ಞಾನಿಗಳ ಸಿದ್ಧಾಂತಗಳನ್ನು ಆಳವಾಗಿ, ತುಲನಾತ್ಮಕವಾಗಿ ಅಧ್ಯಯನ ಮಾಡಿದವರು. ಆದರೆ ಅವರ ಆಯ್ಕೆಯ ತತ್ವಜ್ಞಾನ ಮಾತ್ರ ಭಾರತೀಯ ವೇದ-ವೇದಾಂತ ಚಿಂತನೆಗಳ ಮೂಲವನ್ನು ಹೊಂದಿತ್ತು. 'ದಿ ಲೈಫ್ ಡಿವೈನ್' ಮತ್ತು 'ಸಾವಿತ್ರಿ' ಅವರ ಮಹತ್ವದ ಕೃತಿಗಳು. 'ದಿ ಲೈಫ್ ಡಿವೈನ್' ಕೃತಿಯಲ್ಲಿ ಅರ್ಥಪೂರ್ಣ ಬದುಕಿಗೆ ಬೇಕಾದ ಹಲವಾರು ಹೊಸ ಸಾಧ್ಯತೆಗಳನ್ನು ಅವರು ತೆರೆದಿಡುತ್ತಾರೆ. ಋಗ್ವೇದ, ಉಪನಿಷತ್ತುಗಳು, ಭಗವದ್ಗೀತೆಗಳಿಂದ ಉದ್ಧರಿಸುತ್ತಾ, ತಮಗೆ ದೃಗ್ಗೋಚರಿಸಿದ ಸಾಧಾರಣ ಮಾನವನಿಂದ ದೈವಿಕ ಮಾನವನಾಗುವ ಯೋಗಪ್ರಕ್ರಿಯೆಗಳನ್ನು ಅವರು ಮನ ಮುಟ್ಟುವಂತೆ ವಿವರಿಸುತ್ತಾರೆ. ಹಾಗೆಯೇ ಅವುಗಳನ್ನು ಕರಗತ ಮಾಡಿಕೊಂಡು ಅರ್ಥಪೂರ್ಣವಾಗಿ ಬಾಳಿ ತೋರಿಸುತ್ತಾರೆ. ಮನುಷ್ಯನ ಜೀವನವೇ ಆಧ್ಯಾತ್ಮಿಕ ಸಾಕ್ಷಾತ್ಕಾರದತ್ತ ಒಂದು ಪಯಣ ಎಂದು ನಂಬಿದ್ದ ಅವರು, ಈ ಪಯಣದಲ್ಲಿ ವ್ಯಕ್ತಿ ತಾನೊಬ್ಬನೇ ನಡೆಯದೆ ಇಡೀ ಸಮುದಾಯವನ್ನೇ ಕರೆದೊಯ್ಯಬೇಕು ಎಂದು ಹಂಬಲಿಸಿದ್ದರು.

ವಿಶ್ವಶಾಂತಿಯ ಪ್ರತಿಪಾದನೆ

ತಮ್ಮ 'ಗೀತಾಂಜಲಿ' ಮಹಾಕಾವ್ಯದ ಮೂಲಕ 1913ರಲ್ಲಿ ಭಾರತಕ್ಕೆ ಪ್ರಪ್ರಥಮವಾಗಿ 'ನೊಬೆಲ್ ಪ್ರಶಸ್ತಿ'ಯನ್ನು ತಂದುಕೊಟ್ಟು, ದೇಶ, ಕಾಲ, ಭಾಷೆ, ಧರ್ಮ, ಸಂಸ್ಕೃತಿಗಳ ಎಲ್ಲೆಯನ್ನು ವಿಸ್ತರಿಸಿದವರು ವಿಶ್ವಕವಿ ರವೀಂದ್ರನಾಥ ಟ್ಯಾಗೋರರು. ಭಾರತದ ಭವ್ಯ ಪರಂಪರೆಯ ಗುಣಗಾನವನ್ನು ರಾಷ್ಟ್ರಗೀತೆ ಹಾಗೂ ತಮ್ಮ ಸಮೃದ್ಧ ಸಾಹಿತ್ಯ ಕೃತಿಗಳ ಮೂಲಕ ಮಾಡುತ್ತಾ, ಕೋಟ್ಯಂತರ ಭಾರತೀಯರ ಹೃದಯದಲ್ಲಿ ಅಂದಿಗೂ ಇಂದಿಗೂ ದೇಶಪ್ರೇಮ ಮತ್ತು ರಾಷ್ಟ್ರೀಯ ಏಕತೆಯ ಭಾವದ ರೋಮಾಂಚನ ಉಂಟುಮಾಡುತ್ತಿರುವ ದಾರ್ಶನಿಕ ಇವರು. ಅರ್ಥಪೂರ್ಣ, ಶಾಂತಿಯುತ, ಸಮಾಧಾನದ ಜೀವನ ನಡೆಸಲು ಬೇಕಾದ ಹಲವಾರು ಉತ್ಕೃಷ್ಟ ಅಂಶಗಳು ವಿಶ್ವದ ಎಲ್ಲ ಜನರಿಗೂ ಅನ್ವಯವಾಗುವಂತೆ 'ಗೀತಾಂಜಲಿ' ಮಹಾಕಾವ್ಯದಲ್ಲಿ ಕಾವ್ಯಾತ್ಮಕವಾಗಿ ಬೋಧಿಸಲ್ಪಟ್ಟಿವೆ. ಭಾರತೀಯ ವೇದ, ಉಪನಿಷತ್ತುಗಳು ಸೇರಿದಂತೆ ತತ್ವಜ್ಞಾನ ಪರಂಪರೆಯ ಸಾರ ಗೀತಾಂಜಲಿಯ ಅಂತಃಸತ್ವವಾಗಿದೆ ಎಂದು ವಿಮರ್ಶಕರು ಅಭಿಪ್ರಾಯಪಡುತ್ತಾರೆ.

ಭಾರತೀಯ ವೇದ-ಉಪನಿಷತ್ತುಗಳು, ಪ್ರಕೃತಿ-ಜೀವಾತ್ಮ-ಪರಮಾತ್ಮರ ಸಂಬಂಧಗಳು, ಜೀವ-ಜಗತ್ತಿನ ಸೃಷ್ಟಿ, ಹುಟ್ಟು-ಸಾವಿನ ರಹಸ್ಯಗಳನ್ನು ಒಳಗೊಂಡಂತೆ ಹಲವಾರು ಇಂದ್ರಿಯಾತೀತ ವಿಚಾರಗಳ ಬಗ್ಗೆ ಜಿಜ್ಞಾಸೆ ನಡೆಸುತ್ತವೆ. ಒಟ್ಟಿನಲ್ಲಿ ಭಾರತೀಯ ತತ್ವಜ್ಞಾನಗಳು ಬೋಧಿಸುವ ಮೋಕ್ಷಸಾಧನೆ ಈ ಎಲ್ಲ ಮಹತ್ಸಾಧಕರ ಪರಮೋದ್ದೇಶವಾಗಿತ್ತು ಎನ್ನಲಾಗದಿದ್ದರೂ, ಭಾರತೀಯ ತತ್ವಜ್ಞಾನ ಬೋಧಿಸುವ ಹಲವಾರು ಜೀವನಧರ್ಮಗಳು ಇವರೆಲ್ಲರ ಬದುಕಿನ ಅವಿಭಾಜ್ಯ ಅಂಗಗಳಾಗಿದ್ದವು ಎನ್ನಲಡ್ಡಿಯಿಲ್ಲ, ಗಾಂಧೀಜಿಯವರ 'ಸತ್ಯ ಮತ್ತು ಅಹಿಂಸಾಧರ್ಮ', ಟ್ಯಾಗೋರರ 'ಸತ್ಯ, ಸೌಂದರ್ಯ ಮತ್ತು ಮಾನವೀಯತೆಯ ಧರ್ಮ', ಅರಬಿಂದೋ ಅವರ 'ಅಂತಃಸಾಕ್ಷಿ ಧರ್ಮ' ಇತ್ಯಾದಿಗಳು ಇದಕ್ಕೆ ಉದಾಹರಣೆ. ಇವರೆಲ್ಲರೂ ಇತರ ಧರ್ಮಗಳು ಹಾಗೂ ಪಾಶ್ಚಿಮಾತ್ಯ ತತ್ವಜ್ಞಾನಗಳ ಉತ್ತಮ ಅಂಶಗಳತ್ತ ತೆರೆದಮನದವರಾಗಿದ್ದರು ಎಂಬುದೂ ಉಲ್ಲೇಖನೀಯ.

(ಲೇಖಕರು ನಿವೃತ್ತ ವಿಜ್ಞಾನಿ, ಯು.ಆರ್.ರಾವ್ ಉಪಗ್ರಹ ಕೇಂದ್ರ, ಇಸ್ರೋ)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ವಾಸ್ತವದ ಚಿತ್ರಣ

'ಅಶ್ವತ್ಥಕಟ್ಟೆ' ಅಂಕಣ ಬರಹ (ವಿಶ್ವವಾಣಿ ಆ.13) ವಾಸ್ತವದ ಚಿತ್ರಣ ನೀಡಿದೆ. 'ಗಳಿಸುವುದು ಕಷ್ಟ, ಗಳಿಸಿದ್ದನ್ನು ಉಳಿಸಿಕೊಳ್ಳುವುದು ಇನ್ನೂ ಕಷ್ಟ' ಎಂಬುದು ಸಾಮಾನ್ಯವಾಗಿ ಹೇಳುವ ಮಾತು. ಇದು ನಿಜವೂ ಹೌದು. ಇಂದು ಗಳಿಕೆಗೆ ಹಲವು ದಾರಿಗಳಿವೆ, ಆದರೆ ಉಳಿಸಿಕೊಳ್ಳುವ ದಾರಿ ಅರಿತವರು ಕಡಿಮೆ. ರಾಜ್ಯ ಬಿಜೆಪಿಯ ಸದ್ಯದ ಪರಿಸ್ಥಿತಿಯೂ ಇದಕ್ಕೆ ಹೊರತಾಗಿಲ್ಲ. ಏನೋ ಮಾಡಲು ಹೋಗಿ ಇನ್ನೇನೋ ಆಗಿಬಿಟ್ಟಿತು. ವಾಲ್ಮೀಕಿ ಮತ್ತು ಮುಡಾ ಹಗರಣಗಳ ಮಾತು ಇಂದು ರಾಜ್ಯದಲ್ಲಿ ಎಲ್ಲೆಂದರಲ್ಲಿ ಕೇಳಿಬರುತ್ತಿದೆ. ಈ ಹಗರಣದಲ್ಲಿ ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಪ್ರತ್ಯಕ್ಷ ಶಾಮೀಲಿದೆ ಎಂಬುದನ್ನು ಬಿಂಬಿಸಲು ಪ್ರತಿಪಕ್ಷ ಬಿಜೆಪಿ ಕೈಗೊಂಡ ಪಾದಯಾತ್ರೆ ಗೌಜು-ಗದ್ದಲಗಳಿಲ್ಲದೇ ಮುಗಿದೇಹೋಯಿತು. ಈ 'ಪಾದಯಾತ್ರೆ'ಯಲ್ಲಿ ಪಾಲ್ಗೊಂಡಿದ್ದ ಬಹುತೇಕರ ದೇಹಭಾಷೆ ನೋಡಿದವರಿಗೆ, 'ಇವರೇನು ಮೋಜಿನಯಾತ್ರೆ ಕೈಗೊಂಡಿದ್ದಾರೋ?' ಎಂಬ ಅನುಮಾನವೂ ಬರುವಂತಿತ್ತು, ಎಳ್ಳಷ್ಟೂ ಗಂಭೀರತೆ ಇರಲಿಲ್ಲ.

ಈ ಮಧ್ಯೆ, ಬಿಜೆಪಿಯ ಹಿರಿಯರಲ್ಲೇ ಅಪಸ್ವರ ಎದ್ದಿದ್ದು ಹೌದು. ಎಂಥ ಸುವರ್ಣಾವಕಾಶವನ್ನು ತಪ್ಪಿಸಿಕೊಂಡುಬಿಟ್ಟರು ಎಂಬ ಆರೋಪ ಸ್ವಪಕ್ಷೀಯರಿಂದಲೇ ಬಂದಿದ್ದು ಒಂದೆಡೆಯಾದರೆ, ಈ ಪಾದಯಾತ್ರೆಯಿಂದ ಸಿದ್ದರಾಮಯ್ಯನವರು ಇನ್ನೂ ಹೆಚ್ಚು ಗಟ್ಟಿಯಾದಂತೆ ಕಂಡಿದ್ದು ಇನ್ನೊಂದೆಡೆ. ಕೇವಲ ಮುಡಾ ಪ್ರಕರಣವೊಂದನ್ನೇ ಮುಂದಿಟ್ಟುಕೊಂಡು, ವಾಲ್ಮೀಕಿ ಹಗರಣದ ಬಗ್ಗೆ ಚಕಾರ ಎತ್ತದಿರುವುದು ಬಿಜೆಪಿ ಪಾಳಯದಲ್ಲೇ ಅಸಮಾಧಾನದ ಅಲೆ ಎಬ್ಬಿಸಿದೆ. ಈ ಮಧ್ಯೆ, ಯಡಿಯೂರಪ್ಪ ಮತ್ತು ವಿಜಯೇಂದ್ರರ ಬಗ್ಗೆ 'ಯತ್ನಾಳ್ ಆ್ಯಂಡ್ ಕಂಪನಿ' ಅವಿಶ್ವಾಸ ವ್ಯಕ್ತಪಡಿಸಿದ್ದು, ಪಕ್ಷದೊಳಗೇ ಇನ್ನೊಂದು ಪಕ್ಷ ಎನ್ನುವಂಥ ಪರಿಸ್ಥಿತಿ ಸೃಷ್ಟಿಯಾಗಿದೆ! ಇದೊಂಥರಾ ಜಾತಿಯೊಳಗೆ ಮರುಜಾತಿ ಇದ್ದ ಹಾಗೆ.

ಈಗ ಯತ್ನಾಳ್, ಲಿಂಬಾವಳಿ, ರಮೇಶ ಜಾರಕಿಹೊಳಿ, ಪ್ರತಾಪ್ ಸಿಂಹ ಹೀಗೆ ಬಿಜೆಪಿಯ ಹಲವು ನಾಯಕರು ಇನ್ನೊಂದು ಪಾದಯಾತ್ರೆಗೆ ಸಜ್ಜಾಗುತ್ತಿದ್ದಾರೆ. 'ಇದು ಪಕ್ಷವಿರೋಧಿ ಅಲ್ಲ, ಬದಲಿಗೆ ಪಕ್ಷ ಬಲಪಡಿಸುವ ಮಾರ್ಗ' ಎಂಬುದು ಇವರೆಲ್ಲರ ಹೇಳಿಕೆಯಾದರೂ, ಬಿಜೆಪಿಯಲ್ಲಿ ಇಂದು ಏನೇನೆಲ್ಲಾ ನಡೆಯುತ್ತಿದೆ ಎಂಬುದು ಸಾಮಾನ್ಯರಿಗೂ ಅರ್ಥವಾಗುವಂತಿದೆ. ನಿಜ ಹೇಳಬೇಕೆಂದರೆ, ದಿನಗಳೆದಂತೆ ಬಿಜೆಪಿಯು ರಾಜ್ಯದಲ್ಲಿ ತನ್ನ ಹಿಡಿತವನ್ನು ಕಳೆದುಕೊಳ್ಳುತ್ತಿದೆ. ಇದಕ್ಕೆ ಮೂಲಕಾರಣ, ದಕ್ಷ ವಿಪಕ್ಷ ನಾಯಕನ ಹಾಗೂ ರಾಜ್ಯ ಬಿಜೆಪಿ ಅಧ್ಯಕ್ಷರ ಕೊರತೆ. ಯಡಿಯೂರಪ್ಪ ಎಷ್ಟೇ ಗುಡುಗಿದರೂ, ಆ ಗುಡುಗಿನಲ್ಲಿ ಶಕ್ತಿಯಿಲ್ಲ ಎನ್ನುವುದು ಆಡಳಿತ ಪಕ್ಷಕ್ಕೆ ಮನವರಿಕೆ ಆಗಿಬಿಟ್ಟಿದೆ. ಇಷ್ಟಾದರೂ ಬಿಜೆಪಿ ವರಿಷ್ಠರು ಮೌನಕ್ಕೆ ಶರಣಾಗಿರುವುದೇಕೆ ಎಂಬುದು ಮಾತ್ರ ರಹಸ್ಯವಾಗಿಯೇ ಉಳಿದುಕೊಂಡಿದೆ!

- **ಶಂಕರನಾರಾಯಣ ಭಟ್**, ಮಾಡಗೇರಿ

ಓದುಗರ ಓಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

● **ಗುರುನಾರಾಯಣ ಪಾತಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ಬಿಜೆಪಿಯಲ್ಲಿ ಯಾರು ಬಾಸ್?
- ಅದಕ್ಕಾಗಿಯೇ ಇಷ್ಟೆಲ್ಲ ಲಡಾಯಿ ನಡೆಯುತ್ತಿರುವುದು!

● **ಗೋಪಾಲ ಜಿ., ಶ್ರೀರಂಗಪಟ್ಟಣ**
ಭಟ್ರೇ, ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಬಾರದಿದ್ದಕ್ಕೆ ಸಾಯಿ ಗೋಲ್ಡ್ ಪ್ಯಾಲೇಸ್ ಮಾಲೀಕ ಶರವಣ ಏನಂತಾರೆ?
- ನಮ್ಮಲ್ಲಿ ಪದಕ ಖರೀದಿಸಿ ಸಂತಸಪಡಿ!

● **ಕಾಶಿ ಪ್ರಾಣೇಶ, ವಿದ್ಯಾಪೀಠ ಸರ್ಕಲ್**
ಭಟ್ರೇ, ಎಷ್ಟೋ ನತದೃಷ್ಟ ಹುಡುಗರ ಮದುವೆ, ಪ್ರಸ್ತಾಪದಲ್ಲೇ ಕುಂಟುತ್ತಿರುವಾಗ ತಾರ್ಕಿಕ ಅಂತ್ಯ ಕಾಣುವುದು ಯಾವಾಗ?
- ಮದುವೆಯೇ ತಾರ್ಕಿಕ ಅಂತ್ಯ!

● **ಅಲಮೇಲು, ಮೇಲುಕೋಟೆ**
ಭಟ್ರೇ, ಬಾಂಗ್ಲಾ ಪ್ರಕರಣದಲ್ಲಿ ಸಿಐಎ ಕೈವಾಡದ ಹಸೀನಾ ಆರೋಪವನ್ನು ಅಮೆರಿಕ ಏನೆಂದು ತಳ್ಳಿಹಾಕಿತು?
- ಇದು ಶುದ್ಧ ಹಸಿ ಸುಳ್ಳು!

● **ಶ್ರೀನಾಥ ಸಾಮವೇದಿ, ಮೈಸೂರು**
ಭಟ್ರೇ, ನಿಮ್ಮ ಶಿಷ್ಯ ಪ್ರತಾಪ ಸಿಂಹ ಯಾಕೆ ಹತಾಶರಾಗಿದ್ದಾರೆ?
- ಅವರು ಚುನಾವಣೆಯಲ್ಲಿ ಸೋತಿಲ್ಲ ಎಂಬುದು ನಿಮಗೆ ಗೊತ್ತಿರಲಿ!

● **ರಾಘುರಾಯ, ಮೈಸೂರು**
ಭಟ್ರೇ, ಯಾರು ಯಾರೊಂದಿಗೆ ಇಲ್ಲದಿರುವುದನ್ನು ಕನಸು ಮನಸಲ್ಲೂ ಊಹಿಸಲು ಸಾಧ್ಯವಿಲ್ಲ?
- ಸಿಎಂ ಸಿದ್ದರಾಮಯ್ಯ ಜತೆ ಪ್ರಭಾಕರ ಮತ್ತು ಗೋವಿಂದರಾಜು!

● **ರಕ್ಷಾ ಚಂದ್ರು, ಮಲ್ಲೇಶ್ವರ**
ಭಟ್ರೇ, ನೀವು ಮೊಯಿಲಿಯವರನ್ನು ಆಗಾಗ ಮರೆತುಬಿಡ್ತೀರಿ ಎಂಬ ಆಪಾದನೆ ಇದೆಯಲ್ಲ?
- ಸದಾ ಜತೆಯಲ್ಲೇ ಇರುವ ಬೆನ್ನುನೋವು, ಶುಗರ್, ಬಿಪಿಯನ್ನು ವೈಭವೀಕರಿಸಬಾರದಲ್ಲ?!

● **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಕೆಲವು ಯುವಕರು ಉದ್ದ ಕೂದಲು ಬೆಳೆಸಿ, ಪೋನಿಟೇಲ್ ಕಟ್ಕೋತಿದಾರಲ್ಲ?
- ಅಷ್ಟಕ್ಕೇ ನನ್ನನ್ನು ನಕಲು ಮಾಡುತ್ತಿದ್ದಾರೆ ಎಂದು ಆರ್.ಜಿ.ಹಳ್ಳಿ ನಾಗರಾಜ್ ಹಲುಬುತ್ತಾ ತಿರುಗುತ್ತಿದ್ದಾನಂತೆ!

● **ವೇಣುಗೋಪಾಲ ಕಂಚಿತೋಟ, ಕಡೂರು**
ಭಟ್ರೇ, ಮದುವೆಯ ಬಗ್ಗೆ ಇರುವ ದೊಡ್ಡ ಮಿಥ್ಯೆ ಯಾವುದು?
- ಮದುವೆಯ ನಂತರ ಎಲ್ಲ ಸರಿ ಹೋಗುತ್ತೆ ಅಂತ ಭಾವಿಸುವುದು!

ಮೂಗು ತೂರಿಸಲು ರಾಜಕಾರಣಿಗಳೇನು ಸರ್ವಜ್ಞರಾ?

ವಿನೇಶ್ ಪೋಗಟ್ ಅನರ್ಹತೆಗೆ, ಆಕೆ ತಮ್ಮ ತೂಕವನ್ನು ನಿರ್ವಹಿಸಲಾಗದ್ದೇ ಕಾರಣವಾಯಿತು. ಆದರೆ ಅದಕ್ಕೆ ಪಿತೂರಿಯ ಬಣ್ಣ ಬಳಿಯಲು, ಮೋದಿ ಸರಕಾರದ ವಿರುದ್ಧದ ಪೋಗಟ್ ಪ್ರತಿಭಟನೆಯನ್ನು ನೆಪವಾಗಿಟ್ಟುಕೊಂಡು ಈ ಅಚಾತುರ್ಯಕ್ಕೆ ಸರಕಾರವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಲು ಕೆಲವರು ಯತ್ನಿಸುತ್ತಿದ್ದಾರೆ.

ಪ್ರಕಾಶಪಥ
ಪ್ರಕಾಶ್ ಶೇಷರಾಘವಾಚಾರ್
vveditoped@gmail.com

ಕುಸ್ತಿಪಟು ವಿನೇಶ್ ಪೋಗಟ್ ಅವರು ಸ್ಪರ್ಧೆ ಮಾಡಿದ್ದ 50 ಕೆ.ಜಿ. ವಿಭಾಗದಲ್ಲಿ ಅವರ ತೂಕವು ನೂರು ಗ್ರಾಂ ಹೆಚ್ಚಾಗಿದ್ದ ಕಾರಣ ಫೈನಲ್ ಪಂದ್ಯದಲ್ಲಿ ಭಾಗವಹಿಸಲು ಅವರನ್ನು ಅನರ್ಹಗೊಳಿಸಲಾಯಿತು. ಪೋಗಟ್ ಅವರು ವಿಶ್ವದ ನಂ.1 ಯುಯಿ ಸಸಾಕಿ ಅವರನ್ನು ಸೋಲಿಸಿ, ನಂತರ ಕ್ಯೂಬಾದ ಗುಜ್‌ಮಾನ್‌ರವರನ್ನು ಪರಾಭವಗೊಳಿಸಿ ಫೈನಲ್ ತಲುಪಿದಾಗ ಭಾರತಕ್ಕೆ ಚಿನ್ನದ ಪದಕದ ಆಸೆ ಗರಿಗೆದರಿತು. ಆದರೆ ಅನಿರೀಕ್ಷಿತ ಬೆಳವಣಿಗೆಯು 140 ಕೋಟಿ ಭಾರತೀಯರ ಚಿನ್ನದ ಕನಸನ್ನು ನುಚ್ಚುನೂರಾಗಿಸಿತು.

ತೂಕದ ಸಮಸ್ಯೆಯಿಂದಾಗಿ ಪೋಗಟ್ ಅವರು ಪಂದ್ಯದಿಂದ ಅನರ್ಹರಾದ ಕೂಡಲೇ ಭಾರತದಲ್ಲಿ ರಾಜಕೀಯ ಪ್ರೇರಿತ ಟೀಕೆ-ಟಿಪ್ಪಣಿಗಳು ಸ್ಫೋಟಗೊಂಡವು. ವಿನೇಶ್ ಪೋಗಟ್‌ರವರು ಭಾರತೀಯ ಕುಸ್ತಿ ಫೆಡರೇಷನ್‌ನ ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಸಿಂಗ್‌ರವರ ವಿರುದ್ಧ ಲೈಂಗಿಕ ಕಿರುಕುಳದ ಆರೋಪ ಮಾಡಿ, ಅವರನ್ನು ಬಂಧಿಸುವಂತೆ ಆಗ್ರಹಿಸಿ ರಸ್ತೆಗಿಳಿದು ಹೋರಾಟ ಮಾಡಿದ್ದರು. ಚಿನ್ನ ಗೆಲ್ಲುವ ಹೊಸ್ತಿಲಲ್ಲಿ ವಿನೇಶ್ ಪೋಗಟ್ ಅವರಿಗೆ ಒದಗಿದ ಅನರ್ಹತೆಯು ಮೋದಿ ವಿರೋಧಿಗಳಿಗೆ ಸರಕಾರದ ವಿರುದ್ಧ ಷಡ್ಯಂತ್ರದ ಆರೋಪ ಮಾಡಿ ವಾಗ್ದಾಳಿ ನಡೆಸುವ ಸುವರ್ಣಾವಕಾಶವನ್ನು ತಂದುಕೊಟ್ಟಿತು.

ವಿನೇಶ್ ಪೋಗಟ್ ಅವರಿಗೆ ತೂಕದ ಸಮಸ್ಯೆಯು ಹೊಸದೇನಲ್ಲ. 2016ರ ರಿಯೋ (ಬ್ರೆಜಿಲ್) ಒಲಿಂಪಿಕ್ಸ್‌ನಲ್ಲಿ ಆಕೆ ಸ್ಪರ್ಧಿಸಬೇಕಿದ್ದ 48 ಕೆ.ಜಿ. ವಿಭಾಗದಲ್ಲಿ 400 ಗ್ರಾಂ ತೂಕ ಹೆಚ್ಚಾಗಿದ್ದ ಕಾರಣ ಅನರ್ಹಗೊಂಡಿದ್ದರು. ಅದೇ ಒಲಿಂಪಿಕ್ಸ್‌ನಲ್ಲಿ ಭಾರತದ ಇತರ ಸ್ಪರ್ಧಿಗಳಾದ ಬಬಿತಾ, ಅನಿತಾ, ನವಜೋತ್ ಕೌರ್ ಮತ್ತು ಜ್ಯೋತಿಯವರು ಕೂಡ ಅನರ್ಹಗೊಂಡಿದ್ದರು. 2020ರ ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಪೋಗಟ್ ಸ್ಪರ್ಧಿಸಿದ್ದು 53 ಕೆ.ಜಿ. ವಿಭಾಗದಲ್ಲಿ; ಆ ತೂಕವನ್ನು ನಿರ್ವಹಿಸಲೂ ಪೋಗಟ್ ಪರದಾಡಬೇಕಾಯಿತು ಎಂದು 'ಸ್ಪೋರ್ಟ್ಸ್ ಸ್ಟಾರ್' ವರದಿಗಾರ ಜೊನಾಥನ್ ಸೆಲ್ವರಾಜ್ ಹೇಳಿದ್ದಾರೆ.

ಬ್ರಿಜ್ ಭೂಷಣ್ ವಿರುದ್ಧ ಪೋಗಟ್ ನಡೆಸಿದ ಸತತ ಹೋರಾಟವು ಅವರ ಕ್ರೀಡಾಸಿದ್ಧತೆಯ ಮೇಲೆ ಪರಿಣಾಮ ಬೀರಿತ್ತು. ಒಲಿಂಪಿಕ್ಸ್ ಆಯ್ಕೆಯ ಟ್ರಯಲ್ಸ್‌ನಲ್ಲಿ 53 ಕೆ.ಜಿ. ವಿಭಾಗದಲ್ಲಿ ಅಂತಿಮ್ ಪಂಘಲ್‌ರವರು ಅರ್ಹತೆ ಪಡೆದರು. ವಿಶ್ವ ಕುಸ್ತಿ ಫೆಡರೇಷನ್ ನಿಯಮಾವಳಿಯ ಪ್ರಕಾರ ಒಬ್ಬ ಸ್ಪರ್ಧಿಗೆ ಎರಡು ವಿಭಾಗದ ಟ್ರಯಲ್ಸ್‌ನಲ್ಲಿ ಭಾಗವಹಿಸಲು ಅವಕಾಶವಿಲ್ಲ; ಆದರೆ ಈ ನಿಯಮವನ್ನು ಸಡಿಲಿಸಿ ವಿನೇಶ್ ಪೋಗಟ್‌ರವರಿಗೆ 50 ಕೆ.ಜಿ. ಟ್ರಯಲ್ಸ್‌ನಲ್ಲಿಯೂ ಅವಕಾಶ ಕೊಡಲಾಯಿತು. 53 ಕೆ.ಜಿ. ತೂಕದ ವಿನೇಶ್, 50 ಕೆ.ಜಿ. ತೂಕದ ಶಿವಾನಿ ಎದುರು 10-6ರಿಂದ ಗೆದ್ದು ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದರು. ವಿಶ್ವ ಕುಸ್ತಿ ಪೊಲೀಸ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದಿದ್ದ 26 ವರ್ಷದ ಶಿವಾನಿ ತಮಗಿಂತ ಹಿರಿಯ ಸ್ಪರ್ಧಿಯೆದುರು ಸೋತು ಒಲಿಂಪಿಕ್ಸ್ ಅವಕಾಶದಿಂದ ವಂಚಿತರಾದರು. ವಿನೇಶ್ ಪೋಗಟ್‌ರವರ ಒಲಿಂಪಿಕ್ಸ್ ಸಿದ್ಧತೆಗೆ ಯಾವ ಕೊರತೆಯಿರಲಿಲ್ಲ. ಪೋಗಟ್ ಬೇಡಿಕೆಯಂತೆ ಕ್ರೀಡಾ ಇಲಾಖೆಯು ಅವರ ತರಬೇತಿಗೆ ಬುಡಾಪೆಸ್ಟ್‌ನಲ್ಲಿ ವ್ಯವಸ್ಥೆ ಮಾಡಿತ್ತು. ಬಯಸಿದ ತರಬೇತುದಾರರು ಮತ್ತು ಸಹಾಯಕ ಸಿಬ್ಬಂದಿಗಳ ಸೌಲಭ್ಯವನ್ನು ನೀಡಲಾಗಿತ್ತು.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ವಿನೇಶ್ ಪೋಗಟ್ ಅವರು ಮಂಗಳವಾರ ಆಡಿದ ಮೂರು ಪಂದ್ಯದ ಮೊದಲು ಅವರ ತೂಕವು 49.9 ಕೆ.ಜಿ.ಯಷ್ಟಿತ್ತು. ಪಂದ್ಯದ ತರುವಾಯ ಈ ತೂಕ 52.7 ಕೆ.ಜಿ.ಗೆ ಹೆಚ್ಚಳವಾಯಿತು. ಮರುದಿನ ಬೆಳಗ್ಗೆಯ ತೂಕ ಪರೀಕ್ಷೆಯ ವೇಳೆಗೆ ತಮ್ಮ ತೂಕವನ್ನು 50 ಕೆ.ಜಿ.ಗೆ ಇಳಿಸಲು ಅವರು ರಾತ್ರಿಯೆಲ್ಲಾ ಸೌನಾ ಮತ್ತು ಸ್ಟೀಮ್ ಬಾತ್ ತೆಗೆದುಕೊಂಡರು, ಆರು ಗಂಟೆಗಳ ಕಾಲ ಟ್ರೆಡ್‌ಮಿಲ್ ಮಾಡಿದರು. ತಲೆಗೂದಲನ್ನು ಕತ್ತರಿಸಿಕೊಂಡಿದ್ದರ ಜತೆಗೆ ದೇಹದಿಂದ ರಕ್ತವನ್ನೂ ಎಳೆದು ತಮ್ಮ ತೂಕವನ್ನು 50 ಕೆ.ಜಿ.ಗೆ ಇಳಿಸಿಕೊಳ್ಳಲು ಹರಸಾಹಸ ಮಾಡಿದ್ದರು ಎಂದು ಭಾರತೀಯ ಒಲಿಂಪಿಕ್ ತಂಡದ ಮುಖ್ಯ ವೈದ್ಯಾಧಿಕಾರಿ ಡಾ. ದಿನ್ ಶಾ ಪರ್ದಿವಾಲಾ ವಿವರಿಸಿದ್ದಾರೆ.

ವಿನೇಶ್ ಪೋಗಟ್ ಅವರ ಅನರ್ಹತೆಗೆ, ತಮ್ಮ ತೂಕವನ್ನು ನಿರ್ವಹಿಸಲು ಆಕೆಗೆ ಸಾಧ್ಯವಾಗದ್ದೇ ಕಾರಣವಾಯಿತು. ಆದರೆ ಅದಕ್ಕೆ ಪಿತೂರಿಯ ಬಣ್ಣ ಬಳಿಯಲು ಇನ್ನಿಲ್ಲದ ಪ್ರಯತ್ನ ಮಾಡಲಾಗುತ್ತಿದೆ. ಪೋಗಟ್‌ರವರು ಮೂರನೆಯ ಒಲಿಂಪಿಕ್ಸ್‌ನಲ್ಲಿ ಸ್ಪರ್ಧೆ ಮಾಡುತ್ತಿದ್ದವರು, ತೂಕದ ಸಮಸ್ಯೆಯ ಬಗ್ಗೆ ಚೆನ್ನಾಗಿ ಅರಿತಿದ್ದವರು. ಆದರೆ ಬಿಜೆಪಿಯ ವಿರೋಧಿಗಳು, ಮೋದಿ ಸರಕಾರದ ವಿರುದ್ಧದ ಪೋಗಟ್ ಅವರ ಪ್ರತಿಭಟನೆಯನ್ನು ನೆಪವಾಗಿಟ್ಟುಕೊಂಡು ಈಗ ನಡೆದಿರುವ ಅಚಾತುರ್ಯಕ್ಕೆ ಸರಕಾರವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಲು ತೊಡಗಿದ್ದಾರೆ. ಕೆಲವೇ ತಿಂಗಳಲ್ಲಿ ಹರಿಯಾಣ ವಿಧಾನಸಭಾ ಚುನಾವಣೆಯು ನಡೆಯಲಿದ್ದು, ಅದೇ ರಾಜ್ಯಕ್ಕೆ ಸೇರಿರುವ ಪೋಗಟ್‌ರವರ ಅನರ್ಹತೆಯ ಪ್ರಕರಣವನ್ನು ಈ ವೇಳೆ ರಾಜಕೀಯವಾಗಿ ದುರುಪಯೋಗಪಡಿಸಿಕೊಳ್ಳುವುದು ಈ ಕಸರತ್ತಿನ ಹಿಂದಿರುವ ಹುನ್ನಾರವಷ್ಟೇ.

ಕಾಂಗ್ರೆಸ್ ನಾಯಕ ಸುರ್ಜೆವಾಲಾ ಅವರು 'ಎಕ್ಸ್' (ಟ್ವಿಟರ್) ಮಾಧ್ಯಮದಲ್ಲಿ, 'ಒಂದು ದಿನದಲ್ಲಿ ಮೂರು ಪಂದ್ಯವಾಡಿ ಜಯಿಸಿದವಳ ದೇಹತೂಕವು ಮರುದಿನ 100 ಗ್ರಾಂನಷ್ಟು ಹೇಗೆ ಹೆಚ್ಚಾಗುತ್ತದೆ? ಇದೊಂದು ಷಡ್ಯಂತ್ರ' ಎಂದು ಆರೋಪಿಸಿದರು. ಹೀಗೆ ಪೋಗಟ್ ಅವರ ಅನರ್ಹತೆಯನ್ನು, ಆಕೆ ಮೋದಿ ಸರಕಾರದ ವಿರುದ್ಧ ಕೈಗೊಂಡಿದ್ದ ಹೋರಾಟಕ್ಕೆ ತಳಕುಹಾಕಲು ಯತ್ನಿಸಿದರು. ರಾಜ್ಯಸಭಾ ಸದಸ್ಯೆ ಪ್ರಿಯಾಂಕಾ ಚತುರ್ವೇದಿಯವರು, 'ಪೋಗಟ್ ಅನರ್ಹತೆಯ ಹಿಂದಿನ ಪಿತೂರಿ ಬಯಲಿಗೆ ಬರಬೇಕೆಂದರೆ ತನಿಖೆಯಾಗಬೇಕು' ಎಂದು ಒತ್ತಾಯಿಸಿದರು. ಇವರಿಬ್ಬರು ಹೀಗೆ ಹೇಳಿಕೆ ನೀಡುವ ಮುನ್ನ ಅಲ್ಲಿ ನಡೆದ ವಿದ್ಯಮಾನಗಳ ಸಂಪೂರ್ಣ ಮಾಹಿತಿ ಇಲ್ಲದೆ, ತಜ್ಞರ ಬಳಿ ಸಮಾಲೋಚನೆ ಮಾಡದೆ, ಕೇವಲ ಸರಕಾರಕ್ಕೆ ಮಸಿಬಳಿಯುವ ದುರುದ್ದೇಶದಿಂದ ಹೀಗೆ ಟೀಕಿಸಿದ್ದಾರೆ.

ಪೋಗಟ್ ಪತಿ, ತರಬೇತುದಾರ ಮತ್ತು ಡಯಟಿಷಿಯನ್ ಅವರೊಂದಿಗೇ ಇದ್ದರು. ಅವರೆಲ್ಲರ ಪ್ರಯತ್ನದ ನಂತರವೂ ಹೆಚ್ಚಾದ ತೂಕವನ್ನು ಕಡಿಮೆ ಮಾಡಲು ಸಾಧ್ಯವಾಗಲಿಲ್ಲ. ಮೂರು ಪಂದ್ಯವಾಡಿದ ನಂತರ ಆಕೆಯ ತೂಕ 1.7 ಕೆ.ಜಿ. ಹೆಚ್ಚಾಗಿದೆ. ಇದು ಸಹಜವಾದ ಕ್ರಿಯೆ ಎಂದು ಸ್ವತಃ ಅವರ ಅಕ್ಕ ಬಬಿತಾ ಪೋಗಟ್ ಹೇಳಿದ್ದಾರೆ.

ಒಲಿಂಪಿಕ್ಸ್ ಸ್ಪರ್ಧೆಯಲ್ಲಿ ನಿಯಮಾವಳಿಗಳನ್ನು ರಾಜಿ ಇಲ್ಲದೆ ಜಾರಿಗೊಳಿಸುತ್ತಾರೆ. ಇಲ್ಲಿಯವರೆಗಿನ ಒಲಿಂಪಿಕ್ಸ್ ಇತಿಹಾಸದಲ್ಲಿ 150ಕ್ಕೂ ಹೆಚ್ಚು ಜನರು ಅನರ್ಹತೆ ಎದುರಿಸಿದ್ದಾರೆ. 1988ರ ಸೋಲ್ ಒಲಿಂಪಿಕ್ಸ್‌ನಲ್ಲಿ ಕೆನಡಾದ ಅಥ್ಲೀಟ್ ಬೆನ್ ಜಾನ್ಸನ್ ಅವರು 100 ಮೀಟರ್ ಓಟದ ಸ್ಪರ್ಧೆಯಲ್ಲಿ 9.79 ಸೆಕೆಂಡಿನಲ್ಲಿ ಆ ಅಂತರವನ್ನು ಕ್ರಮಿಸಿ ವಿಶ್ವದಾಖಲೆ ಬರೆದರು; ಆದರೆ ಅವರ ಮೂತ್ರಪರೀಕ್ಷೆ ಮಾಡಿದಾಗ ಉದ್ದೀಪನ ಮದ್ದು ಸೇವನೆ ಮಾಡಿದ್ದು ಪತ್ತೆಯಾಗಿ ಅವರ ಪದಕವನ್ನು ಹಿಂಪಡೆಯಲಾಯಿತು. 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿಯೇ,

ಇಟಲಿಯ ಸ್ಪರ್ಧಿ ಎಮಾನ್ಯುಯೆಲ್ ಲಿಝಿ ಅವರು ತೂಕದ ಕಾರಣಕ್ಕೆ 50 ಕೆ.ಜಿ. ವಿಭಾಗದಲ್ಲಿ ಅನರ್ಹರಾದರು. ಹೀಗೆ ತಮ್ಮ ಸ್ಪರ್ಧಿಗಳು ಅನರ್ಹಗೊಂಡಾಗ ಕೆನಡಾದವರಿಗಾಗಲೀ, ಇಟಲಿಯವರಿಗಾಗಲೀ ಯಾವ ಪಿತೂರಿಯೂ ಕಾಣಲಿಲ್ಲ!

ತೂಕ ಹೆಚ್ಚಾಗಿದೆಯೆಂದು ಸ್ಪರ್ಧೆಯಿಂದ ಹಿಂದೆ ಸರಿಯಬಹುದಿತ್ತಾ? ತೂಕದ ಆಧಾರದ ಮೇಲೆ ಸ್ಪರ್ಧಿಸುವ ಸ್ಪರ್ಧಿಗಳು ಪಂದ್ಯದಲ್ಲಿ ಭಾಗವಹಿಸುವ ಮುನ್ನ ತೂಕದ ಪರೀಕ್ಷೆ ಕಡ್ಡಾಯವಾಗಿರುತ್ತದೆ. ತೂಕ ಹೆಚ್ಚಾಯಿತೆಂದು ತಪ್ಪಿಸಿದರೆ ಗೆಲುವು ರದ್ದುಮಾಡಿ ಕೊನೆಯ ಸ್ಥಾನಕ್ಕೆ ದೂಡುತ್ತಾರೆ.

'ನೂರು ಗ್ರಾಂ ಹೆಚ್ಚಾಗಿದ್ದಕ್ಕೆ ಅನರ್ಹಗೊಳಿಸಿರುವುದು ತಪ್ಪು, ಮೋದಿಯವರು ಮಧ್ಯ ಪ್ರವೇಶಿಸಿ ಇದನ್ನು ಸರಿಪಡಿಸಬೇಕು' ಎಂದು ಆಗ್ರಹಿಸಲಾಗುತ್ತಿದೆ. ಕ್ರೀಡಾ ಫೆಡರೇಷನ್‌ಗಳು ತಮ್ಮ ಸಂವಿಧಾನದ ಮೇಲೆಯೇ ಕಾರ್ಯನಿರ್ವಹಿಸುವುದು. ಒಲಿಂಪಿಕ್ಸ್ ಇತಿಹಾಸದಲ್ಲಿ ಕೈಗೊಂಡ ನಿರ್ಧಾರಗಳು ರಾಜಕೀಯ ಒತ್ತಡಕ್ಕೆ ಬದಲಾಗಿಲ್ಲ. ಆದರೂ ಕುಚೇಷ್ಟೆಯಿಂದ ಹೀಗೆ ಮನವಿ ಮಾಡುತ್ತಿದ್ದಾರೆ. ವಿಚಿತ್ರವೆಂದರೆ, ವಿರೋಧ ಪಕ್ಷದ ಲೋಕಸಭಾ ಸದಸ್ಯರು ಕಲಾಪದಿಂದ ಸಭಾತ್ಯಾಗ ಮಾಡಿ, ಸಂಸತ್ತಿನ ಮಕರ ದ್ವಾರದ ಬಳಿ 'ಪೋಗಟ್‌ರವರಿಗೆ ನ್ಯಾಯ ಕೊಡಿಸಿ' ಎಂದು ಘೋಷಣೆ ಕೂಗಿಕೊಂಡು ಪ್ರತಿಭಟಿಸಿ ತೀರಾ ಬಾಲಿಶವಾಗಿ ವರ್ತಿಸಿದರು. ಹಿರಿಯ ಪತ್ರಕರ್ತ ರಾಜ್‌ದೀಪ್ ಸರ್‌ದೇಸಾಯ್ ಅವರು 'ಎಕ್ಸ್' (ಟ್ವಿಟರ್) ಮಾಧ್ಯಮದಲ್ಲಿ, 'ವಿಶ್ವಗುರು ಎಂದು ಹೇಳಿಕೊಳ್ಳುತ್ತೇವೆ, ಅದರ ಶಕ್ತಿ ಕ್ರೀಡೆಯಿಂದ ಆರಂಭವಾಗಲಿ ಮತ್ತು ರಿಲಯನ್ಸ್ ಗುಂಪಿಗೆ ನಿಮ್ಮ ಪ್ರಭಾವ ಎಷ್ಟಿದೆ ಎಂದು ತೋರಿಸಿ' ಎಂದು ಅತ್ಯಂತ ಹಾಸ್ಯಾಸ್ಪದವಾಗಿ ಬರೆದುಕೊಂಡರು. ಸ್ವತಃ ಕ್ರೀಡಾ ಕುಟುಂಬದಿಂದ ಬಂದಿರುವ ಇವರಿಗೆ ವಾಸ್ತವತೆಯ ಅರಿವಿದ್ದರೂ ಸರಕಾರಕ್ಕೆ ಸವಾಲೊಡ್ಡಿದರು.

53 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಲು ಅವಕಾಶ ಕೊಡಿ ಎಂದು ಪೋಗಟ್‌ರವರು ಕೇಳಿಕೊಂಡರೂ ಫೆಡರೇಷನ್ ಒಪ್ಪಲಿಲ್ಲ ಎಂಬ ಅರ್ಧಸತ್ಯವನ್ನು ಹೇಳಲಾಗುತ್ತಿದೆ. 53 ಕೆ.ಜಿ. ಆಯ್ಕೆಯ ಟ್ರಯಲ್‌ನಲ್ಲಿ ಪೋಗಟ್ 10-0 ಅಂಕಗಳಿಂದ ಅಂಜು ಅವರಿಗೆ ಪರಾಭವಗೊಂಡು ಆಯ್ಕೆಗೆ ಅನರ್ಹರಾದರು. ಆಯ್ಕೆಯ ಟ್ರಯಲ್ಸ್‌ನಲ್ಲಿ ಗೆದ್ದವರನ್ನು ಕೂರಿಸಿ, ಸೋತವರನ್ನು ಆಯ್ಕೆಮಾಡುವುದು ಹೇಗೆ ಸಾಧ್ಯವಾದೀತು? ಪೋಗಟ್‌ರವರ ಸಹಜತೂಕ 57 ಕೆ.ಜಿ.; ಆದರೆ ಸ್ಪರ್ಧಿಸಲೇಬೇಕು ಎಂದು ಅವರೇ ಆಯ್ಕೆಮಾಡಿಕೊಂಡಿದ್ದು 50 ಕೆ.ಜಿ. ವಿಭಾಗ.

ಇಂದು ವಿನೇಶ್ ಪೋಗಟ್‌ರವರನ್ನು ವಿರೋಧ ಪಕ್ಷದ ನಾಯಕರುಗಳು ಅತಿರೇಕವಾಗಿ ವೈಭವೀಕರಿಸುತ್ತಿದ್ದಾರೆ; ಇದರ ಹಿಂದೆ, ಆಕೆಯ ಮೇಲಿನ ಅಭಿಮಾನಕ್ಕಿಂತ, ಬಿಜೆಪಿಗೆ ಮುಜುಗರ ಉಂಟುಮಾಡುವ ದುರುದ್ದೇಶವೇ ಹೆಚ್ಚು ಕಾಣುತ್ತಿದೆ. ಪೋಗಟ್‌ರಿಗೆ 'ಭಾರತರತ್ನ' ಪುರಸ್ಕಾರ ನೀಡಬೇಕು, ಆಕೆಯನ್ನು ರಾಜ್ಯಸಭೆಗೆ ನಾಮಕರಣ ಮಾಡಬೇಕು ಎಂಬ ಉದಾರವಾದ ಸಲಹೆಗಳನ್ನು ಕಾಂಗ್ರೆಸ್ ಮತ್ತು ತೃಣಮೂಲ ಕಾಂಗ್ರೆಸ್ ಪಕ್ಷದ ನಾಯಕರು ನೀಡುತ್ತಿದ್ದಾರೆ. ಪೋಗಟ್ ಅನರ್ಹಗೊಂಡ ನಂತರ ಕ್ರೀಡಾ ಸಚಿವ ಮನ್ಸುಖ್ ಮಾಂಡವಿಯಾ ಅವರು ಲೋಕಸಭೆಯಲ್ಲಿ ಹೇಳಿಕೆ ನೀಡುವಾಗ, ಪೋಗಟ್‌ರವರ ಒಲಿಂಪಿಕ್ ಸಿದ್ಧತೆಗೆ ಸರಕಾರ ಮಾಡಿದ ವೆಚ್ಚದ ವಿವರವನ್ನು ನೀಡಿದರು. ಇದು ಬೇಡವಾಗಿತ್ತು.

ತಮಗೆ ಕನಿಷ್ಠಪಕ್ಷ ಬೆಳ್ಳಿ ಪದಕವನ್ನು ನೀಡಬೇಕು ಎಂದು ಪೋಗಟ್‌ರವರು ಒಲಿಂಪಿಕ್ ಸಮಿತಿಯ ಮುಂದೆ ಅರ್ಜಿ ಸಲ್ಲಿಸಿದ್ದಾರೆ. ಅವರ ಮನವಿಯನ್ನು ಪುರಸ್ಕರಿಸುವ ಸಾಧ್ಯತೆಗಳು ಕ್ಷೀಣವಾಗಿದ್ದರೂ, ಅವರ ಪ್ರಯತ್ನಕ್ಕೆ ಯಶಸ್ಸು ಸಿಗಲಿ ಎಂಬುದೇ ಪ್ರತಿಯೊಬ್ಬ ಭಾರತೀಯರ ಆಶಯವಾಗಿದೆ.

ರಾಜಕೀಯ ಶಕ್ತಿಗಳು ತಮ್ಮನ್ನು ತಾವು ಸರ್ವಜ್ಞರೆಂದು ಭಾವಿಸಿ, ಸ್ವಹಿತಾಸಕ್ತಿಯ ಕಾರಣಕ್ಕೆ ಅರ್ಥವಾಗದಿರುವ ವಿಷಯದಲ್ಲಿ ಅಭಿಪ್ರಾಯ ನೀಡದಿರುವುದು ಸೂಕ್ತ. ಹಾಗಿಲ್ಲವಾದರೆ ಇವರ ರಾಜಕೀಯಪ್ರೇರಿತ ನಿಲುವುಗಳು ಕ್ರೀಡೆಯ ಬೆಳವಣಿಗೆಗೆ ಮಾರಕವಾಗುತ್ತವೆ.

(ಲೇಖಕರು ಬಿಜೆಪಿ ವಕ್ತಾರರು)

ಬಾಂಗ್ಲಾ ಸಂಘರ್ಷವನ್ನು ಲಘುವಾಗಿ ಪರಿಗಣಿಸದಿರಿ!

ವರ್ತಮಾನ
ಸುರೇಂದ್ರ ಪೈ
vveditoped@gmail.com

ಪ್ರಪಂಚದ ಯಾವುದೋ ಮೂಲೆಯಲ್ಲಿ ಸಂಭವಿಸಿದ ಒಂದು ಘಟನೆ ನಮಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಒಂದು ಸಂದೇಶವನ್ನೋ, ಎಚ್ಚರಿಕೆಯನ್ನೋ ನೀಡುತ್ತದೆ. ಉದಾಹರಣೆಗೆ ಪ್ರಕೃತಿ ವಿಕೋಪ, ಹವಾಮಾನ ವೈಪರೀತ್ಯ, ಭಯೋತ್ಪಾದಕ ಚಟುವಟಿಕೆಗಳು ಇತ್ಯಾದಿ. ಏಕೆಂದರೆ ಅವು ಜಾಗತಿಕ ಸಮಸ್ಯೆಯಾಗಿರುತ್ತವೆ ಮತ್ತು ನಮ್ಮ ಜೀವನದ ಮೇಲೂ ಪರಿಣಾಮ ಬೀರಬಲ್ಲ ಸಂಗತಿಗಳಾಗಿರುತ್ತವೆ. ಹೀಗಾಗಿ ಅವುಗಳಿಂದ ನಾವು ಕಲಿಯಬೇಕಾದ ಪಾಠ ಸಾಕಷ್ಟಿರುತ್ತದೆ. ಇವುಗಳ ಹೊರತಾಗಿ, ಕೆಲ ದೇಶಗಳ ರಾಜತಾಂತ್ರಿಕ ವಿಷಯಗಳನ್ನೂ ನಾವು ಗಂಭೀರವಾಗಿ ಪರಿಗಣಿಸಬೇಕಾಗಿ ಬರುತ್ತದೆ.

ಪಕ್ಕದ ಬಾಂಗ್ಲಾದೇಶದ ಮೀಸಲಾತಿ ಪ್ರಕರಣವು ಅಲ್ಲಿನ ಆಡಳಿತಾರೂಢ ಅವಾಮಿ ಲೀಗ್ ಪಕ್ಷದ ಪ್ರಧಾನಿ ಶೇಖ್ ಹಸೀನಾರ ಸರಕಾರವನ್ನು ಆಹುತಿ ತೆಗೆದುಕೊಂಡಿದ್ದು ಈಗಾಗಲೇ ಜಗಜ್ಜಾಹೀರು. ಒಂದು ರಾಷ್ಟ್ರವು ಪರಕೀಯರ ದಾಸ್ಯದಿಂದ ಮುಕ್ತಿಹೊಂದಿ, ಸ್ವತಂತ್ರ ದೇಶವಾಗಬೇಕಾದರೆ ಎಷ್ಟೆಲ್ಲಾ ಸಂಘರ್ಷಗಳು, ರಕ್ತಪಾತಗಳು ನಡೆಯುತ್ತವೆ ಎಂಬುದರ ಕಲ್ಪನೆ ನಮಗಿದೆ. ಅಷ್ಟೆಲ್ಲಾ ಕಸರತ್ತುಗಳ ಬಳಿಕ ಪಡೆದ ಸ್ವಾತಂತ್ರ್ಯವನ್ನು ಜೋಪಾನವಾಗಿ ಕಾಪಿಟ್ಟುಕೊಂಡು, ಜನತೆಯ ಹಿತದೃಷ್ಟಿಯಿಂದ ಸಮರ್ಥವಾಗಿ ಆಡಳಿತ ನಡೆಸಿಕೊಂಡು ಹೋಗಬೇಕಿರುವುದು ಪ್ರತಿಯೊಂದು ರಾಷ್ಟ್ರದ ಸರಕಾರದ ಕರ್ತವ್ಯ. ಆದರೆ ಬಾಂಗ್ಲಾದೇಶದ ವಿಷಯದಲ್ಲಿ ಆಗಿದ್ದೇ ಬೇರೆ; ಮೇಲ್ನೋಟಕ್ಕೆ ಇದು ಕ್ಷಿಪ್ರಪತನವೆಂಬಂತೆ ಕಂಡುಬಂದರೂ ವಾಸ್ತವ ಬೇರೆಯೇ ಇದೆ.

ನಿಮಗೆ 1971ರ ಬಾಂಗ್ಲಾ ವಿಮೋಚನಾ ಚಳವಳಿಯ ನೆನಪಿರಬಹುದು. ಈ ಹೋರಾಟದಲ್ಲಿ ಸಕ್ರಿಯರಾಗಿದ್ದವರನ್ನು 'ಸ್ವಾತಂತ್ರ್ಯ ಹೋರಾಟಗಾರರು' ಎಂದು ಗುರುತಿಸಿ, ಅವರಿಗಾಗಿ 1972ರಿಂದ ಉದ್ಯೋಗದಲ್ಲಿ 30 ಪ್ರತಿಶತ ಮೀಸಲಾತಿ ನೀಡಿದ್ದು ನಮಗೆ ಗೊತ್ತು. ಆದರೆ ಈ ಮೀಸಲಾತಿಗೆ ಕ್ರಮೇಣ ವಿಸ್ತರಣೆ ನೀಡಲಾಯಿತು; ಅಂದರೆ 1997ರಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಮಕ್ಕಳಿಗೂ, 2010ರಲ್ಲಿ ಅವರ ಮೊಮ್ಮಕ್ಕಳಿಗೂ ವಿಸ್ತರಿಸುವ ರೀತಿಯಲ್ಲಿ ಕಾನೂನನ್ನು ಮಾರ್ಪಡಿಸಲಾಯಿತು ಎಂಬುದು ಬಹುತೇಕರಿಗೆ ಗೊತ್ತಿಲ್ಲ. ಈ ಮಾರ್ಪಾಡೇ ಸರಕಾರಕ್ಕೆ ಕಂಟಕವಾಗಿ ಪರಿಣಮಿಸಿತು. ಏಕೆಂದರೆ, ಸ್ವಾತಂತ್ರ್ಯ ಹೋರಾಟಗಾರರಿಗೆ ಮೀಸಲಾತಿ ನೀಡುವುದರಲ್ಲಿ ನ್ಯಾಯವಿದೆ; ಆದರೆ, ಅದನ್ನು ಅವರ ಮಕ್ಕಳು-ಮೊಮ್ಮಕ್ಕಳಿಗೂ ನೀಡಲಾಗುತ್ತದೆ ಎಂದು ಬಾಂಗ್ಲಾದ ಮೂಲ ಸಂವಿಧಾನದಲ್ಲಿ ಉಲ್ಲೇಖಿಸಿಲ್ಲ ಹಾಗೂ ಈ ಮೀಸಲಾತಿಯನ್ನು ಅವಾಮಿ ಲೀಗ್ ಪಕ್ಷವು ತನ್ನ ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುತ್ತಿದೆ ಎಂಬ ಆರೋಪ ಕೇಳಿಬಂತು. ಏಕೆಂದರೆ, ಸ್ವಾತಂತ್ರ್ಯ ಹೋರಾಟಗಾರರು ಯಾರು ಎಂದು ನಿರ್ಧರಿಸುವ ಹೊಣೆಯನ್ನು ಸ್ವತಃ ಆ ಪಕ್ಷವೇ ಹೊಂದಿತ್ತು. ರಾಜಕೀಯ ಸ್ಥಿರತೆಗಾಗಿ ಮತ್ತು ಲಾಭಕ್ಕಾಗಿ ಅದು ತನಗೆ ಬೇಕಾದ ಜನರನ್ನು ಈ ಮೀಸಲಾತಿಯಡಿ ಆಯ್ಕೆ ಮಾಡುತ್ತಿದೆ ಎಂಬ ಕೂಗು ಬಹಳ ದಿನಗಳಿಂದಲೂ ಕೇಳಿಬಂದ ಹಿನ್ನೆಲೆಯಲ್ಲೇ, ಇದರ ವಿರುದ್ಧ ದೇಶದಾದ್ಯಂತ ಸುಮಾರು 60 ಸಾವಿರ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ಸಲ್ಲಿಕೆಯಾಗಿತ್ತು. ಅವುಗಳ ಇತ್ಯರ್ಥ ಕೂಡ ಆಗಿರಲಿಲ್ಲ.

2018ರಲ್ಲಿ ಇದರ ವಿರುದ್ಧ ತೀವ್ರ ಹೋರಾಟಗಳು ನಡೆದಾಗ ಸರಕಾರವು, 'ಪ್ರಥಮ ಮತ್ತು ದ್ವಿತೀಯ ದರ್ಜೆಯ ಹುದ್ದೆಗಳಿಗೆ ಈ ಮೀಸಲಾತಿ ಅನ್ವಯವಾಗುವುದಿಲ್ಲ; ಬದಲಾಗಿ ಮೆರಿಟ್ ಆಧಾರದ ಮೇಲೆ ಹುದ್ದೆ ನೀಡಲಾಗುವುದು' ಎಂದು ಆದೇಶ ಹೊರಡಿಸಿತು. ಇದರ ವಿರುದ್ಧ ಸ್ವಾತಂತ್ರ್ಯ ಹೋರಾಟಗಾರರ ಮೊಮ್ಮಕ್ಕಳು ಹೈಕೋರ್ಟ್ ಮೆಟ್ಟಿಲೇರಿದಾಗ, ಸರಕಾರದ ಆದೇಶವು ಕಾನೂನುಬಾಹಿರವೆಂದು 2024ರ ಜೂನ್ 5ರಂದು ಹೈಕೋರ್ಟ್ ತೀರ್ಪುನೀಡಿತು. ಆಗ ಹೋರಾಟವು ಇನ್ನಷ್ಟು ತೀವ್ರಗತಿಯಲ್ಲಿ ಹಬ್ಬಿದಾಗ, ಹೈಕೋರ್ಟ್ ಆದೇಶಕ್ಕೆ ತಡೆಯೊಡ್ಡುವಂತೆ ಜುಲೈ 10ರಂದು ಸುಪ್ರೀಂಕೋರ್ಟ್ ತೀರ್ಪು ನೀಡಿತ್ತು.

ಘಟನೆ ಇಷ್ಟೇ ಆಗಿದ್ದಿದ್ದರೆ ಬಾಂಗ್ಲಾ ಸರಕಾರ ಬಹುಶಃ ಪತನವಾಗುತ್ತಿರಲಿಲ್ಲವೇನೋ? ಆದರೆ ಪ್ರಧಾನಿ ಹಸೀನಾ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನೀಡಿದ 'ರಜಾಕಾರರ' ಕುರಿತಾದ ಹೇಳಿಕೆಯು ಹೋರಾಟಗಾರರನ್ನು ರೊಚ್ಚಿಗೆಬ್ಬಿಸಿತು. ಅದರೊಂದಿಗೆ ಭ್ರಷ್ಟಾಚಾರದ ಆರೋಪಗಳು, ಅಧಿಕಾರವನ್ನು ತಮ್ಮ ರಾಜಕೀಯ ಹಿತಾಸಕ್ತಿಗಾಗಿ ಬಳಸಿಕೊಂಡಿದ್ದು, ನಿರುದ್ಯೋಗ ಸಮಸ್ಯೆ, ಅಸಮಾನತೆಯ ಕಿಡಿ ಎಲ್ಲವೂ ಸೇರಿಕೊಂಡು ರಾಜಕೀಯ ಅನಿಶ್ಚಿತತೆಗೆ ಕಾರಣವಾದವು. ಯಾವ ಸ್ವತಂತ್ರ ರಾಷ್ಟ್ರದ ಕಲ್ಪನೆಯಿಟ್ಟುಕೊಂಡು ಮುಜೀಬುರ್ ರೆಹಮಾನ್ ಅಂದು ಹೋರಾಡಿದ್ದರೋ ಅದೆಲ್ಲವೂ ಮಣ್ಣುಪಾಲಾಯಿತು. ಕೊನೆಗೆ ಅವರ ಪುತ್ಥಳಿಯೂ ಧ್ವಂಸಗೊಂಡಿತು.

ರಾಜಕೀಯ ಎಂದ ಮೇಲೆ ಏಳುಬೀಳುಗಳು ಸಹಜ. ಆದರೆ ಪ್ರಧಾನಿಯಾದವರು ಸರ್ವಾಧಿಕಾರಿ ಧೋರಣೆಯಿಂದ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳಲು ಹೊರಟರೆ ರಾಜಕೀಯ ವಿರೋಧಿಗಳು ಆ ಪರಿಸ್ಥಿತಿಯ ಲಾಭ ಪಡೆಯದೆ ಇರುತ್ತಾರೆಯೇ? ಬಾಂಗ್ಲಾ ವಿಷಯದಲ್ಲಿ ಮಾತ್ರ ಯಾವುದು ಕೂಡ ಕ್ಷಿಪ್ರವಾಗಿ ನಡೆದಿಲ್ಲ. ಅಲ್ಲಿನ ಯುವಜನರ ಬೇಡಿಕೆ ಅಷ್ಟೇನೂ ದೊಡ್ಡದಾಗಿರಲಿಲ್ಲ. ಸ್ವಾತಂತ್ರ್ಯ ಹೋರಾಟಗಾರರ ಮೊಮ್ಮಕ್ಕಳಿಗೂ ಶೇ.30ರಷ್ಟು ಮೀಸಲಾತಿ ಮುಂದುವರಿಸಿದ್ದನ್ನು ಅವರು ಪ್ರಶ್ನಿಸಿದ್ದು; ಮೀಸಲಾತಿ ನೀಡಲು ಬಳಸಿದ ಮಾನದಂಡಗಳು ಕಾನೂನುಬಾಹಿರವಾಗಿದ್ದು, ಅದನ್ನು ಸರಿಪಡಿಸಿ ಅರ್ಹರಿಗೆ ಉದ್ಯೋಗಾವಕಾಶ ದೊರಕುವಂತೆ ಮಾಡಬೇಕು ಎಂದು ಅವರು ಹೇಳಿದ್ದರಲ್ಲಿ ಯಾವ ತಪ್ಪೂ ಇರಲಿಲ್ಲ. ಆದರೆ ಪ್ರಶ್ನಿಸಿದವರನ್ನು ದೇಶದ್ರೋಹಿಗಳು ಎಂದು ಕರೆಯುವ ಮನಸ್ಥಿತಿ, ಲಕ್ಷಾಂತರ ಪ್ರತಿಭಟನಾಕಾರರ ಮೇಲೆ ಅಮಾನವೀಯ ಮಿಲಿಟರಿ ಕಾರ್ಯಾಚರಣೆ ನಡೆಸಿ ಸಾವಿರಾರು ಮಂದಿಯ ಸಾವಿಗೆ ಕಾರಣರಾಗಿದ್ದು, ಜನರ ಅಹವಾಲನ್ನು ಇತ್ಯರ್ಥಗೊಳಿಸುವಲ್ಲಿ ಅಲ್ಲಿನ ಹೈಕೋರ್ಟ್ ತೆಗೆದುಕೊಂಡ ಸುದೀರ್ಘ ಸಮಯ ಈ ಎಲ್ಲ ಅಂಶಗಳೂ ಸರಕಾರದ ಪತನಕ್ಕೆ ಕಾರಣವಾದವು.

ಬಾಂಗ್ಲಾ ಅನಿಶ್ಚಿತತೆಯು ಭಾರತದ ಆಡಳಿತ ವ್ಯವಸ್ಥೆ ಮತ್ತು ರಾಜತಾಂತ್ರಿಕತೆಗೆ ಯಾವ ರೀತಿಯ ಸವಾಲುಗಳನ್ನು ಒಡ್ಡುತ್ತದೆ ಎಂದು ನೋಡಬೇಕಾಗುತ್ತದೆ. ಮೊದಲನೆಯದಾಗಿ, ಬಾಂಗ್ಲಾ ಮೀಸಲಾತಿ ನೀತಿಗೂ ಭಾರತದ ಮೀಸಲಾತಿ ವ್ಯವಸ್ಥೆಗೂ ಯಾವುದೇ ಸಂಬಂಧವಿಲ್ಲ. ಆದರೂ, ಸಂವಿಧಾನ ಬಂದು 75 ವರ್ಷಗಳಾಗಿದ್ದರೂ, ನಮ್ಮಲ್ಲೂ ಜಾತಿ ಆಧರಿತ ಮೀಸಲಾತಿ ಮುಂದುವರಿಯಬೇಕೇ ಎಂಬ ಪ್ರಶ್ನೆ ಮೂಡುವುದು ಸಹಜ. ಇದರ ಕುರಿತಾಗಿ ಬಹಳಷ್ಟು ಜನರಲ್ಲಿ ಅಸಮಾಧಾನವಿದೆ. ಆದರೆ ನಾವು ಜಾತಿ ವ್ಯವಸ್ಥೆಯಲ್ಲಿ ನಡೆದ ಐತಿಹಾಸಿಕ ತಾರತಮ್ಯವನ್ನು ಹೋಗಲಾಡಿಸಲು ಮೀಸಲಾತಿ ನೀಡುತ್ತಿದ್ದೇವೆ. 2021ರ ವಿಶ್ವಸಂಸ್ಥೆಯ ವರದಿಯ ಪ್ರಕಾರ, ಭಾರತದಲ್ಲಿ 33.3 ಪ್ರತಿಶತ ಎಸ್‌ಸಿ ಜನರು ಬಹುಆಯಾಮದ ಬಡತನದಲ್ಲಿ ವಾಸಿಸುತ್ತಿದ್ದಾರೆ ಮತ್ತು ಇಂಥ 6 ಜನರಲ್ಲಿ 5 ಮಂದಿ ಕೆಳಜಾತಿಗಳು ಅಥವಾ ಬುಡಕಟ್ಟು ಜನಾಂಗದವರಾಗಿದ್ದಾರೆ.

ಎನ್‌ಸಿಆರ್‌ಬಿ ಅಂಕಿ-ಅಂಶಗಳ ಪ್ರಕಾರ, ಪರಿಶಿಷ್ಟ ಜಾತಿಗಳ ವಿರುದ್ಧದ ಅಪರಾಧ ಪ್ರಕರಣಗಳು 2021ರಲ್ಲಿದ್ದುದಕ್ಕಿಂತ 14.3 ಪ್ರತಿಶತದಷ್ಟು ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ

ಅಪರಾಧಗಳು 6.4 ಪ್ರತಿಶತದಷ್ಟು ಹೆಚ್ಚಾಗಿವೆ. ಉದಾಹರಣೆಗೆ, ಉತ್ತರ ಪ್ರದೇಶದ ಮದುವೆ ಸಮಾರಂಭದಲ್ಲಿ ಊಟ ಮುಟ್ಟಿದ್ದಕ್ಕೆ ದಲಿತ ಯುವಕನಿಗೆ ಥಳಿಸಿದ್ದು, ತಮಿಳುನಾಡಿನಲ್ಲಿ ಸರಕಾರಿ ಶಾಲೆಯ ಆರು ದಲಿತ ವಿದ್ಯಾರ್ಥಿಗಳನ್ನು ಮುಖ್ಯೋಪಾಧ್ಯಾಯಿನಿಯೊಬ್ಬರು ಶೌಚಾಲಯವನ್ನು ಸ್ವಚ್ಛಗೊಳಿಸುವಂತೆ ಮಾಡಿದ್ದು, ಕರ್ನಾಟಕದಲ್ಲಿ ದಲಿತ ಮಹಿಳೆಯೊಬ್ಬಳು ತೊಟ್ಟಿಯ ನೀರನ್ನು ಕುಡಿದಿದ್ದರಿಂದ 'ಗೋಮೂತ್ರ'ದಿಂದ ತೊಟ್ಟಿಯನ್ನು ಶುದ್ಧೀಕರಿಸಿದ್ದು ಹೀಗೆ ಹಲವಾರು ಪ್ರಕರಣಗಳು ಕಾಣಸಿಗುತ್ತವೆ. ಇಂಥ ವ್ಯವಸ್ಥೆಯಿಂದ ಹೊರತರಲು, ರಾಜ್ಯ ಸರಕಾರಗಳು ಎಸ್‌ಸಿ/ಎಸ್‌ಟಿ ಜನರಿಗೆ ಒಳಮೀಸಲಾತಿ ನೀಡಬಹುದು ಎಂಬುದಾಗಿ ಸುಪ್ರೀಂಕೋರ್ಟ್ ಇತ್ತೀಚೆಗೆ ತೀರ್ಪು ಕೊಟ್ಟಿದೆ. ಮಾತ್ರವಲ್ಲದೆ, ಸಾಮಾನ್ಯ ವರ್ಗದಲ್ಲಿ (ಅಂದರೆ ಮೇಲ್ಜಾತಿಯಲ್ಲಿ) ಯಾರು ಆರ್ಥಿಕವಾಗಿ ದುರ್ಬಲರೋ ಅವರಿಗೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ಶೇ.10ರಷ್ಟು ಮೀಸಲಾತಿ ನೀಡಬೇಕೆಂದು 2019ರಲ್ಲಿ ಮಸೂದೆ ಮಂಡಿಸಲಾಗಿದೆ. ಅದನ್ನು ಸುಪ್ರೀಂಕೋರ್ಟ್ ಕೂಡ ಎತ್ತಿಹಿಡಿದಿದೆ. ಆದ್ದರಿಂದ ಜಾತಿ ವ್ಯವಸ್ಥೆ ನಿರ್ಮೂಲನೆಗೆ ಹೆಚ್ಚು ಒತ್ತುನೀಡಬೇಕಾದ ಅನಿವಾರ್ಯತೆಯಿದೆ.

ಎರಡನೆಯದಾಗಿ, ನಿರುದ್ಯೋಗ ಸಮಸ್ಯೆಯ ಸವಾಲೂ ನಮ್ಮೆದುರು ಇದೆ. ಭಾರತದಲ್ಲಿ ನಿರುದ್ಯೋಗ ಪ್ರಮಾಣವು 2024ರ ಜೂನ್‌ನಲ್ಲಿ ಗರಿಷ್ಠ ಶೇ.9.2ಕ್ಕೆ ಏರಿಕೆಯಾಗಿದೆ. 'ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಇಕಾನಮಿ' ಅಂಕಿ-ಅಂಶಗಳ ಪ್ರಕಾರ, 2023ರ ಜೂನ್‌ನಲ್ಲಿ ಇದು ಶೇ.8.5ರಷ್ಟಿತ್ತು. 2023-24ರ ಆರ್ಥಿಕ ಸಮೀಕ್ಷೆಯ ಪ್ರಕಾರ, ಭಾರತದಲ್ಲಿ ನಿರುದ್ಯೋಗ ನಿವಾರಣೆಗೆ 2030ರ ತನಕ ಪ್ರತಿವರ್ಷವೂ ಸರಾಸರಿ 78.5 ಲಕ್ಷ ಉದ್ಯೋಗಸೃಷ್ಟಿ ಆಗಬೇಕಿದೆ. ಪ್ರತಿ ಇಬ್ಬರು ಪದವೀಧರರಲ್ಲಿ ಒಬ್ಬ ತನ್ನಲ್ಲಿ ಕ್ರಿಯಾಶೀಲತೆ ಇಲ್ಲದ ಕಾರಣದಿಂದಾಗಿ ನಿರುದ್ಯೋಗಿಯಾಗಿದ್ದಾನೆ. ಜತೆಗೆ 'ಕೃತಕ ಬುದ್ಧಿಮತ್ತೆ'ಯ (ಎಐ) ಬಳಕೆಯಿಂದಾಗಿ ಇಂದು ನಿರುದ್ಯೋಗ ಸಮಸ್ಯೆ ಮತ್ತಷ್ಟು ಹೆಚ್ಚಾಗಿದ್ದು, ಅದು ಎಲ್ಲಾ ವಿಧದ ಉದ್ಯೋಗಗಳ ಮೇಲೂ ಪ್ರಭಾವ ಬೀರಲಿದೆ ಎನ್ನುತ್ತದೆ ಈ ಸಮೀಕ್ಷಾ ವರದಿ. ಈ ಸವಾಲನ್ನು ಸಮರ್ಥವಾಗಿ ನಿಭಾಯಿಸುವ ಜವಾಬ್ದಾರಿ ನಮ್ಮ ಸರಕಾರದ ಮೇಲಿದೆ. ಕೇವಲ ಮೀಸಲಾತಿ ನೀಡಿ ಉದ್ಯೋಗ ಸೃಷ್ಟಿಸಲು ಸೋತರೂ ಅರಾಜಕತೆ ಸೃಷ್ಟಿಯಾಗುವ ಸಾಧ್ಯತೆ ಇದ್ದೇ ಇರುತ್ತದೆ.

ಮೂರನೆಯ ಹಾಗೂ ಬಹುಮುಖ್ಯ ಸವಾಲು ಭಾರತವು ತನ್ನ ಎಲ್ಲಾ ನೆರೆದೇಶಗಳ ಜತೆಗೆ ರಾಜತಾಂತ್ರಿಕ ಸಂಬಂಧವನ್ನು ಹೇಗೆ ಕಾಯ್ದುಕೊಂಡು ಹೋಗುತ್ತದೆ ಎಂಬುದಾಗಿದೆ. ನಮ್ಮ ಎಲ್ಲ ನೆರೆರಾಷ್ಟ್ರಗಳಲ್ಲೂ ಪ್ರಸ್ತುತ ಅನಿಶ್ಚಿತತೆಯ ಛಾಯೆಯಿದೆ. ಶ್ರೀಲಂಕಾದಲ್ಲಿ ಅಧ್ಯಕ್ಷ ಗೋಟಬಾಯ ರಾಜಪಕ್ಸೆ ವಿರುದ್ಧದ ದಂಗೆ, ಪಾಕಿಸ್ತಾನದ ಪ್ರಧಾನಿ ಇಮ್ರಾನ್ ಖಾನ್ ಪದಚ್ಯುತಿ, ನೇಪಾಳದ ಮಿತ್ರಪಕ್ಷಗಳಿಂದ ಪುಷ್ಪಕಮಲ್ ದಹಾಲ್ (ಪ್ರಚಂಡ) ಸರಕಾರದ ಅಂತ್ಯ, ಮಾಲ್ಡೀವ್ಸ್‌ನಲ್ಲಿ ನಶೀದ್ ಸರಕಾರದ ಪತನ, ಮ್ಯಾನ್ಮಾರ್‌ನಲ್ಲಿನ ಅನಿಶ್ಚಿತತೆಯ ವಾತಾವರಣ ಹೀಗೆ ಎಲ್ಲಾ ಕಡೆಯಲ್ಲೂ ಮಿಲಿಟರಿ ಆಡಳಿತ ರೂಪುಗೊಳ್ಳುತ್ತಿದೆ. ದಂಗೆಗಳಾದಾಗ ಈ ಭಾಗಗಳ ಜನರು ನಿರಾಶ್ರಿತರಾಗಿ ಭಾರತಕ್ಕೆ ನುಸುಳುವ ಸಾಧ್ಯತೆ/ಪ್ರಮಾಣ ಹೆಚ್ಚಿರುತ್ತದೆ, ಹಾಗಾಗಿ ಗಡಿಭದ್ರತೆ ದೊಡ್ಡ ಸವಾಲಾಗಬಹುದು. ಈಗಾಗಲೇ ಬಾಂಗ್ಲಾ, ಶ್ರೀಲಂಕಾ, ಟಿಬೆಟ್ ನಿರಾಶ್ರಿತರಿಗೆ ಜಾಗ ನೀಡಿ ಏನೆಲ್ಲಾ ಸಮಸ್ಯೆಗಳನ್ನು ಎದುರಿಸಿದ್ದೇವೆ ಎಂಬುದನ್ನು ಬಿಡಿಸಿ ಹೇಳುವ ಅಗತ್ಯವಿಲ್ಲ. ಜತೆಗೆ, ಮೇಲೆ ಉಲ್ಲೇಖಿಸಿರುವಂತೆ ಅನಿಶ್ಚಿತತೆಯಿರುವ ಎಲ್ಲಾ ದೇಶಗಳ ಮಿಲಿಟರಿ ಪಡೆಗಳು ಒಳಒಪ್ಪಂದ ಮಾಡಿಕೊಂಡು ನಮ್ಮ ಮೇಲೆ ಆಕ್ರಮಣ ಮಾಡುವ ಸಾಧ್ಯತೆಯನ್ನು ನಾವು ನಿರ್ಲಕ್ಷಿಸುವಂತಿಲ್ಲ.

ಕೊನೆಯದಾಗಿ, ಸ್ವಾತಂತ್ರ್ಯ ಎಂಬ ಪರಿಕಲ್ಪನೆಯು ವಿಶಾಲ ವ್ಯಾಪ್ತಿಯನ್ನು ಹೊಂದಿದೆ. ಆದರೆ ಇಂದು ನಮ್ಮಲ್ಲಿಯೂ ಜಾತಿ-ಮತ-ಧರ್ಮಗಳ ಹೆಸರಿನಲ್ಲಿ ರಾಜಕಾರಣ ನಡೆಯುತ್ತಿದೆ ಎಂಬುದೇ ತೀರಾ ಬೇಸರದ ಸಂಗತಿ. ಹಿಂದುಳಿದವರಿಗೆ ಸಾಕಷ್ಟು ಮೀಸಲಾತಿ ನೀಡಿದ್ದರೂ, ಪೂರ್ಣ ಪ್ರಮಾಣದ ಹುದ್ದೆಗಳು ಭರ್ತಿಯಾಗುತ್ತಿಲ್ಲ. ಬಡವರು ಬಡವರಾಗಿಯೇ, ಹಿಂದುಳಿದವರು ಹಿಂದುಳಿದವರಾಗಿಯೇ ಇದ್ದಾರೆಯೇ ಹೊರತು ಅವರ ಜೀವನದಲ್ಲಿ ದೊಡ್ಡ ವ್ಯತ್ಯಾಸವನ್ನು ಕಾಣುವುದು ವಿರಳವಾಗಿದೆ. ಆಳುಗರೆನಿಸಿಕೊಂಡವರು ರಾಜಕಾರಣವನ್ನು ದೇಶದ ಸರ್ವತೋಮುಖ ಅಭಿವೃದ್ಧಿಗಾಗಿ ಮೀಸಲಿಡಬೇಕೇ ವಿನಾ, ತಮ್ಮ ಕುರ್ಚಿ ಹಾಗೂ ಪಕ್ಷದ ಅಸ್ತಿತ್ವವನ್ನು ಭದ್ರಪಡಿಸಿಕೊಳ್ಳಲೆಂದು ಅಧಿಕಾರವನ್ನು/ಕಾನೂನನ್ನು ಜನರ ಭಾವನೆಗಳಿಗೆ ವಿರುದ್ಧವಾಗಿ ಚಲಾಯಿಸಬಾರದು. ನೆಮ್ಮದಿಯ ಜೀವನಕ್ಕಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಬೇಕಾದ್ದು ಎಲ್ಲಾ ಸರಕಾರಗಳ ಹೊಣೆಗಾರಿಕೆ. ದೇಶದ ಜನ ಸಹನೆ ಕಳೆದುಕೊಂಡರೆ ಎಂಥ ಬಲಿಷ್ಠ ನಾಯಕತ್ವವೂ ಪಲಾಯನ ಮಾಡಬೇಕಾಗುತ್ತದೆ ಎಂಬುದಕ್ಕೆ ನೆರೆಯ ಬಾಂಗ್ಲಾದೇಶ ಪುರಾವೆ ಒದಗಿಸಿದೆ. ಇದು ನಮಗೂ ಪಾಠವಾಗಬೇಕು.

(ಲೇಖಕರು ಶಿಕ್ಷಕರು)

ಬೇಕಿದೆ ಸಹಕಾರಾತ್ಮಕ ಪ್ರೇರಣೆ

ಪರ್ವಕಾಲ
ಆಮಿರ್ ಅಶ್ ಅರೀ
vveditoped@gmail.com

ನಾಳೆ (ಆಗಸ್ಟ್ 15) ಒಂದಿಡೀ ದೇಶವೇ ಸ್ವಾತಂತ್ರ್ಯ ದಿನದ ಸಂಭ್ರಮದಲ್ಲಿ ಮಿಂದೇಳಲಿದೆ. ಇದು, ಭಾರತೀಯ ಜನಸಾಮಾನ್ಯರ ಬದುಕನ್ನು ಬ್ರಿಟಿಷ್ ಚಕ್ರಾಧಿಪತ್ಯದಿಂದ ನಿರಾಳತೆಯತ್ತ ದಾಟಿಸಲು ಘಟಿಸಿದ ಸಂಗ್ರಾಮಕ್ಕೆ, ತನ್ಮೂಲಕ ದಕ್ಕಿದ ಸ್ವಾತಂತ್ರ್ಯಕ್ಕೆ ಎಪ್ಪತ್ತೇಳು ವರ್ಷ ತುಂಬಿದ್ದರ ಸಂಭ್ರಮ.

1857ರಲ್ಲಿ ಬ್ರಿಟಿಷರ ವಿರುದ್ಧ ದೇಶಪ್ರೇಮದ ಎದೆಯುಬ್ಬಿಸಿ ನಿಂತ ಭಾರತೀಯ ಸೇನಾನಿಗಳಿಂದ ಹಿಡಿದು, 1947ರ ಆಗಸ್ಟ್ 15ರ ಮಧ್ಯರಾತ್ರಿ ದೆಹಲಿಯ ಕೆಂಪುಕೋಟೆಯಲ್ಲಿ ಭಾರತದ ತ್ರಿವರ್ಣ ಧ್ವಜವನ್ನು ಹಾರಿಸುವವರೆಗೆ ಸ್ವಾತಂತ್ರ್ಯ ಸಮರದ ಕ್ರಾಂತಿಕಹಳೆ ಮೊಳಗಿತು. ಇದರ ಇತಿಹಾಸವು, ತಮ್ಮ ಸಂಪತ್ತುಗಳನ್ನು ಒತ್ತೆಯಿಟ್ಟ, ಕುಟುಂಬವನ್ನು ಕಳೆದುಕೊಂಡ, ಜಾತಿ-ಧರ್ಮಗಳ ಸೀಮೆಯನ್ನು ಮೀರಿ ಹತ್ತು ಹಲವು ತ್ಯಾಗ ಮಾಡಿ ಹೋರಾಡಿದ ಅಗಣಿತ ಸ್ವಾತಂತ್ರ್ಯ ಹೋರಾಟಗಾರರನ್ನು ನೆನಪಿಸುತ್ತದೆ. ಇವರೆಲ್ಲರನ್ನೂ ಈಗಿನ ಪ್ರತಿಯೊಬ್ಬರೂ ಪ್ರಾಮಾಣಿಕವಾಗಿ ಸ್ಮರಿಸಲೇಬೇಕಾದ ದಿನವಿದು.

ಪ್ರಜಾಪ್ರಭುತ್ವದ ಕಗ್ಗೊಲೆ, ನಿರುದ್ಯೋಗ, ಬೆಲೆಯೇರಿಕೆ, ಕೋಮುವಾದ, ಭ್ರಷ್ಟಾಚಾರ, ಎಲ್ಲೆ ಮೀರಿದ ಹಸಿವು ಮತ್ತು ಭಯ ಮೊದಲಾದ ತಲ್ಲಣಗಳು ತಾಂಡವವಾಡುತ್ತಿರುವ ವರ್ತಮಾನದ ವಾತಾವರಣದಲ್ಲಿ ಸ್ವಾತಂತ್ರ್ಯ ದಿನದ ಆಚರಣೆಗೆ ವೇದಿಕೆ ಒದಗಿಸಬೇಕಾಗಿ ಬಂದಿರುವುದು ಕಾಲದ ಅನಿವಾರ್ಯತೆ.

ಬ್ರಿಟಿಷ್ ಆಡಳಿತದ ಪರಿಣಾಮ ದೇಶವು ಎರಡು ಶತಮಾನಗಳ ಕಾಲ ಧನಾತ್ಮಕ ಶಕ್ತಿಯನ್ನು ಕಳೆದುಕೊಂಡು ದಣಿದುಹೋಯಿತು. ಪ್ರಜೆಗಳ ಬದುಕು ದಾರುಣವಾಗಿಬಿಟ್ಟಿತು. ದಾರಿ ತೋಚದೆ ಕಂಗಾಲಾದ ಭಾರತೀಯರಿಗೆ ಬಿಳಿಯರ ಗುಲಾಮರಾಗಬೇಕಾದ ಪರಿಸ್ಥಿತಿ ಎದುರಾಯಿತು. ಮನುಷ್ಯ ಜೀವನದ ಅವಿಭಾಜ್ಯ

ಅಂಗವಾದ ಸ್ವಾತಂತ್ರ್ಯ ಅಥವಾ ಇನ್ನಿತರ ಯಾವುದೇ ಅವಕಾಶಗಳು ಸಿಗಲಿಲ್ಲ. ಬ್ರಿಟಿಷರ ದಬ್ಬಾಳಿಕೆ, ದೌರ್ಜನ್ಯದ ವಿರುದ್ಧ ಧ್ವನಿಯಾದವರನ್ನು ಸೆರೆಮನೆಗೆ ಹಾಕಿ ಹಿಂಸಾತ್ಮಕ ಶಿಕ್ಷೆಗಳಿಗೆ ಗುರಿಪಡಿಸಲಾಯಿತು. ಇಂಥವರ ಪಟ್ಟಿ ತಯಾರಿಸುವಾಗ, ನಮ್ಮ ನೆನಪಿನ ಚಾವಡಿಯಲ್ಲಿ ಕಾಣಿಸಿಕೊಳ್ಳುವವರ ಸಂಖ್ಯೆಗಿಂತ ದೊಡ್ಡದಿದೆ ನಮ್ಮ ಇತಿಹಾಸಕ್ಕೆ ದಕ್ಕದೆ ಹೋದ ಹೋರಾಟಗಾರರ ಯಾದಿ. ಅವರದ್ದು ಎಲ್ಲವನ್ನೂ ಕಳೆದುಕೊಂಡ ಹೋರಾಟ, ಕೊನೆಯದಾಗಿ ಉಳಿದಿದ್ದ ಪ್ರಾಣ ಕೂಡ. ಆ ಭಾರತೀಯರು ಕಳೆದುಕೊಂಡಿದ್ದೇ ಹೆಚ್ಚು, ಇದನ್ನು ಎದೆತಟ್ಟಿ ಒಪ್ಪಬೇಕು. ಬ್ರಿಟಿಷರನ್ನು ಹಣಿಯಲು ಸಂಘಟಿತರಾದ ಭಾರತೀಯರ ಸಾಕಷ್ಟು ಸಶಕ್ತ ಹೋರಾಟಗಳು ಹಲವು ತಿರುವುಗಳನ್ನು ಪಡೆದವು. ಏಳು-ಬೀಳುಗಳು ಕಾಣಬರುತ್ತಿದ್ದರೂ ಬ್ರಿಟಿಷರ ವಿರುದ್ಧದ ಕಿಚ್ಚು ಆರುತ್ತಿರಲಿಲ್ಲ. ಇವೆಲ್ಲದರ ಫಲವಾಗಿ ನಂತರದ ದಿನಗಳಲ್ಲಿ ಹೋರಾಟವು ತೀವ್ರವಾಗತೊಡಗಿದಂತೆ, ಭಾರತದಿಂದ ಸಂಪೂರ್ಣವಾಗಿ ಕಾಲುಕೀಳುವ ಬಗ್ಗೆ ಬ್ರಿಟಿಷರು ಯೋಚಿಸಬೇಕಾಗಿ ಬಂತು.

ಇಂದು ಜಗತ್ತಿನ ಅತಿದೊಡ್ಡ ಸ್ವತಂತ್ರ ಮತ್ತು ಪ್ರಜಾಪ್ರಭುತ್ವ ರಾಷ್ಟ್ರವಾಗಿರುವ ಭಾರತವು ತನ್ನದೇ ನೆಲೆಗಟ್ಟಿನಲ್ಲಿ ನೆಲೆಸಿದೆ. ಜತೆಗೆ, ಮಹತ್ವವಾದ ಕಟ್ಟುಪಾಡನ್ನೂ ಇಟ್ಟುಕೊಂಡಿದೆ. ಅದುವೇ ಭಾರತೀಯ ಸಂವಿಧಾನ. ಅದರಲ್ಲಿ ದೇಶದ ಪ್ರತಿಯೊಬ್ಬ ಪ್ರಜೆಗೂ ಸಮಾನತೆಯ ಹಕ್ಕು, ಸ್ವಾತಂತ್ರ್ಯದ ಹಕ್ಕು, ಶೋಷಣೆಯ ವಿರುದ್ಧ ಹೋರಾಡುವ ಹಕ್ಕು, ಧಾರ್ಮಿಕ ಸ್ವಾತಂತ್ರ್ಯದ ಹಕ್ಕು, ಆಸ್ತಿಯ ಹಕ್ಕು ಇತ್ಯಾದಿಗಳನ್ನು ಒದಗಿಸಲಾಗಿದೆ. ನಾಗರಿಕರ ಅಸಹಾಯಕತೆಗಳನ್ನು ಹೋಗಲಾಡಿಸುವ ಉದ್ದೇಶದಿಂದ ಇಂಥ ಹಲವು ಬಗೆಯ ಸ್ವಾತಂತ್ರ್ಯವನ್ನು ನೀಡಲಾಗಿದೆ. ಇದನ್ನು ಆಡಳಿತ ವ್ಯವಸ್ಥೆಯು ಜನರಿಗೆ ನ್ಯಾಯಯುತವಾಗಿ ನೀಡಿದಾಗ ಮಾತ್ರವೇ ಅವರು ನಿಜಾರ್ಥದಲ್ಲಿ ಸ್ವತಂತ್ರರಾಗುವರು. ಸ್ವಾತಂತ್ರ್ಯವಿದೆ ಎಂದ ಮಾತ್ರಕ್ಕೆ ಪ್ರಜೆಗಳು ತಾವು ಏನನ್ನು ಬೇಕಿದ್ದರೂ ಮಾಡಬಹುದು ಎಂಬ ಗ್ರಹಿಕೆಯಲ್ಲಿ ಕಟ್ಟುಪಾಡುಗಳನ್ನು ಮೆಟ್ಟಿನಿಂತು, ಸಮಾಜಘಾತುಕ ಕೃತ್ಯಗಳಲ್ಲಿ ಪಾಲ್ಗೊಳ್ಳುವುದು, ಸರಕಾರ ಅಥವಾ ಸಂವಿಧಾನದ ಕಟ್ಟುಪಾಡುಗಳನ್ನು ಗಾಳಿಗೆ ತೂರಿ ನಡೆದುಕೊಳ್ಳುವುದು ದೇಶದ್ರೋಹವೇ ಸರಿ. ದೇಶದ ವಿಭಿನ್ನ ಸ್ತರದ ಆಳುಗರು ಮತ್ತು ಪ್ರಜೆಗಳು ನಿಗದಿತ ಕಾನೂನುಗಳನ್ನು ಪರಸ್ಪರ ಅನುಸರಿಸಿ ಪಾಲಿಸಿದರೆ ಮಾತ್ರವೇ, ನಮ್ಮ ಧೀಮಂತ-ದಿಗ್ಗಜರು ತಂದುಕೊಟ್ಟಿರುವ ಸ್ವಾತಂತ್ರ್ಯದ ಮೌಲ್ಯಗಳನ್ನು ನಾವು ಉಳಿಸಿಕೊಳ್ಳಲು ಸಾಧ್ಯ.

ಸ್ವಾತಂತ್ರ್ಯೋತ್ಸವವು ಪ್ರಜೆಗಳ ಪಾಲಿಗೆ ಚಾರಿತ್ರಿಕ ನೆನಪುಗಳನ್ನು ಹಂಚಿ ಸಂಭ್ರಮಿಸುವ ಒಂದು ನಿರ್ದಿಷ್ಟ ಸಮಯ ಅಥವಾ ದಿನವಾಗಬಾರದು; ಮೌಢ್ಯಗಳು, ಜಾತಿ-ಮತಗಳ ಬಂಧನವನ್ನು ಭೇದಿಸಿ ಬದುಕುವ ಪ್ರಜೆಗೆ ಸ್ವಾತಂತ್ರ್ಯವೆಂಬುದು ನಿರಂತರ ಶ್ರೀರಕ್ಷೆಯಾಗಿ ಒದಗಬೇಕು. ಅಂಥ ವರ್ತಮಾನಕ್ಕೆ ನಾವೆಲ್ಲರೂ ಸಾಕ್ಷಿಯಾಗಬೇಕಿದೆ. ಪ್ರಸಕ್ತ ವಿದ್ಯಮಾನದ ಪ್ರಕಾರ, ಯಾವುದೇ ರಾಷ್ಟ್ರದ ರಕ್ಷಣೆಯು ಅಲ್ಲಿನ ವಿದ್ಯಾವಂತ ಸಮೂಹದ ಮೇಲೆ ಅವಲಂಬಿತವಾಗಿದೆ. ಆಡಳಿತ ಪಕ್ಷದ ಲೋಪದೋಷಗಳ ಬಗ್ಗೆ ಪ್ರಶ್ನಿಸುವ ಪ್ರಜ್ಞಾವಂತಿಕೆ ವಿದ್ಯಾವಂತರದ್ದು. ಆಡಳಿತ ವ್ಯವಸ್ಥೆಯಲ್ಲಿ ಆಳುಗರು ಮತ್ತು ಅಧಿಕಾರಿಗಳಿಗೆ ಅವರದ್ದೇ ಆದ ಅಧಿಕಾರ ಇರುತ್ತದೆಯಾದರೂ, ಜನಸಾಮಾನ್ಯರೇ ಇಲ್ಲಿ ಮುಖ್ಯವಾದ ಪಾತ್ರಧಾರಿಗಳಾಗಿರುತ್ತಾರೆ ಮತ್ತು ನಿರ್ಣಾಯಕ ಶಕ್ತಿಗಳಾಗಿರುತ್ತಾರೆ ಎಂಬುದನ್ನು ಮರೆಯಬಾರದು.

ಭಾರತದ ಭವಿಷ್ಯದ ಬಗ್ಗೆ ಆಲೋಚಿಸುವಾಗ, ವಿದ್ಯಾರ್ಥಿಗಳು ಮತ್ತು ಶಿಕ್ಷಕರು ವರ್ತಮಾನದ ಹೋರಾಟಗಾರರಾಗಿದ್ದಾರೆ. ಬಂದೂಕು, ಫಿರಂಗಿಗಳು ಸೇರಿದಂತೆ ಬ್ರಿಟಿಷರ ಮಾರಕಾಸ್ತ್ರಗಳು ಎದೆ ಸೀಳಿದರೂ, ತರಹೇವಾರಿ ಸಮಸ್ಯೆ-ಸಂಕಷ್ಟಗಳು ಎದುರಾದರೂ, ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಸಂಕಲ್ಪದಿಂದ ಹಿಂದಡಿಯಿಡದ ಅಂದಿನ ಸೇನಾನಿಗಳು ದೇಶವನ್ನು ಉಳಿಸಲು ಮಾಡಿದ ಪ್ರತಿಜ್ಞೆಯು ವಿದ್ಯಾರ್ಥಿಗಳು ಮತ್ತು ಶಿಕ್ಷಕ ವೃಂದದಿಂದ ಮತ್ತೊಮ್ಮೆ ಮೊಳಗಬೇಕು. ಇದು ಪ್ರಸಕ್ತ ಕಾಲಘಟ್ಟದ ಅವಶ್ಯಕತೆಯಾಗಿದೆ. ಒಂದೊಮ್ಮೆ ಆಳುಗರು ಲಂಗು-ಲಗಾಮಿಲ್ಲದಂತೆ ವರ್ತಿಸುತ್ತಿದ್ದು, ಅವರನ್ನು ಪ್ರಜೆಗಳು ತರಾಟೆಗೆ ತೆಗೆದುಕೊಳ್ಳದೆ ಹೋದರೆ ದೇಶದ ಅವನತಿ ಕಟ್ಟಿಟ್ಟಬುತ್ತಿ.

ಭಾರತವು ಅಪರಾಧ, ಭ್ರಷ್ಟಾಚಾರ, ಹಿಂಸೆ, ನಕ್ಸಲ್‌ವಾದ, ಭಯೋತ್ಪಾದನೆ, ಬಡತನ, ನಿರುದ್ಯೋಗ, ಅನಕ್ಷರತೆಯಂಥ ರೋಗಗಳಿಗೆ ಬಲಿಯಾಗದಿರಲಿ ಮತ್ತು ವಿಜ್ಞಾನ, ತಂತ್ರಜ್ಞಾನ, ಕೃಷಿ, ಶಿಕ್ಷಣ, ಸಾಹಿತ್ಯ, ಕ್ರೀಡೆ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರಾಗಲಿ ಎಂದು ಸ್ವಾತಂತ್ರ್ಯೋತ್ಸವದ ಈ ಸಂದರ್ಭದಲ್ಲಿ ಆಶಿಸೋಣ. ದೇಶದ ಪ್ರತಿಯೊಬ್ಬರಿಗೂ ಸಕಾರಾತ್ಮಕ ಮತ್ತು ಸಹಕಾರಾತ್ಮಕ ಪ್ರೇರಣೆ ಸಿಕ್ಕರೆ, ಭಾರತವು 'ವಿಶ್ವಗುರು' ಆಗುವ ದಿನಗಳು ದೂರವೇನಿಲ್ಲ. ನಮ್ಮ ಆಳುಗರಲ್ಲಿ, ಈ ಭವ್ಯಭಾರತವನ್ನು ಮತ್ತೊಮ್ಮೆ ಸುಂದರ ಹೂದೋಟವಾಗಿಸುವ, ಮಧುರವಾದ ಮತ್ತು ವಿಶಾಲ ಮನೋಭಾವದ ಚಿಂತನೆಗಳಿರಲಿ. ಜಾಗತಿಕ ಮಟ್ಟದಲ್ಲಿ ಭಾರತದ ಪತಾಕೆಯನ್ನು ಹಾರಿಸಬೇಕಾದ ಯುವಪೀಳಿಗೆಗೆ ಅವರಿಂದ ಮಹತ್ವವಾದ ಸಂದೇಶಗಳು ದಕ್ಕುವಂತಾಗಲಿ.

ಬನ್ನಿ, ನಾವೆಲ್ಲರೂ ಒಂದಾಗೋಣ. ಈ ದೇಶದ ಪ್ರಗತಿಯ ಬಗ್ಗೆ ಜಾಗೃತಿಯನ್ನು ಮೂಡಿಸೋಣ.

(ಲೇಖಕರು ಹವ್ಯಾಸಿ ಬರಹಗಾರರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914

VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು:
ಬೆಂಗಳೂರು, ಹುಬ್ಬಳ್ಳಿ
ಮಂಗಳೂರು, ಬೆಳಗಾವಿ
ಕಲಬುರಗಿ, ದಾವಣಗೆರೆ
Vol:9, Issue:232

ಸಮಾಚಾರ ಸಣ್ಣದಲ್ಲ

ಪತ್ನಿ ಥಳಿಸಿ ಬೈಕ್‌ಗೆ ಕಟ್ಟಿ ಎಳೆದಾಡಿದ ದುಷ್ಟಪತಿ

ನಗೌರ್: ರಾಜಸ್ಥಾನದ ನಗೌರ್ ಜಿಲ್ಲೆಯ ನಹರಸಿಂಗಪುರ ಗ್ರಾಮದಲ್ಲಿ ಮದ್ಯವ್ಯಸನಿ ಪತಿ, ಪತ್ನಿಯನ್ನು ಥಳಿಸಿ ಬಳಿಕ ಮೋಟಾರ್‌ಬೈಕ್‌ಗೆ ಹಗ್ಗದಿಂದ ಕಟ್ಟಿ ಗ್ರಾಮದಲ್ಲಿ ಎಳೆದಾಡಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಘಟನೆಯ ವಿಡಿಯೊ ನೋಡಿದ ಬಳಿಕ ಆರೋಪಿ ಪತಿಯನ್ನು ಬಂಧಿಸಿರುವುದಾಗಿ ನಗೌರ್ ಪೊಲೀಸರು ಮಂಗಳವಾರ ತಿಳಿಸಿದ್ದಾರೆ. ಗ್ರಾಮದಲ್ಲಿ ತಿಂಗಳ ಹಿಂದೆ ಘಟನೆ ನಡೆದಿದ್ದರೂ ಮರ್ಯಾದೆಗಂಜಿ ಪತ್ನಿ ದೂರು ನೀಡಿರಲಿಲ್ಲ. ಸೋಮವಾರ ಆನ್‌ಲೈನ್‌ನಲ್ಲಿ ಕಾಣಿಸಿದ ವಿಡಿಯೊ ನೋಡಿದ ಪೊಲೀಸರೇ ಸ್ವಪ್ರೇರಣೆಯಿಂದ ಕ್ರಮ ಜರುಗಿಸಿದ್ದಾರೆ. ದುಷ್ಟ ಪತಿ ಪ್ರೇಮರಾಮ್ ಮೇಘವಾಲ್ (32)ನನ್ನು ಬಂಧಿಸಿ ಭಾರತೀಯ ನ್ಯಾಯ ಸಂಹಿತೆಯ ವಿವಿಧ ಕಲಂಗಳಡಿ ಪ್ರಕರಣ ದಾಖಲಿಸಿದ್ದಾರೆ. ಮೇಘವಾಲ್ ಮದ್ಯವ್ಯಸನಿಯಾಗಿದ್ದು, ಪತ್ನಿಗೆ ನಿತ್ಯ ಥಳಿಸುತ್ತಿದ್ದ. ಯಾರ ಜತೆಗೂ ಆಕೆ ಮಾತನಾಡಲು ಬಿಡುತ್ತಿರಲಿಲ್ಲ ಎಂದು ನೆರೆಹೊರೆಯವರು ಹೇಳಿದ್ದಾರೆ. ಮಹಿಳೆ ಪ್ರಸ್ತುತ ಸಂಬಂಧಿಕರ ಮನೆಯಲ್ಲಿ ಆಶ್ರಯ ಪಡೆದಿದ್ದಾರೆ.

ಅತ್ಯಾಚಾರಿ ಡೇರಾಗೆ 10ನೇ ಬಾರಿ ಪೆರೋಲ್

ಚಂಡೀಗಢ: ಅತ್ಯಾಚಾರ-ಕೊಲೆ ಪ್ರಕರಣಗಳಲ್ಲಿ ಅಪರಾಧ ಸಾಬೀತಾಗಿ ಜೀವಾವಧಿ ಜೈಲು ಶಿಕ್ಷೆಗೆ ಗುರಿಯಾಗಿರುವ ಪಾತಕಿ ಡೇರಾ ಸಚ್ಚಾ ಸೌಧ

ಮುಖ್ಯಸ್ಥ ಗುರ್ಮೀತ್ ರಾಮ್ ರಹೀಮ್ ಸಿಂಗ್ (56)ಗೆ ಮತ್ತೆ 21 ದಿನಗಳ ಪೆರೋಲ್ ಸಿಕ್ಕಿದೆ. ಕಳೆದ 4 ವರ್ಷಗಳಲ್ಲಿ 10ನೇ ಬಾರಿ ಜೈಲಿನಿಂದ ಹೊರ ಬಂದಿದ್ದಾನೆ. ಸಿರ್ಸಾ ಆಶ್ರಮದಲ್ಲಿ ಇಬ್ಬರು ಮಹಿಳೆಯರ ಅತ್ಯಾಚಾರ ನಡೆಸಿದ್ದ ಪಾತಕಿ ಸಿಂಗ್‌ಗೆ 2021ರ ಅ.18ರಂದು ಪಂಚಕುಲದ ವಿಶೇಷ ಸಿಬಿಐ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ. ಆದರೆ, ತಾಯಿಗೆ ಅನಾರೋಗ್ಯ ಸೇರಿದಂತೆ ವಿವಿಧ ಕಾರಣಗಳನ್ನು ಮುಂದೊಡ್ಡಿ ಪೆರೋಲ್ ಪಡೆಯುತ್ತಲೇ ಇದ್ದಾನೆ. ಪದೇ ಪದೇ ಜೈಲಿನಿಂದ ಬಿಡುಗಡೆಗೊಂಡು ಶಿಕ್ಷೆಯಲ್ಲಿಯೂ ರಜೆಯ ಸುಖ ಅನುಭವಿಸುತ್ತಿದ್ದಾನೆ. ಈ ಬಾರಿ ಜೈಲಿನಿಂದ ಹೊರಬಂದ ಬಳಿಕ ಪಾತಕಿ ಸಿಂಗ್ ಭಾಗಪತ್‌ನ ಬರ್ನಾವಾದಲ್ಲಿನ ಡೇರಾ ಆಶ್ರಮದಲ್ಲಿ ತಂಗಿ ವಿಶ್ರಾಂತಿ ಪಡೆಯಲಿದ್ದಾನೆ ಎಂದು ಮೂಲಗಳು ತಿಳಿಸಿವೆ.

ಐಎಂಎಯಿಂದ ಅಮಿತ್ ಶಾ ಭೇಟಿ

ದೆಹಲಿ: ಕೋಲ್ಕತ್ತದ ಕಿರಿಯ ವೈದ್ಯೆ ಅತ್ಯಾಚಾರ-ಕೊಲೆ ಪ್ರಕರಣ ಹಿನ್ನೆಲೆ ಗೃಹ ಸಚಿವ ಅಮಿತ್ ಶಾ ಅವರಿಗೆ ಪತ್ರ ಬರೆದಿರುವ ಭಾರತೀಯ ವೈದ್ಯಕೀ

ಯ ಸಂಘ(ಐಎಮ್‌ಎ), ವೈದ್ಯರ ಸುರಕ್ಷತೆ ಖಾತ್ರಿ ಪಡಿಸುವುದೂ ಸೇರಿದಂತೆ ಹಲವು ಬೇಡಿಕೆಗಳನ್ನು ಮುಂದಿಟ್ಟಿದೆ.

ಬೇಡಿಕೆ: ದೇಶದ ಎಲ್ಲಾ ಆಸ್ಪತ್ರೆಗಳನ್ನು ಸುರಕ್ಷಿತ ವಲಯ ಎಂದು ಘೋಷಿಸಬೇಕು ಹಾಗೂ ಈ ಸುರಕ್ಷಿತ ವಲಯಕ್ಕೆ ಕಾನೂನಾತ್ಮಕ ವ್ಯಾಖ್ಯಾನ ನೀಡಬೇಕು. ಎಲ್ಲಾ ಮುಖ್ಯ ಸರಕಾರಿ ಆಸ್ಪತ್ರೆಗಳಲ್ಲೂ ಪೊಲೀಸ್ ಕ್ಯಾಂಪಸ್-ಭದ್ರತಾ ಸಿಬ್ಬಂದಿ ನಿಯೋಜಿಸಬೇಕು. ಖಾಸಗಿ ಆಸ್ಪತ್ರೆಗಳಲ್ಲೂ ಇದೇ ಭದ್ರತಾ ವ್ಯವಸ್ಥೆ ಕಡ್ಡಾಯ ಮಾಡಬೇಕು. ಆಯಕಟ್ಟಿನ ಜಾಗದಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಕೆ ಕಡ್ಡಾಯಗೊಳಿಸ ಬೇಕು. 25 ರಾಜ್ಯಗಳಲ್ಲಿ ವೈದ್ಯರು-ಆಸ್ಪತ್ರೆ ಮೇಲಿನ ದಾಳಿ ವಿರುದ್ಧ ಕಾನೂನು ಜಾರಿಯಲ್ಲಿದ್ದರೂ ಅದು ಬಲಹೀನವಾಗಿದೆ ಎಂದು ಪತ್ರದಲ್ಲಿ ಗಮನ ಸೆಳೆಯಲಾಗಿದೆ.

ಕೋಲ್ಕತ್ತ ಸರಕಾರಿ ಆಸ್ಪತ್ರೆ ಕಿರಿಯ ವೈದ್ಯೆ ಅತ್ಯಾಚಾರ-ಹತ್ಯೆ ಪ್ರಕರಣ

ಪ್ರತಿಭಟನೆ ಕೈ ಬಿಡಲು ಕೋರ್ಟ್ ಮನವಿ

ಕೋಲ್ಕತ್ತ: ಸಹೋದ್ಯೋಗಿ ಅತ್ಯಾಚಾರ ಮತ್ತು ಬರ್ಬರ ಕೊಲೆ ಪ್ರಕರಣದಲ್ಲಿ ಶೀಘ್ರ ನ್ಯಾಯಕ್ಕೆ ಆಗ್ರಹಿಸಿ, ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿಗೆ ಆಸ್ಪತ್ರೆಯಲ್ಲಿ ಭದ್ರತೆ ಒದಗಿಸಬೇಕೆಂದು ಒತ್ತಾಯಿಸಿ ಪ್ರತಿಭಟನೆ ನಡೆಸುತ್ತಿದ್ದ ಕೋಲ್ಕತ್ತ ಸರಕಾರಿ ಆಸ್ಪತ್ರೆಯ ವೈದ್ಯರು ಬುಧವಾರದೊಳಗೆ ಪೊಲೀಸರು ಪ್ರಕರಣದ ತನಿಖೆ ಮುಗಿಸಬೇಕು. ಇಲ್ಲವಾದಲ್ಲಿ ಸಿಬಿಐ ತನಿಖೆಗೆ ವಹಿಸಬೇಕು ಎಂದು ಪಟ್ಟು ಹಿಡಿದಿದ್ದರು. ಅದರಂತೆಯೇ ನ್ಯಾಯಮೂರ್ತಿ ಟಿ.ಎಸ್.ಶಿವಜ್ಞಾನಂ, ನ್ಯಾ. ಹಿರಣ್ಮಯಿ ಭಟ್ಟಾಚಾರ್ಯ ಅವರನ್ನೊಳಗೊಂಡ ಕೋಲ್ಕತ್ತ ಹೈಕೋರ್ಟ್‌ನ ವಿಭಾಗೀಯ ಪೀಠ ಪ್ರಕರಣದ ತನಿಖೆ ಹೊಣೆಯನ್ನು ರಾಜ್ಯ ಪೊಲೀಸರ ಬದಲು ಸಿಬಿಐಗೆ ವಹಿಸಿಕೊಟ್ಟಿದೆ.

ರಾಜ್ಯ ಸರಕಾರ ಸ್ವಾಮ್ಯದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿನ ಕಿರಿಯ ವೈದ್ಯೆಯ ಅತ್ಯಾಚಾರ ಮತ್ತು ಬರ್ಬರ ಕೊಲೆ ಪ್ರಕರಣದ ತನಿಖೆಯನ್ನು ಕೇಂದ್ರ ತನಿಖಾ ದಳಕ್ಕೆ(ಸಿಬಿಐ) ವಹಿಸಿ ಕೋಲ್ಕತ್ತ ಹೈಕೋರ್ಟ್ ಮಂಗಳವಾರ ಆದೇಶಿಸಿದೆ. ಈವರೆಗೆ ಸಂಗ್ರಹಿಸಿದ ಎಲ್ಲಾ ಸಾಕ್ಷ್ಯಗಳು ಮತ್ತು ದಾಖಲೆಗಳನ್ನು ಸಿಬಿಐ ಅಧಿಕಾರಿಗಳಿಗೆ ತಕ್ಷಣವೇ ಹಸ್ತಾಂತರಿಸುವಂತೆ ಕೋಲ್ಕತ್ತ ಪೊಲೀಸರಿಗೆ ಕೋರ್ಟ್ ಆದೇಶಿಸಿದೆ.

ಇದೇ ವೇಳೆ, ಆರ್‌ಜೆ ಕರ್ ಕಾಲೇಜಿನ ಪ್ರಾಂಶುಪಾಲ ಹುದ್ದೆಗೆ ರಾಜೀನಾಮೆ ನೀಡಿದ್ದ ವಿವಾದಿತ ಡಾ.ಸಂದೀಪ್ ಘೋಷ್‌ರನ್ನು ರಾಜ್ಯ ಸರಕಾರ ಮತ್ತೊಂದು ಕಾಲೇಜಿಗೆ ಪ್ರಾಂಶುಪಾಲರಾಗಿ ನೇಮಿಸಿದ್ದಕ್ಕೆ ಹೈ ಕೋರ್ಟ್ ತರಾಟೆಗೆ ತೆಗೆದುಕೊಂಡಿದೆ. ಕಿರಿಯ ವೈದ್ಯೆ ಅತ್ಯಾಚಾರ-ಕೊಲೆ ಪ್ರಕರಣದ ತನಿಖೆಯನ್ನು ಸಿಬಿಐ ವಹಿಸಿರುವುದರಿಂದ ಪ್ರತಿಭಟನೆ ಕೊನೆಗೊಳಿಸುವಂತೆ ಹೈಕೋರ್ಟ್ ವೈದ್ಯರು-ವೈದ್ಯಕೀಯ ವಿದ್ಯಾರ್ಥಿಗಳಿಗೆ ಆಗ್ರಹಿಸಿದೆ. ರೋಗಿಗಳ ಜೀವ ರಕ್ಷಿಸುವ ಬಹುದೊಡ್ಡ ಹೊಣೆ ವೈದ್ಯರಿಗಿದೆ. ವೈದ್ಯ ಸೇವೆಗೆ ಅಡಚಣೆ ಬೇಡ ಎಂದಿದೆ.

ಕೋಲ್ಕತ್ತದಲ್ಲಿ ಕಿರಿಯ ವೈದ್ಯರ ಪ್ರತಿಭಟನೆ

ಮುಖ್ಯಾಂಶಗಳು

- ರಾಷ್ಟ್ರದ ವಿವಿಧೆಡೆ ವೈದ್ಯರಿಂದ ಮಂಗಳವಾರವೂ ಪ್ರತಿಭಟನೆ
- ಮರಣೋತ್ತರ ಪರೀಕ್ಷೆಯಲ್ಲಿ ಆಘಾತಕಾರಿ ಅಂಶ ಬಹಿರಂಗ
- ಪ್ರಾಂಶುಪಾಲರ ಕಡ್ಡಾಯ ರಜೆಗೆ ಹೈಕೋರ್ಟ್ ಆದೇಶ
- ರಾಷ್ಟ್ರೀಯ ಮಹಿಳಾ ಆಯೋಗ ಘಟನಾ ಸ್ಥಳಕ್ಕೆ ಭೇಟಿ
- ಮಮತಾ ಸರಕಾರ, ಪೊಲೀಸ್‌ಗೆ ಎನ್‌ಎಚ್‌ಆರ್‌ಸಿ ನೋಟಿಸ್

ಪ್ರಾಂಶುಪಾಲರಿಗೆ ಕಡ್ಡಾಯ ರಜೆ: ಹೈಕೋರ್ಟ್

ಕಿರಿಯ ವೈದ್ಯೆಯ ಅತ್ಯಾಚಾರ ಕೊಲೆ ನಡೆದ ಕಾಲೇಜು- ಆಸ್ಪತ್ರೆಯ ಪ್ರಾಂಶುಪಾಲ ಡಾ.ಸಂದೀಪ್ ಘೋಷ್ ಜಾಲತಾಣದಲ್ಲಿನ ಅವಮಾನಕ್ಕಂಜಿ ಸೋಮವಾರವಷ್ಟೇ ರಾಜೀನಾಮೆ ನೀಡಿದ್ದರು. ಆದರೆ ರಾಜೀನಾಮೆ ನೀಡಿದ ಕೆಲ ಗಂಟೆಗಳಲ್ಲಿ ಅವರನ್ನು ಸಿಎನ್‌ಎಂಸಿ ಮೆಡಿಕಲ್ ಕಾಲೇಜು ಪ್ರಾಂಶುಪಾಲರಾಗಿ ರಾಜ್ಯ ಸರಕಾರ ನೇಮಕ ಮಾಡಿದೆ. ರಾಜ್ಯ ಸರಕಾರದ ಈ ನಡೆಗೆ ಪ್ರತಿಭಟನಾನಿರತ ವೈದ್ಯರು ಆಕ್ರೋಶ ವ್ಯಕ್ತಪಡಿಸಿದ್ದರು. ಈ ಬಗ್ಗೆ ರಾಜ್ಯ ಸರಕಾರವನ್ನು ಪ್ರಶ್ನಿಸಿದ ಹೈಕೋರ್ಟ್, ಆಸ್ಪತ್ರೆಯಲ್ಲಿ ಕೆಲಸ ಮಾಡುವ ಎಲ್ಲಾ ವೈದ್ಯರಿಗೂ ಪ್ರಾಂಶುಪಾಲರೇ ಪೋಷಕರಾಗುತ್ತಾರೆ. ಘಟನೆಯಲ್ಲಿ ಅವರ ಜವಾಬ್ದಾರಿಯೂ ಇದೆ. ಸಂದೀಪ್ ಘೋಷ್ ಎಲ್ಲೂ ಕೆಲಸ ಮಾಡುವಂತಿಲ್ಲ ಎಂದು ಹೇಳಿತು. ಅಲ್ಲದೇ, ಹೊಸ ಹುದ್ದೆ ವಹಿಸಿಕೊಂಡಿದ್ದರೆ ತಕ್ಷಣವೇ ಕಡ್ಡಾಯ ರಜೆ ಮೇಲೆ ಹೋಗುವಂತೆ ಸೂಚಿಸಿತು. ಮಧ್ಯಾಹ್ನ 3 ಗಂಟೆಯೊಳಗೆ ಪೀಠಕ್ಕೆ ರಜೆಚೀಟಿ ಸಲ್ಲಿಸುವಂತೆಯೂ ನಿರ್ದೇಶನ ನೀಡಿತು. ಅಲ್ಲದೇ, ಘೋಷ್ ರಾಜೀನಾಮೆ ಪತ್ರವನ್ನು ಕೋರ್ಟ್‌ಗೆ ಸಲ್ಲಿಸುವಂತೆ ರಾಜ್ಯ ಸರಕಾರಕ್ಕೆ ಸೂಚಿಸಿತು. ಘೋಷ್ ಹೇಳಿಕೆ ದಾಖಲಿಸಿಕೊಳ್ಳುವಲ್ಲಿ ಪೊಲೀಸ್ ತನಿಖಾಧಿಕಾರಿ ವಿಳಂಬ ಮಾಡಿರುವುದೇಕೆ ಎಂದೂ ಕೋರ್ಟ್ ಪ್ರಶ್ನಿಸಿದೆ. ಪೊಲೀಸರೇಕೆ ಘೋಷ್ ಅವರನ್ನು ರಕ್ಷಿಸುತ್ತಿದ್ದಾರೆ? ಇದೇಕೋ ಸರಿ ಕಾಣುತ್ತಿಲ್ಲ ಎಂದೂ ಕೋರ್ಟ್ ರಾಜ್ಯ ಪೊಲೀಸರ ನಡೆಗೆ ಅನುಮಾನ ವ್ಯಕ್ತಪಡಿಸಿದೆ. ಇನ್ನೊಂದೆಡೆ, ಡಾ.ಘೋಷ್, ಕೊಲೆಯಾದ ಕಿರಿಯ ವೈದ್ಯೆ ಮಾನಸಿಕ ಸಮಸ್ಯೆಯಿಂದ ಬಳಲುತ್ತಿದ್ದಳು ಎಂದು ಹೇಳಿದ್ದು ಪ್ರತಿಭಟನಾಕಾರರ ಆಕ್ರೋಶಕ್ಕೆ ಕಾರಣವಾಗಿದೆ.

ಮಮತಾ ಸರಕಾರಕ್ಕೆ ನೋಟಿಸ್

ಕೋಲ್ಕತ್ತ: 'ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ'(ಎನ್‌ಎಚ್‌ಆರ್‌ಸಿ) ಕಿರಿಯ ವೈದ್ಯೆ ಹತ್ಯೆ ಪ್ರಕರಣದ ತನಿಖೆಯಲ್ಲಿ ನಿರ್ಲಕ್ಷ್ಯ ತೋರಿದ್ದಕ್ಕಾಗಿ ಪಶ್ಚಿಮ ಬಂಗಾಳ ಸರಕಾರ ಮತ್ತು ಪೊಲೀಸ್ ಇಲಾಖೆಗೆ ನೋಟಿಸ್ ನೀಡಿದೆ. ಮಾಧ್ಯಮಗಳ ವರದಿ ಆಧರಿಸಿ ಸ್ವಪ್ರೇರಿತ ಪ್ರಕರಣ ದಾಖಲಿಸಿರುವ ಎನ್‌ಎಚ್‌ಆರ್‌ಸಿ, ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಹಾಗೂ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ (ಡಿಜಿಪಿ)ನೋಟಿಸ್ ನೀಡಿದ್ದಾರೆ.

ರಾಷ್ಟ್ರೀಯ ಮಹಿಳಾ ಆಯೋಗ(ಎನ್‌ಸಿಡಬ್ಲ್ಯು) ಕೋಲ್ಕತ್ತದ ಆರ್‌ಜೆಕರ್ ವೈದ್ಯಕೀಯ ಕಾಲೇಜು-ಆಸ್ಪತ್ರೆಗೆ ಮಂಗಳವಾರ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದೆ.

ಆತ್ಮಹತ್ಯೆ ಎಂದಿದ್ದ ಪೊಲೀಸ್: ಪುತ್ರಿಯ ಅತ್ಯಾಚಾರ-ಕೊಲೆ ಪ್ರಕರಣದ ತನಿಖೆ ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿಯೇ ನಡೆಯಬೇಕು ಎಂದು ಕೋರಿ ಸಂತ್ರಸ್ತ ಕಿರಿಯ ವೈದ್ಯೆಯ ಪೋಷಕರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ವೇಳೆ ಪೋಷಕರು, ಶುಕ್ರವಾರ ರಾತ್ರಿ 9.30ರಲ್ಲಿ ವಿಚಾರಿಸಿದಾಗ ಕಾಲೇಜು ಆಡಳಿತ, ಕಿರಿಯ ವೈದ್ಯಗೆ ಹುಷಾರಿಲ್ಲ ಎಂದಿತ್ತು. ಕೆಲ ಸಮಯದ ಬಳಿಕ ಆಕೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಹೇಳಿತು. ಕಡೆಯ ಬಾರಿಗೆ ಮಗಳ ಮುಖವನ್ನು ನೋಡಲೂ ಅವಕಾಶ ಮಾಡಿಕೊಡಲಿಲ್ಲ. ಹಾಗಾಗಿ, ಕೊಲೆ ಪ್ರಕರಣದಲ್ಲಿ ಪ್ರಾಂಶುಪಾಲರನ್ನೂ ಆರೋಪಿ ಎಂದು ಪರಿಗಣಿಸಬೇಕು ಎಂದು ಪೋಷಕರು ಆಗ್ರಹಿಸಿದರು.

ಪ್ರಕರಣವನ್ನು ರಾಜ್ಯ ಪೊಲೀಸರು ದಾರಿ ತಪ್ಪಿಸಲು ಮೊದಲಿಗೇ ಯತ್ನಿಸಿದ್ದರು. ಅತ್ಯಾಚಾರ-ಕೊಲೆ ನಡೆದಿದ್ದರೂ 'ಆತ್ಮಹತ್ಯೆ ಕೇಸ್' ಎಂದೇ ಮೊದಲಿಗೆ ದಾಖಲಿಸಿದ್ದರು ಎಂದು ಪೋಷಕರ ಪರ ವಕೀಲರು ಕೋರ್ಟ್ ಗಮನ ಸೆಳೆದರು. ಪೊಲೀಸರನ್ನು ತರಾಟೆಗೆ ತೆಗೆದುಕೊಂಡ ಪೀಠ, ಪ್ರಕರಣದ ದಿಕ್ಕು ತಪ್ಪಿಸುವ ಪ್ರಯತ್ನ ನಡೆಸಿದ್ದೀರಿ. ಇಂತಹ ಪ್ರಕರಣಗಳಲ್ಲಿ ಪೊಲೀಸರಿಗೆ ಹೆಚ್ಚು ಸೂಕ್ಷ್ಮಜ್ಞಾನವಿರಬೇಕು ಎಂದು ಕೋಲ್ಕತ್ತ ನಗರ ಪೊಲೀಸ್ ಹಾಗೂ ರಾಜ್ಯ ಸರಕಾರಕ್ಕೆ ಛೀಮಾರಿ ಹಾಕಿದೆ.

ಮರಣೋತ್ತರ ಪರೀಕ್ಷೆಯಲ್ಲಿ ಆತಂಕಕಾರಿ ಮಾಹಿತಿ

4 ಪುಟಗಳ ಮರಣೋತ್ತರ ಪರೀಕ್ಷೆ ವರದಿಯಲ್ಲಿ ಆಘಾತಕಾರಿ ಮಾಹಿತಿಯಿದೆ. ಆರೋಪಿಯು ಅತ್ಯಾಚಾರ ನಡೆಸುವ ವೇಳೆ ಕಿರಿಯ ವೈದ್ಯೆ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದ. ಆಕೆಯ ಕನ್ನಡಕದ ಗಾಜು ಚೂರಾಗಿ ಆಕೆಯ ಕಣ್ಣಿಗೆ ಚುಚ್ಚಿ ರಕ್ತಬಂದಿದೆ. ಸಂತ್ರಸ್ತೆ ಪ್ರತಿರೋಧ ತೋರಿದಾಗ ಆಕೆಯ ಬಾಯಿಯನ್ನು ಬಲವಾಗಿ ಮುಚ್ಚಿದ್ದ, ಗಂಟಲನ್ನು ಒತ್ತಿ ಹಿಡಿದಿದ್ದ. ಸಂತ್ರಸ್ತೆಯ ಕಣ್ಣಿನಿಂದ ಕುತ್ತಿಗೆವರೆಗೆ ಗಾಯಗಳಾಗಿವೆ. ಥೈರಾಯ್ಡ್ ಕಾರ್ಟಿಲೇಜ್ ಮುರಿದಿದೆ ಎಂದು ಹೇಳಲಾಗಿದೆ. ಸಂತ್ರಸ್ತೆಯ ಖಾಸಗಿ ಅಂಗದಲ್ಲಿಯೂ ರಕ್ತಸ್ರಾವವಾಗಿದ್ದು, ಆರೋಪಿ ಚಿತ್ರಹಿಂಸೆ ನೀಡಿದ್ದಾನೆ ಎಂದು ವರದಿಯಲ್ಲಿ ಹೇಳಲಾಗಿದೆ. ಸಂತ್ರಸ್ತ ಕಿರಿಯ ವೈದ್ಯೆಯ ಅತ್ಯಾಚಾರ ವೇಳೆ ಆರೋಪಿ ಸಂಜಯ್ ಕಚ್ಚಿದ್ದ, ಉಗುರಿನಿಂದ ಪರಚಿದ್ದ. ಆರೋಪಿ ಸಾಕ್ಷ್ಯ ನಾಶಕ್ಕೆ ತನ್ನ ಬಟ್ಟೆಗಳನ್ನು ನೀರಿನಿಂದ ಅದಾಗಲೇ ತೊಳೆದುಬಿಟ್ಟಿದ್ದ. ಹಾಗಿದ್ದರೂ ಆತನ ಉಗುರುಗಳ ಸಂದಿಯಲ್ಲಿ ಸಂತ್ರಸ್ತೆಯ ಚರ್ಮದ ತುಣುಕು ಮತ್ತು ರಕ್ತದ ಅಂಶಗಳು ಸಿಕ್ಕಿದ್ದವು. ಅಲ್ಲದೇ, ಆತ ಬಟ್ಟೆ ತೊಳೆದಿದ್ದರೂ ರಕ್ತದ ಕಲೆ ಕೆಲವೆಡೆ ಕಂಡುಬಂದಿದೆ. ಆರೋಪಿಯ ಮೊಬೈಲ್‌ನ ಇಯರ್‌ಫೋನ್ ತುಣುಕೂ ಘಟನೆ ಸ್ಥಳದಲ್ಲಿ ಪತ್ತೆಯಾಗಿರುವುದು ತನಿಖೆಗೆ ಸಹಕಾರಿಯಾಗಿದೆ.

ಕೋಲ್ಕತ್ತ ಕಿರಿಯ ವೈದ್ಯೆ ಅತ್ಯಾಚಾರ-ಕೊಲೆ ಪ್ರಕರಣ

ದೇಶಾದ್ಯಂತ ವೈದ್ಯರ ಪ್ರತಿಭಟನೆ 2ನೇ ದಿನ

ದೆಹಲಿ: ಪಶ್ಚಿಮ ಬಂಗಾಳದ ರಾಜಧಾನಿ ಕೋಲ್ಕತ್ತದಲ್ಲಿನ ಆರ್‌ಜೆ ಕರ್ ಸರಕಾರಿ ವೈದ್ಯ ಕಾಲೇಜು-ಆಸ್ಪತ್ರೆಯಲ್ಲಿ ಕಿರಿಯ ವೈದ್ಯೆಯ ಅತ್ಯಾಚಾರ-ಕೊಲೆ ಪ್ರಕರಣವನ್ನು ದೆಹಲಿಯ 'ನಿರ್ಭಯಾ ಪ್ರಕರಣ'ಕ್ಕೆ ಹೋಲಿಸಿರುವ ದೇಶಾದ್ಯಂತದ ವೈದ್ಯ ಸಮೂಹ ತೀವ್ರ ಪ್ರತಿಭಟನೆ ನಡೆಸಿದೆ. ದೇಶದ ವಿವಿಧೆಡೆ ವೈದ್ಯರು, ವೈದ್ಯಕೀಯ ವಿದ್ಯಾರ್ಥಿಗಳು ಪ್ರತಿಭಟನೆ ಮುಂದುವರಿಸಿದ್ದಾರೆ. ಶೀಘ್ರ ನ್ಯಾಯದಾನಕ್ಕೆ, ಆರೋಪಿಗೆ ಕಠಿಣಾತಿಕಠಿಣ ಶಿಕ್ಷೆಗೆ ಆಗ್ರಹಿಸಿದ್ದಾರೆ.

ಪಟನಾದ ಆಲ್ ಇಂಡಿಯ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ರಾಂಚಿಯ ರಾಜೇಂದ್ರ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ದೆಹಲಿಯ ಏಮ್ಸ್ , ರಾಮಮನೋಹರ್ ಲೋಹಿಯಾ ಆಸ್ಪತ್ರೆ ಮತ್ತು ಆರ್‌ಎಮ್‌ಎಲ್ ಆಸ್ಪತ್ರೆ, ಮುಂಬೈನ ನಾಯರ್ ಆಸ್ಪತ್ರೆ, ಇಂದೋರ್‌ನ ಮಹಾರಾಜ ಯಶವಂತರಾವ್ ಆಸ್ಪತ್ರೆ, ಜೈಪುರ್‌ನ ಸವಾಯ್ ಮಾನಸಿಂಗ್ ಮೆಡಿಕಲ್ ಕಾಲೇಜು ಹಾಗೂ ಲಖನೌನ ಕಿಂಗ್ ಜಾರ್ಜ್ ಮೆಡಿಕಲ್ ಯುನಿವರ್ಸಿಟಿ , ಬೆಂಗಳೂರಿನ ನಿಮ್ಹಾನ್ಸ್ ವೈದ್ಯಕೀಯ ಸಂಸ್ಥೆಗಳ ವೈದ್ಯರು 2ನೇ ದಿನವೂ ಪ್ರತಿಭಟನೆ ಮುಂದುವರೆಸಿದ್ದಾರೆ. ಪರಿಣಾಮ, ಆಸ್ಪತ್ರೆಗಳಲ್ಲಿ ವೈದ್ಯಕೀಯ ಸೇವೆಗಳಲ್ಲಿ ಕೆಲವು ಸ್ಥಗಿತಗೊಂಡಿವೆ. ಕೆಲವು ವ್ಯತ್ಯಯವಾಗಿವೆ.

ಆಸ್ಪತ್ರೆಯೇ ನಮಗೆ 2ನೇ ಮನೆ

ಕೋಲ್ಕತ್ತಾ ವೈದ್ಯೆ ಮೇಲೆ ನಡೆದ ಭೀಕರ ದಾಳಿ ಖಂಡಿಸಿದ ವೈದ್ಯರೊಬ್ಬರು ಇಂತಹ ಘಟನೆಗಳಿಂದ ಕೆಲಸದ ಸ್ಥಳ ಅಸುರಕ್ಷಿತ ಎನಿಸುತ್ತಿದೆ ಎಂದು ಹೇಳಿದ್ದಾರೆ. ಸಹಪಾಠಿಯೊಬ್ಬರು ಭೀಕರವಾಗಿ ಕೊಲೆಯಾಗಿದ್ದಾರೆ. ಆಸ್ಪತ್ರೆ ನಮಗೆ ಎರಡನೇ ಮನೆಯಿದ್ದಂತೆ. ಆ ಮನೆ ಈಗ ಸುರಕ್ಷಿತ ಎನಿಸುತ್ತಿಲ್ಲ, ಆರ್ ಜಿ ಕರ್ ವೈದ್ಯಕೀಯ ಕಾಲೇಜಿನ ಆ ವಾರ್ಡ್‌ನಲ್ಲಿ ರಾತ್ರಿ ನಡೆದ ಭೀಕರ ಘಟನೆಯನ್ನು ಊಹಿಸಿಕೊಂಡರೆ ಮೈ ನಡುಗುತ್ತದೆ. ಎಂದು ಹೇಳಿದ್ದಾರೆ.

ಬುಧವಾರದೊಳಗೆ ತನಿಖೆ ಮುಗಿಸಿ: ಪಶ್ಚಿಮ ಬಂಗಾಳ ಸರಕಾರ ತನಿಖೆ ಪೂರ್ಣಗೊಳಿಸಲು ರಾಜ್ಯ ಪೊಲೀಸರಿಗೆ 7 ದಿನಗಳ ಅವಕಾಶ ನೀಡಿದೆ. ಆದರೆ ಪ್ರತಿಭಟನಾ ನಿರತ ವೈದ್ಯರು, ಇದನ್ನು ಪ್ರಶ್ನಿಸಿದ್ದಾರೆ. ಅಲ್ಲದೇ, ಬುಧವಾರ ತನಿಖೆ ಮುಗಿಸಬೇಕು ಎಂದೂ ಆಗ್ರಹಿಸಿದ್ದಾರೆ. ಪ್ರಾಂಶುಪಾಲ ಸಂದೀಪ್ ಘೋಷ್‌ರನ್ನು ಅಮಾನತು ಮಾಡುವ ಬದಲು ಬೇರೆ ಕಾಲೇಜಿಗೆ ವರ್ಗಾವಣೆ ಮಾಡಿದ ರಾಜ್ಯ ಸರಕಾರದ ಕ್ರಮಕ್ಕೂ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಜು.19ರಂದು ಪೊಲೀಸ್ ಗೋಲಿಬಾರ್‌ಗೆ ಅಂಗಡಿ ಮಾಲೀಕ ಬಲಿ | ಹಿತೈಷಿಯಿಂದ ಢಾಕಾ ಕೋರ್ಟ್‌ನಲ್ಲಿ ಖಾಸಗಿ ದೂರು ದಾಖಲು | ಪೊಲೀಸ್ ತನಿಖೆಗೆ ಆದೇಶ

ಶೇಕ್ ಹಸೀನಾ ವಿರುದ್ಧ ಢಾಕಾದಲ್ಲಿ ಕೊಲೆ ಕೇಸ್

ಢಾಕಾ: ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ 76 ವರ್ಷದ ಶೇಖ್ ಹಸೀನಾ ವಿರುದ್ಧ ಕೊಲೆ

ಪ್ರಕರಣ ದಾಖಲಾಗಿದೆ.

ಢಾಕಾದ ಮೆಟ್ರೊ ಪಾಲಿಟನ್ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಾಗಿದ್ದು, ಕಿರಾಣಿ ಅಂಗಡಿ ಮಾಲೀಕ ಪೊಲೀಸ್ ಗೋಲಿಬಾರ್‌ನಲ್ಲಿ ಸಾವಿಗೀಡಾದ ಪ್ರಕರಣದಲ್ಲಿ ಅಂದಿನ ಪ್ರಧಾನಿ ಶೇಖ್ ಹಸೀನಾ ಪಾತ್ರದ ಬಗ್ಗೆ ತನಿಖೆ ನಡೆಸುವಂತೆ ನ್ಯಾಯಾಧೀಶ ರಾಜೇಶ್ ಚೌಧರಿ ಅವರು ಢಾಕಾ ಪೊಲೀಸರಿಗೆ ಆದೇಶಿಸಿದ್ದಾರೆ ಎಂದು ದೂರುದಾರನ ಪರ ವಕೀಲರು ಸುದ್ದಿಗಾರರಿಗೆ ಮಂಗಳವಾರ ತಿಳಿಸಿದ್ದಾರೆ.

ಬಾಂಗ್ಲಾದಲ್ಲಿ ಜುಲೈನಲ್ಲಿ ನಡೆದ ಮೀಸಲು ತಾರತಮ್ಯ ವಿರೋಧಿ ಆಂದೋಲನದ ಹಿಂಸಾತ್ಮಕ ಪ್ರತಿಭಟನೆಯನ್ನು ಹತ್ತಿಕ್ಕಲು ಪೊಲೀಸರು ಗೋಲಿಬಾರ್ ನಡೆಸಿದಾಗ ರಸ್ತೆ ದಾಟುತ್ತಿದ್ದ ಕಿರಾಣಿ ಅಂಗಡಿ ಮಾಲೀಕ ಅಬು ಸೈಯದ್ ಎಂಬವರಿಗೆ ಗುಂಡು ತಗುಲಿ ಸಾವಿಗೀಡಾದರು. ಅವರ ಸಾವಿಗೆ ಅಂದಿನ ಪ್ರಧಾನಿ ಶೇಖ್ ಹಸೀನಾ ಮತ್ತು ಇತರೆ ಆರು ಜನರೇ ಕಾರಣ ಎಂದು ಅಬು ಸೈಯದ್ ಅವರ ಹಿತೈಷಿ ಅಮೀರ್ ಹಮ್ಜಾ ಎಂಬವರು ನ್ಯಾಯಾಲಯದಲ್ಲಿ ಖಾಸಗಿಯಾಗಿ ಕೊಲೆ ಪ್ರಕರಣ ದಾಖಲಿಸಿದ್ದಾರೆ.

ಅವಾಮಿ ಲೀಗ್ ಪ್ರಧಾನ ಕಾರ್ಯದರ್ಶಿ ಒಬೇದುಲ್ಲಾ ಕ್ವಾದರ್, ಮಾಜಿ ಗೃಹ ಸಚಿವ ಅಸಾದುಝ್ಝುಮಾನ್ ಖಾನ್ ಕಮಾಲ್ ಮತ್ತು ಮಾಜಿ ಪೊಲೀಸ್ ಮಹಾನಿರೀಕ್ಷಕ ಚೌಧರಿ ಅಬ್ದುಲ್ಲಾ ಅಲ್ ಮಾಮುನ್ ಹಾಗೂ ಮೂವರು ಉನ್ನತ ಶ್ರೇಣಿಯ ಪೊಲೀಸ್ ಅಧಿಕಾರಿಗಳನ್ನೂ ಆರೋಪಿಗಳಾಗಿಸಿ ದೂರಿನಲ್ಲಿ ಹೆಸರಿಸಲಾಗಿದೆ. ಢಾಕಾ ನಗರದ ಮೊಹಮ್ಮದ್‌ಪುರ ಪ್ರದೇಶದಲ್ಲಿ ಜು.19ರಂದು ಪ್ರತಿಭಟನಾ ಮೆರವಣಿಗೆ ವೇಳೆ ಪೊಲೀಸರು ಗುಂಡು ಹಾರಿಸಿದ್ದು, ಕಿರಾಣಿ ಅಂಗಡಿ ಮಾಲೀಕ ಅಬು ಸೈಯದ್ ಸಾವನ್ನಪ್ಪಿದ್ದ. ಪ್ರತಿಭಟನೆ ಹತ್ತಿಕ್ಕಲು ಪೊಲೀಸರಿಗೆ ಗೋಲಿಬಾರ್ ಆದೇಶ ನೀಡಿದ್ದೇ ಅಬು ಸೈಯದ್ ಸಾವಿಗೆ ಕಾರಣ ಎಂದು ಅಮೀರ್ ಹಮ್ಜಾ, ಏಳು ಆರೋಪಿಗಳ ವಿರುದ್ಧ ಕೊಲೆ ಪ್ರಕರಣ ದಾಖಲಿಸಿದ್ದಾರೆ ಎಂದು ಢಾಕಾ ಟ್ರಿಬ್ಯೂನ್ ಪತ್ರಿಕೆ ವರದಿ ಮಾಡಿದೆ.

ದೂರುದಾರ ಹಮ್ಜಾ

ಅಬು ಸೈಯದ್ ಪೊಲೀಸರ ಗುಂಡಿಗೆ ಬಲಿಯಾದ. ಕಾನೂನು ಹೋರಾಟ ನಡೆಸಲು ಆತನ ಕುಟುಂಬದ ಬಳಿ ಹಣವಿಲ್ಲ. ಹಾಗಾಗಿ ನಾನೇ ಕೋರ್ಟ್‌ನಲ್ಲಿ ಖಾಸಗಿ ದೂರು ದಾಖಲಿಸಿದೆ ಎಂದು ಅಮೀರ್ ಹಮ್ಜಾ ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ.

ಪಾಕ್ ಭಿಕ್ಷುಕರ ಜಾಗತಿಕ ಸಮಸ್ಯೆ

ಇಸ್ಲಾಮಾಬಾದ್: ದೇಶಗಳಲ್ಲಿ ಭಿಕ್ಷುಕರ ಸಂಖ್ಯೆ ಇತ್ತೀಚೆಗೆ ತೀವ್ರವಾಗಿ ಹೆಚ್ಚುತ್ತಿರುವುದು ಮಧ್ಯಪ್ರಾಚ್ಯ ಮತ್ತು ಗಲ್ಫ್ ರಾಷ್ಟ್ರಗಳಿಗೆ ದೊಡ್ಡ ತಲೆನೋವಾಗಿದೆ. ಅದರಲ್ಲೂ ಶೇ.90ರಷ್ಟು ಭಿಕ್ಷುಕರು ಪಾಕಿಸ್ತಾನ ಮೂಲದವರೇ ಆಗಿದ್ದಾರೆ. ಪಾಕ್ ಪ್ರಜೆಗಳು ಪ್ರವಾಸಿಗರ ಸೋಗಲ್ಲಿ ತೆರಳಿ ಅರಬ್ ದೇಶಗಳಲ್ಲಿ ಭಿಕ್ಷಾಟನೆಗೆ ತೊಡಗುತ್ತಿರುವುದರಿಂದ ಗಲ್ಫ್ ದೇಶಗಳು ಇಸ್ಲಾಮಾಬಾದ್‌ನತ್ತ ಕೆಂಗಣ್ಣು ಬೀರುತ್ತಿವೆ.

ಸೌದಿ ಅರೇಬಿಯ, ಯುನೈಟೆಡ್ ಅರಬ್ ಎಮಿರೇಟ್ಸ್(ಯುಎಇ), ಇರಾಕ್, ಇರಾನ್, ಓಮನ್, ಟರ್ಕಿ ದೇಶಗಳಿಗೆ ಪಾಕ್‌ನಿಂದ ದೊಡ್ಡ ಸಂಖ್ಯೆ ಜನರು ಧಾರ್ಮಿಕ ಪ್ರವಾಸ ನೆಪದಲ್ಲಿ ತೆರಳಿ ಆ ದೇಶಗಳಲ್ಲೇ ಉಳಿದು ಭಿಕ್ಷಾಟನೆ ನಡೆಸುತ್ತಿದ್ದಾರೆ. ಮಕ್ಕಳನ್ನೂ ಕರೆದೊಯ್ದು ಭಿಕ್ಷೆಗೆ ತೊಡಗಿಸುತ್ತಿರುವುದು ಗಲ್ಫ್ ದೇಶಗಳ ಸಿಟ್ಟಿಗೆ ಕಾರಣವಾಗಿದೆ. ಫೆಡರಲ್ ತನಿಖಾ ಸಂಸ್ಥೆ 'ಎಫ್‌ಐಎ' ಪ್ರಕಾರ, ಇತ್ತೀಚಿನ ವರ್ಷಗಳಲ್ಲಿ ಭಿಕ್ಷಾಟ ನೆಗೆ ತೆರಳುತ್ತಿದ್ದಾರೆ ಎಂಬ ಶಂಕೆ ಮೇಲೆಯೇ 44 ಸಾವಿರ ಪ್ರಯಾಣಿಕರನ್ನು ಗಲ್ಫ್ ಮಾರ್ಗದ ವಿಮಾನಗಳಿಂದ ಕೆಳಕ್ಕಿಸಲಾಗಿದೆ. ಇಂಥ ಸೋಗಿನ ಯಾತ್ರಿಕರನ್ನು ಪಾಕ್ ಅಧಿಕಾರಿಗಳು ತಮ್ಮ ದೇಶದ ವಿಮಾನ ನಿಲ್ದಾಣದಲ್ಲೇ ಪರಿಶೀಲಿಸಿ ತಡೆಯಬೇಕು ಎಂದು ಗಲ್ಫ್ ದೇಶಗಳು ಆಗ್ರಹಿಸಿವೆ.

ತನ್ನ ಪ್ರಜೆಗಳು ಭಿಕ್ಷಾಟ ನೆಗಾಗಿ ಗಲ್ಫ್ ದೇಶಗಳಿಗೆ ತೆರಳುವ ಬಗ್ಗೆ ಪಾಕ್ ಆತಂಕ ವ್ಯಕ್ತಪಡಿಸಿದೆ. ದಕ್ಷಿಣ ಪಂಜಾಬ್‌ನಿಂದ ಧಾರ್ಮಿಕ ಯಾತ್ರೆ ಹೆಸರಲ್ಲಿ ಗಲ್ಫ್ ದೇಶಗಳಿಗೆ ಹೋಗಿ ಭಿಕ್ಷೆ ಬೇಡುವವರ ಸಂಖ್ಯೆ ಹೆಚ್ಚಿದೆ. ಹಾಗಾಗಿ ಯಾತ್ರೆ ಮುಗಿಸಿ ವಾಪಸ್ ಬರುವಷ್ಟು ಹಣವಿದ್ದವರನ್ನು ಮಾತ್ರವೇ ಕಳುಹಿಸುವಂತೆ ಗಲ್ಫ್ ದೇಶಗಳು ಪಾಕ್ ಆಡಳಿತಕ್ಕೆ ಆಗ್ರಹಿಸಿವೆ.

ಅ.15ರವರೆಗೂ ಪ್ರತಿಕ್ರಿಯೆ, ಸಲಹೆಗಳಿಗೆ ಸ್ವಾಗತ

ಪ್ರಸಾರ ಸೇವಾ ವಿಧೇಯಕ ಕರಡು ವಾಪಸ್ ಪಡೆದ ಕೇಂದ್ರ

ದೆಹಲಿ: ಪ್ರಸ್ತಾವಿತ ಪ್ರಸಾರ ಸೇವೆಗಳ (ನಿಯಂತ್ರಣ) ಮಸೂದೆಯ ಕರಡು ಪ್ರತಿ ಬಗ್ಗೆ ತೀವ್ರ ವಿರೋಧ ವ್ಯಕ್ತವಾದ ಬಳಿಕ ಕೇಂದ್ರದ ಎನ್‌ಡಿಎ ಸರಕಾರ ಕರಡು ವಾಪಸ್ ಪಡೆದಿದೆ. ಮತ್ತಷ್ಟು ಚರ್ಚೆ-ಸಮಾಲೋಚನೆ ನಡೆಸಿದ ಬಳಿಕ ಹೊಸದಾಗಿಯೇ ಪ್ರಸಾರ ಸೇವೆಗಳ ಕಾಯಿದೆಯ ಕರಡು ಸಿದ್ಧಪಡಿಸುವುದಾಗಿ ಸರಕಾರ ಸೋಮವಾರ ಹೇಳಿದೆ.

ಪ್ರಸಾರ ಸೇವೆಗಳ(ನಿಯಂತ್ರಣ) ಮಸೂದೆಯ ಕರಡನ್ನು 'ಡಿಜಿಪಬ್' ಮತ್ತು ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯ(ಭಾರತೀಯ ಸಂಪಾದಕರ ಒಕ್ಕೂಟ) ಮೊದಲಾದ ಮಾಧ್ಯಮ ಪ್ರಾತಿನಿಧಿಕ ಸಂಸ್ಥೆಗಳು ಟೀಕಿಸಿವೆ. ಡಿಜಿಟಲ್ ಮಾಧ್ಯಮ ಸಂಸ್ಥೆಗಳನ್ನಾಗಲೀ, ನಾಗರಿಕ ಸಮಾಜದ ಸಂಘಗಳ ಜತೆಗಾಗಲೀ ಈ ಪ್ರಸ್ತಾವಿತ ಮಸೂದೆ ಬಗ್ಗೆ ಸಮಾಲೋಚನೆ ನಡೆಸಿಯೇ ಇಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದವು. ಕರಡು ಪ್ರತಿಯಲ್ಲಿನ ಕೆಲವು ನಿಬಂಧನೆಗಳು ಆನ್‌ಲೈನ್ ಕಂಟೆಂಟ್ ಕ್ರಿಯೇಟರ್‌ಗಳಲ್ಲಿ ಭೀತಿ ಹುಟ್ಟುಹಾಕುವಂತಿದ್ದವು. ತಮ್ಮನ್ನು ಒಟಿಟಿ ಅಥವಾ ಡಿಜಿಟಲ್ ಸುದ್ದಿ ಪ್ರಸಾರಕರ ಗುಂಪಿಗೆ ಸೇರಿಸಲು ಯತ್ನವಿದು ಎಂದು ಕಂಟೆಂಟ್ ಕ್ರಿಯೇಟರ್‌ಗಳು ಆಕ್ಷೇಪ ವ್ಯಕ್ತಪಡಿಸಿದ್ದರು. ಅ.15ರ ವರೆಗೆ ಕಾಮೆಂಟ್‌ಗಳು ಮತ್ತು ಸಲಹೆಗಳನ್ನು ಸ್ವೀಕರಿಸಲಾಗುವುದು. ವಿಸ್ತೃತ ಚರ್ಚೆ ನಂತರವೇ ಹೊಸ ಕರಡುಪ್ರತಿ ಎಂದು ತಿಳಿಸಿದೆ.

ಹೊಸ ಕಾಯಿದೆ ತರುವ

'ಕೇಬಲ್ ಟೆಲಿವಿಷನ್ ನೆಟ್‌ವರ್ಕ್ಸ್ (ರೆಗ್ಯುಲೇಷನ್) ಆಕ್ಟ್-1995' ಕಾಯಿದೆಗೆ ಬದಲಾಗಿ ಹೊಸ ಮಸೂದೆ ತರುವ ಯತ್ನವನ್ನು ಕೇಂದ್ರದ ಎನ್‌ಡಿಎ ಸರಕಾರ ನಡೆಸುತ್ತಿದೆ. 'ಬ್ರಾಡ್‌ಕಾಸ್ಟಿಂಗ್ ಸರ್ವಿಸಸ್(ರೆಗ್ಯುಲೇಷನ್) ಬಿಲ್ -202 3' (ಪ್ರಸಾರ ಸೇವೆಗಳ- ನಿಯಂತ್ರಣ-ಮಸೂದೆ-2023) ಮೊದಲಿಗೆ 2023ರ ನವೆಂಬರ್‌ನಲ್ಲಿ ಅಂದಿನ ಸಚಿವ ಅನುರಾಗ್ ಠಾಕೂರ್ ಅವರಿಂದ ಮಂಡನೆಯಾಗಿತ್ತು.

ಬಾಂಗ್ಲಾದೇಶದ ಬೆಳವಣಿಗೆಗೆ ನಾವು ಕಾರಣವಲ್ಲ: ಅಮೆರಿಕ

ವಾಷಿಂಗ್ಟನ್: ಕಳೆದ ಜನವರಿಯಲ್ಲಷ್ಟೇ ಬಾಂಗ್ಲಾದೇಶ ಜನರಿಂದ ನೇರವಾಗಿ ಚುನಾಯಿತವಾಗಿದ್ದ ಅವಾಮಿ ಲೀಗ್ ಪಕ್ಷದ

ಸರಕಾರದ ಪತನಕ್ಕೆ ಅಮೆರಿಕದ ದುರಾಸೆಯೇ ಕಾರಣ ಎಂಬ ಆರೋಪವನ್ನು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕರೀನ್ ಜೀನ್ ಪಿಯರ್ ನಿರಾಕರಿಸಿದ್ದಾರೆ.

ಸೇಂಟ್ ಮಾರ್ಟಿನ್ ದ್ವೀಪವನ್ನು ಅಮೆರಿಕಕ್ಕೆ ಬಿಟ್ಟುಕೊಟ್ಟಿದ್ದರೆ ಮತ್ತು ಬಂಗಾಳ ಕೊಲ್ಲಿಯಲ್ಲಿ ಅಮೆರಿಕ ಪ್ರಾಬಲ್ಯ ಸಾಧಿಸಲು ಅವಕಾಶ ಮಾಡಿ ಕೊಟ್ಟಿದ್ದರೆ ತಾವು ಅಧಿಕಾರದಲ್ಲಿ ಉಳಿಯಬಹುದಿತ್ತು ಎಂದು ಪದಚ್ಯುತ ಬಾಂಗ್ಲಾದೇಶ ಪ್ರಧಾನಿ ಶೇಖ್ ಹಸೀನಾ ಹೇಳಿದ್ದರು. ಅದಕ್ಕೆ ಪ್ರತಿಯಾಗಿ ಶ್ವೇತಭವನ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದೆ. ಬಾಂಗ್ಲಾದೇಶದ ಆಂತರಿಕ ವ್ಯವಹಾ ರಗಳಲ್ಲಿ ಅಮೆರಿಕ ಮಧ್ಯ ಪ್ರವೇಶಿಸಿಲ್ಲ. ಪ್ರಧಾನಿಯಾಗಿದ್ದ ಶೇಖ್ ಹಸೀನಾ ರಾಜೀನಾಮೆ ನೀಡಿ ದೇಶ ತೊರೆಯಲು ಅಮೆರಿಕ ಕಾರಣವಲ್ಲ ಎಂದು ಕರೀನ್ ಜೀನ್ ಪಿಯರ್ ಸ್ಪಷ್ಟಪಡಿಸಿದ್ದಾರೆ. ಬಾಂಗ್ಲಾ ಬೆಳವಣಿಗೆಗಳಿಗೂ ಅಮೆರಿಕಕ್ಕೂ ಯಾವುದೇ ಸಂಬಂಧವಿಲ್ಲ, ಬಾಂಗ್ಲಾದಲ್ಲಿ ಇತ್ತೀಚೆಗೆ ನಡೆದ ಹಿಂಸಾಚಾರ, ಶೇಖ್ ಹಸೀನಾ ಅವರ ರಾಜೀನಾಮೆ ವಿಚಾರಗಳಲ್ಲಿ ನಾವು ಯಾವುದೇ ರೀತಿಯಲ್ಲಿಯೂ ಭಾಗಿಯಾಗಿಲ್ಲ ಎಂದರು.

ಅಡ್ಡಗೋಡೆ ಮೇಲೆ..

ತಮ್ಮ ಭವಿಷ್ಯ ಆಯ್ಕೆ ಮಾಡುವುದು ಬಾಂಗ್ಲಾದೇಶದ ಜನರ ಹಕ್ಕು. ತಮ್ಮ ಸರಕಾರದ ವಿಚಾರದಲ್ಲಿ ಬಾಂಗ್ಲಾ ಜನರೇ ನಿರ್ಧರಿಸಬೇಕು. ಅವರ ನಿರ್ಧಾರಕ್ಕೆ ನಮ್ಮ ಬೆಂಬಲವಿರುತ್ತದೆ ಅಷ್ಟೆ ಎಂದು ಶ್ವೇತಭವನ ಪತ್ರಿಕಾ ಕಾರ್ಯದರ್ಶಿ ಜೀನ್-ಪಿಯರ್ ಅಡ್ಡಗೋಡೆ ಮೇಲೆ ದೀಪವಿಟ್ಟಂತೆ ಹೇಳಿದ್ದಾರೆ.

ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, 1ನೇ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು-560 002.
ದೂರವಾಣಿ: 080-22107704, 22484516 ವೆಬ್‌ಸೈಟ್: https://kpp.karnataka.gov.in
ಇ-ಮೇಲ್: https://kannadappradhikara@gmail.com
ಸಂಖ್ಯೆ: ಕಪುಪ್ರಾ/31/ಕು.ಪು.ಮು/2023-24 ದಿನಾಂಕ: 13.08.2024
ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ
ಕನ್ನಡ ಪುಸ್ತಕ ಪ್ರಾಧಿಕಾರದಿಂದ 'ಕುಮಾರವ್ಯಾಸ ಭಾರತ ಎಂಬ ಕರ್ಣಾಟಭಾರತಕಥಾಮಂಜರಿ' ಕನ್ನಡ ಕೃತಿ ಮುದ್ರಣಕ್ಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಇ-ಟೆಂಡರ್ ಕರೆಯಲಾಗಿದ್ದು, ಅಂದಾಜು ಮೊತ್ತ **ರೂ. 17,00,000.00 ಗಳು. ದಿನಾಂಕ: 14.08.2024 ರಿಂದ 28.08.2024ರ ಒಳಗೆ** ಇ-ಟೆಂಡರ್ ಭರ್ತಿ ಮಾಡಬಹುದು. ಟೆಂಡರ್ ದಾಸ್ತಾವೇಜು ಹಾಗೂ ಇತರೆ ಮಾಹಿತಿಗೆ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಮೊದಲನೇ ಮಹಡಿ, ಜೆ.ಸಿ. ರಸ್ತೆ, ಬೆಂಗಳೂರು-560 002. ದೂರವಾಣಿ ಸಂಖ್ಯೆ: 080-22484516/22107704 ಹಾಗೂ https://kpp.karnataka.gov.in ಇಲ್ಲಿ ಸಂಪರ್ಕಿಸುವುದು.
ಸಹಿ/-
ಆಡಳಿತಾಧಿಕಾರಿ,
ಕನ್ನಡ ಪುಸ್ತಕ ಪ್ರಾಧಿಕಾರ.
ವಾಸಾಸಂಇ/ವಾಪ್ರ/1436/ಎಂಎಎ/24-25

ನಗರಸಭಾ ಕಾರ್ಯಾಲಯ, ಕೊಳ್ಳೇಗಾಲ ಚಾಮರಾಜನಗರ ಜಿಲ್ಲೆ
Phone No :08224-252016 Website: www.kollegalacity.mrc.gov.in
E-mail: itstaff_ulb_kollegal@yahoo.co.in
ನಂ:ಮುನಿ/ಕೊನಸ/ಆ.ಶಾ/ಟೆಂಡರ್-ವಾ.ಚಾ/04/2024-25 ದಿನಾಂಕ:05-08-2024
-: ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ :-
ಕೊಳ್ಳೇಗಾಲ ನಗರಸಭೆಯ ನಗರಸಭೆ ನಿಧಿಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999 ಮತ್ತು ನಿಯಮಗಳು 2000 ರಂತೆ ನೊಂದಾಯಿತ ಅರ್ಹ ಪೂರೈಕೆದಾರರಿಂದ/ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ https://eproc.karnataka.gov.in ಪೋರ್ಟಲ್ ಮೂಲಕ ಕೊಳ್ಳೇಗಾಲ ನಗರಸಭೆಯ ಘನತ್ಯಾಜ್ಯ ವಸ್ತು ನಿರ್ವಹಣೆ ಮತ್ತು ವಿಲೇವಾರಿಗಾಗಿ ಲೋಡರ್ಸ್/ಹೆಲ್ಪರ್ಸ್‌ಗಳನ್ನು ಹೊರಗುತ್ತಿಗೆ ಮುಖಾಂತರ ತೆಗೆದುಕೊಳ್ಳುವುದು.(ಎಲ್ಲಾ ತೆರಿಗೆ ಒಳಗೊಂಡಂತೆ) ಇಂಡೆಂಟ್ ನಂ. DMA/2023-24/SE33176 ಅಂದಾಜು ಮೊತ್ತ ರೂ.57.55 ಲಕ್ಷಗಳಿಗೆ ಆನ್‌ಲೈನ್ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ಆಸಕ್ತ ನೊಂದಾಯಿತ ಸರಬರಾಜುದಾರರು/ ಗುತ್ತಿಗೆದಾರರು ತಮ್ಮ ದರ ನಮೂದಿಸಿದ ಟೆಂಡರ್‌ನ್ನು ಆನ್‌ಲೈನ್‌ನಲ್ಲಿ ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿ ಮತ್ತು ನಿಬಂಧನೆಗಳಿಗಾಗಿ https://eproc.karnataka.gov.in ಪೋರ್ಟಲ್‌ನಲ್ಲಿ ಸಂಪರ್ಕಿಸಬಹುದು.
ಸಹಿ/-
ಪೌರಾಯುಕ್ತರು ನಗರಸಭೆ ಕೊಳ್ಳೇಗಾಲ
ಸಂ:ವಾಸಾಸಂಇ:ಚಾನಗರ:166:2024-25

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಕಾರ್ಯನಿರ್ವಾಹಕ ಅಭಿಯಂತರ ಕಚೇರಿ, ಕೃಭಾಜನಿನಿ ನಾಎದಂಕಾ ವಿಭಾಗ,
ರೋಡಲಬಂಡಾ-584127 ತಾ: ಲಿಂಗಸುಗೂರು ಜಿ:ರಾಯಚೂರು.
ಸಂ.ಕೃಭಾಜನಿನಿ/ನಾಎದಂಕಾ/ವಿ/ಪಿಬಿ/ಟೆಂಡರ್/24-25/634 ದಿನಾಂಕ:- 9.8.2024
ಅಲ್ಪಾವಧಿ ಟೆಂಡರ ಪ್ರಕಟಣೆ(2ನೇ ಕರೆ)
(Ref:- 1) This office Tender Notification No.426 dtd.12.07.2024 Call-1)
(Through e-tendering only)
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರ ಪರವಾಗಿ Class.I Electrical Contractors/ Reputed Manufacturers/Dealers ರವರಿಂದ Special Repairs / Serviceing of 33 KV substation and pumps & motors at first head work and second head work under RLIS. (KBJNL/2024-25/IW/WORK_INDENT288Call2) ಎಂಬ ಕಾಮಗಾರಿಗೆ ಸಂಬಂಧಿಸಿದಂತೆ, ದ್ವಿಲಕೋಟೆ ಮೂಲಕ ಶೇಕಡಾವಾರು ದರದ ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪೋರ್ಟಲ್ ಮೂಲಕ ಕರೆಯಲಾಗಿದೆ. ಸದರಿ ಟೆಂಡರ್‌ಗಳನ್ನು ಅರ್ಹ Class.I Electrical Contractors/ Reputed Manufacturers/Dealers ರವರು ದಿನಾಂಕ 9.8.2024 ರಿಂದ 17.8.2024 ಸಾಯಂಕಾಲ 5.00 ಗಂಟೆಯವರೆಗೆ www.kppp.karnataka.gov.in ನಲ್ಲಿ ವೀಕ್ಷಿಸಿ ಟೆಂಡರ್ ಡಾಕುಮೆಂಟಗಳನ್ನು ಇ-ಪೋರ್ಟಲ್ ಮುಖಾಂತರ ಭರ್ತಿ ಮಾಡಿ ಸಲ್ಲಿಸಬಹುದಾಗಿದೆ. ಹಾಗೂ ಸದರಿ ಕಾಮಗಾರಿಯ ತಾಂತ್ರಿಕ ಬಿಡ್ಡನ್ನು ದಿ. 19.08.2024 ಪೂರ್ವಾಹ್ನ 11.00 ಗಂಟೆಗೆ ತೆರೆಯಲಾಗುವುದು.
ಆಸಕ್ತ ಗುತ್ತಿಗೆದಾರರು ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ಪಬ್ಲಿಕ್ ಪೋರ್ಟಲ್ ವೆಬ್‌ಸೈಟ್ www.kppp.karnataka.gov.in ನಲ್ಲಿ ಹಾಗೂ ಈ ಕೆಳ ಸಹಿ ಮಾಡಿರುವವರ ಕಚೇರಿಯಲ್ಲಿ, ಕಚೇರಿ ವೇಳೆಯಲ್ಲಿ ಪಡೆಯಬಹುದು.
ಸಹಿ/- ಕಾರ್ಯನಿರ್ವಾಹಕ ಅಭಿಯಂತರು,
ಕೃಭಾಜನಿನಿ, ನಾಎದಂಕಾ ವಿಭಾಗ,
ರೋಡಲಬಂಡಾ
DIP/RCR/194/KSMCA/193/2024-25

ಹಿಂದೂಗಳ ಮೇಲೆ ದಾಳಿ ತಡೆಗೆ ಕ್ರಮ

ಬಾಂಗ್ಲಾ ಸರಕಾರದಿಂದ ಹಾಟ್‌ಲೈನ್

ಢಾಕಾ: ಹಿಂದೂಗಳ ದೇಗುಲಗಳು ಸೇರಿದಂತೆ ಅನ್ಯಧರ್ಮೀಯರ ಧಾರ್ಮಿಕ ಕೇಂದ್ರಗಳ ಮೇಲಿನ ದಾಳಿ ತಡೆಗೆ ಬಾಂಗ್ಲಾದೇಶದ ಮಧ್ಯಂತರ ಸರಕಾರ ಕಡೆಗೂ ಮುಂದಾಗಿದೆ. ಹಾಟ್‌ಲೈನ್ ಸ್ಥಾಪಿಸಿರುವ ಮುಖ್ಯಸ್ಥ ಮೊಹಮ್ಮದ್ ಯೂನುಸ್ ನೇತೃತ್ವದ ಮಧ್ಯಂತರ ಸರಕಾರ, ಸಾರ್ವಜನಿಕರು ಯಾವುದೇ ಸಮಯದಲ್ಲಿ ತಕ್ಷಣವೇ ಕರೆ ಮಾಡಲು ಅನುಕೂಲವಾಗುವಂತೆ ಮೊಬೈಲ್ ಸಂಖ್ಯೆಯನ್ನು (01766-843809) ಪ್ರಕಟಿಸಿದೆ.

ಹಿಂದೂಗಳ ದೇವಸ್ಥಾನ, ಕ್ರೈಸ್ತರ ಚರ್ಚ್, ಬೌದ್ಧ ಧರ್ಮೀಯರ ಪಗೋಡಾ ಸೇರಿದಂತೆ ದೇಶದಲ್ಲಿನ ಅನ್ಯ ಧರ್ಮದವರ ಧಾರ್ಮಿಕ ಕೇಂದ್ರಗಳನ್ನು ದುಷ್ಕರ್ಮಿಗಳ ದಾಳಿಯಿಂದ ರಕ್ಷಿಸುವ ಪ್ರಯತ್ನ ವಾಗಿ ಹಾಟ್‌ಲೈನ್ ಸ್ಥಾಪಿಸಲಾಗಿದೆ. ಒಂದೊಮ್ಮೆ ದಾಳಿ ನಡೆದರೆ ಯಾವುದೇ ಸಮಯದಲ್ಲಾದರೂ ಸಾರ್ವಜನಿಕರು ಕರೆ ಮಾಡಬಹುದು ಅಥವಾ ಕಿರು ಸಂದೇಶ ರವಾನಿಸಬಹುದು. ಕರೆ ಅಥವಾ ಸಂದೇಶಕ್ಕೆ ಪೊಲೀಸರು ತಕ್ಷಣವೇ ಸ್ಪಂದಿಸುವರು. ಹಿಂದೂಗಳು ಸೇರಿದಂತೆ ಅಲ್ಪಸಂಖ್ಯಾತ ಸಮುದಾಯದವರು ಈ ಸಂಖ್ಯೆಗೆ ಕರೆ ಮಾಡಿ ಮಾಹಿತಿ ನೀಡಬೇಕು ಎಂದು ಧಾರ್ಮಿಕ ವ್ಯವಹಾರಗಳ ಸಚಿವಾಲಯ ಸೋಮವಾರ ಪ್ರಕಟಣೆ ಹೊರಡಿಸಿ ಮನವಿ ಮಾಡಿದೆ.

ಈ ಸುದ್ದಿಯನ್ನು ಬಾಂಗ್ಲಾದೇಶದ ಬೆಂಗಾಲಿ ಭಾಷೆಯ ದಿನಪತ್ರಿಕೆ 'ಪ್ರೊಥೊಮ್ ಅಲೊ' ಮಂಗಳವಾರದ ಸಂಚಿಕೆಯಲ್ಲಿ ಪ್ರಕಟಿಸಿದೆ.

ಪ್ರತಿಭಟನೆ ಬಳಿಕ...

ಶೇಖ್ ಹಸೀನಾ ಸರಕಾರದ ಪದಚ್ಯುತಿ ನಂತರ ಬಾಂಗ್ಲಾದಲ್ಲಿ ಹಿಂದೂಗಳು ಮೇಲೆ ಸರಣಿ ಹಲ್ಲೆ, ದೌರ್ಜನ್ಯ, ಕೊಲೆ ನಡೆದಿತ್ತು. ನಾಲ್ಕೈದು ದೇಗುಲಗಳನ್ನು, ಭಾರತ ಸಾಂಸ್ಕೃತಿಕ ಕೇಂದ್ರಗಳನ್ನು ನಾಶಪಡಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಬಾಂಗ್ಲಾದೇಶದಲ್ಲಿನ ಹಿಂದೂಗಳು, ಬೌದ್ಧರು, ಕ್ರೈಸ್ತರು, ವಿದ್ಯಾರ್ಥಿಗಳು ಸೇರಿದಂತೆ 7 ಲಕ್ಷ ಜನರು ಢಾಕಾ, ಚಿತ್ತಗಾಂಗ್‌ನಲ್ಲಿ ಬೃಹತ್ ಪ್ರತಿಭಟನೆ ನಡೆಸಿದ್ದರು. ಆ ಬಳಿಕ ಎಚ್ಚೆತ್ತ ಮಧ್ಯಂತರ ಸರಕಾರ 'ಹಾಟ್‌ಲೈನ್' ಸೇವೆ ಆರಂಭಿಸಿದೆ.

ಸಮಾಚಾರ ಸಣ್ಣದಲ್ಲ

ಬಾಂಗ್ಲಾ ಹಣದುಬ್ಬರ 12 ವರ್ಷದಲ್ಲೇ ಗರಿಷ್ಠ

ಢಾಕಾ: ಮೀಸಲು ವಿರುದ್ಧ ವಿದ್ಯಾರ್ಥಿಗಳ ಹಿಂಸಾತ್ಮಕ ಪ್ರತಿಭಟನೆ, ಚುನಾಯಿತ ಸರಕಾರದ ಪದಚ್ಯುತಿ, ಪ್ರಧಾನಿ ದೇಶತ್ಯಾಗ, ರಾಜಕೀಯ ಅಸ್ಥಿರತೆ, ಹಿಂದೂಗಳ ಮೇಲೆ ದಾಳಿ-ದೌರ್ಜನ್ಯ, ಮಧ್ಯಂತರ ಸರಕಾರ ರಚನೆ ಮೊದಲಾದ ನಕಾರಾತ್ಮಕ ಅಂಶಗಳನ್ನೇ ಕಳೆದೊಂದು ತಿಂಗಳಿಂದ ಕಂಡಿರುವ ನೆರೆಯ ಬಾಂಗ್ಲಾದೇಶಕ್ಕೆ ಮತ್ತೊಂದು ಪೆಟ್ಟು ಬಿದ್ದಿದೆ. ಜುಲೈ ತಿಂಗಳಲ್ಲಿನ ಹಣದುಬ್ಬರ ಶೇ.11.66ಕ್ಕೆ ಏರಿಕೆಯಾಗಿದೆ. ಇದು ಕಳೆದ 12 ವರ್ಷಗಳಲ್ಲೇ ಗರಿಷ್ಠ ಮಟ್ಟದ ಹಣದುಬ್ಬರವಾಗಿದೆ.

ಸ್ವಾತಂತ್ರ್ಯೋತ್ಸವ ಸಿದ್ಧತೆ: ಶ್ರೀನಗರದಲ್ಲಿ ಬಿಗಿ ಭದ್ರತೆ

ಶ್ರೀನಗರ: ದೇಶದ 78ನೇ ಸ್ವಾತಂತ್ರ್ಯೋತ್ಸವ ಆಚರಣೆಗೆ ಶ್ರೀನಗರದಲ್ಲಿ ಬಿಗಿ ಭದ್ರತೆ ಕೈಗೊಳ್ಳಲಾಗಿದೆ. ಪ್ರಮುಖ ಸ್ಥಳಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ಕಾರ್ಯಕ್ರಮ ಸುಗಮವಾಗಿ ಮತ್ತು ಸುರಕ್ಷಿತವಾಗಿ ನಡೆಯಲು ವಾಹನಗಳ ತಪಾಸಣೆ ಹೆಚ್ಚಿಸಲಾಗಿದೆ. ಆಗಸ್ಟ್ 15ರಂದು ಶ್ರೀನಗರದ ಬಕ್ಷಿ ಮೈದಾನದಲ್ಲಿ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಧ್ವಜಾರೋಹಣ ನೆರವೇರಿಸಲಿದ್ದಾರೆ. ಜಮ್ಮುವಿನಲ್ಲಿ ಎಲ್‌ಜಿ ಸಲಹೆಗಾರ ಆರ್ ಆರ್ ಭಟ್ನಾಗರ್ ಧ್ವಜ ಹಾರಿಸಲಿದ್ದಾರೆ. ಇತ್ತೀಚೆಗೆ ಭಯೋತ್ಪಾದಕರ ಸರಣಿ ದಾಳಿ ನಡೆಯುತ್ತಿರುವುದರಿಂದ ಸ್ವಾತಂತ್ರ್ಯೋತ್ಸವಕ್ಕೆ 'ಕಾಂಪ್ಯಾಕ್ಟ್ ಸೆಕ್ಯೂರಿಟಿ ಯೋಜನೆ' ರಚಿಸಲಾಗಿದೆ. ಕಾರ್ಯಕ್ರಮದ ಸುರಕ್ಷತೆಗೆ ಬಹು ಸ್ತರದ ಭದ್ರತೆ ಕೈಗೊಳ್ಳಲಾಗಿದೆ ಎಂದು ಐಜಿಪಿ ವಿಧಿ ಕುಮಾರ್ ಬಿರ್ದಿ ಮಾಹಿತಿ ನೀಡಿದ್ದಾರೆ. ಜಮ್ಮು-ಕಾಶ್ಮೀರದ ಜನ ಸಾಕಷ್ಟು ಉತ್ಸುಕರಾಗಿ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದ ಸಿದ್ಧತೆಯಲ್ಲಿದ್ದಾರೆ. ಹರ್ ಘರ್ ತಿರಂಗಾ ಅಭಿಯಾನ ಕೂಡ ಯಶಸ್ವಿಯಾಗಿದೆ. ಇನ್ನೊಂದೆಡೆ, ಕೊಕೆರ್‌ನಾಗ್‌ನಲ್ಲಿ ಉಗ್ರ ನಿಗ್ರಹ ಕಾರ್ಯಾಚರಣೆ ಮಂಗಳವಾರವೂ ಮುಂದುವರೆದಿದೆ

ವಕ್ಫ್: ಜೆಪಿಸಿಗೆ ಅಧ್ಯಕ್ಷರ ನೇಮಕ

ದೆಹಲಿ: ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಕೇಂದ್ರ ಸರಕಾರ ಮಂಡಿಸಿದ್ದ 'ವಕ್ಫ್ ತಿದ್ದುಪಡಿ ಮಸೂದೆ-2024' ಅನ್ನು ಜಂಟಿ ಸಂಸದೀಯ ಸಮಿತಿಯ ಪರಾಮರ್ಶೆಗೆ ವಹಿಸಲಾಗಿದೆ. ಅದಕ್ಕಾಗಿ ಲೋಕಸಭೆಯ 21 ಮತ್ತು ರಾಜ್ಯಸಭೆಯ 10 ಸಂಸದರ ಸಮಿತಿಯನ್ನೂ ರಚಿಸಲಾಗಿದೆ. ಈ ಸಮಿತಿಗೆ ಅಧ್ಯಕ್ಷರಾಗಿ ಬಿಜೆಪಿ ಸಂಸದ ಜಗದಾಂಬಿಕ ಪಾಲ್ ಅವರನ್ನು ಮಂಗಳವಾರ ನೇಮಿಸಲಾಗಿದೆ. 8.5 ಲಕ್ಷ ಆಸ್ತಿಗಳನ್ನು ಒಳಗೊಂಡಿರುವ ವಕ್ಫ್ ಬೋರ್ಡ್‌ಗೆ ಸಂಬಂಧಿಸಿದ ಅಧಿಕಾರಗಳನ್ನು ಬದಲಿಸುವ ಉದ್ದೇಶದಿಂದ ಕಾಯ್ದೆಯಲ್ಲಿ ಬದಲಾವಣೆ ಮಾಡಲು ವಿಧೇಯಕದಲ್ಲಿ ಶಿಫಾರಸು ಮಾಡಲಾಗಿದೆ. ಬಿಜೆಪಿ ಮಿತ್ರಪಕ್ಷಗಳಾದ ಟಿಡಿಪಿ ಮತ್ತು ಜೆಡಿಯು ವಿಧೇಯಕಕ್ಕೆ ಪೂರ್ಣ ಬೆಂಬಲ ನೀಡಿದ್ದರೆ, ಪ್ರತಿಪಕ್ಷಗಳಾದ ಕಾಂಗ್ರೆಸ್, ಸಮಾಜವಾದಿ ಪಕ್ಷ ಮತ್ತು ಎಐಎಂಐಎಂ ಬಲವಾಗಿ ವಿರೋಧಿಸಿವೆ.

ಗಂಭೀರ ಪ್ರಕರಣಗಳಲ್ಲೂ ಜಾಮೀನು ಹಕ್ಕು: ಸುಪ್ರೀಂ

ದೆಹಲಿ: 'ಜಾಮೀನು ಎಂಬುದು ಒಂದು ನಿಯಮ ಹಾಗೂ ಜೈಲು ಶಿಕ್ಷೆ ಒಂದು ವಿನಾಯಿತಿ'. ಈ ಕಾನೂನಿನ ತತ್ವದಡಿಯೇ ಕಾನೂನು ಬಾಹಿರ ಚಟುವಟಿಕೆಗಳ ತಡೆ ಕಾಯ್ದೆ (ಯುಎಪಿಎ) ಅಡಿಯಲ್ಲಿ ಬರುವ ಗಂಭೀರ ಸ್ವರೂಪದ ಪ್ರಕರಣಗಳಲ್ಲೂ ಆರೋಪಿಗೆ ಜಾಮೀನು ಪಡೆಯುವ ಹಕ್ಕಿದೆ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ. ಈ ನಿಟ್ಟಿನಲ್ಲಿ ಯುಎಪಿಎ ಪ್ರಕರಣದಲ್ಲಿ ಪಿಎಫ್‌ಐ ~~ಉಗ್ರರಿಗೆ ಮನೆ ಬಾಡಿಗೆ ನೀಡಿದ್ದ ಆರೋಪಿ ಮನೆ~~ ಮಾಲೀಕನಿಗೆ ಕೋರ್ಟ್ ಜಾಮೀನು ನೀಡಿದೆ.

ಮಂಗಳವಾರ ಭಯೋತ್ಪಾದಕ ಕೃತ್ಯ ಎಸಗಲು ಸಂಚು ರೂಪಿಸಿದ್ದ ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆಯ ಕೆಲ ಸದಸ್ಯರಿಗೆ ಮನೆ ಬಾಡಿಗೆ ನೀಡಿದಕ್ಕಾಗಿ ಜಲಾಲುದ್ದಿನ್ ಖಾನ್ ಎಂಬವರ ಮೇಲೆ ಯುಎಪಿಎ ನಿಯಮಗಳಡಿ ಪ್ರಕರಣ ದಾಖಲಾಗಿತ್ತು. ತನಿಖೆ ನಡೆಸಿದ್ದ ಪೊಲೀಸರು ದೇಶದಲ್ಲಿ ಹಿಂಸಾಚಾರ, ಭಯೋತ್ಪಾದಕತೆ ನಡೆಸುವುದು ಆರೋಪಿಗಳ ಉದ್ದೇಶವಾಗಿತ್ತು ಎಂದು ಆರೋಪಿಸಿತ್ತು ಹಾಗೇ ಜಾಮೀನು ನೀಡದಂತೆ ವಾದಿಸಿತ್ತು. ಜಲಾಲುದ್ದಿನ್ ಜಾಮೀನು ಅರ್ಜಿ ವಿಚಾರಣೆ ಕೈಗೆತ್ತಿಕೊಂಡ ನ್ಯಾ. ಅಭಯ್ ಎಸ್ ಓಕಾ ಮತ್ತು ಅಗಸ್ಟಿನ್ ಜಾರ್ಜ್ ಮಸೀಹ್ ಅವರ ಪೀಠ ಆರೋಪಿಗೆ ಜಾಮೀನು ಮಂಜೂರು ಮಾಡಿದೆ. ಆರೋಪಿಯ ವಿರುದ್ಧ ಪ್ರಾಸಿಕ್ಯೂಷನ್ ಗಂಭೀರ ಸ್ವರೂಪದ ಆರೋಪಗಳನ್ನೇ ಹೊರಿಸಿದೆ. ಆದರೆ ಜಾಮೀನು ನೀಡುವುದು ಮೊದಲ ನಿಯಮ. ಅರ್ಹ ಪ್ರಕರಣಗಳಲ್ಲಿ ನ್ಯಾಯಾಲಯ ಆರೋಪಿಗಳಿಗೆ ಜಾಮೀನು ನಿರಾಕರಿಸಿದರೆ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗುತ್ತದೆ ಎಂದು ಪೀಠ ಹೇಳಿದೆ.

{ **ಉಮಾಶಂಕರ್** } ಬಿಬಿಎಂಪಿ ಆಡಳಿತಾಧಿಕಾರಿ

ವಿಶ್ವದ ಅತಿಹೆಚ್ಚು ಮಾಲಿನ್ಯದ 39 ನಗರಗಳಲ್ಲಿ ಬೆಂಗಳೂರು ಕೂಡ ಒಂದಾಗಿದೆ. ಸರಕಾರದ ಜತೆ ನಾಗರಿಕ ಕೈಜೋಡಿಸಿದರೆ ಮಾತ್ರ ವಾಯುಮಾಲಿನ್ಯ ನಿಯಂತ್ರಿಸಬಹುದು. ಜನರು ಖಾಸಗಿ ವಾಹನಗಳನ್ನು ಬಿಟ್ಟು ಸಾರ್ವಜನಿಕ ಸಾರಿಗೆ ವಾಹನಗಳನ್ನು ಬಳಸಬೇಕು.

ಎಚ್‌ಎಂಟಿಗೆ ಕಿರುಕುಳ | ರಾಜ್ಯ ಸರಕಾರದ ವಿರುದ್ಧ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಕಿಡಿ

ನನಗೆ ಅಸಹಕಾರ ಕೊಟ್ಟರೆ ಸಿಗುವ ಲಾಭವೇನು?

ಬೆಂಗಳೂರು: ನನಗೆ ಅಸಹಕಾರ ಕೊಟ್ಟರೆ ನಿಮಗೆ ಸಿಗುವ ಲಾಭ ಏನು? ಇಲ್ಲಿ ಕುಮಾರಸ್ವಾಮಿ ಮುಖ್ಯವಲ್ಲ. ರಾಜ್ಯಕ್ಕೆ ಒಳ್ಳೆಯದು ಆಗಬೇಕು. ಅದಕ್ಕಾಗಿ ನನಗೆ, ಕೇಂದ್ರ ಸರಕಾರಕ್ಕೆ ಸಹಕಾರ ಕೊಡಿ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ರಾಜ್ಯ ಸರಕಾರದ ವಿರುದ್ಧ ಕಿಡಿಕಾರಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರಕಾರ ಇನ್ನಾದರೂ ಲೂಟಿ ಹೊಡೆಯುವುದು ನಿಲ್ಲಿಸಿ ರಾಜ್ಯದ ಅಭಿವೃದ್ಧಿಗಾಗಿ ಕೆಲಸ ಮಾಡಿ. ಯಾವ ಆಧಾರದ ಮೇಲೆ ಮರಳಿ ಅರಣ್ಯ ಇಲಾಖೆ ವಶಕ್ಕೆ ಭೂಮಿಯನ್ನು ಪಡೆಯುತ್ತೀರಿ? ಇದರ ಒಳ ಉದ್ದೇಶ ಏನು? ನಿಮಗೆ ಈ ಭೂಮಿಗಳ ದಾಖಲೆಗಳು, ಈ ಕಾರ್ಖಾನೆಯ ಸ್ಥಾಪನೆಯ ಇತಿಹಾಸ ಗೊತ್ತಿದೆಯೇ? ಎಂದು ಆಕ್ರೋಶ ವ್ಯಕ್ತಪಡಿಸಿದರು.

ಯಾವ ಕಾರಣಕ್ಕೂ ಎಚ್‌ಎಂಟಿಗೆ ಸೇರಿದ ಜಮೀನನ್ನು ವಾಪಸ್ಸು ಕೊಡುವ ಪ್ರಶ್ನೆಯಿಲ್ಲ. ಅದು ಖರೀದಿ ಮಾಡಿರುವ ಜಮೀನಾಗಿದೆ. ಈ ವಿಚಾರದಲ್ಲಿ ರಾಜ್ಯ ಸರಕಾರ ಜನರನ್ನು ದಾರಿ ತಪ್ಪಿಸುತ್ತಿದೆ. ಅಂತಹ ನಡೆಯನ್ನು ಕೂಡಲೇ ನಿಲ್ಲಿಸಬೇಕು. ಎಚ್‌ಎಂಟಿಗೆ 599 ಎಕರೆ ಜಮೀನನ್ನು ಉಚಿತವಾಗಿ ಕೊಟ್ಟಿಲ್ಲ. ಜಮೀನು ಹಸ್ತಾಂತರಕ್ಕೆ ಸಂಬಂಧಿಸಿದ ಕಡತವನ್ನು ಅರಣ್ಯ ಸಚಿವರು ಪರಿಶೀಲಿಸುವುದು ಒಳ್ಳೆಯದು. ರಾಜ್ಯ ಸರಕಾರ ಇದೇ ರೀತಿ ಕಂಪನಿಗೆ ಕಿರುಕುಳ ನೀಡಿದರೆ, ನಾವು ಕಾನೂನು ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ಕೊಟ್ಟರು.

ಅಧಿಕಾರದಲ್ಲಿದ್ದವರು ಯಾರು?: ಹಿಂದೆ ಎಚ್‌ಎಂಟಿಗೆ ಸೇರಿದ 200 ಎಕರೆ ಜಮೀನನ್ನು ಮಾರಾಟ ಮಾಡಲು ಅನುಮತಿ ಕೊಟ್ಟವರು ಯಾರು? 1999ರಿಂದ 2004 ರವರೆಗೆ ರಾಜ್ಯದಲ್ಲಿ ಯಾರು ಅಧಿಕಾರದಲ್ಲಿದ್ದರು? 2006ರಲ್ಲಿ ನಾನು ಮುಖ್ಯಮಂತ್ರಿಯಾದಾಗ ಎಚ್‌ಎಂಟಿಯ ಒಂದು ಅಂಗುಲ ಜಮೀನು ಮಾರಾಟ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಆದೇಶ ಮಾಡಿದ್ದೆ. ಅದಕ್ಕೆ ಭೂಮಿ ಉಳಿದುಕೊಂಡಿದೆ. ಆದರೆ, ಆಡಳಿತ ನಡೆಸಿದ ಸರಕಾರಗಳಲ್ಲಿ ಬಿಲ್ಡರ್ ಕೆಲಸ ಮಾಡುತ್ತಿದ್ದ ಕೆಲವರಿಗೆ ಈ ಕಾರ್ಖಾನೆಯ ಜಮೀನು ಮೇಲೆ ವಕ್ರದೃಷ್ಟಿ ಬಿದ್ದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಧಾನಿಗಳ ಮಾರ್ಗದರ್ಶನದಲ್ಲಿ ನಾನು ನನ್ನ ಕೆಲಸವನ್ನು ಶ್ರದ್ಧೆಯಿಂದ ಮಾಡುತ್ತಿದ್ದೇನೆ. ಒಂದು ವಿಚಾರದಲ್ಲಿ ಶೀಘ್ರವೇ ಒಳ್ಳೆಯ ಸುದ್ದಿ ಕೊಡಲಿದ್ದೇನೆ. ಅದು ಯಾವುದು? ಯಾವಾಗ? ಎಂದು ಈಗಲೇ ಹೇಳಲಾರೆ. ಅದು ಯಶಸ್ವಿ ಆದರೆ ಪ್ರಧಾನಿಗಳಿಗೂ ನಂಬಿಕೆ ಬರುತ್ತದೆ. ಆಮೇಲೆ ಉಳಿದ ಕಾರ್ಖಾನೆಗಳು ಹಂತ ಹಂತವಾಗಿ ಸರಿ ಹೋಗುತ್ತವೆ. ಆ ಪ್ರಯತ್ನದಲ್ಲಿ ನಾನು ಇದ್ದೇನೆ. ಇನ್ನು ಕೆಲ ದಿನಗಳಲ್ಲಿ ಶುಭ ಹೇಳಲಿದ್ದೇನೆ.
- ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

ಕುದುರೆಮುಖ ಕಂಪನಿ ಯೋಜನೆಗೂ ಅಡ್ಡಿ

ಕುದುರೆಮುಖ ಕಬ್ಬಿಣದ ಅದಿರು ಕಂಪನಿಗೆ ಕಾಯಕಲ್ಪ ನೀಡಲು ದೇವದಾರಿ ಗಣಿಗಾರಿಕೆ ಯೋಜನೆಗೆ ಆರ್ಥಿಕ ನೆರವು ನೀಡುವ ಕಡತಕ್ಕೆ ಸಹಿ ಹಾಕಿದೆ. ಆ ಕಡತವನ್ನು ಹಣಕಾಸು ಇಲಾಖೆಗೆ ಕಲಿಸುವುದಕ್ಕೆ ಮಾತ್ರ ನಾನು ಒಪ್ಪಿಗೆ ಕೊಟ್ಟೆ. ಆದರೆ, ಕುಮಾರಸ್ವಾಮಿ ಗಣಿಗಾರಿಕೆ ಯೋಜನೆಗೆ ಒಪ್ಪಿಗೆ ಕೊಟ್ಟು ಅರಣ್ಯ ನಾಶಕ್ಕೆ ಕಾರಣ ಆಗುತ್ತಿದ್ದಾರೆ ಎಂದು ರಾಜ್ಯ ಮತ್ತು ಇನ್ನೂ ಕೆಲವರು ವ್ಯವಸ್ಥಿತ ಅಪಪ್ರಚಾರ ನಡೆಸಿದರು. ಈ ಬಗ್ಗೆ ರಾಜ್ಯ ಸರಕಾರದಿಂದಲೇ ಗೊಂದಲ ಮೂಡಿಸುವ ಪ್ರಯತ್ನ ನಡೆಯಿತು. ₹1,738 ಕೋಟಿಗೆ ಆರ್ಥಿಕ ಗ್ಯಾರಂಟಿ ಕೊಡುವ ಕಡತಕ್ಕೆ ನಾನು ಸಹಿ ಹಾಕಿದ್ದು. ಕುದುರೆಮುಖ ಕಂಪನಿಯಲ್ಲಿ ಸಾವಿರಾರು ಉದ್ಯೋಗಿಗಳಿದ್ದು, ತೊಂದರೆಗೆ ಸಿಲುಕಲಿದ್ದಾರೆ. ಹಾಗಾದರೆ, ರಾಜ್ಯ ಅಭಿವೃದ್ಧಿ ಆಗುವುದು ಹೇಗೆ? ರಾಜ್ಯ ಸರಕಾರವೇ ಅಡ್ಡಿ ಉಂಟು ಮಾಡಿದರೆ ಹೇಗೆ? ಇದು ಯಾವ ರೀತಿಯ ನಡೆ ಎಂದು ಪ್ರಶ್ನಿಸಿದರು.

ಭೂಮಿ ಮಾರಾಟ ಮಾಡಿರೋದು ಎಚ್‌ಎಂಟಿ; ರಾಜ್ಯ ಸರಕಾರವಲ್ಲ: ಖಂಡ್ರೆ

ಬೆಂಗಳೂರು: ಎಚ್.ಎಮ್ .ಟಿ ಜಮೀನು ಪಡೆದು ಯಾವ ಬಿಲ್ಡರ್‌ಗೆ ಮಾರಾಟ ಮಾಡಲು ಮುಂದಾಗಿದ್ದೀರಾ ಎನ್ನುವ ಕೇಂದ್ರ ಸಚಿವ ಕುಮಾರಸ್ವಾಮಿ ಟೀಕೆಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಅರಣ್ಯ ಸಚಿವ ಈಶ್ವರ್ ಖಂಡ್ರೆ, ಮಾರಾಟ ಮಾಡಿರುವುದು ಎಚ್‌ಎಂಟಿಯೇ ಹೊರತು ಅರಣ್ಯ ಇಲಾಖೆಯಲ್ಲ ಎಂದಿದ್ದಾರೆ.

ವಿಧಾನಸೌಧದಲ್ಲಿ ನಡೆದ ತುರ್ತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕುಮಾರಸ್ವಾಮಿ ಎಚ್‌ಎಂಟಿ ವಶದಲ್ಲಿರುವ ಜಮೀನು ಪಡೆದು ಯಾರಿಗೆ ಮಾರುತ್ತೀರಿ ಎಂದು ಕೇಳಿದ್ದಾರೆ. ಅರಣ್ಯ ಭೂಮಿ ಮಾರಾಟ ಮಾಡಿರುವುದು ಈಗ ನಿಮ್ಮ ಇಲಾಖಾ ವ್ಯಾಪ್ತಿಯಲ್ಲಿರುವ ಎಚ್‌ಎಂಟಿ ಹೊರತು ಅರಣ್ಯ ಇಲಾಖೆ ಅಲ್ಲ ಎಂದು ಸ್ಪಷ್ಟಪಡಿಸಿದರು. ಕೇಂದ್ರ ಸರಕಾರಿ ಸ್ವಾಮ್ಯದ ಎಚ್‌ಎಂಟಿ ರಿಯಲ್ ಎಸ್ಟೇಟ್ ಸಂಸ್ಥೆಯಂತೆ ವರ್ತಿಸುತ್ತಿದೆ. 1997ರಿಂದ 2011ರವರೆಗೆ ಎಚ್‌ಎಂಟಿ ತನ್ನ ವಶದಲ್ಲಿದ್ದ ಅರಣ್ಯ ಭೂಮಿಯನ್ನು ಅಕ್ರಮವಾಗಿ ಹಲವು ಕಂಪನಿಗಳಿಗೆ ಮಾರಾಟ ಮಾಡಿದೆ. ಖಾಸಗಿ ಮತ್ತು ಸರಕಾರಿ ಸಂಸ್ಥೆಗಳಿಗೆ 165 ಎಕರೆ ಭೂಮಿಯನ್ನು 313 ಕೋಟಿಗೂ ಹೆಚ್ಚು ದರಕ್ಕೆ ಮಾರಾಟ ಮಾಡಿದೆ ಎಂದು ಖಂಡ್ರೆ ಆರೋಪಿಸಿದರು.

ಫೋಗಾಟ್ ಬೆಳ್ಳಿ ತೀರ್ಪು ಮತ್ತೆ ಮುಂದಕ್ಕೆ

ದೆಹಲಿ: ಪ್ಯಾರಿಸ್ ಒಲಿಂಪಿಕ್ಸ್‌ನ 50 ಕೆಜಿ ಮಹಿಳಾ ಕುಸ್ತಿ ವಿಭಾಗದಲ್ಲಿ ತಮಗೆ ಬೆಳ್ಳಿ ಪದಕ ಸಿಗಬೇಕು ಎಂದು ಆಗ್ರಹಿಸಿ ವಿನೇಶ್ ಫೋಗಟ್ ಸಲ್ಲಿಸಿರುವ ಅರ್ಜಿಯ ತೀರ್ಪನ್ನು ಜಾಗತಿಕ ಕ್ರೀಡಾ ನ್ಯಾಯ ಮಂಡಳಿ ಆಗಸ್ಟ್ 16ಕ್ಕೆ ಮುಂದೂಡಿದೆ. ವಿಚಾರಣೆ ಮುಗಿದಿದ್ದರೂ 3ನೇ ಬಾರಿಗೆ ತೀರ್ಪನ್ನು ಮುಂದೂಡಲಾಗಿದೆ. ಪ್ಯಾರಿಸ್ ಒಲಿಂಪಿಕ್ಸ್‌ನಿಂದ ತನ್ನ ಅನರ್ಹತೆಯನ್ನು ಪ್ರಶ್ನಿಸಿರುವ ಫೋಗಟ್ ಮಹಿಳೆಯರ 50 ಕೆಜಿ ವಿಭಾಗದಲ್ಲಿ ಜಂಟಿ ಬೆಳ್ಳಿ ಪದಕವನ್ನು ನೀಡಬೇಕೆಂದು ಮನವಿ ಮಾಡಿದ್ದರು. ವಿನೇಶ್ ಆರಂಭದಲ್ಲಿ, ತನ್ನ ಅನರ್ಹತೆಯನ್ನು ರದ್ದುಗೊಳಿಸಿ ಫೈನಲ್‌ನಲ್ಲಿ ಸ್ಪರ್ಧಿಸಲು ಅವಕಾಶ ನೀಡುವಂತೆ ಸಿಎಎಸ್‌ನ ತಾತ್ಕಾಲಿಕ ಪೀಠಕ್ಕೆ ವಿನಂತಿಸಿದ್ದರು. ಆದರೆ, ಅವರು ತುರ್ತು ಮಧ್ಯಂತರ ಕ್ರಮಗಳನ್ನು ಕೋರಿರಲಿಲ್ಲ. ಬಳಿಕ ತನ್ನ ಮೇಲ್ಮನವಿಯಲ್ಲಿ ಅನರ್ಹತೆಯನ್ನು ಹಿಂತೆಗೆದು ಕೊಳ್ಳಬೇಕು. ಜಂಟಿ ಬೆಳ್ಳಿ ಪದಕವನ್ನು ನೀಡಬೇಕೆಂದು ತಿಳಿಸಿದ್ದರು.

ಪಿಇಎಸ್‌ನಲ್ಲಿ ಉದ್ಯೋಗಿಗಳ ಉನ್ನತೀಕರಣಕ್ಕಾಗಿ ಎಕ್ಸಿಕ್ಯೂಟಿವ್ ಎಂಬಿಎ

ಬೆಂಗಳೂರು: ಪಿಇಎಸ್ ವಿಶ್ವವಿದ್ಯಾಲಯವು 3 ಕಾರ್ಪೊರೇಟ್ ಸಂಸ್ಥೆಗಳಾದ ಮೈಕ್ರೋಮ್ಯಾಟಿಕ್ ಮಷೀನ್ ಟೂಲ್ಸ್ ಪ್ರೈವೇಟ್, ಏಸ್ ಡಿಸೈನರ್ಸ್ ಲಿಮಿಟೆಡ್ ಮತ್ತು ಯುಕೆನ್ ಇಂಡಿಯಾ ಲಿಮಿಟೆಡ್ ನೊಂದಿಗೆ ಕಂಪನಿಯ ಉದ್ಯೋಗಿಗಳಿಗೆ ಕೌಶಲ್ಯ ಹೆಚ್ಚಿಸುವ ಎಕ್ಸಿಕ್ಯೂಟಿವ್ ಎಂಬಿಎ ಕಾರ್ಯಕ್ರಮಕ್ಕಾಗಿ ಒಪ್ಪಂದಕ್ಕೆ ಸಹಿಹಾಕಿದೆ.

ಪೀಣ್ಯದಲ್ಲಿರುವ ಏಸ್ ಡಿಸೈನರ್ಸ್ ಲಿಮಿಟೆಡ್‌ನ ಕಚೇರಿಯಲ್ಲಿ ಒಡಂಬಡಿಕೆಗೆ ಸಹಿ ಮಾಡಲಾಗಿದೆ. ಪಿಇಎಸ್ ವಿಶ್ವವಿದ್ಯಾಲಯದ ಪರವಾಗಿ ಕುಲಪತಿ ಡಾ. ಜೆ.ಸೂರ್ಯಪ್ರಸಾದ್ ಮತ್ತು ಎಡಿಎಲ್ ಮತ್ತು ಎಂ.ಎಂ.ಟಿ. ಪರವಾಗಿ ಈ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಟಿ. ಕೆ. ರಮೇಶ್ ಮತ್ತು ಯುಕೆನ್ ಇಂಡಿಯಾ ಲಿಮಿಟೆಡ್ ನ ಮುಖ್ಯ ಹಣಕಾಸು ಅಧಿಕಾರಿ ನರಸಿಂಗ ರಾವ್ ಎಚ್.ಎಂ. ಸಹಿಹಾಕಿ ಒಪ್ಪಂದವನ್ನು ವಿನಿಮಯ ಮಾಡಿಕೊಂಡರು. ಸೀನಿಯರ್ ಲೀಡ್ ಟ್ಯಾಲೆಂಟ್ ಡೆವಲಪ್‌ಮೆಂಟ್ ಪವಿತ್ರಾ ಮೋರೆ ಕಾರ್ಯಕ್ರಮಕ್ಕೆ ಎಲ್ಲರನ್ನೂ ಸ್ವಾಗತಿಸಿದರು. ನಂತರ ಎಡಿಎಲ್ ಎಂ.ಡಿ ಟಿ ಕೆ ರಮೇಶ್ ವೆಂಕಟಕೃಷ್ಣನ್ ಮತ್ತು ಯುಕೆನ್ ಇಂಡಿಯಾ ಲಿಮಿಟೆಡ್‌ನ ಸಿಇಒ ಮಾತನಾಡಿದರು.

ಉದ್ಯೋಗಿಗಳ ಕೌಶಲ್ಯ ಹೆಚ್ಚಿಸುವ ಎಂಬಿಎ ಕಾರ್ಯಕ್ರಮಕ್ಕಾಗಿ ಪಿಇಎಸ್ ವಿಶ್ವವಿದ್ಯಾಲಯ ಮೈಕ್ರೋಮ್ಯಾಟಿಕ್ ಮಷೀನ್ ಟೂಲ್ಸ್ ಪ್ರೈವೇಟ್, ಏಸ್ ಡಿಸೈನರ್ಸ್ ಲಿಮಿಟೆಡ್ ಮತ್ತು ಯುಕೆನ್ ಇಂಡಿಯಾ ಲಿಮಿಟೆಡ್‌ನೊಂದಿಗೆ ಬೆಂಗಳೂರಿನಲ್ಲಿ ಮಹತ್ವದ ಒಡಂಬಡಿಕೆಗೆ ಸಹಿಹಾಕಿದೆ.

ಇಂದಿರಾ ಕ್ಯಾಂಟೀನ್‌ಗಳಿಗೆ ಡಿಜಿಟಲ್ ಸ್ಪರ್ಶಕ್ಕೆ ನಿರ್ಧಾರ

ಬೆಂಗಳೂರು: ಬಿಬಿಎಂಪಿ ನಗರದ ಇಂದಿರಾ ಕ್ಯಾಂಟೀನ್‌ಗಳಿಗೆ ಡಿಜಿಟಲ್ ಸ್ಪರ್ಶ ನೀಡಲು ಮುಂದಾಗಿದ್ದು, ಊಟ , ಉಪಾಹಾರಗಳನ್ನು ಟಚ್ ಸ್ಕ್ರೀನ್ ಮೂಲಕ ಬುಕ್ ಮಾಡಬಹುದಾಗಿದೆ.

ಆರ್‌ಆರ್ ನಗರದ ವಲಯದ 11 ಕ್ಯಾಂಟೀನ್‌ಗಳಲ್ಲಿ ಈ ಯೋಜನೆಯನ್ನು ಪ್ರಾಥಮಿಕವಾಗಿ ಆರಂಭಿಸಲಾಗುತ್ತಿದ್ದು, ಸಾಧಕ ಬಾಧಕಗಳನ್ನು ಅಧ್ಯಯನ ಮಾಡಿದ ಬಳಿಕ 169 ಇಂದಿರಾ ಕ್ಯಾಂಟೀನ್‌ಗಳನ್ನು ಡಿಜಿಟಲ್ ಆಗಿಸಲು ತೀರ್ಮಾನಿಸಲಾಗಿದೆ. ಎಷ್ಟು ತಿಂಡಿ, ಎಷ್ಟು ಊಟ ಖರ್ಚಾಯಿತು? ಗುಣಮಟ್ಟ ಹೇಗಿದೆ ? ಎಂಬಿತ್ಯಾದಿ ಮಾಹಿತಿಗಳನ್ನು ಪಡೆಯಲು ಈ ಡಿಜಿಟಲ್ ಸ್ಕ್ರೀನಿಂಗ್ ಸಹಾಯಕವಾಗಿರಲಿದ್ದು, ಇಂದಿರಾ ಕ್ಯಾಂಟೀನ್ ಬಗೆಗಿರುವ ದೂರುಗಳಿಗೆ ಮಾಹಿತಿ ದೊರೆಯಲಿದೆ. ಈ ಮೂಲಕ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ನೀಡಲು ಮುಂದಾಗಿದೆ.

ಸೆಲ್ ಕಿಯೊಸ್ಕ್ ಯಂತ್ರದಲ್ಲಿ ಊಟದ ಮೆನು ಸೇರಿ ಯೋಜನೆಯ ಎಲ್ಲಾ ಮಾಹಿತಿ ಮೊದಲೇ ಪ್ರೋಗ್ರಾಮಿಂಗ್ ಮಾಡಲಾಗುವುದು, ಊಟವನ್ನು ಪಡೆಯಲು ಆಪರೇಟ್ ಮಾಡುವಾಗ ಗ್ರಾಹಕನ ಫೋಟೊವನ್ನು ಈ ಯಂತ್ರವು ಕ್ಲಿಕ್ಕಿಸುತ್ತದೆ. ಒಬ್ಬ ವ್ಯಕ್ತಿಗೆ ಎಷ್ಟು ಊಟ ಕೊಡಬೇಕು ಎನ್ನುವುದನ್ನೂ ಮೊದಲೇ ನಮೂದಿಸಲಾಗುತ್ತದೆ. ಬೆಳಗ್ಗೆ ಉಪಾಹಾರ, ಮಧ್ಯಾಹ್ನ, ರಾತ್ರಿ ಊಟದ ಸಮಯದಲ್ಲಿ ಮಾತ್ರ ಇದು ಕಾರ್ಯಾಚರಣೆ ಮಾಡುತ್ತದೆ. ಒಂದು ದಿನಕ್ಕೆ ಎಷ್ಟು ಊಟ ಮಾರಾಟವಾಗಿದೆ ಎನ್ನುವ ಮಾಹಿತಿಯ ಜತೆಗೆ ಊಟದ ಗುಣಮಟ್ಟವನ್ನೂ ಯಂತ್ರ ತೋರಿಸಲಿದೆ. ಸೀಮಿತ ತಿಂಗಳವರೆಗೆ ಊಟ ಖರೀದಿಸಿದ ಗ್ರಾಹಕರ ಮಾಹಿತಿ ಬಿಬಿಎಂಪಿ ಸರ್ವರ್‌ನಲ್ಲಿ ನೋಂದಣಿಯಾಗುತ್ತದೆ. ಎಷ್ಟು ಊಟ ಮಾರಾಟವಾಗಿದೆಯೋ ಅಷ್ಟು ಹಣ ಟೆಂಡರ್‌ದಾರರಿಗೆ ನೀಡಲು ಸಹಕಾರಿಯಾಗಲಿದೆ ಹಾಗೂ ಅಕ್ರಮಗಳಿಗೆ ಬ್ರೇಕ್ ಬೀಳಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಸುಲಭವಾಗಿ ಮಾಹಿತಿ ಪಡೆಯಬಹುದು: ಊಟ ಬಡಿಸುವುದರಲ್ಲಿ ಹೆಚ್ಚು ಕಡಿಮೆಯಾಗುತ್ತದೆ ಎನ್ನುವ ದೂರು ತಪ್ಪಿಸಲು, ಯಾವ ಕ್ಯಾಂಟೀನ್‌ಗಳು ಹೇಗೆ ಕಾರ್ಯಾಚರಣೆ ಮಾಡುತ್ತಿವೆ ಎನ್ನುವುದನ್ನು ತಿಳಿಯಲು ಹಾಗೂ ಊಟ ಪಡೆದ ಗ್ರಾಹಕರ ಸಂಖ್ಯೆಯ ಮಾಹಿತಿ ಸುಲಭವಾಗಿ ಪಡೆಯಬಹುದಾಗಿದೆ ಅದೇ ರೀತಿ ಒಂದೇ ಗ್ರಾಹಕರ ಹೆಸರಲ್ಲಿ ಹಲವು ಬಿಲ್ಲಿಂಗ್ ಮಾಡುವುದನ್ನು ಇದರಿಂದ ತಡೆಗಟ್ಟಬಹುದಾಗಿದೆ.

ಹಸೀನಾ ಭಾರತದಲ್ಲಿದ್ದರೆ ಸಮಸ್ಯೆ ಇಲ್ಲ: ತೌಹಿದ್

ಢಾಕಾ: ಹಿಂಸಾಚಾರ, ವಿದ್ಯಾರ್ಥಿಗಳ ಪ್ರತಿಭಟನೆಗೆ ಮಣಿದು ರಾಜೀನಾಮೆ ಸಲ್ಲಿಸಿ ದೇಶ ತೊರೆದಿರುವ ಬಾಂಗ್ಲಾ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರು ಭಾರತಕ್ಕೆ ಬಂದು 9 ದಿನ ಕಳೆದಿವೆ. ಹಸೀನಾ ವಾಪಸ್ ಬಾಂಗ್ಲಾ ದೇಶಕ್ಕೆ ಹೋಗುತ್ತಾರಾ? ಅವರ ಮುಂದಿನ ನಡೆಯೇನು? ಎಂಬುದು ಇನ್ನೂ ಸ್ಪಷ್ಟವಿಲ್ಲ. ಆದರೆ ಬಾಂಗ್ಲಾದೇಶದ ಮಧ್ಯಂತರ ಸರಕಾರದ ಅಧಿಕಾರಿಗಳು ಹಸೀನಾ ಭಾರತದಲ್ಲಿದ್ದರೆ ಸಮಸ್ಯೆ ಇಲ್ಲ ಎಂದು ಮಂಗಳವಾರ ಹೇಳಿದ್ದಾರೆ. ಮಧ್ಯಂತರ ಸರಕಾರದ ವಿದೇಶಾಂಗ ಸಲಹೆಗಾರ ತೌಹಿದ್ ಹುಸೇನ್ ಭಾರತ-ಬಾಂಗ್ಲಾ ಸಂಬಂಧದ ಬಗ್ಗೆ ಮಾತನಾಡಿದ್ದಾರೆ. ಶೇಖ್ ಹಸೀನಾ ಭಾರತದಲ್ಲಿ ಇರುವುದರಿಂದ ಭಾರತ ಮತ್ತು ಬಾಂಗ್ಲಾ ನಡುವಿನ ದ್ವಿಪಕ್ಷೀಯ ಸಂಬಂಧಕ್ಕೆ ಯಾವುದೇ ಅಡ್ಡಿ ಇಲ್ಲ ಎಂದಿದ್ದಾರೆ.



ಎರಡು ಟಿ20 ಪಂದ್ಯಗಳ ಸ್ಥಳಾಂತರ

ಪರಿಷ್ಕೃತ ವೇಳಾಪಟ್ಟಿ

ದೆಹಲಿ: ಭಾರತ-ಬಾಂಗ್ಲಾದೇಶ ಹಾಗೂ ಭಾರತ-ಇಂಗ್ಲೆಂಡ್ ಟಿ20 ಸರಣಿಗೆ ಬಿಸಿಸಿಐ ಕೆಲವು ಬದಲಾವಣೆಗಳನ್ನು ಮಾಡಿದ್ದು, ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ 2024-25ರ ಅಂತಾರಾಷ್ಟ್ರೀಯ ಕ್ರಿಕೆಟ್ ಋತುವಿನ ಪರಿಷ್ಕೃತ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿದೆ. ಬಾಂಗ್ಲಾದೇಶ ವಿರುದ್ಧದ ಟೆಸ್ಟ್ ಮತ್ತು ಇಂಗ್ಲೆಂಡ್ ವಿರುದ್ಧದ ಏಕದಿನ ಪಂದ್ಯಗಳಲ್ಲಿ ಯಾವುದೇ ಬದಲಾವಣೆಗಳಿಲ್ಲವಾದರೂ, ಎರಡೂ ತಂಡಗಳ ವಿರುದ್ಧದ ಟಿ20 ವೇಳಾಪಟ್ಟಿಯಲ್ಲಿ ಬದಲಾವಣೆಗಳಿವೆ. ಭಾರತ ಮತ್ತು ಬಾಂಗ್ಲಾದೇಶ ನಡುವಿನ ಮೊದಲ ಟಿ20 ಪಂದ್ಯವು 2024ರ ಅಕ್ಟೋಬರ್ 6ರಂದು ಧರ್ಮಶಾಲಾದಲ್ಲಿ ನಡೆಯಬೇಕಿತ್ತು, ಈಗ ಹಿಮಾಚಲ ಪ್ರದೇಶ ಕ್ರಿಕೆಟ್ ಅಸೋಸಿಯೇಷನ್ ಡ್ರೆಸ್ಸಿಂಗ್ ಕೊಠಡಿಗಳಲ್ಲಿ ನವೀಕರಣ ಮತ್ತು ನವೀಕರಣ ಕಾರ್ಯಗಳನ್ನ ಕೈಗೊಳ್ಳುತ್ತಿರುವುದರಿಂದ ಗ್ವಾಲಿಯರ್‌ನಲ್ಲಿ ನಡೆಯಲಿದೆ ಎಂದು ಬಿಸಿಸಿಐ ಹೇಳಿಕೆಯಲ್ಲಿ ತಿಳಿಸಿದೆ. ಇಂಗ್ಲೆಂಡ್ ವಿರುದ್ಧದ ಐದು ಪಂದ್ಯಗಳ ಸರಣಿಯಲ್ಲಿ ಮೊದಲ ಮತ್ತು ಎರಡನೇ ಟಿ20 ಪಂದ್ಯಗಳ ಸ್ಥಳಗಳನ್ನು ಸಹ ಬದಲಾಯಿಸಲಾಗಿದೆ. ಮೊದಲ ಟಿ20 ಪಂದ್ಯಕ್ಕೆ ಬದಲಾಗಿ 2ನೇ ಟಿ20 ಪಂದ್ಯಕ್ಕೆ ಚೆನ್ನೈ ಆತಿಥ್ಯ ವಹಿಸಲಿದ್ದು, 2ನೇ ಟಿ20ಗೆ ಕೋಲ್ಕತಾ ಆತಿಥ್ಯ ವಹಿಸಲಿದೆ.

ಪ್ರಮೋದ್ ಭಗತ್‌ಗೆ 18 ತಿಂಗಳ ನಿಷೇಧ

ದೆಹಲಿ: ಪ್ಯಾರಾ ಬ್ಯಾಡ್ಮಿಂಟನ್ ಆಟಗಾರ ಪ್ರಮೋದ್ ಭಗತ್ ಅವರ ಮೇಲೆ ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್‌ನ ಡೋಪಿಂಗ್ ನಿಗ್ರಹ ನಿಯಮದ 'ವಾಸ್ತವ್ಯ ಅಧಿನಿಯಮ' ಉಲ್ಲಂಘಿಸಿದ ಆರೋಪದ ಮೇಲೆ 18 ತಿಂಗಳ ನಿಷೇಧ ಹೇರಲಾಗಿದೆ. ಟೋಕಿಯೊ ಪ್ಯಾರಾ ಕ್ರೀಡೆಗಳಲ್ಲಿ ಚಿನ್ನ ವಿಜೇತರಾಗಿದ್ದ ಅವರು ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಅದನ್ನು ಉಳಿಸಿಕೊಳ್ಳುವ ಅವಕಾಶ ಕಳೆದುಕೊಂಡು ಆಘಾತ ಎದುರಿಸುವಂತಾಗಿದೆ. 2020ರ ಪ್ಯಾರಾಲಿಂಪಿಕ್ ಚಾಂಪಿಯನ್ ಪ್ರಮೋದ್ ಭಗತ್ ಅವರ ಮೇಲೆ 18 ತಿಂಗಳ ನಿಷೇಧ ಹೇರಲಾಗಿದ್ದು, ಅವರು ಪ್ಯಾರಿಸ್ 2024 ಪ್ಯಾರಾಲಿಂಪಿಕ್ಸ್ ಕಳೆದುಕೊಳ್ಳಲಿದ್ದಾರೆ ಎಂದು ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ ಖಚಿತಪಡಿಸಿದೆ. ಉದ್ದೀಪನ ಮದ್ದುಪರೀಕ್ಷೆಗೆ ಬರುವ ಸಿಬ್ಬಂದಿಗೆ 12 ತಿಂಗಳಲ್ಲಿ ಮೂರು ಬಾರಿ ವಾಸ್ತವ್ಯ ಮಾಹಿತಿ ನೀಡದಿದ್ದರೆ ಅದನ್ನು ನಿಯಮಗಳ ಉಲ್ಲಂಘನೆ ಎಂದು ಪರಿಗಣಿಸಲಾಗುತ್ತದೆ. 2024ರ ಮಾರ್ಚ್ 1ರಂದು ಭಗತ್ ಅವರು ಮೂರನೇ ಬಾರಿ ವಾಸ್ತವ್ಯ ಸ್ಥಳದ ಮಾಹಿತಿ ನೀಡದಿರುವುದನ್ನು ಕ್ರೀಡಾ ನ್ಯಾಯ ಮಂಡಳಿಯ ಉದ್ದೀಪನ ಮದ್ದುಸೇವನೆ ವಿಭಾಗವು ಪರಿಗಣಿಸಿ ನಿಷೇಧಕ್ಕೆ ಮುಂದಾಗಿದೆ.



ಅಮೆರಿಕ ಚುನಾವಣೆ: ಭಾರತಕ್ಕೆ ಚಿಂತೆ ಇಲ್ಲ

ದೆಹಲಿ: ಅಮೆರಿಕ ಅಧ್ಯಕ್ಷೀಯ ಚುನಾವಣೆ ವಿಚಾರದಲ್ಲಿ ಭಾರತದ ಚಿಂತನೆ ಸ್ಪಷ್ಟವಿದೆ. ಅಮೆರಿಕ ಅಧಿಕಾರ ಡೊನಾಲ್ಡ್ ಟ್ರಂಪ್ ಅಥವಾ ಕಮಲಾ ಹ್ಯಾರಿಸ್ ಯಾರ ಕೈಗೆ ಹೋದರೂ ಆ ಸರಕಾರದ ಜತೆ ಭಾರತ ಸ್ನೇಹಪೂರ್ಣವಾಗಿ ಸಮರ್ಥವಾಗಿ ವ್ಯವಹಾರ ನಡೆಸಲಿದೆ ಎಂದು ವಿದೇಶಾಂಗ ಸಚಿವ ಎಸ್ ಜೈಶಂಕರ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ದೆಹಲಿಯಲ್ಲಿ ಮಂಗಳವಾರ ನಡೆದ 'ಇಂಡಿಯಾಸ್ಪೋರಾ' ವರದಿ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿ, ಅಮೆರಿಕ ಜನತೆ ತಮ್ಮ ಸರಕಾರದ ಬಗ್ಗೆ ತೀರ್ಮಾನ ಕೈಗೊಳ್ಳಲಿದ್ದಾರೆ. ಯಾವ ಸರಕಾರ ರಚನೆಯಾದರೂ ಭಾರತಕ್ಕೆ ಸಮಸ್ಯೆ ಇಲ್ಲ, ಉತ್ತಮ ಬಾಂಧವ್ಯ ಬೆಳೆಸಲಿದೆ. ಸಾಮಾನ್ಯವಾಗಿ ಬೇರೆ ರಾಷ್ಟ್ರದ ಚುನಾವಣೆ ಬಗ್ಗೆ ಮಾತನಾಡುವುದು ಸರಿಯಲ್ಲ, ನಾವು ಕೂಡ ಬೇರೆಯವರು ನಮ್ಮ ದೇಶದ ಚುನಾವಣೆ ಬಗ್ಗೆ ಮಾತನಾಡಬಾರದು ಎಂದೇ ಆಶಿಸುತ್ತೇವೆ ಎಂದು ಜೈಶಂಕರ್ ಹೇಳಿದರು. ಕಳೆದ 20 ವರ್ಷಗಳನ್ನು ಗಮನಿಸಿದರೆ ಭಾರತಕ್ಕೆ ಅಮೆರಿಕ ಯಾವುದೇ ಅಧ್ಯಕ್ಷರ ಜತೆಗೆ ಕೆಲಸ ಮಾಡುವ ವಿಶ್ವಾಸವಿದೆ ಎಂದು ಅವರು ಹೇಳಿದರು.

ಮುಂದಿನ 5 ವರ್ಷ ಕಠೋರ: ಜಗತ್ತಿನ ಹಲವು ರಾಷ್ಟ್ರಗಳಲ್ಲಿನ ಅಸ್ಥಿರತೆ ಬಗ್ಗೆ ಮಾತನಾಡಿದ ಜೈಶಂಕರ್, ಮುಂದಿನ 5 ವರ್ಷಗಳ ಕಾಲಾವಧಿ ಬಹಳ ಕಠಿಣವಾಗಿದೆ. ನಾವು ಕಷ್ಟದ ಹಾದಿಯಲ್ಲಿದ್ದೇವೆ. ಸಾಮಾನ್ಯವಾಗಿ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಅಭ್ಯಾಸವಿದೆಯೇ ಹೊರತು ಪರಿಹಾರದಿಂದ ಹೊರಬರುವ ಸಮಸ್ಯೆಯನ್ನಲ್ಲ ಆದರೆ ಈ ಸಮಯ ಸುಲಭವಿಲ್ಲ ಎಂದರು.

ಮಧ್ಯಪ್ರಾಚ್ಯ, ಉಕ್ರೇನ್, ಆಗ್ನೇಯ ಏಷ್ಯಾ ಹಾಗೂ ಪೂರ್ವ ಏಷ್ಯಾಗಳಲ್ಲಿ ಅಸ್ಥಿರತೆಯಿದೆ. ಕೋವಿಡ್ ಪರಿಣಾಮ ಜಗತ್ತಿನ ರಾಷ್ಟ್ರಗಳ ಬೆಳವಣಿಗೆ ಹಾದಿ ಕಠಿಣವಾಗಿಸಿದೆ. ಕೋವಿಡ್‌ನಿಂದ ಹೊರ ಬಂದ ಭಾರತದಂತಹ ದೇಶ ಗಟ್ಟಿಯಾಗಿ ನಿಂತಿದೆ. ಆದರೆ ಇನ್ನೂ ಸಾಕಷ್ಟು ರಾಷ್ಟ್ರಗಳು ಕೋವಿಡ್ ಹೊಡೆತದಿಂದ ಹೊರಬಂದಿಲ್ಲ. ಸಾಕಷ್ಟು ರಾಷ್ಟ್ರಗಳು ವಿದೇಶಿ ವಿನಿಮಯ ಮೀಸಲು ಕೊರತೆ, ವಹಿವಾಟಿನಲ್ಲಿ ಸಮಸ್ಯೆ ಎದುರಿಸುತ್ತಿವೆ, ಹಾಗೇ ಹವಾಮಾನ ವೈಪರಿತ್ಯಗಳು ಜಾಗತಿಕ ಮಟ್ಟದಲ್ಲಿ ಕೂಡ ಸಾಕಷ್ಟು ನಕಾರಾತ್ಮಕ ಪರಿಣಾಮ ಬೀರುತ್ತಿವೆ ಎಂದು ಜೈ ಶಂಕರ್ ಜಾಗತಿಕ ವ್ಯವಹಾರದ ಮೇಲಿನ ಪರಿಣಾಮ ಮತ್ತು ರಾಷ್ಟ್ರಗಳ ಸ್ಥಿತಿಗತಿ ಬಗ್ಗೆ ಮಾತನಾಡಿದ್ದಾರೆ.

happiest minds
The Mindful IT Company
Born Digital . Born Agile

ಹ್ಯಾಪಿಯೆಸ್ಟ್ ಮೈಂಡ್ಸ್ ಟೆಕ್ನಾಲಜೀಸ್ ಲಿಮಿಟೆಡ್
CIN : L72900KA2011PLC057931
ನೋಂದಾಯಿತ ಕಛೇರಿ: 53/1-4, ಹೊಸೂರು ಮುಖ್ಯ ರಸ್ತೆ, ಮಡಿವಾಳ, (ಮಡಿವಾಳ ಪೋಲೀಸ್ ಸ್ಟೇಷನ ಪಕ್ಕದಲ್ಲಿ)
ಬೆಂಗಳೂರು - 560 068, ಕರ್ನಾಟಕ, ಭಾರತ Website: www.happiestminds.com, Email: IR@happiestminds.com, Tel: +91 80 6196 0300

ಜೂನ್ 30, 2024ಕ್ಕೆ ಕೊನೆಯಾದ ತ್ರೈಮಾಸಿಕದ ವಿಸ್ತೃತ ಕ್ರೋಡೀಕೃತ ಆರ್ಥಿಕ ಫಲಿತಾಂಶಗಳ ಸಾರಾಂಶ

(ಲಕ್ಷ ರೂಗಳಲ್ಲಿ)

ವಿವರಗಳು	30.06.2024 ಕ್ಕೆ ಕೊನೆಯಾದ ತ್ರೈಮಾಸಿಕ (ಅಪರಿಶೋಧಿತ)	31.03.2024 ಕ್ಕೆ ಕೊನೆಯಾದ ತ್ರೈಮಾಸಿಕ (ಟಿಪ್ಪಣಿ 2ಅನ್ನು ನೋಡಿ)	30.06.2023 ಕ್ಕೆ ಕೊನೆಯಾದ ತ್ರೈಮಾಸಿಕ (ಅಪರಿಶೋಧಿತ)	31.03.2024 ಕ್ಕೆ ಕೊನೆಯಾದ ವರ್ಷ (ಪರಿಶೋಧಿತ)
ಕಾರ್ಯಾಚರಣೆಗಳಿಂದ ಬಂದ ಒಟ್ಟು ಆದಾಯ	46,382	41,729	39,087	1,62,466
ಸದರಿ ಅವಧಿಗೆ ನಿವ್ವಳ ಲಾಭ (ತೆರಿಗೆ, ಅಸಾಧಾರಣ ಮತ್ತು/ಯಾ ಅಸಾಮಾನ್ಯ ಐಟಂಗಳಿಗೆ ಮುನ್ನ)	6,841	8,320	7,868	32,066
ಸದರಿ ಅವಧಿಗೆ ನಿವ್ವಳ ಲಾಭ (ಅಸಾಧಾರಣ ಮತ್ತು/ಯಾ ಅಸಾಮಾನ್ಯ ಐಟಂಗಳನ್ನು ಕಳೆದು)	6,841	9,615	7,868	33,468
ಸದರಿ ಅವಧಿಗೆ ತೆರಿಗೆ ಕಳೆದ ನಂತರ ನಿವ್ವಳ ಲಾಭ (ಅಸಾಧಾರಣ ಮತ್ತು/ಯಾ ಅಸಾಮಾನ್ಯ ಐಟಂಗಳನ್ನು ಕಳೆದು)	5,103	7,198	5,833	24,839
ಸದರಿ ಅವಧಿಗೆ ಒಟ್ಟು ಸಮಗ್ರ ಆದಾಯ [ಸದರಿ ಅವಧಿಗೆ ತೆರಿಗೆ ಕಳೆದ ನಂತರದ ಲಾಭ / (ನಷ್ಟ) ಮತ್ತು ಇತರೆ ಸಮಗ್ರ ಆದಾಯ (ತೆರಿಗೆ ಕಳೆದು) ಸೇರಿದಂತೆ]	5,146	6,510	6,432	23,964
ಪೇಯ್ಡಪ್ ಇಕ್ವಿಟಿ ಷೇರು ಬಂಡವಾಳ (ತಲಾ 2 ರೂ.)	2,991	2,987	2,872	2,987
ಮೀಸಲುಗಳು (ಮರುಮೌಲ್ಯಮಾಪನ ಮೀಸಲು ಬಿಟ್ಟು)	54,888	54,719	45,828	54,719
ಸೆಕ್ಯುರಿಟಿಸ್ ಪ್ರೀಮಿಯಮ್ ಖಾತೆ	90,389	90,318	41,695	90,318
ನಿವ್ವಳ ಮೌಲ್ಯ	1,48,268	1,48,024	90,395	1,48,024
ಪೇಯ್ಡಪ್ ಋಣ ಬಂಡವಾಳ / ಬಾಕಿ ಇರುವ ಋಣ	1,25,405	44,237	45,524	44,237
ಬಾಕಿ ಇರುವ ರಿಡೀಮಬಲ್ ಪ್ರಿಫರೆನ್ಸ್ ಷೇರುಗಳು	NA	NA	NA	NA
ಡೆಟ್ ಇಕ್ವಿಟಿ ಅನುಪಾತ	0.90	0.35	0.58	0.35
ತಲಾ ಷೇರಿಗೆ ಗಳಿಕೆ (ಮುಖ ಬೆಲೆ ತಲಾ 2 ರೂ.)				
- ಮೂಲ (ತ್ರೈಮಾಸಿಕಗಳಲ್ಲಿ ವಾರ್ಷಿಕೀಕರಿಸಿಲ್ಲ)	3.39	4.79	4.04	16.73
- ಡೈಲ್ಯೂಟೆಡ್ (ತ್ರೈಮಾಸಿಕಗಳಲ್ಲಿ ವಾರ್ಷಿಕೀಕರಿಸಿಲ್ಲ)	3.39	4.79	4.02	16.73
ಬಂಡವಾಳ ವಿಮೋಚನಾ ಮೀಸಲು	NA	NA	NA	NA
ಡಿಬೆಂಚರ್ ವಿಮೋಚನಾ ಮೀಸಲು	NA	NA	NA	NA
ಸಾಲ ತೀರಿಕೆ ಕವರೇಜ್ ಅನುಪಾತ	7.73	6.39	5.15	5.25
ಬಡ್ಡಿ ತೀರಿಕೆ ಕವರೇಜ್ ಅನುಪಾತ	4.93	9.25	9.29	8.97

ಪ್ರತ್ಯೇಕ ಆರ್ಥಿಕ ಫಲಿತಾಂಶಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಇಲ್ಲಿ ಕೆಳಗೆ ನೀಡಲಾಗಿದೆ:

ವಿವರಗಳು	30.06.2024 ಕ್ಕೆ ಕೊನೆಯಾದ ತ್ರೈಮಾಸಿಕ (ಅಪರಿಶೋಧಿತ)	31.03.2024 ಕ್ಕೆ ಕೊನೆಯಾದ ತ್ರೈಮಾಸಿಕ (ಟಿಪ್ಪಣಿ 2ಅನ್ನು ನೋಡಿ)	30.06.2023 ಕ್ಕೆ ಕೊನೆಯಾದ ತ್ರೈಮಾಸಿಕ (ಅಪರಿಶೋಧಿತ)	31.03.2024 ಕ್ಕೆ ಕೊನೆಯಾದ ವರ್ಷ (ಪರಿಶೋಧಿತ)
(ಎ) ಕಾರ್ಯಾಚರಣೆಗಳಿಂದ ಬಂದ ಒಟ್ಟು ಆದಾಯ	39,855	40,071	37,098	1,58,414
(ಬಿ) ತೆರಿಗೆಗೆ ಮುನ್ನ ಲಾಭ	5,982	7,391	7,758	32,496
(ಸಿ) ತೆರಿಗೆಯ ನಂತರದ ಲಾಭ	4,384	5,393	5,744	24,573

ಟಿಪ್ಪಣಿಗಳು:

1. ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವ ಅಗತ್ಯತೆಗಳು) ನಿಬಂಧನೆಗಳು 2015 ರ ನಿಬಂಧನೆ 33 ಮತ್ತು 52 ರ ಪ್ರಕಾರ ಹ್ಯಾಪಿಯೆಸ್ಟ್ ಮೈಂಡ್ಸ್ ಟೆಕ್ನಾಲಜಿಸ್ ಲಿಮಿಟೆಡ್ ("ಹೋಲ್ಡಿಂಗ್ ಕಂಪನಿ" ಅಥವಾ "ಕಂಪನಿ") ಮತ್ತು ಅದರ ಅಧೀನಸಂಸ್ಥೆಗಳ (ಒಟ್ಟಾಗಿ "ಸಮೂಹ" ಎಂದು ಉಲ್ಲೇಖಿಸಲಾಗುತ್ತದೆ); ಜೂನ್ 30, 2024 ಕ್ಕೆ ಕೊನೆಯಾದ ತ್ರೈಮಾಸಿಕದ ಅಪರಿಶೋಧಿತ ಸಂಚಿತ ಆರ್ಥಿಕ ಫಲಿತಾಂಶಗಳ ("ಸಂಚಿತ ಆರ್ಥಿಕ ಫಲಿತಾಂಶಗಳು") ಈ ಹೇಳಿಕೆಯನ್ನು ಆಡಿಟ್ ಸಮಿತಿಯು ಪರಿಶೀಲಿಸಿದ್ದು, ಇದನ್ನು ಆಗಸ್ಟ್, 12 2024 ರಂದು ನಡೆದ ನಿರ್ದೇಶಕರ ಮಂಡಳಿ ತನ್ನ ಸಭೆಯಲ್ಲಿ ಅನುಮೋದಿಸಿದೆ.
2. ಮಾರ್ಚ್ 31, 2014 ಕ್ಕೆ ಕೊನೆಗೊಂಡ ತ್ರೈಮಾಸಿಕದ ಅಂಕಿ-ಅಂಶಗಳು: ಮಾರ್ಚ್ 31, 2024 ರವರೆಗಿನ ಪೂರ್ಣ ವರ್ಷದ ಪರಿಶೋಧಿತ ಅಂಕಿ-ಅಂಶಗಳನ್ನು ಹಣಕಾಸು ವರ್ಷದ ಮೂರನೇ ತ್ರೈಮಾಸಿಕದ ಕೊನೆಯ ದಿನಾಂಕವಾದ ಡಿಸೆಂಬರ್ 31, 2023 ರವರೆಗಿನ ವರ್ಷದ ಅಪರಿಶೋಧಿತ ಪ್ರಕಟಿತ ಅಂಕಿ-ಅಂಶಗಳ ಜೊತೆ ಸರಿತೂಗಿಸಿ ನೀಡಿರುವ ಅಂಕಿ-ಅಂಶಗಳಾಗಿರುತ್ತವೆ. ಡಿಸೆಂಬರ್ 31, 2023 ರವರೆಗಿನ ವರ್ಷದ ಪ್ರಕಟಿತ ಫಲಿತಾಂಶಗಳನ್ನು ಶಾಸನಬದ್ಧ ಲೆಕ್ಕಪರಿಶೋಧಕರು ಸೀಮಿತವಾಗಿ ಪರಿಶೀಲಿಸಿದ್ದಾರೆ.
3. ಮೇ 22, 2024 ರಂದು ಸದರಿ ಸಮೂಹವು ಭಾರತದ ನೋಯ್ಡಾದಲ್ಲಿ ನೆಲೆಯಾಗಿರುವ ಪ್ಯೂರ್‌ಸಾಫ್ಟ್‌ವೇರ್ ಟೆಕ್ನಾಲಜಿಸ್ ಪ್ರೈವೇಟ್ ಲಿಮಿಟೆಡ್ ("ಪಿಎಸ್‌ಟಿಪಿಎಲ್") ಎಂಬ ಐಟಿ ಸೇವೆಗಳ ಕಂಪನಿಯ ಕಾರ್ಯಾಚರಣೆಯ ಮತ್ತು ಮ್ಯಾನೇಜ್ಮೆಂಟಿನ ನಿಯಂತ್ರಣವನ್ನು ಪಡೆದುಕೊಂಡಿದೆ. ಸಮೂಹವು, ಒಟ್ಟು 103 ಮಿಲಿಯನ್ ಡಾಲರುಗಳ (85,960 ಲಕ್ಷ ರೂಗಳ) ಪ್ರತಿಫಲವನ್ನು ನೀಡಿ ಪಿಎಸ್‌ಟಿಪಿಎಲ್ ನಲ್ಲಿನ ಇಕ್ವಿಟಿಯಲ್ಲಿ ಶೇ.100 ರಷ್ಟು ಪಾಲನ್ನು ಪಡೆದುಕೊಂಡಿದೆ; ಈ ಪ್ರತಿಫಲದಲ್ಲಿ ನಗದಿನ ಭಾಗ 76.6 ಮಿಲಿಯನ್ ಡಾಲರುಗಳು (63,947 ಲಕ್ಷ ರೂಗಳು). ಪಿಎಸ್‌ಟಿಪಿಎಲ್ ನ ಹಾಲಿ ಇಎಸ್‌ಓಪಿ ಗಳ ರದ್ದತಿಯ ನ್ಯಾಯೋಚಿತ ಬೆಲೆ 0.8 ಮಿಲಿಯನ್ ಡಾಲರುಗಳನ್ನು (691 ಲಕ್ಷ ರೂಗಳನ್ನು) ಮೂರು ಭಾಗಗಳಲ್ಲಿ ಎಂದರೆ ಆಗಸ್ಟ್ 2024, ಆಗಸ್ಟ್ 2025 ಹಾಗೂ ಆಗಸ್ಟ್ 2026 ರಲ್ಲಿ ಪಾವತಿಸಬೇಕು ಮತ್ತು ಅನುಷಂಗಿಕ (contingent) ಪ್ರತಿಫಲದ ನ್ಯಾಯೋಚಿತ ಬೆಲೆ 25.6 ಮಿಲಿಯನ್ ಡಾಲರುಗಳನ್ನು (21,322 ಲಕ್ಷ ರೂಗಳನ್ನು), ನಿಗದಿತ ಗುರಿಗಳ ಸಾಧನೆಗೆ ಒಳಪಟ್ಟಂತೆ, ಮುಂದಿನ ಎರಡು ವರ್ಷಗಳಲ್ಲಿ ಪಾವತಿಸಬೇಕು. ಸಮೂಹವು 63,829 ಲಕ್ಷ ರೂಗಳ ನಗದು ಪ್ರತಿಫಲವನ್ನು ಮೇ 22, 2024 ರಂದು ಪಾವತಿಸಿದೆ ಮತ್ತು ಷೇರುಗಳನ್ನು ಮೇ 28, 2024 ರಂದು ವರ್ಗಾಯಿಸಲಾಗಿದೆ. ಕೆಲವೊಂದು ವೆಚ್ಚಗಳು ಮತ್ತು ಹೊಣೆಗಳ ಇತ್ಯರ್ಥ ನಿಮಿತ್ತ 0.1 ಮಿಲಿಯನ್ ಡಾಲರುಗಳ (118 ಲಕ್ಷ ರೂಗಳ) ಮೊತ್ತವನ್ನು ಹಿಡಿದಿರಿಸಿಕೊಳ್ಳಲಾಗಿದೆ. ಸಮೂಹವು ಒಂದು ತಾತ್ಕಾಲಿಕ ಆಧಾರದ ಮೇಲೆ, ಗುರುತಿಸಿದ ಆಸ್ತಿಗಳು ಮತ್ತು ಹೊಣೆಗಳ ಖರೀದಿ ಬೆಲೆಯನ್ನು ತೆಗೆದಿರಿಸಿದೆ. ಈ ಸ್ವಾಧಿನಕೋಸ್ಕರ ಸಮೂಹಕ್ಕೆ 605 ಲಕ್ಷ ರೂಗಳ ಖರ್ಚುಗಳಾಗಿದ್ದು ಅದನ್ನು "ಇತರೆ ಖರ್ಚುಗಳು" ಅಡಿಯಲ್ಲಿ ಒಟ್ಟಾಗಿ ತೋರಿಸಲಾಗಿದೆ.
4. ಮೇ 24, 2024 ರಂದು ಸದರಿ ಸಮೂಹವು ಅಮೆರಿಕೆಯ ಡೆನ್ವರ್, ಕಲರಡೊ ದಲ್ಲಿ ನೆಲೆಯಾಗಿರುವ ಔರಿಯಸ್ ಟೆಕ್ ಸಿಸ್ಟಮ್ಸ್ ಎಲ್‌ಎಲ್‌ಸಿ ("ಔರಿಯಸ್") ಎಂಬ ಐಟಿ ಸೇವೆಗಳ ಕಂಪನಿಯ ಕಾರ್ಯಾಚರಣೆಯ ಮತ್ತು ಮ್ಯಾನೇಜ್ಮೆಂಟಿನ ನಿಯಂತ್ರಣವನ್ನು ತೆಗೆದುಕೊಂಡಿದೆ. ಸಮೂಹವು, ಒಟ್ಟು 14.36 ಮಿಲಿಯನ್ ಡಾಲರುಗಳ (11,994ಲಕ್ಷ ರೂಗಳ) ಪ್ರತಿಫಲವನ್ನು ನೀಡಿ ಔರಿಯಸ್ ನಲ್ಲಿನ ಸದಸ್ಯತ್ವದಲ್ಲಿನ ಶೇ.100 ರಷ್ಟು ಪಾಲನ್ನು ಪಡೆದುಕೊಂಡಿದೆ; ಈ ಪ್ರತಿಫಲದಲ್ಲಿ ನಗದಿನ ಭಾಗ 8.56 ಮಿಲಿಯನ್ ಡಾಲರುಗಳು (7,148 ಲಕ್ಷ ರೂಗಳು). ಔರಿಯಸ್ ನ ಅನುಷಂಗಿಕ (contingent) ಪ್ರತಿಫಲದ ನ್ಯಾಯೋಚಿತ ಬೆಲೆ 5.8 ಮಿಲಿಯನ್ ಡಾಲರುಗಳನ್ನು (4,846 ಲಕ್ಷ ರೂಗಳನ್ನು), ನಿಗದಿತ ಗುರಿಗಳ ಸಾಧನೆಗೆ ಒಳಪಟ್ಟಂತೆ, ಮುಂದಿನ ಎರಡು ವರ್ಷಗಳಲ್ಲಿ ಪಾವತಿಸಬೇಕು. ಸಮೂಹವು 7.91 ಮಿಲಿಯನ್ ಡಾಲರುಗಳ ನಗದು ಪ್ರತಿಫಲವನ್ನು ಮೇ 24, 2024 ರಂದು ಪಾವತಿಸಿದೆ ಮತ್ತು ಷೇರುಗಳನ್ನು ಮೇ 27, 2024 ರಂದು ವರ್ಗಾಯಿಸಲಾಗಿದೆ. ಕೆಲವೊಂದು ವೆಚ್ಚಗಳು ಮತ್ತು ಹೊಣೆಗಳ ಇತ್ಯರ್ಥ ನಿಮಿತ್ತ 0.12 ಮಿಲಿಯನ್ ಡಾಲರುಗಳ (105 ಲಕ್ಷ ರೂಗಳ) ಮೊತ್ತವನ್ನು ಹಿಡಿದಿರಿಸಿಕೊಳ್ಳಲಾಗಿದೆ. ಪ್ರತಿಫಲದಲ್ಲಿನ ಮೊತ್ತ 0.53 ಮಿಲಿಯನ್ ಡಾಲರುಗಳನ್ನು (438 ಲಕ್ಷ ರೂಗಳನ್ನು) ಮುಕ್ತಾಯದ ದಿನಾಂಕದಿಂದ 90 ದಿನಗಳ ಒಳಗಾಗಿ ಪಾವತಿಸಬೇಕು. ಸಮೂಹವು ಒಂದು ತಾತ್ಕಾಲಿಕ ಆಧಾರದ ಮೇಲೆ, ಗುರುತಿಸಿದ ಆಸ್ತಿಗಳು ಮತ್ತು ಹೊಣೆಗಳ ಖರೀದಿ ಬೆಲೆಯನ್ನು ತೆಗೆದಿರಿಸಿದೆ. ಈ ಸ್ವಾಧಿನಕೋಸ್ಕರ ಸಮೂಹಕ್ಕೆ 38 ಲಕ್ಷ ರೂಗಳ ಖರ್ಚುಗಳಾಗಿದ್ದು ಅದನ್ನು "ಇತರೆ ಖರ್ಚುಗಳು" ಅಡಿಯಲ್ಲಿ ಒಟ್ಟಾಗಿ ತೋರಿಸಲಾಗಿದೆ.
5. ಏಪ್ರಿಲ್ 18, 2024 ರಂದು ಸಮೂಹವು ಒಟ್ಟು 445 ಲಕ್ಷ ರೂಗಳ ಖರೀದಿ ಪ್ರತಿಫಲಕ್ಕೆ, ಬೆಂಗಳೂರಿನಲ್ಲಿ ನೆಲೆಯಾಗಿರುವ ಮೆಕ್‌ಮಿಲನ್ ಲರ್ನಿಂಗ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಎಂಬ ಕಂಪನಿಯ ಇಕ್ವಿಟಿಯಲ್ಲಿ ಶೇ.100 ಪಾಲನ್ನು ಪಡೆಯುವುದಕ್ಕಾಗಿ ಷೇರು ಖರೀದಿ ಒಪ್ಪಂದವೊಂದಕ್ಕೆ ಸಹಿ ಹಾಕಿದೆ. ಸಮೂಹವು, ಸದರಿ ಖರೀದಿ ಪ್ರತಿಫಲವನ್ನು ಏಪ್ರಿಲ್ 30, 2024 ರಂದು ಪಾವತಿಸಿದ ನಂತರದಲ್ಲಿ ಷೇರುಗಳನ್ನು ಕಂಪನಿಯ ಹೆಸರಿಗೆ ವರ್ಗಾಯಿಸಲಾಗಿದೆ.
6. ಮೇಲೆ ನೀಡಿರುವುದು ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವ ಅಗತ್ಯತೆಗಳು) ನಿಬಂಧನೆಗಳು, 2015 ರ ನಿಬಂಧನೆ 33 ಹಾಗೂ ನಿಬಂಧನೆ 52 ಪ್ರಕಾರ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲಿಸಿರುವ ತ್ರೈಮಾಸಿಕದ ಆರ್ಥಿಕ ಫಲಿತಾಂಶಗಳ ವಿಸ್ತೃತ ರೂಪದ ಸಾರಾಂಶವಾಗಿರುತ್ತದೆ. ಈ ತ್ರೈಮಾಸಿಕದ ಆರ್ಥಿಕ ಫಲಿತಾಂಶಗಳ ಪೂರ್ಣ ಪಾಠ ಕಂಪನಿಯ ಷೇರುಗಳು ಲಿಸ್ಟ್ ಆಗಿರುವ ಸ್ಟಾಕ್ ಎಕ್ಸ್‌ಚೇಂಜುಗಳ ಎಂದರೆ www.bseindia.com ಹಾಗೂ www.nseindia.com ವೆಬ್‌ಸೈಟ್‌ಗಳಲ್ಲಿಯೂ ಮತ್ತು ಕಂಪನಿಯ www.happiestminds.com ವೆಬ್‌ಸೈಟಿನಲ್ಲಿಯೂ ಲಭ್ಯವಿರುತ್ತವೆ.

ಹ್ಯಾಪಿಯೆಸ್ಟ್ ಮೈಂಡ್ಸ್ ಟೆಕ್ನಾಲಜಿಸ್ ಲಿಮಿಟೆಡ್‌ಗಾಗಿ
ಸಹಿ/-
ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಚೀಫ್ ಫೈನಾನ್ಷಿಯಲ್ ಆಫೀಸರ್

ಸ್ಥಳ: ಬೆಂಗಳೂರು, ಭಾರತ
ದಿನಾಂಕ: ಆಗಸ್ಟ್ 12, 2024

ವಿಶ್ವವಾಣಿ
ಆರಾಮ
@vishwavaninews
ಬೆಂಗಳೂರು
ಬುಧವಾರ
14 | 08 | 2024
ಅನುದಿನವೂ ವಿರಾಮಕ್ಕೆ ಒಂದು ನೆಪ

ಮಳೆಯೊಂದಿಗೆ ಗೆಳೆತನ

ಎನ್ನ ಮನದೊಳಗೆ ಮಧುರ ಭಾವನೆಗಳನ್ನು ಜಿನುಗಿಸಬಲ್ಲ ಮಳೆರಾಯನು, ಇಳೆಯ ಹೃದಯದಿಂದಲೂ ನೀರಿನ ಝರಿಯನ್ನೇ ಜಿನುಗಿಸುತ್ತಾನೆ!

• ಸೌಜನ್ಯ

ಮಳೆಯೊಂದಿಗಿನ ಈ ಗೆಳೆತನವನ್ನು ಬರೇ ಪದಗಳಲ್ಲಿ ಒದರಿಬಿಡಲು ಆಗುವುದಿಲ್ಲ. ಏನೂ ಅರಿಯದ

ವಯಸ್ಸಿನಿಂದಲೇ ಕುದುರಿಹೋಗಿತ್ತು ಎದೆಯೊಳಗೊಂದು ಮುದವಾದ ಮೋಹ ಈ ಮಳೆಯ ಮೇಲೆ. ಅಮ್ಮನ

ಬೆರಳ ಹಿಡಿದು ಚಿಮ್ಮಿ ಚಿಮ್ಮಿ ಬರುತ್ತಿದ್ದ ಘಮ್ಮನೆಯ ಮಳೆಯ ನೋಡಲು ಓಡುತ್ತಿದ್ದೆ ಅಂಗಳಕ್ಕೆ. ಅಂಬರದಿಂದಿಳಿದು ವಸುಂಧರೆಯ ಚುಂಬಿಸುವ ಈ ಚಂದದ ಬಿಂದುಗಳು ನನ್ನನ್ನು ಅಂದಿನಿಂದಲೂ ಕಾಡುತ್ತಲೇ ಬಂದಿದೆ.

ಮಳೆರಾಯನ ಬಗೆಗೆಯೇ ಹಲವಾರು ಪ್ರಶ್ನೆಗಳಿದ್ದವು ತಲೆಯಲ್ಲಿ. ಬಿಳಿಮೋಡದಿಂದಿಳಿಯುವ ಈ ಚೆಲುವಿನ ಹನಿಗಳು ಜನಿಸುವುದಾದರೂ ಹೇಗೆ? ಮುನಿಸಿಕೊಂಡ ಮುಗಿಲುಗಳು ಜಗಳವಾಡಿದಾಗ ಚಿಗುರುವುದೇ ಈ ಜಿಗಿ ಮಳೆ? ಹೀಗೆ ಬಗೆಯೇ ಹರಿಯದ ರಗಳೆಗಳು! ಮಗುವಿನ ಎದೆಯೊಳಗೆಯೇ ಅಲ್ಲವೇ ಹುದುಗಿರುವುದು ಈ ಮುಗಿಯದ ಕೌತುಕದ ಜಗವು?

ಬೆಳೆಯುತ್ತಾ ಬೆಳೆಯುತ್ತಾ ನಾನು ರೂಢಿಸಿಕೊಂಡು ಬಂದ ಕಲೆಯೆಂದರೆ ಮಳೆಯಲ್ಲಿ ಕಳೆದುಹೋಗುವುದು ಹೇಗೆ ಎಂದು. ಒಂದು ಕಿಟಕಿ ತೆರೆದರೆ ಸಾಕಲ್ಲವೇ, ಆ ಚಿಟಪಟದ ಸ್ವರಗಳು ಸೀದಾ ಮನದ ಕಟಕಟೆಯ ತಲುಪಲು? ಈ ಹಠಮಾರಿ ಜಿಟಿಜಿಟಿ ಮಳೆಯು ಪ್ರತಿಬಾರಿಯೂ ಪುಟಿದೇಳಿಸುವ ನೆನಪಿನ ತಟಗಳು ಒಂದೇ ಎರಡೇ? ಮಳೆಯ ಗಂಧವು ತಂದುಕೊಡುತ್ತದೆ ಹಿಂದಿನ ನೆನಪುಗಳ ಒಂದು ಚಂದನವನವನ್ನೇ!

ತೀರಿ ಹೋದ ಪುಟಗಳು, ಸ್ಮೃತಿಯ ಪಟಲಗಳು ಅದೆಲ್ಲಿಂದಲೋ ಮತ್ತೆ ಹಾರಿಬಂದು ನಮ್ಮ ಕೈಸೇರುವುದು ಈ ಮಾಯದ ಮಳೆಯಲ್ಲಿಯೇ. ಆ ಎಲ್ಲ ಹಳೆಯ ಬಂಧಗಳು, ಆನಂದಗಳು ಕ್ಷಣಕಾಲ ಸುಳಿದು ಹೋಗುತ್ತದೆ ಈ ಬಿರುಮಳೆಯಲ್ಲಿ. ಹಳೆಯದೆಲ್ಲವೂ ಮಳೆಯ ಮೂಲಕ ಮರಳಿ ಬರುವುದೇ ಒಂದು ಸರಳ ಸೋಜಿಗ! ಇಗೋ, ಒಲೆಯ ಮುಂದೆ ಚಳಿಯ ಕಾಯಿಸುತ್ತಾ ನಿಂತಿದ್ದಾಳೆ ಅಜ್ಜಿ. ಮೆಲುದನಿಯಲ್ಲಿ ಹಾಡೊಂದ ಉಲಿಯುತ್ತಾ. ಅವಳ ಬಳಿಗೆ ಹೋಗಿ ಇನ್ನೊಮ್ಮೆ ತರಲೆ ಮಾಡುವಾಸೆ. ಅವಳು ಮತ್ತೆ ಕಳುವಾಗುವ ಮುನ್ನ...

ಈ ಹನಿಮಳೆಯು ಅದೆಷ್ಟು ಅನಾಯಾಸವಾಗಿ ಕರೆದೊಯ್ಯುತ್ತದೆ ನಮ್ಮನ್ನು ನೆನಪಿನ ಮನೆಗೆ! ತಾತನಿಗಾತು ಕೂತು ಮತ್ತೊಮ್ಮೆ ನೀತಿಕಥೆಗಳ ಕೇಳುತ್ತೇನೆ ನಾನಲ್ಲಿ. ಬುತ್ತಿಯ ಹೊತ್ತುಕೊಂಡು ಇನ್ನೊಮ್ಮೆ ಸೈಕಲ್ಲು ಹತ್ತುತ್ತೇನೆ. ಉತ್ತುತ್ತೆ ಬತ್ತಾಸು ಕೊಳ್ಳುತ್ತಾ ಸಂತೆಬೀದಿಯ ಸುತ್ತುತ್ತೇನೆ. ಹಿತ್ತಲಿನ ತೋಟಕ್ಕೆ ಮತ್ತೆ ಮತ್ತೆ ಓಡುತ್ತೇನೆ ಚಿಟ್ಟೆಗಾಗಿ. ಅಕ್ಕನಿಂದ ತಪ್ಪಿಸಿಕೊಂಡು ಅಟ್ಟದಲ್ಲಿ ಮತ್ತೊಮ್ಮೆ ಬಚ್ಚಿಟ್ಟುಕೊಳ್ಳುತ್ತೇನೆ. ಅಮ್ಮ ಮುತ್ತಿಟ್ಟು ದೀಪವಾರಿಸುವಾಗ ಮತ್ತದೇ ಮೆತ್ತನೆಯ ಕನಸು ಕಣ್ಣನ್ನು ಮುತ್ತುತ್ತದೆ... ಮಳೆ ಸುರಿಯುವಷ್ಟೂ ಹೊತ್ತು ಉರಿಯುತ್ತಲೇ ಇರುತ್ತದೆ ಈ ನೆನಪಿನ ಬತ್ತಿ. ಹನಿಯ ತನನವು ಕೊನೆಯಾಗುವವರೆಗೂ. ಆನಂತರ ಎಲ್ಲವೂ ಮೊದಲಿನಂತೆಯೇ. ಅದೇ ಚಿಂತೆ, ಅದೇ ಸಂತೆ. ನಮ ಅಂತರಂಗಕ್ಕೂ ಬೇಕಲ್ಲವೇ ಕೊಂಚ ತುಂತುರುವಿನ ಸಾಂತ್ವನ? ನಿರಂತರ ಮಳೆಯನ್ನು ಹೀಗೆಯೇ ನೋಡುತ್ತಾ ನಿಂತರೆ ಅದೆಂಥದೋ ಒಂದು ನೆಮ್ಮದಿಯ ಸಂಚಲನ ಮನದೊಳಗೆ. ನಾ ಕಳೆದಿರುವ ಎಲ್ಲ ಮಳೆಗಾಲದ ಸಂಜೆಗಳು ಒಂದು ಸುಂದರ ಕಥಾಮಂಜರಿಯಾಗಿ ಹೃದಯದಲ್ಲೇ ಬಂಧಿಯಾಗಿದೆ.

ಭಾವ ಪ್ರಪಂಚ ಪೊರೆವ ಮಳೆ

ಮಳೆಯ ಹಾಗೆ ನನ್ನನ್ನು ಇನ್ನಾರೂ ಸೆಳೆಯುವುದಿಲ್ಲ. ಮಳೆಯ ಸಹವಾಸವು ಬಹಳ ಸಹಕಾರಿಯಾಗಿದೆ ನನ್ನ ಒಳಲೋಕದ ಮೊಳಕೆಗೆ. ಮೌನದಲ್ಲಿ ಕೂತರೆ ಮಾತ್ರವೇ ಕೇಳುವುದು ಮಳೆಹನಿಯ ಅಲೌಕಿಕ ಸಂಗೀತ. ಮಳೆಯ ಭಾಷೆ ಒಲಿಯುವುದು ಕೆಲವರಿಗಷ್ಟೇ. ಮಳೆಯ ನೀರವದಲ್ಲಿದೆ ಒಂದು ಆಳವಾದ ಅನಂತದ ತೀರ. ಅದನ್ನು ಸೇರಲು ಕಾಯುತ್ತಲೇ ಇದೆ ಈ ಮನಸ್ಸು ಭರಪೂರ. ಬೆಚ್ಚನೆಯ ಕಾವು ಕೊಟ್ಟು ನನ್ನ

ಭಾವಪ್ರಪಂಚವ ಪೊರೆಯುತ್ತಾ ಬಂದಿದೆ ಈ ತೇವದ ಮಳೆ. ಅದು ಜೀವದೊಳಗೇ ನುಗ್ಗಿ ಬದುಕುವ ಹಿಗ್ಗನ್ನು ಹೆಚ್ಚಿಸುವ ಪರಿ ನಿಜಕ್ಕೂ ಒಂದು ಅಚ್ಚರಿ! ಮಳೆಯೊಂದಿಗಿನ ಈ ನಲುಮೆಯ ಮೈತ್ರಿ ನನ್ನನ್ನು ಉಳಿಸುತ್ತಲೇ ಇದೆ, ಹೊಸದೇನನ್ನೋ ಕಲಿಸುತ್ತಲೇ ಇದೆ.

ಬಗೆ ಬಗೆ ಹನಿಗಳ ಬೊಗಸೆಯಲ್ಲಿ ಹಿಡಿದು ನಗುವುದಕ್ಕೂ ಸಮಯವಿಲ್ಲ ಈ ನಗರದವರಿಗೆ. ಕೆಲವೊಮ್ಮೆ ಕೆಲಸವೆಲ್ಲವ ಬದಿಗಿಟ್ಟು ಕೇವಲ ಮಳೆಯನ್ನೇ ನೋಡುತ್ತಾ ಕುಳಿತುಬಿಡಬೇಕು. ಕಾಲದ ಪರಿವೆಯೇ ಇಲ್ಲದೆ. ಎಲ್ಲವನ್ನೂ ಮರೆಯುತ್ತಾ. ಮೆಲ್ಲಗೆ ಮೈಮುರಿಯುತ್ತಾ. ಹನಿಪಲ್ಲವಿಯಲಿ ಬೆರೆಯುತ್ತಾ. ಮಲ್ಲಿಗೆಯಂತೆ ಬಿರಿಯುತ್ತಾ. ಮನದ ಗಲ್ಲಿಗಳನು ತೆರೆಯುತ್ತಾ. ಚಿಲುಮೆಯ ಬಳ್ಳಿಯಾಗಿ ಹರಿಯುತ್ತಾ. ಎಲ್ಲೆಗಳೆಲ್ಲವ ತೊರೆಯುತ್ತಾ. ಕಾಮನಬಿಲ್ಲನ್ನು ಕರೆಯುತ್ತಾ..... ಅಲ್ಲವೇ?

ಯುವ ಕಾವ್ಯ

ಸಂ... ಭ್ರಮಿಸಲಿ ಹೇಗೆ

ಉರುಳುತ್ತಿವೆ ಗಾಲಿಗಳಲ್ಲ
ನಿರಪರಾಧಿ ಹೆಣಗಳು ।
ಉರಿಯುತ್ತಿವೆ ಹಣತೆಗಳಲ್ಲ
ಧಗಧಗಿಸಿವೆ ಮನೆಗಳು
ಬಿಡುಗಡೆಯ ಹಬ್ಬಕೆ... ನಾ... ಸಂ-
ಭ್ರಮಿಸಲಿ.... ಹೇಗೆ ॥1॥

ಉಕ್ಕಿ ಹರಿವ ನದಿಗಳು
ಕುಸಿಯುತಿರುವ ಗಿರಿಗಳು ।

ಬದುಕ ಕಸಿವ ಅಸುರ ಕರಗಳು
ನಿಟ್ಟುಸಿರಿನ ತಿದಿಗಳು
ಬಿಡುಗಡೆಯ ಹಬ್ಬಕೆ... ನಾ... ಸಂ-

ಭ್ರಮಿಸಲಿ..... ಹೇಗೆ ॥2॥
ಧಾವಂತ ನಡಿಗೆಯ ಅಡಿಗಳು
ಗುಂಜಿಕೊಳುವ ಪಡೆಗಳು ।

ಆಸೆ ಬಲಿಯ ದೈನೇಸಿಗಳೆದೆಯ
ಗೂಡ ಮೇಲೆ ರಣಹದ್ದುಗಳ
ಕಂಡು...ಹೇಗೆ... ನಾ... ಸಂ
ಭ್ರಮಿಸಲಿ ಬಿಡುಗಡೆಯ ಹಬ್ಬವ ॥3॥

ಅರಳುತ್ತಿವೆ ಹಸಿರ ಬೇಲಿಯ
ಕಂಪಿನ ಹೂಗಳಲ್ಲ ಕ್ರೂರತೆಗೆ ।

ಸಿಡಿದರಳಿ ಮುರುಟುವ ಜೀವವು
ಈ ಬೇಗೆಯಲ್ಲೂ ಬೇಯುವ ಬೇಳೆಗಳು
ಬಿಡುಗಡೆಯ ಹಬ್ಬಕೆ..ನಾ ..ಸಂ
ಭ್ರಮಿಸಲಿ... ಹೇಗೆ ॥4॥

ನರರಕ್ಕಸರ ಪರಿಗೆ ಪರಿತಪಿ
ಸುತ್ತಿವೆಯೆ? ಬಲಿದಾನಗಳು ।
ಬಾವುಟದ ಹಿಂದಿನ ಆವುಟಕ್ಕೆ
ಕೆಂಪುಕೆಂಪಾಗಿದೆ ಬಾನಂಗಳು
ಬಿಡುಗಡೆಯ ಹಬ್ಬಕೆ ನಾ ಸಂ

ಭ್ರಮಿಸಲಿ...ಹೇಗೆ ॥5॥

• ಡಿ.ಎನ್.ಅಕ್ಕಿ, ಇಂಡಿ

ಇತಿಹಾಸಕ್ಕೊಂದು ಕಿಂಡಿ

ವಿಶ್ವೇಶ್ವರಯ್ಯ ನೀಡಿದ ಸಲಹೆ!

ಹೊಸಪೇಟೆಯ ಸನಿಹದಲ್ಲಿರುವ ತುಂಗಭದ್ರಾ ಡ್ಯಾಂ ಕಟ್ಟಲು ಮೊದಲು ಯೋಚಿಸಿದವರು ಬ್ರಿಟಿಷರು! ಮದರಾಸ್ ಪ್ರೆಸಿಡೆನ್ಸಿ ವ್ಯಾಪ್ತಿಯಲ್ಲಿದ್ದ ಆ ಜಾಗದಲ್ಲಿ ಡ್ಯಾಂ ಕಟ್ಟಿದರೆ, ಬಳ್ಳಾರಿ ಮತ್ತು ರಾಯಲಸೀಮೆಯ ಕೃಷಿಕರಿಗೆ ಅನುಕೂಲವಾಗುತ್ತದೆಂಬ ಈ ಪ್ರಸ್ತಾಪವು, ಹೈದರಾಬಾದಿನ ನಿಜಾಮನಿಗೂ ಒಪ್ಪಿಗೆ ಎನಿಸಿತು. 28.2.1945ರಂದು ಶಿಲಾನ್ಯಾಸ ಮಾಡಿದವರು, ಡ್ಯಾಂನ ಎಡಭಾಗದಲ್ಲಿ ನವಾಬ್ ಅಜಂ ಜಾ ಮತ್ತು



ಬಲಭಾಗದಲ್ಲಿ ಮದರಾಸಿನ ಗವರ್ನರ್ ಆರ್ಥರ್ ಹೋಪ್. 1947ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ದೊರಕಿ, ಹೈದರಾಬಾದ್ ವಿಮೋಚನೆ ಆದ ನಂತರ, 1949ರಲ್ಲಿ ಕೆಲಸ ಮುಂದುವರಿಯಿತು. ಆಗ ಒಂದು ವಿವಾದ ತಲೆದೋರಿತು. ಅಣೆಕಟ್ಟು ನಿರ್ಮಿಸಲು ಯಾವ ರೀತಿಯ ಸುರ್ಕಿಗಾರೆ ಉಪಯೋಗಿಸಬೇಕು, ನೀರು ಉಕ್ಕಿ ಹರಿಯುವ ವಿನ್ಯಾಸ, ಕಾಟ್ರಾಂಕ್ಷನ್ ಜಾಯಿಂಟ್ ಮೊದಲಾದ ಕುರಿತು ಮದರಾಸ್ ಮತ್ತು ಹೈದರಾಬಾದಿನ ಇಂಜಿನಿಯರುಗಳ ನಡುವೆ ವಾದ ವಿವಾದ ನಡೆಯಿತು. ಆಗ ಎಂ. ವಿಶ್ವೇಶ್ವರಯ್ಯನವರ ಸಲಹೆಯನ್ನು ಕೇಳುವುದು ಎಂದು ನಿರ್ಧರಿಸಲಾಯಿತು! ವಿಶ್ವೇಶ್ವರಯ್ಯನವರ ಸಲಹೆ ಪಡೆದು, ಅದರಂತೆ ಕೆಲಸ ಮುಂದುವರಿಯಿತು. 1952ರಲ್ಲಿ ನೆಹರು ಇಲ್ಲಿಗೆ ಭೇಟಿ ನೀಡಿ, ಕಾಮಗಾರಿಯನ್ನು ವೀಕ್ಷಿಸಿದರು. 1953ರ ಹೊತ್ತಿಗೆ ಅಣೆಕಟ್ಟಿನ ಪ್ರಮುಖ ಕಾಮಗಾರಿ ಮುಗಿಯುವ ಹಂತಕ್ಕೆ ಬಂದಿತು.

ಆಧುನಿಕ ದೇವಾಲಯದ ಗೇಟ್ ಭದ್ರಮಾಡಿ!

ಅಣೆಕಟ್ಟುಗಳು ನಮ್ಮ ದೇಶದ ಆಧುನಿಕ ದೇವಾಲಯಗಳು ಎಂದು ನೆಹರು ಹೇಳಿದ್ದರು. ನೀರಾವರಿ ಇಲಾಖೆಯಲ್ಲಿ ಸುಮಾರು 35 ವರ್ಷ ಸೇವೆಸಲ್ಲಿಸಿರುವ ಸಿವಿಲ್ ಇಂಜಿನಿಯರ್ ಒಬ್ಬರು, ತುಂಗಭದ್ರಾ ಅಣೆಕಟ್ಟು ಗೇಟ್ ಮುರಿದುಹೋದ ಹಿನ್ನೆಲೆಯಲ್ಲಿ, ತಮ್ಮ ಮನದಾಳದ ಮಾತುಗಳನ್ನು ಇಲ್ಲಿ ತೋಡಿಕೊಂಡಿದ್ದಾರೆ.

• ಮಿರ್ಲೆ ಚಂದ್ರಶೇಖರ

ತುಂಗಭದ್ರ ಜಲಾಶಯದಲ್ಲಿ ಶೇಖರವಾಗಿದ್ದ 60 ಟಿಎಂಸಿ ಅಮೂಲ್ಯವಾದ ನೀರು ವ್ಯರ್ಥವಾಗಿ ಹರಿದು ಹೋಯಿತೆಂದರೆ ವ್ಯವಸ್ಥೆಯಲ್ಲಿನ ಲೋಪಗಳೇ ಹೊರತು, ಇದಕ್ಕೆ ಇಂಜಿನಿಯರ್‌ಗಳಾಗಲಿ ಅಥವಾ ಎಪ್ಪತ್ತು ವರ್ಷದಿಂದ ತನ್ನ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸಿಕೊಂಡು ಬಂದಿದ್ದ ಗೇಟ್ ನಂ.19 ಕಾರಣವಲ್ಲ. ಸ್ಟಾಪ್‌ಲಾಗ್ ಗೇಟುಗಳು ಇದ್ದಿದ್ದರೆ ನೀರಿನ ನಷ್ಟ ಸಂಭವಿಸುತ್ತಿರಲಿಲ್ಲ, ಬಹುತೇಕ ಡ್ಯಾಂಗಳಲ್ಲಿ ಸ್ಟಾಪ್‌ಲಾಗ್ ಗೇಟುಗಳು ಇರುವುದಿಲ್ಲ, ಕಬಿನಿ ಡ್ಯಾಂನಲ್ಲೂ ಅಳವಡಿಸಿರುವುದಿಲ್ಲ. ಸ್ಟಾಪ್‌ಲಾಗ್ ಗೇಟುಗಳನ್ನು ಅಳವಡಿಸಲು ಪ್ರಸ್ತಾವನೆಗಳನ್ನು ಸಲ್ಲಿಸಿದ್ದಾರೆಂದು ತಿಳಿದಿದೆ.

ಅಣೆಕಟ್ಟೆಗಳನ್ನು ಆಧುನೀಕ ಭಾರತದ ದೇವಾಲಯಗಳೆಂದು ನೆಹರುರವರು ಕರೆದಿದ್ದರು, ಹಾಗಿದ್ದ ಮೇಲೆ ಅವುಗಳ ರಕ್ಷಣೆಯು ಇಂದು ಆದ್ಯ ಕರ್ತವ್ಯವಾಗಬೇಕು. ಕೇಂದ್ರೀಯ ಜಲ ಆಯೋಗದ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ 231 ದೊಡ್ಡ ಅಣೆಕಟ್ಟೆಗಳು ಕಾರ್ಯನಿರ್ವಹಿಸುತ್ತಿವೆ, ಇವುಗಳಲ್ಲಿ 75 ಅಣೆಕಟ್ಟೆಗಳು ಜಲಸಂಪನ್ಮೂಲ ಇಲಾಖೆ, 135 ಅಣೆಕಟ್ಟೆಗಳು ಸಣ್ಣ ನೀರಾವರಿ ಇಲಾಖೆ ಮತ್ತು 21 ಅಣೆಕಟ್ಟೆಗಳನ್ನು ಇಂಧನ ಇಲಾಖೆಯ ವ್ಯಾಪ್ತಿಯಲ್ಲಿ ಬರುವುದು. ಅಣೆಕಟ್ಟೆಗಳ ನಿರ್ವಹಣೆಯನ್ನು ಆಯಾ ಇಲಾಖೆಗಳೇ ತಮ್ಮಲ್ಲಿ ಇರುವ ಇಂಜಿನಿಯರ್‌ಗಳ ಮೂಲಕ ಮಾಡಿಕೊಂಡು ಬರುತ್ತಿವೆ.

ಇಲ್ಲಿ ಪ್ರಶ್ನೆ ಇರುವುದು – ಅಣೆಕಟ್ಟೆಗಳ ನಿರ್ವಹಣೆಗೆ ನಿಯೋಜಿಸಿರುವ ಇಂಜಿನಿಯರ್‌ಗಳು ಅಣೆಕಟ್ಟೆಯ ಬಗ್ಗೆ ತಾಂತ್ರಿಕ ಪರಿಣಿತಿ ಹೊಂದಿದ್ದಾರೆಯೇ? ಹೊಂದಿದ್ದರೂ ಕಾಲಕಾಲಕ್ಕೆ ತರಬೇತಿ ನೀಡಲಾಗುತ್ತಿದೆಯೇ? ಎಂಬುದು. ಇಂದಿನ ಇಂಜಿನಿಯರುಗಳನ್ನು ಪಟ್ಟಿ ಮಾಡಿ, ಅರ್ಹತೆ ಇರುವವರನ್ನು ಮಾತ್ರ ಬಿಟ್ಟು ಉಳಿದವರನ್ನು ಅವರಲ್ಲಿರುವ ಪರಿಣಿತಿಗೆ ತಕ್ಕ ಸ್ಥಳಗಳಿಗೆ ವರ್ಗಾಹಿಸುವುದು ಅಣೆಕಟ್ಟೆಗಳ ಸುಭದ್ರತೆಯ ದೃಷ್ಟಿಯಿಂದ ಸೂಕ್ತ.

ನಾವು ಎಡವುತ್ತಿರುವುದು ಇಲ್ಲಿಯೇ. ದುರಂತವೆಂದರೆ ಇಂಜಿನಿಯರಿಂಗ್ ಇಲಾಖೆಗಳಲ್ಲಿ ಒಬ್ಬ ಇಂಜಿನಿಯರ್ ಸಮಗ್ರವಾದ ಪರಿಣಿತಿ ಇಲ್ಲದಿದ್ದರೂ ಎಲ್ಲಾ ವಿಭಾಗಗಲ್ಲೂ ಕೆಲಸ ಮಾಡುತ್ತಾನೆ. ಮುನ್ಸಿಪಾಲಿಟಿ, ಕಾರ್ಪೋರೇಷನ್, ಜಿಲ್ಲಾಪಂಚಾಯತ್ ಮುಂತಾದ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ನೀರಾವರಿ ಕ್ಷೇತ್ರದಲ್ಲಿ ಗಂಧಗಾಳಿ ಇಲ್ಲದ ಇಂಜಿನಿಯರ್‌ಗಳನ್ನು ಅಣೆಕಟ್ಟೆಯ ನಿರ್ವಹಣೆಯ ವಿಭಾಗಕ್ಕೆ ನಿಯೋಜಿಸುತ್ತಾರೆ, ಪ್ರವಾಹ ಬಂದ ಪರಿಸ್ಥಿತಿಯಲ್ಲಿ ಅಣೆಕಟ್ಟೆಗಳನ್ನು ನಿರ್ವಹಿಸುವ ರೀತಿರಿವಾಜುಗಳ ತಿಳಿಯದದವನು ಏನು ಮಾಡಲಿಕ್ಕೆ ಸಾಧ್ಯ? ಮುನ್ಸಿಪಾಲಿಟಿಯಲ್ಲಿ ಕಸವಿಲೇವಾರಿ ಉಸ್ತುವಾರಿ ಮಾಡಿಕೊಂಡಿದ್ದವರಿಗೆ ಬಾರಿ ಅಣೆಕಟ್ಟೆಯ ನಿರ್ವಹಣೆಯನ್ನು ಕೊಟ್ಟರೆ ಜಲಾಶಯದ ಸುರಕ್ಷತೆಯನ್ನು ನಿರೀಕ್ಷಿಸಲು ಆದೀತೆ? ಆಶ್ಚರ್ಯ ಎನಿಸಬಹುದು: ಅಣೆಕಟ್ಟೆಗಳ ಬಗ್ಗೆ ಹೆಚ್ಚಿನ ಮಾಹಿತಿ ಇರುವುದು ಹಾಗೂ ಜಲಾಶಯದಲ್ಲಿ ಶೇಖರವಾಗುವ ನೀರಿನ ಸಾಮರ್ಥ್ಯಕ್ಕೆ ಅನುಸಾರ ಗೇಟ್‌ಗಳನ್ನು ಹೇಗೆ ಆಪರೇಟ್ ಮಾಡಬೇಕು ಎನ್ನುವ ಪೂರ್ಣ ಜ್ಞಾನವನ್ನು ಗೇಟ್ ಆಪರೇಟ್ ಆದವನು ಹೊಂದಿರುತ್ತಾನೆ. ಹೊಸ ಡಾಕ್ಟರ್ ಗಿಂತ ಹೊಸ ರೋಗಿಯೇ ಲೇಸು ಎಂದ ಹಾಗೆ! ಅಲ್ಲಿನ ಇಂಜಿನಿಯರ್‌ಗಳಿಗೂ ಅವನಷ್ಟು ಗೊತ್ತಿರುವುದಿಲ್ಲ, ಕಾರಣ ಅಣೆಕಟ್ಟೆಯ ಮಾಹಿತಿಯನ್ನು ತಿಳಿದುಕೊಳ್ಳುವಷ್ಟರಲ್ಲಿ ಎತ್ತಂಗಡಿಯಾಗಿರುತ್ತಾನೆ. ಕೆಲವೇ ತಿಂಗಳುಗಳ ಹಿಂದೆ ಅಣೆಕಟ್ಟೆ ವಿಭಾಗಕ್ಕೆ ಬಂದಿರುವ ಇಂಜಿನಿಯರ್‌ಗಳು ಪ್ರವಾಹ ಪರಿಸ್ಥಿತಿಯನ್ನು ನಿಬಾಹಿಸುವುದು ಕಷ್ಟವಾಗುವುದಿಲ್ಲವೇ? ಹುದ್ದೆಗೆ ಬಂದ ಇಂಜಿನಿಯರ್‌ಗಳೆಲ್ಲಾ ಗೇಟ್ ಆಪರೇಟರ್‌ಗಳನ್ನೇ ಅವಲಂಬಿಸಬೇಕಾಗುತ್ತದೆ. ಆತ ಹಲವು ವರ್ಷಗಳಿಂದ ಬೇರೆಲ್ಲಿಯೂ ವರ್ಗಾವಣೆಗೊಳ್ಳದೆ ಒಂದೇ ಸ್ಥಳದಲ್ಲಿ ಇರುವುದರಿಂದ ಅವನು ಅಣೆಕಟ್ಟೆಯ ಸೂಕ್ಷ್ಮ ವಿಚಾರಗಳನ್ನು ಬಲ್ಲವನಾಗಿರುತ್ತಾನೆ.

ಅಣೆಕಟ್ಟೆಗಳ ನಿರ್ವಹಣೆ ಹಾಗೂ ಸಂರಕ್ಷಣೆಗಾಗಿ ಕೇಂದ್ರೀಯ ಜಲ ಆಯೋಗವು ಸರಸುಮಾರು ಹದಿನೇಳು ಕೈಪಿಡಿ ಹಾಗೂ ಮಾರ್ಗಸೂಚಿಗಳನ್ನು ಒಳಗೊಂಡ ಪುಸ್ತಕಗಳನ್ನು ಪ್ರಕಟಿಸಿದೆ. ಎಷ್ಟು ಜನ ಇಂಜಿನಿಯರ್‌ಗಳು ಈ ಕೈಪಿಡಿಗಳನ್ನು ತಿರುವಿ ಹಾಕಿದ್ದಾರೆ?

ನಮ್ಮ ಅಣೆಕಟ್ಟುಗಳಿಗೆ ವಯಸ್ಸಾಗಿದೆ!

ರಾಜ್ಯದ ಹೆಚ್ಚಿನ ಪ್ರಮುಖ ಅಣೆಕಟ್ಟುಗಳು 50 ವರ್ಷಗಳನ್ನು ದಾಟಿವೆ. ಕೆ.ಆರ್.ಎಸ್., ನೂರು ವರ್ಷಗಳನ್ನು ಕಾಣುತ್ತಿದೆ. 1897ರಲ್ಲಿ ವೇದಾವತಿ ನದಿಗೆ ಅಡ್ಡಲಾಗಿ ನಿರ್ಮಾಣಗೊಂಡಿರುವ ವಾಣಿವಿಲಾಸ ಸಾಗರ ಜಲಾಶಯವು 125 ವರ್ಷಗಳನ್ನು ಕಂಡಿದೆ. ಇದು ರಾಜ್ಯದ ಪ್ರಥಮ ಅಣೆಕಟ್ಟೆ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. ಇತ್ತೀಚೆಗೆ ನಿರ್ಮಾಣಗೊಂಡಿರುವ ಅಣೆಕಟ್ಟೆಗಳು ಕಡಿಮೆ!

ಸೂಕ್ಷ್ಮಸ್ಥಿತಿಯ ಅಣೆಕಟ್ಟುಗಳು

ಜಲಾಶಯಗಳಿಗೆ ವಯಸ್ಸು ಆದಂತೆ ಅವುಗಳನ್ನು ಸೂಕ್ಷ್ಮವಾಗಿ ನೋಡಿಕೊಳ್ಳಬೇಕಾಗುತ್ತದೆ, ಎಚ್ಚರ ತಪ್ಪಿದರೆ ಅನಾಹುತಗಳನ್ನು ಊಹಿಸುವುದಕ್ಕೂ ಸಾಧ್ಯವಾಗದು. ಪರಿಣಾಮಗಳನ್ನು ತಿಳಿದೇ, ಕೇಂದ್ರ ಸರ್ಕಾರವು ವಿಶ್ವಬ್ಯಾಂಕಿನ ಆರ್ಥಿಕ ನೆರವಿನೊಂದಿಗೆ 2012ರಲ್ಲಿ ಅಣೆಕಟ್ಟು ಪುನರ್ವಸತಿ ಮತ್ತು ಸುಧಾರಣಾ ಯೋಜನೆಯನ್ನು ಕೈಗೊಂಡಿತು. ಇದರ ಅಡಿ ಹಲವು ಅಣೆಕಟ್ಟೆಗಳ ಸುರಕ್ಷತೆ ಮತ್ತು ಕಾರ್ಯಕ್ಷಮತೆಯನ್ನು ಸುಧಾರಿಸುವ ಉದ್ದೇಶದಿಂದ ಯೋಜನೆ ರೂಪಿಸಿ ಅನುಷ್ಠಾನಗೊಳಿಸಿತು, ಈ ಯೋಜನೆಯಡಿ ಬಹಳಷ್ಟು ಅಣೆಕಟ್ಟೆಗಳು ಇನ್ನೂ ಸುಧಾರಣೆಯನ್ನು ಕಾಣಬೇಕಾಗಿದೆ.

ಅದ್ಭುತ ಕೈಪಿಡಿ

Guide lines for Safety Inspection of Dams ಕೈಪಿಡಿಯಲ್ಲಿ ಅಣೆಕಟ್ಟೆಗಳ ಪರಿವೀಕ್ಷಣೆಯ ಕುರಿತಾಗಿ ಸ್ಪಷ್ಟವಾಗಿ ವಿವರಿಸಲಾಗಿದೆ. ಕೈಪಿಡಿಯ ಪುಟ 217ರಲ್ಲಿ 45 ಪುಟಗಳ ಚೆಕ್ ಲಿಸ್ಟನ್ನು ಕೊಡಲಾಗಿದೆ, ಅದರ ಅನುಸಾರ ಕ್ರಮ ತೆಗೆದುಕೊಂಡರೆ ತುಂಗಭದ್ರೆಯ ಮಾದರಿ ಅನಾಹುತಗಳು ಆಗುವುದಿಲ್ಲ. (ಒಮ್ಮೊಮ್ಮೆ ಪ್ರಕೃತಿಯ ವಿಕೋಪಕ್ಕೆ ಕೈಮೀರಿ ಆಗುವುದನ್ನು ತಡೆಯಲಾಗದು.) ಚೆಕ್ ಲಿಸ್ಟ್ ಅನುಸಾರ ಮಾನ್ಸೂನ್ ಪ್ರಾರಂಭ ಆಗುವುದಕ್ಕೆ ಮೊದಲು ಸರ್ಕಾರ ವಾರ್ಷಿಕ ನಿರ್ವಹಣೆಗಾಗಿ ಚೌಕಾಸಿ ಮಾಡದೆ ಅಗತ್ಯ ಇರುವಷ್ಟು ಅನುದಾನ ನೀಡಬೇಕು, ಅನುದಾನವನ್ನು ಬಳಸಿಕೊಂಡು ಚೆಕ್ ಲಿಸ್ಟ್‌ನಲ್ಲಿ ನಮೂದಿಸಿರುವ ಅಂಶಗಳನ್ನು ಪರಿಗಣಿಸಿ ದುರಸ್ಥಿ ಅಥವಾ ನಿರ್ವಹಣೆ ಮಾಡಬೇಕಾಗುತ್ತದೆ.

ನಂತರ ನಮೂನೆಯಲ್ಲಿರುವ ಪ್ರತೀ ಐಟಂಗಳನ್ನು ಮೇಲಾಧಿಕಾರಿಗಳು ಕೂಲಂಕುಷವಾಗಿ ಪರಿಶೀಲನೆ ನಡೆಸಬೇಕು. ಈ ಹಂತದಲ್ಲೂ ನಮ್ಮ ಮೇಲಾಧಿಕಾರಿಗಳು ನಿರ್ಲಕ್ಷ್ಯ ಮಾಡುವ ಅವಕಾಶಗಳಿವೆ. ಕಂಪ್ಯೂಟರ್ ಬಳಕೆಗೆ ಬಂದನಂತರ ಚೆಕ್‌ಲಿಸ್ಟ್ ಕಾಪಿಪೇಸ್ಟ್ ಮಾಡಿ ಮೇಲಿನ ಕಛೇರಿಗಳಿಗೆ ಸಲ್ಲಿಸುವ ಸಂಭವವೇ ಹೆಚ್ಚು!

ಕೈಪಿಡಿಯ ಅದ್ಯಾಯ 7 ಪುಟ 145ರಲ್ಲಿ ಸಮಗ್ರವಾಗಿ ಪರಿಶೀಲಿಸುವ ಮಾರ್ಗಸೂಚಿಗಳನ್ನು ಕೊಡಲಾಗಿದೆ. ಇದರಲ್ಲಿ ಜಲಾಶಯದ ಪ್ರದೇಶ, ಮುಳಗಡೆ ಆಗಬಹುದಾದ ಪ್ರದೇಶಗಳು, ಜಲಾನಯನ ಹಾಗೂ ಉಪನದಿಗಳು, ಯಾಂತ್ರಿಕ ಮತ್ತು ವಿದ್ಯುತ್ ವ್ಯವಸ್ಥೆಗಳು, ಅಣೆಕಟ್ಟೆಯ ಕೆಳಭಾಗದ ಅಪಾಯಗಳು, ಕಾಲುವೆ ಮತ್ತು ನದಿಗಳ ಅಡತಡೆಗಳು, ಅಣೆಕಟ್ಟೆಯ ಎರಡೂ ಬದಿಗಳ ಸ್ಥಿತಿ, ಮಣ್ಣಿನ ಏರಿ, ಸ್ಲೂಯಿಸ್‌ಗಳು ಮುಂತಾದವುಗಳನ್ನು ಮಾನ್ಸೂನ್‌ಗಿಂತ ಮೊದಲು ಮತ್ತು ನಂತರ ಅಧಿಕಾರಿಗಳು ಪರಿವೀಕ್ಷಣೆ ಮಾಡಲೇಬೇಕು.

ಇಂದು ಬಹಳ ಕಷ್ಟ

ಇಂದಿನ ಆಡಳಿತ ವ್ಯವಸ್ಥೆಯಲ್ಲಿ ಅಣೆಕಟ್ಟೆಗಳನ್ನು ಸಮರ್ಪಕವಾಗಿ ನಿರ್ವಹಿಸುವುದು ಸಾಧ್ಯವಿಲ್ಲ! ಇದು ಆಗಬೇಕಾದರೆ ರಾಜ್ಯದ ಎಲ್ಲಾ ಡ್ಯಾಂಗಳಿಗೂ ಒಬ್ಬ ನುರಿತ ಮುಖ್ಯ ಇಂಜಿನಿಯರ್ ನೇಮಿಸಿ ಇವರ ವ್ಯಾಪ್ತಿಯಲ್ಲಿ ಪ್ರತೀ ಅಣೆಕಟ್ಟೆಗೆ ಕಾರ್ಯಪಾಲಕ ಇಂಜಿನಿಯರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಮೆಕ್ಯಾನಿಕಲ್ ಇಂಜಿನಿಯರ್ ಹಾಗೂ ವಿದ್ಯುತ್ ಇಂಜಿನಿಯರ್‌ಗಳನ್ನು ನಿಯೋಜಿಸಿ, ನಿರ್ವಹಿಸುವ ಕರ್ತವ್ಯವನ್ನು ಅಣೆಕಟ್ಟೆ ಕಾರ್ಯವ್ಯಾಪ್ತಿಗೆ ಮಾತ್ರ ಸೀಮಿತಗೊಳಿಸಬೇಕು. ಜತೆಗೆ, ಅಗತ್ಯವಿರುವ ಅನುದಾನವನ್ನು ಮಾನ್ಸೂನ್ ಪ್ರಾರಂಭ ಆಗುವ ಮೊದಲು ಕಡ್ಡಾಯವಾಗಿ ನೀಡಬೇಕು. ಅನುಭವ ಇಲ್ಲದ ಸ್ಥಳೀಯ ಗುತ್ತಿಗೆದಾರರಿಗೆ ಸಹಾಯ ಮಾಡುವ ಉದ್ದೇಶದಿಂದ, ಅಣೆಕಟ್ಟೆ ಕಾಮಗಾರಿಗಳನ್ನು ನೀಡಕೂಡದು.

ಇಂದಿನ ತುಂಗಭದ್ರ ದುರ್ಘಟನೆಯ ಪರಿಣಾಮದಿಂದಲೂ ನಾವು ಎಚ್ಚೆತ್ತುಕೊಳ್ಳದಿದ್ದಲ್ಲಿ ಭವಿಷ್ಯದಲ್ಲಿ ಭಾರೀ ಬೆಲೆಯನ್ನು ತೆರಬೇಕಾದೀತು! ಮಳೆಯೂ ನಮ್ಮೊಂದಿಗೆ ಆಗಾಗ್ಗೆ ಆಟ ಆಡುವುದುಂಟು, ಅದು ಕರುಣಿಸಿದಾಗ ನೀರನ್ನು ಶೇಖರಿಸಿಟ್ಟುಕೊಳ್ಳುವುದು ಅಗತ್ಯ, ಆ ನೀರನ್ನು ಅಷ್ಟೇ ಜೋಪಾನ ಮಾಡುವುದು ಮುಖ್ಯ. ಬೆಂಕಿ ಬಿದ್ದಾಗ ಬಾವಿ ತೋಡುವ ಹಾಗೆ, ಸ್ಥಳಕ್ಕೆ ದೌಡಾಯಿಸಿ ಹೇಳಿಕೆಗಳನ್ನು ಕೊಡುವುದು,ಅಣೆಕಟ್ಟೆಗಳ ಸುರಕ್ಷತೆಯ ಬಗ್ಗೆ ಮೀಟಿಂಗ್‌ಗಳನ್ನು ಮಾಡಿ, ಅದರಂತೆ ನಡೆದುಕೊಳ್ಳದೇ ಮರೆತುಬಿಡುವುದು ಸರಿಯಲ್ಲ. ರೈತರ ಹಿತದೃಷ್ಟಿಯಿಂದ, ಅಣೆಕಟ್ಟುಗಳ ಆರೋಗ್ಯಕ್ಕೆ ಹೆಚ್ಚಿನ ಗಮನ ನೀಡುವುದು ಸರಕಾರದ ಕರ್ತವ್ಯ.

ಮಾನವೀಯತೆ ತೋರಿದ ಆರಕ್ಷಕ

ಹಲವು ಆರಕ್ಷಕರು ಸಾರ್ವಜನಿಕರಿಗೆ ಉತ್ತಮ ರೀತಿಯಲ್ಲಿ ಸಹಾಯ ಮಾಡುವ ಪ್ರವೃತ್ತಿ ಇಂದಿಗೂ ಜೀವಂತವಾಗಿದೆ!

• ಮಂಜುನಾಥ ಡಿ. ಎಸ್.

ಪೊಲೀಸ್ ಎಂದಾಕ್ಷಣ ತಪ್ಪು ಹುಡುಕಿ ಶಿಕ್ಷೆ ನೀಡಲೆಂದೇ ಕಾದಿರುವ, ಭೀತಿ ಹುಟ್ಟಿಸುವ, ಹಣಕ್ಕಾಗಿ ಹಪಹಪಿಸುವ ಆರಕ್ಷಕರ ಚಿತ್ರ ಕಣ್ಮುಂದೆ ಮೂಡುತ್ತದೆ. ಈ ನೇತ್ಯಾತ್ಮಕ ದೃಷ್ಟಿಕೋನ ಮನದಾಳಕ್ಕಿಳಿಯಲು ಕಾರಣಗಳೂ ಇವೆ. ಆದರೆ ಈ ಸಾಮಾನ್ಯ ನಂಬಿಕೆಗೆ ವಿರುದ್ಧವಾಗಿ ನಾಗರಿಕರ ಹಿತಚಿಂತನೆಯನ್ನು ಬಯಸುವ, ಆ ನಿಟ್ಟಿನಲ್ಲಿ ಶ್ರಮಿಸುವ ಆರಕ್ಷಕರನ್ನೂ ಅಲ್ಲಲ್ಲಿ, ಆಗಾಗ ಕಾಣಬಹುದಾಗಿದೆ. ನನ್ನ ಬಂಧುವೊಬ್ಬರು ತಮ್ಮ ಇತ್ತೀಚಿನ ಇಂತಹ ಸಕಾರಾತ್ಮಕ ಅನುಭವವೊಂದನ್ನು ಹಂಚಿಕೊಂಡರು.

ಅವರು ಪುಣೆಯಿಂದ ನವಿ ಮುಂಬಯಿಗೆ ಕಾರಿನಲ್ಲಿ ಹೊರಟಿದ್ದರು. ಹೊರಡುವ ಮುನ್ನ ಕಾರಿನ ಚಕ್ರಗಳಿಗೆ ಗಾಳಿ ತುಂಬಿಸಿಕೊಳ್ಳಲು ಪೆಟ್ರೋಲ್ ಬಂಕಿಗೆ ಹೋಗಿದ್ದರು. ಒಂದು ಚಕ್ರದಲ್ಲಿ ಗಾಳಿ ತುಂಬಾ ಕಡಿಮೆ ಇದ್ದುದನ್ನು ಗಮನಿಸಿದರು. ರಸ್ತೆ ಚೆನ್ನಾಗಿರುವುದರಿಂದ, ಪೂರ್ಣ ಗಾಳಿ ತುಂಬಿಸಿಕೊಂಡರೆ ಗಮ್ಯ ತಲುಪುವ ತನಕ ತೊಂದರೆ ಇರಲಾರದೆಂದು ಭಾವಿಸಿದರು.

ಸುಮಾರು ಮೂವತ್ತು ಕಿಲೋಮೀಟರ್ ದೂರ ಕ್ರಮಿಸಿದ್ದಾಗ ಇನ್ನೊಂದು ಕಾರಿನಲ್ಲಿ ಪಯಣಿಸುತ್ತಿದ್ದವರು ಇವರ ಕಾರಿನೆಡೆಗೆ ಕೈ ತೋರಿಸಿದರು. ಸಮಸ್ಯೆಯ ಅರಿವಿದ್ದುದರಿಂದ ಕಾರನ್ನು ನಿಲ್ಲಿಸಿ ಪರೀಕ್ಷಿಸಲು ಅವರು ನಿರ್ಧರಿಸಿದರು. ಒಂದು ಟೈರ್ ಪಂಚರ್ ಆಗಿತ್ತು. ರಸ್ತೆಯಲ್ಲಿ ಸಾಗುತ್ತಿರುವ ಇತರ ವಾಹನಗಳ ಚಾಲಕರ ಗಮನಕ್ಕೆ ಬರುವಂತೆ ಸುರಕ್ಷತಾ ಫಲಕವನ್ನು ಕಾರಿನ ಹಿಂದೆ ಇರಿಸಿ, ನೆರವಿಗಾಗಿ ಕರೆ ಮಾಡಲು ಮುಂದಾದರು. ಅಷ್ಟರಲ್ಲಿ ಎದುರುಗಡೆ ಕಾರೊಂದು ಬಂದು ನಿಂತಿತು. ಅದು ಪೊಲೀಸ್ ಕಾರಾಗಿತ್ತು. ಅದರಿಂದ ಯುವ ಅಧಿಕಾರಿಯೊಬ್ಬರು ಇಳಿದು ಬಂದು, ನಿಲ್ಲಿಸಿರುವ ಕಾರಣವನ್ನು ಕೇಳಿದರು. ವಿಷಯ ತಿಳಿದು, ಕೂಡಲೇ ಕಾರ್ಯಪ್ರವೃತ್ತರಾಗಿ ಕೆಲವೇ ನಿಮಿಷಗಳಲ್ಲಿ ಕಾರಿನ ಚಕ್ರವನ್ನು ಬದಲಿಸಿದರು.

ಅದೇ ಹಾದಿಯಲ್ಲಿ ಸಾಗುತ್ತಿದ್ದ ಆ ಅಧಿಕಾರಿ ವೃದ್ಧ ದಂಪತಿ ಕಾರಿನ ಬಳಿ ನಿಂತಿರುವುದನ್ನು ನೋಡಿದ್ದಾಗಿಯೂ, ಸ್ವಲ್ಪ ಮುಂದೆ ಹೋಗಿದ್ದ ಅವರು ಹಿರಿಯ ನಾಗರಿಕರಿಗೆ ನೆರವಿನ ಅಗತ್ಯವಿದೆ ಎಂಬುದನ್ನು ಮನಗಂಡು, ಕಾರನ್ನು ತಿರುಗಿಸಿಕೊಂಡು ಬಂದುದಾಗಿಯೂ ನನ್ನ ಬಂಧುವಿಗೆ ತಿಳಿಸಿದರಂತೆ.

ಆಪತ್ಕಾಲದಲ್ಲಿ ನೆರವಾದ ಆರಕ್ಷಕ ಅಧಿಕಾರಿಗೆ ಮನಸಾರೆ ಧನ್ಯವಾದ ಅರ್ಪಿಸಿದ ನನ್ನ ಬಂಧು ಅವರ ಸೇವೆಗೆ ಪ್ರತಿಫಲದ ರೂಪದಲ್ಲಿ ಹಣ ನೀಡಲು ಮುಂದಾದಾಗ ಆ ಅಧಿಕಾರಿ ವಿನಮ್ರತೆಯಿಂದ ಅದನ್ನು ನಿರಾಕರಿಸಿದರಂತೆ. 'ಹಿರಿಯರಾದ ನೀವು ನನ್ನ ಪೋಷಕರಂತೆ. ನೀವು ನನ್ನನ್ನು ಆಶೀರ್ವದಿಸಿ' ಎಂದರಂತೆ.

ಈಗಲೂ ಇಂತಹವರೂ ಇದ್ದಾರೆ. ಜೊತೆಗೆ, ಮುಂದೆಯೂ ಇರುತ್ತಾರೆ ಎಂಬ ಆಶಾಭಾವ ಮೂಡಿಸುತ್ತಾರೆ. (ಸಾಂದರ್ಭಿಕ ಚಿತ್ರ)

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ
ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ
ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine@gmail.com

ಅವೆನ್ಯೂ ರೋಡ್

ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ
14.08.2024 ಬುಧವಾರ
vishwavani.news

ದಿನ ದರ್ಶಿಕೆ

ಶ್ರಾವಣ ಮಾಸ, ಶುಕ್ಲ ಪಕ್ಷ, ನವಮಿ ತಿಥಿ, ಅನುರಾಧ ನಕ್ಷತ್ರ, ಇಂದ್ರ ಯೋಗ, ಕೌಲವ ಕರಣ, 1946 ಕ್ರೋಧಿನಾಮ ಸಂವತ್ಸರ, 2081 ವಿಕ್ರಮನಾಮ ಸಂವತ್ಸರ.

ಮನೆಮದ್ದು

ಮಲಬದ್ಧತೆಗೆ ಪಪ್ಪಾಯಿಯು ಪರಿಣಾಮಕಾರಿ ಔಷಧಿಯಾಗಿದೆ. ಇದರಲ್ಲಿ ಇರುವ ಪಪೈನ್ ಎನ್ನುವ ಅಂಶವು ಪ್ರೋಟೀನ್‌ನ್ನು ವಿಘಟಿಸುವುದು ಮತ್ತು ಜೀರ್ಣಕ್ರಿಯೆಗೆ ಸಹಕಾರಿ ಆಗಿದೆ. ಇದರಲ್ಲಿ ನಾರಿನಾಂಶ ಅಧಿಕವಾಗಿ ಇರುವ ಕಾರಣ ಕರುಳಿನ ಕ್ರಿಯೆಯು ಸರಾಗವಾಗುವುದು. ಹಣ್ಣಾಗಿರುವ ತರಕಾರಿ ಸೇವನೆ ಮಾಡಬೇಕು ಅಥವಾ ಇದನ್ನು ಸಲಾಡ್ ಅಥವಾ ಸ್ಮೂಥಿಯಾಗಿ ಬಳಕೆ ಮಾಡಿದರೆ ಆಗ ಮಲಬದ್ಧತೆ ಕಡಿಮೆ ಮಾಡಬಹುದು.

ಸೌಂದರ್ಯ ಸೂತ್ರ

ಮೊಟ್ಟೆಯ ಬಿಳಿಭಾಗಕ್ಕೆ ಆಲಿವ್ ಎಣ್ಣೆಯನ್ನು ಸೇರಿಸಿ ಮತ್ತು ಚೆನ್ನಾಗಿ ಮಿಶ್ರಣ ಮಾಡಿ. ಮಿಶ್ರಣವನ್ನು ನಿಮ್ಮ ನೆತ್ತಿ ಮತ್ತು ಕೂದಲಿಗೆ ಹಚ್ಚಿರಿ. ಇದನ್ನು 20 ರಿಂದ 30 ನಿಮಿಷಗಳ ಕಾಲ ಬಿಡಿ. ಉಗುರುಬೆಚ್ಚನೆಯ ನೀರಿನಿಂದ ಚೆನ್ನಾಗಿ ತೊಳೆಯಿರಿ ಮತ್ತು ಶಾಂಪೂವಿನಿಂದ ನಿಮ್ಮ ಕೂದಲನ್ನು ತೊಳೆಯಿರಿ. ಇದರಿಂದ ಡ್ಯಾಂಡ್ರಫ್ ತೊಂದರೆ ಕಡಿಮೆಯಾಗುತ್ತದೆ.

ದಿನ ಭವಿಷ್ಯ

ಮೇಷ ನಿಮ್ಮ ತಂದೆಯ ಸಲಹೆ ಕೆಲಸದ ಸ್ಥಳದಲ್ಲಿ ಇಂದು ನಿಮಗೆ ಹಣದ ಪ್ರಯೋಜನವನ್ನು ನೀಡುತ್ತದೆ. ಕುಟುಂಬದ ಸದಸ್ಯರಿಗೆ ಆದ್ಯತೆ ನಿಡಿ.

ವೃಷಭ ನೀವು ಅನಿರೀಕ್ಷಿತ ಮೂಲಗಳಿಂದ ಗಳಿಕೆಯ ಸಾಧ್ಯತೆ ಇದೆ. ಹೆತ್ತವರ ಆರೋಗ್ಯದ ಬಗೆಗೆ ಎಚ್ಚರಿಕೆ ಅಗತ್ಯವಿದೆ.

ಮಿಥುನ ಕೆಲಸದಲ್ಲಿನ ಬದಲಾವಣೆಗಳಿಂದ ನಿಮಗೆ ಒಳ್ಳೆಯ ಲಾಭ ಸಿಗುತ್ತದೆ. ನೀವು ದಿನವಿಡೀ ಶ್ರದ್ಧೆಯಿಂದ ಕೆಲಸ, ಕಾರ್ಯ ಮಾರುತ್ತೀರಿ.

ಕಟಕ ಆರೋಗ್ಯ ಉತ್ತಮವಾಗಿದ್ದರೂ ಪ್ರಯಾಣ ಒತ್ತಡಮಯವೂ ಮತ್ತು ಕಷ್ಟಕರವೂ ಆಗಿರುತ್ತದೆ. ಎಚ್ಚರಿಕೆಯಿಂದ ಆರ್ಥಿಕ ಚಟುವಟಿಕೆ ಮಾಡಿ.

ಸಿಂಹ ಆರಾಮವಾಗಿರಲು ಇಚ್ಛಿಸುವ ನೀವು, ಇಂದಿನ ದಿನ ಆರಾಮದಾಯಕವಾಗಿ ಮಾಡಿಕೊಂಡಿರುತ್ತೀರಿ. ಕೆಲಸವೂ ಸಮಾಧಾನಕರ್ವಾಗಿರುತ್ತದೆ.

ಕನ್ಯಾ ಗಾಯಗೊಳ್ಳುವುದನ್ನು ತಪ್ಪಿಸಲು ಕುಳಿತುಕೊಳ್ಳುವಾಗ ವಿಶೇಷ ಕಾಳಜಿ ವಹಿಸಿ. ನಿಮ್ಮ ನಿಲುವುಗಳು ಎಲ್ಲರಲ್ಲೂ ವಿಶ್ವಾಸ ವೃದ್ಧಿಪಡಿಸುತ್ತದೆ.

ತುಲಾ ನಿಮ್ಮ ಸಮಯ, ಶಕ್ತಿ ಇತರರಿಗೆ ಸಹಾಯ ಮಾಡಲು ಸಮರ್ಪಿಸಿ - ಆದರೆ ನಿಮಗೆ ಸಂಬಂಧಿಸಿರದ ವಿಷಯಗಳಲ್ಲಿ ತೊಡಗಿಸಿಕೊಳ್ಳಬೇಡಿ.

ವೃಶ್ಚಿಕ ಅತಿಥಿಗಳು ನಿಮ್ಮ ಭೇಟಿ ನೀಡಿ ಆಹ್ಲಾದಕರ, ಅದ್ಭುತ ದಿನವನ್ನಾಗಿಸುತ್ತಾರೆ. ಸಂಗೀತ ಕೇಳುತ್ತ ದಿನ ಮುಗಿಸುತ್ತೀರಿ.

ಧನು ನಿಮ್ಮ ಆರೋಗ್ಯವು ನಿಮ್ಮನ್ನು ಬೆಂಬಲಿಸುತ್ತದೆ. ದೊಡ್ಡ ಯೋಜನೆಗಳನ್ನು ಮತ್ತು ಕಲ್ಪನೆಗಳಿರುವವರು ನಿಮ್ಮ ಗಮನ ಸೆಳೆಯುತ್ತಾರೆ

ಮಕರ ಅಧ್ಯಯನಗಳನ್ನು ತಪ್ಪಿಸಿ ಹೊರಾಂಗಣ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಿಕೆ ನಿಮ್ಮ ಪೋಷಕರಿಗೆ ಕೋಪ ಬರಿಸಬಹುದು. ಆಟಕ್ಕಿಂತ ಪಾಠ ಮುಖ್ಯ.

ಕುಂಭ ಸರ್ವತೋಮುಖ ಅಭಿವೃದ್ಧಿ ಸಾಧ್ಯವಿದ್ದಾಗ ಮಾತ್ರ ಮಾನಸಿಕ, ನೈತಿಕ ಶಿಕ್ಷಣದ ಜತೆ ದೈಹಿಕ ಶಿಕ್ಷಣ ತೆಗೆದುಕೊಳ್ಳಿ.

ಮೀನ ಜನರನ್ನು ನಿಮ್ಮಿಷ್ಟದಂತೆ ನಡೆದುಕೊಳ್ಳುವಂತೆ ಒತ್ತಾಯಿಸಬೇಡಿ. ಇತರರ ಬಯಕೆ , ಆಸಕ್ತಿ ಬಗ್ಗೆ ಯೋಚಿಸಿದಲ್ಲಿ ನಿಮಗೆ ಸಂತೋಷ ಬರುತ್ತದೆ.

• ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- 1947: ಪಾಕಿಸ್ತಾನಕ್ಕೆ ಸ್ವಾತಂತ್ರ್ಯ ಲಭಿಸಿತು.
- 1862: ಬಾಂಬೆ ಉಚ್ಚ ನ್ಯಾಯಾಲಯವೂ ಉದ್ಘಾಟನೆಯಾಯಿತು.
- 1945: ಜಪಾನ್ ಶರಣಾಗತಿ ಬೇಡಿದ್ದರಿಂದ ವಿಶ್ವಯುದ್ಧ 2 ಅಂತ್ಯ ಕಂಡಿತು
- 1975: ಪಾಕಿಸ್ತಾನಿ ಸೇನೆಯೂ ಬಾಂಗ್ಲಾದೇಶದ ವಿರುದ್ಧ ಮಿಲಿಟರಿ ದಂಗೆಯನ್ನು ಶುರು ಮಾಡಿತು.

ಚಿತ್ರಸ್ಫೂರ್ತಿ

ಇದು ಅಂತಿಂಥ ಫೋಟೋ ಅಲ್ಲವೇ ಅಲ್ಲ! ವಿಶ್ವದ ಅತೀ ಪ್ರಸಿದ್ಧ ಫೋಟೋ, ಈ ಫೋಟೋವು ವಿಶ್ವ ಯುದ್ಧ 2ರಲ್ಲಿ ಅಮೆರಿಕ ಗೆದ್ದ ಮೇಲೆ ಸೈನಿಕರು ಅಮೆರಿಕ ಧ್ವಜವನ್ನು ಇವೋ ಜಿಮಾದಲ್ಲಿ ಹಾರಿಸುತ್ತಿರುವುದು. ಹಾಂ! ಇಂದು ಜಪಾನ್ ಅಮೆರಿಕಕ್ಕೆ ಶರಣಾದ ದಿನ!

ಯಾವುದೂ ನಿಕೃಷ್ಟವಲ್ಲ, ಕೆಲವೊಮ್ಮೆ ಅದೇ ಅದೃಷ್ಟವಾಗಬಹುದು!

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಕಾಡಿನಲ್ಲಿದ್ದ ಒಂದು ಜಿಂಕೆಗೆ ತಾನು ಬಹಳ ರೂಪವಂತನೆಂದು ಜಂಬ. ಅದು ಪ್ರತಿದಿನವೂ ನದಿಗೆ ನೀರು ಕುಡಿಯಲೆಂದು ಹೋದಾಗ, ನೀರಿನಲ್ಲಿ ತನ್ನ ಪ್ರತಿಬಿಂಬವನ್ನು ನೋಡಿಕೊಳ್ಳುತ್ತಿತ್ತು. ತನ್ನ ಕೊಂಬುಗಳು ಎಷ್ಟು ಚೆನ್ನಾಗಿವೆ, ನನ್ನ ಮುಖಕ್ಕೆ ಕಳೆಬರುವುದೇ, ಈ ಕೊಂಬುಗಳಿಂದ. ನನ್ನ ಮುಖ ಎಷ್ಟು ಚೆನ್ನಾಗಿ ಕಾಣುತ್ತಿದೆ ಎಂದುಕೊಂಡಿತು. ಆದರೆ ನನ್ನ ಕಾಲುಗಳು ಮಾತ್ರ, ಒಣಗಿದ ಕಡ್ಡಿಗಳ ಹಾಗಿದೆ, ಕಾಲುಗಳೂ ಕೂಡಾ ಸ್ವಲ್ಪ ದಷ್ಟಪುಷ್ಟವಾಗಿದ್ದರೆ, ನಾನು ಇನ್ನೂ ಎಷ್ಟು ಚೆನ್ನಾಗಿ ಕಾಣುತ್ತಿದೆ, ಎಂದು ತನ್ನ ಬಡಕಲು ಕಾಲುಗಳ ಬಗ್ಗೆ ಬೇಸರಪಟ್ಟುಕೊಳ್ಳುತ್ತಿತ್ತು.

ಅಷ್ಟರಲ್ಲಿ ಬೇಟೆಗಾರನೊಬ್ಬ, ಇತ್ತಕಡೆಗೇ ಬರುತ್ತಿರುವುದು, ಅವನ ನಾಯಿಗಳ ಬೊಗಳುವಿಕೆಯಿಂದ ಇದಕ್ಕೆ ಗೊತ್ತಾಯಿತು. ಹೆದರಿಕೊಂಡು, ಒಂದೇ ಉಸಿರಿನಿಂದ ವೇಗದಿಂದ ಓಡತೊಡಗಿತು. ಓಡಿ ಓಡಿ ಆಯಾಸವಾಗಿ, ಸುಧಾರಿಸಿಕೊಳ್ಳಲು ಮರವೊಂದರ ಕೆಳಗೆ ಕುಳಿತಿತು. ಸ್ವಲ್ಪ ಹೊತ್ತು ಬಿಟ್ಟು ಮೇಲೇಳಲು ಹೋದಾಗ, ಅದರ ಕೊಂಬುಗಳು, ಕೆಳಗೆ ಬಾಗಿದ್ದ ಮರದ ಕೊಂಬೆಗೆ ಸಿಕ್ಕಿಹಾಕಿಕೊಂಡಿತು. ಜಿಂಕೆ ಎಷ್ಟೇ ಕಷ್ಟ ಪಟ್ಟು ಎಳೆದರೂ ಕೊಂಬೆಗಳಿಂದ ತನ್ನ ಕೊಂಬುಗಳನ್ನು ಬಿಡಿಸಿಕೊಳ್ಳಲಾಗಲಿಲ್ಲ. ಬೇಟೆಗಾರನ ನಾಯಿಗಳ ಬೊಗಳುವಿಕೆಯ ಶಬ್ದ ಹತ್ತಿರವಾಗ ತೊಡಗಿತು. ಈ ಕೊಂಬುಗಳನ್ನು ನೆಚ್ಚಿಕೊಂಡಿದ್ದರೆ, ತನ್ನ ಪ್ರಾಣ ಹೋದ ಹಾಗೆ ಎಂದುಕೊಂಡು ಒಮ್ಮೆಗೇ ಜೋರಾಗಿ ಎಳೆಯಿತು. ಎಳೆದ ರಬಸಕ್ಕೆ ಒಂದು ಕೊಂಬು ಮುರಿದೆ ಹೋಯಿತು. ಆದರೆ ಮೊದಲ ಬಾರಿಗೆ ಜಿಂಕೆಗೆ ಇದರಿಂದ ಬೇಸರವಾಗಲಿಲ್ಲ. ತನ್ನ ಪ್ರಾಣಕ್ಕೆ ಕಂಟಕವಾಗಬಹುದಾಗಿದ್ದ ಈ ಕೊಂಬು ಇದ್ದರೆಷ್ಟು ಹೋದರೆಷ್ಟು ಎನಿಸಿಬಿಟ್ಟಿತು ಆ ಕ್ಷಣದಲ್ಲಿ.

ಜಿಂಕೆ ಜೋರಾಗಿ ಓಡಿ ಬೇಟೆಗಾರನಿಂದ ತಪ್ಪಿಸಿಕೊಂಡು ಬಹಳ ದೂರ ಬಂದುಬಿಟ್ಟಿತು. ಒಂದು ಮರದ ಕೆಳಗೆ ಕುಳಿತು, ಆಯಾಸ ಪರಿಹರಿಸಿಕೊಳ್ಳುತ್ತಾ ತನ್ನನ್ನು ಬೇಟೆಗಾರನಿಂದ ರಕ್ಷಿಸಿದ ತನ್ನ ಕಡ್ಡಿಯಂತ ತನ್ನ ಕಾಲುಗಳನ್ನು, ಪ್ರೀತಿಯಿಂದ ನೆಕ್ಕುತ್ತಾ, ಈ ಸಣಕಲು ಕಾಲುಗಳೇ ತನ್ನ ಪ್ರಾಣ ರಕ್ಷಣೆ ಮಾಡಿದವು, ಎಂದುಕೊಂಡಿತು.

ಅಲ್ಲೇ ಪಕ್ಕದ ಹೊಂಡದಲ್ಲಿ ನೀರನ್ನು ಕುಡಿಯಲು ಬಗ್ಗಿದಾಗ, ಮುರಿದ ಕೊಂಬು ಕಾಣಿಸಿತು. ಮೊದಲ ಬಾರಿಗೆ ಜಿಂಕೆಗೆ ತನ್ನ ಕೊಂಬಿನ ಬಗ್ಗೆ ಇದ್ದ ಅಹಂಕಾರ ಹೋಗಿ, ಕೊಂಬು ಮುರಿದರೂ ಪರವಾಗಿಲ್ಲ ಪ್ರಾಣ ಉಳಿಯಿತಲ್ಲ ಎಂಬ ಸಮಾಧಾನವಾಯಿತು.

ಈ ಜಿಂಕೆಯಂತೆಯೇ ನಮ್ಮ ಮನಸ್ಥಿತಿ ಕೂಡ. ಕೆಲವೊಮ್ಮೆ ಬಾಹ್ಯ ಸೌಂದರ್ಯಕ್ಕೆ ಬಹಳವಾಗಿ ಪ್ರಾಮುಖ್ಯತೆಯನ್ನು ಕೊಟ್ಟುಬಿಡುತ್ತೇವೆ. ಆದರೆ ಬಾಹ್ಯ ಸೌಂದರ್ಯದಿಂದ ಜೀವನದಲ್ಲಿ ನಾವು ಬಹಳ ದೂರ ಹೋಗಲು ಸಾಧ್ಯವಿಲ್ಲ. ಬದುಕಿನಲ್ಲಿ ನಮ್ಮ ಅಸ್ತಿತ್ವವನ್ನು ಕಂಡುಕೊಳ್ಳಲು ಏನಾದರೂ ಸಾಧನೆ ಮಾಡಲು ಆಂತರಿಕ ಸೌಂದರ್ಯದ ಬುದ್ಧಿಮತ್ತೆಯ ಅಗತ್ಯವಿದೆ. ಎಂದಿಗೆ ನಾವು ಅದನ್ನು ಗುರುತಿಸಿ, ಅದನ್ನು ಬೆಳೆಸಿಕೊಳ್ಳಲು ಹವಣಿಸುತ್ತೇವೋ ಅಂದಿಗೆ ಜೀವನದ ನಿಜವಾದ ಬೆಲೆ ನಮಗೆ ಗೊತ್ತಾಗುತ್ತದೆ. ಕೆಲವರು ತಾವು ಎಲ್ಲರಂತೆ ನೋಡಲು ಸುಂದರವಾಗಿಲ್ಲ ಎನ್ನುವ ಕೀಳರಿಮೆಗೆ ಜಾರುತ್ತಾರೆ. ಆದರೆ ಅವರಿಗೆ ಎಂದಿಗೆ ತಮ್ಮ ನಿಜವಾದ ಸಾಮರ್ಥ್ಯದ ಪರಿಚಯವಾಗುತ್ತದೆಯೋ ಅವರು ತಮ್ಮನ್ನು ಹೊಸ ರೀತಿಯಲ್ಲಿ ಅನ್ವೇಷಿಸಿಕೊಂಡು ಸಾಧಕರಾಗುತ್ತಾರೆ. ಇಂದಿನ ಎಳೆ ಮನಸ್ಸುಗಳಿಗೆ ನಾವು ಈ ವಿಷಯವನ್ನು ಚೆನ್ನಾಗಿ ಅರ್ಥ ಮಾಡಿಸಬೇಕು. ರೀಲ್ಸ್, ಟಿಕ್ ಟಾಕ್, ಸಾಮಾಜಿಕ ಜಾಲತಾಣಗಳ ಲೈಕ್ ಕಮೆಂಟ್‌ಗಳ ಬಗ್ಗೆ ಬಹಳವಾಗಿ ತಲೆಕೆಡಿಸಿಕೊಳ್ಳುವ ಈ ಮಕ್ಕಳಿಗೆ ಅದರಿಂದ ಭವಿಷ್ಯದಲ್ಲಿ ಕಾಸಿನ ಪ್ರಯೋಜನವೂ ಇಲ್ಲ ಎಂದು ಅರ್ಥವಾಗಬೇಕು. ಆ ಸಮಯವನ್ನು ವಿದ್ಯಾಭ್ಯಾಸಕ್ಕೆ ಒದಿಗೆ ವಿನಿಯೋಗಿಸಿದಾಗ ಅವರ ವ್ಯಕ್ತಿತ್ವ ವಿಕಸನ ವಾಗುವುದು ಅವರಿಗೆ ಅರಿವಾಗಬೇಕು.

ಕೆಲವು ಸಲ ನಾವು ಯಾವುದನ್ನು ನಿಕೃಷ್ಟವೆಂದು ಅಸಡ್ಡೆ ಮಾಡಿರುತ್ತೇವೋ, ಅದರಿಂದಲೇ ನಮಗೆ ಜೀವನದಲ್ಲಿ ಒಳಿತಾಗುತ್ತದೆ. ಯಾವುದನ್ನು ಉತ್ಕೃಷ್ಟವೆಂದುಕೊಂಡಿರುತ್ತೇವೋ ಅದು ಯಾವ ರೀತಿಯ ಉಪಯೋಗಕ್ಕೂ ಬರುವುದಿಲ್ಲ. ಆದ್ದರಿಂದಲೇ ನಮ್ಮ ನಿಜವಾದ ಸಾಮರ್ಥ್ಯವನ್ನು ಗುರುತಿಸಿಕೊಂಡು ಅದನ್ನು ಬೆಳೆಸಿಕೊಳ್ಳಲು, ಗಮನಹರಿಸೋಣ.

ದಿನಕ್ಕೊಂದು ಪ್ರಶ್ನೆ

• ಎಲ್.ಪಿ.ಕುಲಕರ್ಣಿ, ಬಾದಾಮಿ

- ಭಾರತದ ಮೊದಲ ವಾಣಿಜ್ಯ ಬಾಹ್ಯಾಕಾಶ ಸಾಂದರ್ಭಿಕ ಜಾಗೃತಿ ವೀಕ್ಷಣಾಲಯವನ್ನು ಯಾವ ರಾಜ್ಯದಲ್ಲಿ ಸ್ಥಾಪಿಸಲಾಗುತ್ತಿದೆ?

- ಎ. ಬೆಂಗಳೂರು.
- ಬಿ. ಅರುಣಾಚಲ ಪ್ರದೇಶ.
- ಸಿ. ಉತ್ತರಾಖಂಡ.
- ಡಿ. ತಮಿಳುನಾಡು.

ಉತ್ತರ: ಸಿ. ಉತ್ತರಾಖಂಡ.

ಮಾಹಿತಿ

ಭಾರತದ ಮೊದಲ ವಾಣಿಜ್ಯ ಬಾಹ್ಯಾಕಾಶ ಸಾಂದರ್ಭಿಕ ಜಾಗೃತಿ ವೀಕ್ಷಣಾಲಯವನ್ನು ಉತ್ತರಾಖಂಡದ ಗರ್ವಾಲ್ ಪ್ರದೇಶದಲ್ಲಿ ಬಾಹ್ಯಾಕಾಶ ಕ್ಷೇತ್ರದ ಸ್ಟಾರ್ಟ್-ಅಪ್ ದಿಗಂತರಾ ಸ್ಥಾಪಿಸಲಿದೆ. ಈ ವೀಕ್ಷಣಾಲಯವು ಭೂಮಿಯ ಸುತ್ತ ಸುತ್ತುತ್ತಿರುವ 10 ಸೆಂ.ಮೀ ಗಾತ್ರದ ವಸ್ತುಗಳನ್ನು ಪತ್ತೆಹಚ್ಚುವ ಗುರಿಯನ್ನು ಇಟ್ಟುಕೊಂಡಿದೆ. ಇದು ಮೊದಲೇ ಅಸ್ತಿತ್ವದಲ್ಲಿರುವ ರೆಸಿಡೆಂಟ್ ಸ್ಪೇಸ್ ಆಬ್ಜೆಕ್ಟ್‌ಗಳನ್ನು ಪತ್ತೆಹಚ್ಚುವ ಮತ್ತು ಗುರುತಿಸುವ ಪರಿಣಾಮಕಾರಿತ್ವವನ್ನು ಸುಧಾರಿಸುತ್ತದೆ; ಹೈಬ್ರಿಡ್ ಡೇಟಾ ಪೂಲ್ ಅನ್ನು ರಚಿಸಲು ಇದನ್ನು ಬಳಸಲಾಗುತ್ತದೆ.

ಸೋಲಿನಿಂದ ಮೇಲೆದ್ದು ಬರಬೇಕು!

• ವಿದ್ಯಾ ಶಂಕರ್ ಶರ್ಮ

ಜೀವನದ ಸೋಲಿನಲ್ಲಿ ಸೋತು ಬಸವಳಿಯುವುದು ಸುಲಭ. ಆದರೆ ಮೈ ಕೊಡವಿ ಮೇಲೇಳುವುದು ನಮ್ಮ ಮನೋ ಶಕ್ತಿಯ ಸಂಕೇತ. ಬದುಕಿನ ಉಳಿ ಪೆಟ್ಟು ಬಿದ್ದಾಗ ಒಂದು ಸಂಗತಿ ನೆನಪಿನಲ್ಲಿ ಇರಬೇಕು. ನಮ್ಮನ್ನು ನಾವೇ ಮೇಲೆತ್ತಿಕೊಳ್ಳಬೇಕು. ಅವರಿವರು ಸಹಾಯ ಮಾಡುತ್ತಾರೆಂಬ ಭ್ರಮೆ ಬೇಡವೇ ಬೇಡ. ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಹೇಳಿದ ಹಾಗೆ **ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್** ನಿನ್ನನ್ನು ನೀನೇ ಮೇಲೆತ್ತಿಕೊಳ್ಳಬೇಕು, ಅಧೋಗತಿಗೆ ಹೋಗಬಾರದು.

ಕೆಲವೊಮ್ಮೆ ಸೋಲಿನ ಗಾಯಗಳು ಬಹಳ ಆಳವಿರಬಹುದು, ಹಾಗಾಗಿ ಒಣಗುವುದು ಹೆಚ್ಚು ಸಮಯ ತೆಗೆದುಕೊಳ್ಳಬಹುದು, ಆದರೆ ಹಸಿಯಾಗಿಯೇ ಉಳಿಯಲಾರದು. ಗಾಯವನ್ನು ಮಾಗಿಸುವುದೇ ನಮ್ಮ ಉದ್ದೇಶವಾದರೆ ಅದಕ್ಕೆ ಬೇಕಾದ ಮಾರ್ಗಗಳು ತನಗೆ ತಾನೇ ತೆರೆದುಕೊಳ್ಳುತ್ತವೆ. ಆ ದಾರಿಯು ಮುಳ್ಳಿನಿಂದ ಕೂಡಿರಬಹುದು, ಅದೊಂದು ಒಂಟಿ ಪಯಣವಾಗಿರಬಹುದು, ಅದರಲ್ಲಿ ಪ್ರಯಾಣಿಸುವುದು ಅನಿವಾರ್ಯವಾದ ಮೇಲೆ ಯೋಚಿಸುತ್ತ ಕಳೆಯುವ ಅವಕಾಶವಿರದು. ಯಾವುದೋ ಒಂದು ಪದಾರ್ಥದ ಗುಣಮಟ್ಟದ ಬಗ್ಗೆ ವ್ಯಾಪಾರಿಯೊಬ್ಬ ಖಚಿತತೆ ನೀಡಿದಂತೆ ಬದುಕು ಚಂದ ಇರುತ್ತದೆಂಬ ಭರವಸೆ ಯಾರೂ ನೀಡಲಾರರು. ಬಂದಂತೆ ಬದುಕು, ಹೋದಂತೆ ದಾರಿ. ಧರಾಶಾಯಿಯಾಗಿಯೇ ಇದ್ದರೆ ಅಲ್ಲಿಯೇ ಇರಬೇಕಾಗುತ್ತದೆ ಯಾರೂ ಬಂದು ಸಂತೈಸಲಾರರು. ಇದನ್ನು ಮನಸ್ಸಿಗೆ ಮತ್ತೆ ಮತ್ತೆ ಹೇಳಿ ಎದ್ದು ನಿಲ್ಲಲು ನಮ್ಮನ್ನು ನಾವೇ ಪ್ರಚೋದಿಸಿಕೊಳ್ಳಬೇಕು.

ವಿಧಾತನು ಜಗದೊಳಗಿನ ಕೆಲವರನ್ನು ಮಾತ್ರ ಆರಿಸಿ ಮತ್ತೆ ಮತ್ತೆ ಬೇಯಿಸುತ್ತಿದ್ದಾನೇನೋ ಎಂಬಂತೆ ಇರುತ್ತದೆ ಹಲವರ ಸೋಲು, ದುರಂತಗಳ ಸರಮಾಲೆ. ಅದಕ್ಕಾಗಿ ಆಶ್ಚರ್ಯ ಪಡಬೇಕಾಗಿಲ್ಲ, ಏಕೆಂದರೆ ಇಡೀ ಸೃಷ್ಟಿಯಲ್ಲಿ ಒಂದೇ ಬಗೆಯ ರಚನೆಯನ್ನು ಕಾಣಲು ಸಾಧ್ಯವೇ? ನಮ್ಮ ತಿಳುವಳಿಕೆಗೆ ಒಂದು ಸೀಮೆ ಇದೆ. ಅದರಿಂದ ಕೆಲವು ವಿಷಯಗಳು ಎಂದಿಗೂ ನಮ್ಮ ಅರಿವಿಗೆ ಬರುವುದೇ ಇಲ್ಲ. ಏನು ನಮ್ಮ ಪ್ರಾಪ್ತಿಯಲ್ಲಿ ಒದಗಿದೆಯೋ ಅದನ್ನು ಅನುಭವಿಸದೆ ಗತ್ಯಂತರವಿಲ್ಲ.

ಬದುಕು ಹೆಚ್ಚೆಚ್ಚು ಕಾಡಿಸಿದಾಗಲೆಲ್ಲ ನಮಗೆ ಆ ಭಗವಂತನೇ ಆಪ್ತನಾಗಿಬಿಡುವುದು ನಮ್ಮ ಭಾಗ್ಯವು. ಆ ಶಕ್ತಿಯೇ ನಮ್ಮನ್ನು ಮೇಲಕ್ಕೆ ಎತ್ತಿ ಮತ್ತೆ ಹೋರಾಟಕ್ಕೆ ನಮ್ಮನ್ನು ಸಜ್ಜುಗೊಳಿಸುತ್ತದೆ. ನಮ್ಮನ್ನು ಶುದ್ಧಗೊಳಿಸಲೋ, ಸೊಟ್ಟಗಾದ ನಮ್ಮ ವ್ಯಕ್ತಿತ್ವವನ್ನು ನೇರ ಮಾಡಲೋ, ನಮ್ಮನ್ನು ಮತ್ತಷ್ಟು ಬಲಗೊಳಿಸಲೋ ಸೋಲಿನ ಉಡುಗೊರೆ ನಮ್ಮದಾಗಬಹುದು. ಮಳೆ ಗಾಳಿಗೆ ಅಲುಗಾಡದ ಹೆಬ್ಬಂಡೆಯಂತೆ ಅದನ್ನು ಸ್ವೀಕರಿಸಿ ಸುಮ್ಮನೆ ಮುಂದೆ ಸಾಗಿಬಿಡಬೇಕು. ಜೊತೆಗೆ ಹೆಜ್ಜೆ ಹಾಕಲು ಯಾರಿಲ್ಲವೆಂಬ ತಲ್ಲಣ ಬೇಡ, ಜಗದೊಡೆಯ ಎಂದೆಂದೂ ನಮ್ಮವನೇ. ಸೋಲನ್ನು ಒಪ್ಪಿಕೊಂಡು ನೆಲಕಚ್ಚುವುದು ಸುಲಭ, ಆದರೆ ಸೋಲನ್ನೇ ಮಣಿಸಿ ಮೇಲೇಳುವುದರಲ್ಲಿ ಜೀವನದ ಅರ್ಥ ಅಡಗಿದೆ.

ಪದಬಂಧ



ಎಡದಿಂದ ಬಲಕ್ಕೆ

1. ಮುತ್ತೈದೆಯರಿಗೆ ಕೊಡುವ ಕಾಣಿಕೆ (3)
3. ಕಾಡಿನೊಂದಿಗೆ ಬಂದಿರುವ ಬದುಕು (3)
5. ನ್ಯಾಯವಲ್ಲದ ಚರ್ಚೆ (3)
6. ಕಟ ಕಟನೆ ಸದ್ದು ಮಾಡಿದ ಬಾಗಿಲು (3)
8. ಹಸುಗಳನ್ನು ಸಾಕುವವನು (3)
10. ಹಂತಕನಾಗಿ ಬಂದ ಯಮ (3)
12. ನೀರು ಹರಿಯುವ ಕಾಲುವೆ ತಿರುಗಿ ಬಂದಿದೆ (2)
13. ಶಾಸ್ತಿ ಅಥವಾ ದಂಡನೆ (2)
14. ನವಿಲು ಕಂಡಾಗ ಉಂಟಾದ ಪುಳಕ (3)
16. ಮುಖಂಡನಿಗೆ ಮತ್ತೊಂದು ಪದ (3)
17. ಅಡವಿ, ಕಾಡು (3)
19. ಶಾಶ್ವತವಾದ್ದಲ್ಲ, ಹಾಳಾಗುವಂತಹುದು (3)
20. ಕೂಸು ಹುಟ್ಟುವ ಮೊದಲೇ ತಯಾರಿಸಿದ ಟೊಪ್ಪಿ (3)
21. ಮರುಕಕ್ಕೆ ಮತ್ತೊಂದು ಹೆಸರು (3)

ಎಡದಿಂದ ಬಲಕ್ಕೆ

1. ತೊಂದರೆ ಅಥವಾ ಕಷ್ಟ (3)
2. ನಿರಂತರ ಎನ್ನುವ ಮತ್ತೊಂದು ಪದ (4)
4. ಪಾಂಡವರಲ್ಲಿ ಒಬ್ಬಾತ (3)
7. ನಿಯತಕಾಲಿಕೆಗಳನ್ನು ಓದಲು ಇರುವ ಸಾರ್ವಜನಿಕ ಸ್ಥಳ (5)
9. ಇಂದ್ರನಿಗೊಂದು ಚಂದದ ಹೆಸರು! (5)
10. ಕಣ್ಣಿಗೆ ಹಾಕುವ ಕಾಡಿಗೆ (3)
11. ಕರು ತರುವಾಗ ಮಾಡಿಕೊಂಡ ಒಪ್ಪಂದ (3)
15. ಗಣಪತಿಗೆ ಮತ್ತೊಂದು ಹೆಸರು (4)
16. ನಯವಾದುದು ಅಥವಾ ಅಚ್ಚುಕಟ್ಟು (3)
18. ಒಂದು ಬಗೆಯ ನವಧಾನ್ಯ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಸಂಗ್ರಾಮ 4. ತಟಾಕ 6. ಜವಾಬುದಾರ 7. ಮಹಲು 9. ಹಗುರ 13. ಜಬರಿಸು 14. ಮಳೆಗಾಲ 15. ಮೋಹಕ 18. ಅನಿಲ 20. ದನಿಗೂಡಿಸು 21. ನಿಧಾನ 22. ಳಿರಮು

ಮೇಲಿನಿಂದ ಕೆಳಕ್ಕೆ: 1. ಸಂಗಮ 2. ಮಜಲು 3. ಅಂಬುಜ 4. ತರಹ 5. ಕಠೋರ 8. ಹಣೆಬರಹ 10. ಗುಪ್ತಗಾಮಿನಿ 11. ಹಸುಳೆ 12. ಗಮಕ 15. ಮೋಹಿನಿ 16. ಕದನ 17. ನಿಗೂಢ 18. ಅಸುರ 19. ಲಗಾಮು

• ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಅದಕ್ಕೂ ಬೇರೆ ಸಮಯ

ಕೆಲವರಿಗೆ 5 ನಿಮಿಷ ಅಂದರೆ, 30 ನಿಮಿಷಕ್ಕೂ ಜಾಸ್ತಿ, ಇನ್ನೂ ಕೆಲವರಿಗೆ 5 ನಿಮಿಷವೆಂದರೆ, 2 ನಿಮಿಷಕ್ಕೂ ಕಡಿಮೆ. ಭಾರತೀಯರಿಗೆ ಒಬ್ಬೊಬ್ಬರಿಗೊಂದು ಸಮಯವಿದೆ. ಸಂಜೆ 5.30 ಯಾವುದಾದರೂ ಒಂದು ಕಾರ್ಯಕ್ರಮ ಶುರುವಾಗುವುದಿದ್ದರೆ, 6.30 ಕ್ಕೆ

ಆ ಕಾರ್ಯಕ್ರಮದ ಸ್ಥಳಕ್ಕೆ ಬರುವವರು ಇನ್ನೂ ಇದ್ದಾರೆ. ಇನ್ನೂ ರಾಜಕಾರಣಿಗಳ ಬಗ್ಗೆ ಹೇಳುವುದಂತೂ ಬೇಡವೇ ಬೇಡ ಬಿಡಿ, ಮನುಷ್ಯರಲ್ಲೇ ಹೀಗಿದ್ದರೆ ಪ್ರಾಣಿಗಳಲ್ಲಿ ಸಮಯದ ಕಾಳಜಿ ಹೇಗಿರಬೇಡ? ಮನುಷ್ಯರಿಗಿಂತ ಪ್ರಾಣಿಗಳಿಗೆ ಎಲ್ಲವೂ ಅತೀ ನಿಧಾನವಾಗಿ ಚಲನವಲನವಾಗುತ್ತದೆ. ಬೇಕಿದ್ದರೆ, ಹಲ್ಲಿ ಅಥವಾ ಓತಿಕೇತ, ನಾಯಿಗಿಂತ ಅತ್ಯಂತ ನಿಧಾನವಾಗಿ ಸಮಯವನ್ನು ಅನುಭವಿಸುತ್ತದೆ. ಏಕೆಂದರೆ, ಎಷ್ಟು ವೇಗವಾಗಿ ಮಿದುಳು ಸಮಯದ ಗ್ರಹಿಕೆಮಾಡುತ್ತದೆ, ಅದೇ ವೇಗದಲ್ಲಿ ನಮಗೆ ಅನುಭವವಾಗುತ್ತದೆ.

ಪುಸ್ತಕ ಲೋಕ

ಮನಸೇ ತಲ್ಲಣಿಸದಿರು

ಪವಾಡ ಬಯಲು ಕಾರ್ಯಕ್ರಮ ಖ್ಯಾತಿಯ ಹುಲಿಕಲ್ ನಟರಾಜ್ ಅವರ ಕೃತಿ-'ಮನಸೇ ತಲ್ಲಣಿಸದಿರು...!' ಚಂಚಲ

ಮನಸ್ಸನ್ನು ಒಂದೆಡೆ ನಿಲ್ಲಿಸುವುದು ಅಸಾಧ್ಯ. ಆದರೆ, ಅದರ ಮೇಲಿನ ನಿಯಂತ್ರಣ ಅಗತ್ಯ ಹಾಗೂ ಅನಿವಾರ್ಯ. ಇಂತಹ ಮನಸ್ಸು ಸುಖ ಬಯಸಿದಾಗ ಮತ್ತಷ್ಟು ಬಯಸುತ್ತಲೇ ಇರುತ್ತದೆ. ದುಃಖ ಬಂದಾಗ ಕಳಕಳಿಸುತ್ತದೆ. ಸುಖ-ದುಃಖ ವನ್ನು ಸಮಾನವಾಗಿ ಸ್ವೀಕರಿಸದ ಮನೋಭಾವವು ಸದಾ ತಲ್ಲಣಿಸುತ್ತಲೇ ಇರುತ್ತದೆ. ಇಂತಹ ಮನಸ್ಥಿತಿಯಿಂದ ನೆಮ್ಮದಿ ಇರದು. ನೆಮ್ಮದಿ ಇರದ ಬದುಕಿಗೆ ಅರ್ಥವೇ ಇಲ್ಲ. ಹೀಗೆ ಆಗದಿರಲು ಲೇಖಕರು ಮನಸ್ಸನ್ನು ನಿಯಂತ್ರಿಸಲು ಮನಸೇ ತಲ್ಲಣಿಸದಿರು ಎಂಬ ಅರ್ಥದಲ್ಲಿ ಸಲಹೆ ನೀಡಿದ್ದಾರೆ.

ಟ್ವೀಟ್‌ಮೆಂಟ್

ಅಭಿರಾಮ್: ತುಂಬಾ ಸಲ ತೋಳ ಬಂತು, ತೋಳ ಬಂತು ಅಂತ ಕೂಗಿಕೊಂಡರೆ, ಯಾರೂ ನಂಬುವುದಿಲ್ಲ. ಉದಾಹರಣೆಗೆ ಹಿಡೆನ್‌ಬರ್ಗ್‌ನ ವರದಿ!

ಅಖಿಲೇಶ್: ರಾಹುಲ್ ಗಾಂಧಿ ವನ್ನು ಮರೀಬೇಡ!

ಮನೆ ಎಂಬ ಪಾಠಶಾಲೆ

• ಡಾ. ಮೈತ್ರಿ ಭಟ್, ವಿಟ್ಲ

'ಇಂದಿನ ಮಕ್ಕಳೇ ನಾಳಿನ ಪ್ರಜೆಗಳು', 'ಮಕ್ಕಳಿಗೆ ಸಂಸ್ಕಾರ ಕೊಡಬೇಕಾದವರು ತಂದೆ ತಾಯಿ', 'ಮನೆಯೇ ಮೊದಲ ಪಾಠಶಾಲೆ, ಜನನಿ ತಾನೇ ಮೊದಲ ಗುರು', 'ನಮ್ಮ ಮಕ್ಕಳೇ ನಮ್ಮ ಆಸ್ತಿ, ಈ ಆಸ್ತಿಯ ಮೌಲ್ಯವನ್ನು ಹೆಚ್ಚಿಸುವುದು ಹೆತ್ತವರ ಮಮತೆ, ಸಮಯ ಮತ್ತು ಶಿಕ್ಷಣ'. ಇಂತಹ ಅನೇಕ ಮುತ್ತಿನಂತಹ ಮಾತುಗಳನ್ನು ನಾವೆಲ್ಲರೂ ಕೇಳಿದ್ದೇವೆ.

ಮಕ್ಕಳ ಭವ್ಯ ಭವಿಷ್ಯವನ್ನು ರೂಪಿಸುವಲ್ಲಿ ಹೆತ್ತವರು ಮಹತ್ತರ ಪಾತ್ರವನ್ನು ವಹಿಸುತ್ತಾರೆ ಎಂಬುದರಲ್ಲಿ ಎರಡು ಮಾತಿಲ್ಲ. ಅವರು ತಮ್ಮ ಮಕ್ಕಳ ಏಳಿಗೆಗಾಗಿ ಅರ್ಧ ಆಯುಷ್ಯವನ್ನೇ ಧಾರೆ ಎರೆಯುತ್ತಾರೆ. ಯಾವುದೇ ರೀತಿಯ ತ್ಯಾಗವನ್ನಾದರೂ ಮಾಡಲು ಸಿದ್ಧರಿರುವ ಅವರನ್ನು ದೇವರಿಗೆ ಹೋಲಿಸುವುದು ಅಸಹಜ ಎನಿಸುವುದಿಲ್ಲ.

ಉನ್ನತ ಮಟ್ಟದ ಗ್ರಹಣ ಸಾಮರ್ಥ್ಯ, ದಿಟ್ಟತನ, ಸಾಹಸಪ್ರವೃತ್ತಿ ಮತ್ತು ಒಳ್ಳೆಯತನಗಳಿಂದ ಒಡಗೂಡಿದ ಮಕ್ಕಳ ಅಂತರಂಗವು ಶ್ರೇಷ್ಠವಾದುದನ್ನು ಕಲಿಯಬೇಕು ಎನ್ನುವ ತುಡಿತ ಹಾಗೂ ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು ಎನ್ನುವ ಅದಮ್ಯ ಹಂಬಲದಿಂದ ಕೂಡಿರುತ್ತದೆ. ಆದರೆ ಕೆಲವೊಮ್ಮೆ ಮಾಹಿತಿ ಮತ್ತು ಮಾರ್ಗದರ್ಶನದ ಕೊರತೆ ಮಕ್ಕಳ ಅಪೇಕ್ಷೆ ಸಾಕಾರಗೊಳ್ಳುವಲ್ಲಿ ತಡೆಗೋಡೆಯಾಗಿ ನಿಂತಿರುತ್ತದೆ. ವ್ಯಕ್ತಿತ್ವಕ್ಕೆ ಸತ್ವವನ್ನು, ಸೌಂದರ್ಯವನ್ನು ನೀಡಿ ಮಹತ್ತಿನ ಸ್ಪರ್ಶ ಮೂಡಿಸಬಲ್ಲ ಕೆಲವು ಶಾಶ್ವತ ಜೀವನ ಮೌಲ್ಯಗಳ ಕುರಿತಾಗಿ ಮಕ್ಕಳಲ್ಲಿ ಅರಿವನ್ನು ಮೂಡಿಸುವುದೆಂದರೆ ಅಮೂಲ್ಯವಾದ ವಜ್ರಕ್ಕೆ ಸಾಣೆ ಹಿಡಿದಂತೆ. ಆದುದರಿಂದ, ಮಕ್ಕಳಿಗೆ ಉತ್ತಮ ಮೌಲ್ಯಗಳಿಂದ ಕೂಡಿದ ಶಿಕ್ಷಣವನ್ನು ನೀಡುವುದು ಹೆತ್ತವರ ಆದ್ಯ ಕರ್ತವ್ಯವಾಗಿದೆ.

ಪಾಲಕರಿಗೆ ಇರಲಿ ಜವಾಬ್ದಾರಿ: ಶಿಕ್ಷಣ ಎಂದರೆ ಬರಿಯ ಮೆದುಳೆಂಬ ಕೊಡವನ್ನು ತುಂಬಿಸುವುದಲ್ಲ. ಬದಲಾಗಿ, ಅರಿವೆಂಬ ಹಣತೆಯನ್ನು ಹಚ್ಚುವುದು. ಹಿಂದಿನ ಕಾಲದಲ್ಲಾದರೆ ಗುರುಕುಲ ಪದ್ಧತಿಯಲ್ಲಿ ಗುರುಗಳು ಹೆತ್ತವರಿಗಿಂತ ಮಹತ್ವದ ಪಾತ್ರವನ್ನು ವಹಿಸುತ್ತಿದ್ದರು. ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಹೆತ್ತವರು ಹೆಚ್ಚಿನ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿದೆ. ತಳಪಾಯ ಭದ್ರವಾಗಿದ್ದರೆ ಮಾತ್ರ ಮಹಲು ಸದೃಢವಾಗಿರುತ್ತದೆ. ಹೆತ್ತವರಿಗೆ ತಮ್ಮ ಒಂದೆರಡು ಮಕ್ಕಳಿಗೆ ಸರಿಯಾಗಿ ಗಮನ ಕೊಡಲಾಗದೆ ಇರುವ ಪ್ರಸ್ತುತ ಸನ್ನಿವೇಶದಲ್ಲಿ ಪಾಠವನ್ನು ಮುಗಿಸುವ ಶಿಕ್ಷಕರ ಸಮಯದ ಒತ್ತಡದ ಮಧ್ಯೆ ಅವರನ್ನು ದೋಷಿಸುವುದು ತರವಲ್ಲ. ಮಗ ಅಥವಾ ಮಗಳು ಉತ್ತಮ ಹೆಸರಿರುವ ಪ್ರತಿಷ್ಠಿತ ಶಾಲೆಯಲ್ಲಿ ಕಲಿಯುತ್ತಿದ್ದಾನೆ ಅಥವಾ ಕಲಿಯುತ್ತಿದ್ದಾಳೆ ಎಂದು ಹೆತ್ತವರು ತಮ್ಮ ದಿನನಿತ್ಯದ ಕೆಲಸದ ಜಂಜಡ ಕಳೆದ ಮೇಲೆ ದೂರದರ್ಶನ, ಮೊಬೈಲುಗಳಲ್ಲಿ ಮುಳುಗಿ ಮಕ್ಕಳಿಗೆ ಗಮನ ನೀಡದಿರುವುದು ಸರಿಯಲ್ಲ.

ಬರೀ ಓದುವುದಷ್ಟೇ ಅಲ್ಲ: ಓದಿನ ಬಗ್ಗೆ, ಶಿಕ್ಷಣದ ಬಗ್ಗೆ ಒಂದು ಮನೋಹರವಾದ ಆಕರ್ಷಕವೆನಿಸುವ ಆಸಕ್ತಿಯನ್ನು ಹೆತ್ತವರು ಮಕ್ಕಳಲ್ಲಿ ಹುಟ್ಟು ಹಾಕಬೇಕು. ಆದರೆ ಅವರು ತಮಗರಿವಿಲ್ಲದೆ 'ಚೆನ್ನಾಗಿ ಓದು, ಚೆನ್ನಾಗಿ ಓದು' ಎಂದು ತಿವಿಯುವ ಮೂಲಕ ತಮ್ಮ ಜವಾಬ್ದಾರಿಯನ್ನು ನಿಭಾಯಿಸುತ್ತಾರೆ. ಮಕ್ಕಳ ಭವಿಷ್ಯದ ಬಗ್ಗೆ ಕನಸಿನ ಗೋಪುರವನ್ನೇ ಕಟ್ಟಿರುವ ಅವರು ಒಂದು ನಿರ್ದಿಷ್ಟ ಚೌಕಟ್ಟಿನೊಳಗೆ ತಮ್ಮ ನಿಯಂತ್ರಣದಲ್ಲಿ ಮಕ್ಕಳನ್ನು ಬೆಳೆಸುತ್ತಾರೆ. ಆದರೆ ಹೆತ್ತವರ ಒತ್ತಾಯಕ್ಕೆ ಬಲಿಯಾದ ಮಗು ಮಾನಸಿಕ ಹಿಂಸೆಯನ್ನು ಅನುಭವಿಸುತ್ತದೆ. ಶಾಲೆಯಲ್ಲಿ ನಾಲ್ಕು ಗೋಡೆಗಳ ನಡುವಿನ ಔಪಚಾರಿಕ ಶಿಕ್ಷಣ, ಮನೆಗೆ ಬಂದರೆ 'ಓದು, ಬರೆ' ಎಂಬ ಅಪ್ಪ-ಅಮ್ಮನ ಕೂಗು ಇದರಿಂದ ತತ್ತರಿಸಿ ಹೋದ ಮಗು ಒಲ್ಲದ ಮನಸ್ಸಿನಿಂದ ಓದಲು ಪ್ರಾರಂಭಿಸುತ್ತದೆ. ಒಟ್ಟಿನಲ್ಲಿ, ಪ್ರಸ್ತುತ ಹೆತ್ತವರ ಮಹತ್ವಕಾಂಕ್ಷೆಯ ಮಹಾಪೂರದಲ್ಲಿ ಮಕ್ಕಳು ಕೊಚ್ಚಿ ಹೋಗುತ್ತಿದ್ದಾರೆ.

'ಶಾಲೆಯಲ್ಲಿ ಕಲಿತ ಪ್ರತಿಯೊಂದೂ ಮರೆತು ಹೋದ ನಂತರ ಅಲ್ಲಿ ಏನಾದರೂ ಉಳಿದರೆ ಅದುವೇ ಶಿಕ್ಷಣ' ಎಂಬುದು ಬಿ ಎಫ್ ಸ್ಕಿನ್ನರ್ ಅಭಿಪ್ರಾಯ. ಹಾಗಾದರೆ, ಮಕ್ಕಳ ಶಿಕ್ಷಣದಲ್ಲಿ ಹೆತ್ತವರ ಜವಾಬ್ದಾರಿಯಾದರೂ ಏನು ಎಂಬುದನ್ನು ನೋಡೋಣ.

ಪಾಠದ ಜೊತೆಗೆ ಆಟವೂ ಇರಲಿ: ಮಗು ಸ್ವಲ್ಪ ಕಾಲವಾದರೂ ಸ್ವಚ್ಛಂದವಾಗಿರಲಿ. ಅದು ಸೌಹಾರ್ದತೆ, ಸಹಬಾಳ್ವೆಯನ್ನು ಬೆಳೆಸಲು ಸಹಕಾರಿ. ತಮಗರಿವಿಲ್ಲದೆ ಮಕ್ಕಳು ಹೆತ್ತವರನ್ನು ಅನುಕರಿಸುವುದರಿಂದ ಹೆತ್ತವರ ನಡೆ ನುಡಿಗಳು ಸದ್ಗುಣದಿಂದ ಕೂಡಿರಲಿ. ಅವರ ಓದಿನ ವಿಷಯ ಆಳವಾಗಿ ತಿಳಿದಿರದಿದ್ದರೂ ಪ್ರತಿದಿನ ಅವರೊಂದಿಗೆ ಸ್ವಲ್ಪ ಸಮಯ ಕಳೆಯಿರಿ. ಅವರಿಂದಲೂ ಸಲಹೆ ಪಡೆಯಿರಿ. ಇದು ಅವರ ಆಲೋಚನಾ ಶಕ್ತಿಯನ್ನು ವೃದ್ಧಿಸಲು ಸಹಕಾರಿ. 'ನನಗೆ ತುಂಬಾ ಕೆಲಸವಿದೆ, ನಾನೇನು ಖಾಲಿ ಕುಳಿತಿಲ್ಲ' ಎಂಬ ಮಾತುಗಳು ಎಂದೆಂದಿಗೂ ಬರದಿರಲಿ. ಅವರ ಶ್ರಮ ಸಿದ್ಧತೆಗಳ ಬಗೆ ಗಮನಹರಿಸಿ. ಮೆಚ್ಚುಗೆ, ಸಹವಾಸದ ಬಗೆಗೂ ಗಮನವಿರಲಿ. ಸಮಯಪಾಲನೆ, ಹಾಜರಾತಿ, ಓದು-ಬರಹದ ಬಗೆಗೆ ಗಮನ ಹರಿಸಿ. ಶಿಕ್ಷಣ, ಶಾಲೆ, ಶಿಕ್ಷಕರ ಬಗೆಗೆ ಧನಾತ್ಮಕ ಮನೋಭಾವ ಮೂಡಿಸಿ. ಸ್ವಚ್ಛತೆ ಬಗ್ಗೆ ಗಮನವಿರಲಿ. ಉತ್ತಮ ಜೀವನ ಮೌಲ್ಯಗಳನ್ನು ಅಳವಡಿಸಲು ಸಹಕರಿಸಿ. ಆಗಾಗ ಶಾಲೆಗೆ ಭೇಟಿ ಇತ್ತು ಮಗುವಿನ ಶೈಕ್ಷಣಿಕ ಪ್ರಗತಿಯ ಬಗ್ಗೆ ಶಿಕ್ಷಕರಲ್ಲಿ ವಿಚಾರಿಸುವ ವ್ಯವಧಾನವಿರಲಿ. ಉತ್ತಮ ಶಾಲೆಯ ಆಯ್ಕೆಯು ತಮ್ಮ ಜವಾಬ್ದಾರಿ ಎಂಬುದು ನೆನಪಿರಲಿ.

ಇವೆಲ್ಲದರೊಂದಿಗೆ, ಎಷ್ಟೇ ಉತ್ತಮ ಶಿಕ್ಷಣ ಮತ್ತು ಪಾಲನೆ ದೊರೆತರೂ ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ಶಿಕ್ಷಣದ ಹೊಣೆಯನ್ನು ತಾನೇ ಹೊರಬೇಕಾದ ಅನಿವಾರ್ಯತೆಯೂ ಇದೆ ಎಂಬುದು ಕೂಡಾ ಅಷ್ಟೇ ಸತ್ಯ.

ಸಮಾಚಾರ ಸಣ್ಣದಲ್ಲ

ಬ್ಯಾಡ್ಮಿಂಟನ್‌ಗೆ ಹಿ ಬಿಂಗ್ಜಿಯಾವೊ ವಿದಾಯ



ಪ್ಯಾರಿಸ್: ಬೆಳ್ಳಿ ಪದಕ ವಿಜೇತೆ ಹಿ ಬಿಂಗ್ಜಿಯಾವೊ ಅಂತಾರಾಷ್ಟ್ರೀಯ ಬ್ಯಾಡ್ಮಿಂಟನ್‌ಗೆ ನಿವೃತ್ತಿ ಘೋಷಿಸಿದ್ದಾರೆ ಎಂದು ಬ್ಯಾಡ್ಮಿಂಟನ್ ವರ್ಲ್ಡ್ ಫೆಡರೇಶನ್ ತಿಳಿಸಿದೆ. ಒಲಿಂಪಿಕ್‌ನಲ್ಲಿ ಮೊದಲ ಪದಕವನ್ನು ಗೆದ್ದ ಚೀನಾದ ಶಟ್ಲರ್ 27 ನೇ ವಯಸ್ಸಿನಲ್ಲಿ ಕ್ರೀಡೆಗೆ ವಿದಾಯ ಹೇಳಿದ್ದಾರೆ. ಆದಾಗ್ಯೂ, ಅವರು ದೇಶೀಯ ಪಂದ್ಯಾವಳಿಗಳಲ್ಲಿ ಆಡುವುದನ್ನು ಮುಂದುವರಿಸಲಿದ್ದಾರೆ ಎಂದು ಜಾಗತಿಕ ಬ್ಯಾಡ್ಮಿಂಟನ್ ಆಡಳಿತ ಮಂಡಳಿ ತಿಳಿಸಿದೆ. ಪ್ಯಾರಿಸ್‌ನಲ್ಲಿ ನಡೆದ ಮಹಿಳಾ ಸಿಂಗಲ್ಸ್ ಫೈನಲ್‌ನಲ್ಲಿ ಹಿ ಬಿಂಗ್ಜಿಯಾವೊ ದಕ್ಷಿಣ ಕೊರಿಯಾದ ಆನ್ ಸೆ ಯಂಗ್ ವಿರುದ್ಧ ಸೋತರು. ಚೀನಾದ ಶಟ್ಲರ್ 13-21, 16-21 ನೇರ ಗೇಮ್‌ಗಳಿಂದ ಆನ್ ವಿರುದ್ಧ ಸೋಲನುಭವಿಸಿದರು. ಹಿ ಬಿಂಗ್ಜಿಯಾವೊ ಕ್ವಾರ್ಟರ್ ಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಚೆನ್ ಯುಫೆ ಅವರನ್ನು ಸೋಲಿಸುವ ಮೊದಲು ರೌಂಡ್ ಆಫ್ 16 ರಲ್ಲಿ ಭಾರತದ ಪಿವಿ ಸಿಂಧು ಅವರನ್ನು ಸೋಲಿಸಿದರು.

ಚೆಸ್: ವೇಷಿಯರ್ ಲಗ್ರಾವ್‌ಗೆ ಅಗ್ರಸ್ಥಾನ

ಅಮೆರಿಕ: ಸೇಂಟ್ ಲೂಯಿ ರ‍್ಯಾಪಿಡ್ ಮತ್ತು ಬ್ಲಿಟ್ಸ್ ಟೂರ್ನಿಯ ರ‍್ಯಾಪಿಡ್ ವಿಭಾಗದ ಮೂರನೇ ಸುತ್ತಿನ ನಂತರ ಫ್ರಾನ್ಸ್‌ನ ಮಾಕ್ಸಿಂ ವೇಷಿಯರ್ ಲಗ್ರಾವ್ ಅವರು ಐದು ಪಾಯಿಂಟ್‌ಗಳೊಡನೆ ಅಗ್ರಸ್ಥಾನದಲ್ಲಿದ್ದಾರೆ.

ಮೊದಲ ಪಂದ್ಯದಲ್ಲಿ ಹಿಕಾರು ನಕಾಮುರಾ ಜತೆ 'ಡ್ರಾ' ಮಾಡಿಕೊಂಡ ಲಗ್ರಾವ್ ನಂತರದ ಎರಡು ಪಂದ್ಯಗಳಲ್ಲಿ ಎಂಡ್‌ಗೇಮ್ ಕೌಶಲ ಪ್ರದರ್ಶಿಸಿ ಯುವ ತಾರೆಗಳಾದ ಆರ್.ಪ್ರಜ್ಞಾನಂದ ಮತ್ತು ನಾಡಿರ್ಬೆಕ್ ಅಬ್ದುಸತ್ತಾರೋವ್ ವಿರುದ್ಧ ಜಯಗಳಿಸಿದರು. ಗೆಲುವಿಗೆ ಎರಡು ಪಾಯಿಂಟ್, ಡ್ರಾ'ಕ್ಕೆ ಒಂದು ಪಾಯಿಂಟ್ ನೀಡಲಾಗುತ್ತದೆ. ಭಾರತದ ಪ್ರಜ್ಞಾನಂದ ಅವರಿಗೆ ಟೂರ್ನಿಯಲ್ಲಿ ಒಳ್ಳೆಯ ಆರಂಭ ಸಿಗಲಿಲ್ಲ. ಪ್ರಜ್ಞಾನಂದ ಮತ್ತು ಹಾಲಿ ಚಾಂಪಿಯನ್ ಫ್ಯಾಬಿಯಾನೊ ಕರುವಾನಾ ಅವರು ಮೂರು ಪಂದ್ಯಗಳ ನಂತರ ತಲಾ ಒಂದು ಪಾಯಿಂಟ್ ಮಾತ್ರ ಗಳಿಸಿ 10 ಆಟಗಾರರ ಕಣದಲ್ಲಿ ಕ್ರಮವಾಗಿ 9 ಮತ್ತು ಹತ್ತನೇ ಸ್ಥಾನದದ್ದಾರೆ. ನಿಪೊಮ್‌ನಿಯಾಷಿ ವಿರುದ್ಧ ಪಂದ್ಯದಲ್ಲೂ ಪ್ರಜ್ಞಾನಂದ ಸೋಲುಕಂಡರು. ಅಮೆರಿಕದ ಲೆವೊನ್ ಅರೋನಿಯನ್ ಜತೆ ಡ್ರಾ ಮಾಡಿಕೊಳ್ಳುವಲ್ಲಿ ಯಶಸ್ವಿ ಆದರು.

ಸ್ವಾತಂತ್ರ್ಯ ದಿನದಂದೇ 117 ಆಟಗಾರರನ್ನು ಭೇಟಿ ಮಾಡಲಿರುವ ಮೋದಿ | ಗೆದ್ದವರಿಗೆ ಗೌರವ

15ಕ್ಕೆ ಒಲಿಂಪಿಕ್ಸ್ ವೀರರ ಜತೆ ಪ್ರಧಾನಿ ಭೇಟಿ

ಪ್ಯಾರಿಸ್: ಐತಿಹಾಸಿಕ ಒಲಿಂಪಿಕ್‌ಗೆ ತೆರೆ ಬಿದ್ದಿದ್ದು, ಭಾರತ ಈ ಬಾರಿ 6 ಪದಕಗಳನ್ನು ಗೆದ್ದಿದೆ. ಜುಲೈ 26ಕ್ಕೆ ಪ್ರಾರಂಭವಾಗಿದ್ದ ಒಲಿಪಿಕ್‌ಗೆ ಭಾನುವಾರ ತೆರೆಬಿದ್ದಿದೆ. ಈ ಮಧ್ಯೆ ಎಲ್ಲ ದೇಶಗಳ ಕ್ರೀಡಾಪಟುಗಳು ತಮ್ಮ ತಮ್ಮ ದೇಶಕ್ಕೆ ಮರಳಿದ್ದಾರೆ. ಈ ಕ್ರೀಡಾಕೂಟದಲ್ಲಿ ಭಾರತ ಸಹ ಸ್ಥಿರ ಪ್ರದರ್ಶನ ನೀಡಿದೆ. ಈ ಟೂರ್ನಿಯಲ್ಲಿ ಭಾರತ ಒಟ್ಟು ಆರು ಪದಕವನ್ನು ತನ್ನದಾಗಿಸಿಕೊಂಡಿದೆ. ಈ ಕ್ರೀಡಾಕೂಟದಲ್ಲಿ ಭಾರತದ ಪರ 117 ಅಥ್ಲೀಟ್‌ಗಳು ಭಾಗವಹಿಸಿದ್ದರು.

ಭಾರತದ ಕ್ರೀಡಾ ಪಟುಗಳು ಈಗ ತವರಿನತ್ತ ಮುಖ ಮಾಡಿದ್ದಾರೆ. ಈಗ ಪ್ರಧಾನಿ ನರೇಂದ್ರ ಮೋದಿ ಅವರು ಪ್ಯಾರಿಸ್ ಒಲಿಂಪಿಕ್ಸ್ 2024ರಲ್ಲಿ ಭಾಗವಹಿಸಿರುವ ಎಲ್ಲಾ ಭಾರತೀಯ ಕ್ರೀಡಾಪಟುಗಳನ್ನು ಆಗಸ್ಟ್ 15 ರಂದು ಅಂದರೆ ಭಾರತದ ಸ್ವಾತಂತ್ರ್ಯ ದಿನದಂದು ಭೇಟಿಯಾಗಲಿದ್ದಾರೆ. ಬೆಳಗ್ಗೆ ಕೆಂಪು ಕೋಟೆಯ ಮೇಲೆ ಧ್ವಜಾರೋಹಣ ಕಾರ್ಯಕ್ರಮವನ್ನು ಮುಗಿಸಿದ ಬಳಿಕ ಈ ಭೇಟಿಗೆ ತೆರಳಲಿದ್ದಾರೆ. ಮಾಹಿತಿಯ ಪ್ರಕಾರ, ಪ್ರಧಾನಿ ಮೋದಿ ಅವರು ಮಧ್ಯಾಹ್ನ 1 ಗಂಟೆಗೆ ಇಡೀ ಭಾರತ ತಂಡವನ್ನು ಭೇಟಿಯಾಗಲಿದ್ದಾರೆ. ಇದೇ ವೇಳೆ ಕ್ರೀಡಾ ಕೂಟದಲ್ಲಿ ಭಾಗವಹಿಸಿದ್ದ ಎಲ್ಲ ಕ್ರೀಡಾ ಪಟುಗಳಿಗೆ ಆಗಸ್ಟ್ 15ರ ಕಾರ್ಯಕ್ರಮಕ್ಕೆ ಕೆಂಪು ಕೋಟೆಗೆ ಆಹ್ವಾನಿಸಲಾಗಿದೆ ಎಂದು ತಿಳಿದು ಬಂದಿದೆ.

ಕೆಂಪುಕೋಟೆಗೆ ಆಹ್ವಾನ

ಇಂಡಿಯಾ ಟುಡೇ ಪ್ರಕಾರ, ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವ ಎಲ್ಲಾ 117 ಕ್ರೀಡಾಪಟುಗಳು ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಕೆಂಪು ಕೋಟೆಯಲ್ಲಿ ಉಪಸ್ಥಿತರಿರುತ್ತಾರೆ. ಇದೇ ವೇಳೆ ಪ್ರಧಾನಿ ನರೇಂದ್ರ ಮೋದಿ ಭಾರತದ ಪರ ಪದಕ ಸಾಧನೆ ಮಾಡಿರುವ ಕ್ರೀಡಾಪಟುಗಳನ್ನು ಪ್ರತ್ಯೇಕವಾಗಿ ಮಾತನಾಡಿಸಲಿದ್ದಾರೆ ಎಂಬ ಮಾಹಿತಿ ಇದೆ. ಇನ್ನು ಪದಕ ವಿಜೇತ ಕ್ರೀಡಾ ಪಟುಗಳು ಪದಕವನ್ನು ಗೆದ್ದಾಗಲೇ, ಪ್ರಧಾನಿ ನರೇಂದ್ರ ಮೋದಿ ಆ ಕ್ರೀಡಾ ಪಟುಗಳಿಗೆ ಕರೆ ಮಾಡಿ ಮಾತನಾಡಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ತಮ್ಮ ಸಾಮಾಜಿಕ ತಾಣದಲ್ಲಿ ಈ ಮೊದಲೇ ಕ್ರೀಡಾ ಕೂಟದಲ್ಲಿ ಭಾಗವಹಿಸಿದ ಪ್ರತಿಯೊಬ್ಬ ಕ್ರೀಡಾ ಪಟುವಿನ ಮುಂದಿನ ಪಯಣಕ್ಕೆ ಶುಭಾಶಯಗಳನ್ನು ತಿಳಿಸಿದ್ದಾರೆ.

ಬರಿಗೈಲ್ಲಿ ಬಂದ ವಿನೇಶ್

ಭಾರತದ ಕುಸ್ತಿ ಪಟು ವಿನೇಶ್ ಫೋಗಾಟ್ ಮಹಿಳೆ ಯರ 50 ಕೆ.ಜಿ ಫ್ರಿ ಸ್ಟೈಲ್ ವಿಭಾಗದ ಫೈನಲ್‌ಗೂ ಮುನ್ನ ಅನರ್ಹರಾಗಿ ನಿರಾಸೆ ಅನುಭವಿಸಿದ್ದರು. ಹೀಗಾಗಿ ಅವರ ಕೊರಳಿಗೆ ಯಾವುದೆ ಪದಕ ಬಿದ್ದಿಲ್ಲ. ತಮ್ಮನ್ನು ಅನರ್ಹ ಗೊಳಿಸಿದ್ದನ್ನು ಪ್ರಶ್ನಿಸಿ ವಿನೇಶ್ ಕ್ರೀಡಾ ಮಧ್ಯಸ್ಥಿಕೆ ಕೋರ್ಟ್ ಮೊರೆ ಹೋಗಿದ್ದರು. ಆದರೆ, ಕೋರ್ಟ್ ಇನ್ನು ತನ್ನ ತೀರ್ಮಾನವನ್ನು ಬಹಿರಂಗ ಪಡಿಸಿಲ್ಲ. ಕ್ರೀಡಾ ಮಧ್ಯಸ್ಥಿಕೆ ಕೋರ್ಟ್ ಶೀಘ್ರದಲ್ಲಿ ತನ್ನ ನಿರ್ಣಯ ತೆಗೆದುಕೊಳ್ಳ ಬಹುದು ಎಂದು ವಿನೇಶ್ ಭಾವಿಸಿದ್ದರು. ಆದರೆ ಒಲಿಂಪಿಕ್ಸ್ ಕ್ರೀಡಾ ಕೂಟ ಮುಗಿದರೂ ಕೋರ್ಟ್ ಇನ್ನು ತನ್ನ ನಿರ್ಧಾರವನ್ನು ಪ್ರಕಟಿಸಿಲ್ಲ. ಹೀಗಾಗಿ ಒಲಿಂಪಿಕ್ಸ್ ಕ್ರೀಡಾ ಕೂಟದ ಸಮಯವೂ ಮುಗಿದಿದ್ದರಿಂದ ವಿನೇಶ್ ಒಲಿಂಪಿಕ್ಸ್ ಗ್ರಾಮವನ್ನು ಖಾಲಿ ಮಾಡಿದ್ದಾರೆ. ವಿನೇಶ್ ಈ ಬಾರಿಯ ಒಲಿಂಪಿಕ್ಸ್‌ನಲ್ಲಿ ಪದಕದೊಂದಿಗೆ ಒಲಿಂಪಿಕ್ಸ್ ಗ್ರಾಮಕ್ಕೆ ಗುಡ್ ಬೈ ಹೇಳಬಹುದು ಎಂದು ಭಾವಿಸಿದ್ದರು. ಆದರೆ, ಆಸೆ ಫಲಿಸಲಿಲ್ಲ. ಅವರು ಕ್ರೀಡಾ ಗ್ರಾಮದಿಂದ ಬರೀ ಗೈಯಲ್ಲಿ ವಾಪದಾಗಿದ್ದಾರೆ. ವಿನೇಶ್ ಅವರು ಕ್ರೀಡಾ ಗ್ರಾಮವನ್ನು ತೊರೆ ಯುತ್ತಿ ರುವ ದೃಶ್ಯಗಳು ಸಾಮಾಜಿಕ ತಾಣದಲ್ಲಿ ವೈರಲ್ ಆಗಿವೆ.

ಲಕ್ಷ್ಯ ಸೇನ್ ಸೋಲಿನ ಬಗ್ಗೆ ಸುನಿಲ್ ಗವಾಸ್ಕರ್ ಬೇಸರ

ಮುಂಬಯಿ: ಒಲಿಂಪಿಕ್ಸ್ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ಸೆಮಿ ಫೈನಲ್ ಪಂದ್ಯದವರಗೂ ಮಿಂಚಿ ಪದಕ ಭರವಸೆ ಮೂಡಿಸಿದ್ದ ಲಕ್ಷ್ಯ ಸೇನ್ ಸೆಮಿ ಮತ್ತು ಕಂಚಿನ ಪದಕ ಸ್ಪರ್ಧೆಯಲ್ಲಿ ನಿರಾಶಾದಾಯಕ ಪ್ರದರ್ಶನ ತೋರುವ ಮೂಲಕ ಪದಕ ವಂಚಿತರಾಗಿದ್ದರು.

ಇದೀಗ ಈ ಬಗ್ಗೆ ಮಾಜಿ ಕ್ರಿಕೆಟಿಗ ಸುನೀಲ್ ಗವಾಸ್ಕರ್ ಅವರು ಬೇಸರ ವ್ಯಕ್ತಪಡಿಸಿದ್ದು, ಲಕ್ಷ್ಯ ಸೇನ್ ಮಹತ್ವದ ಪಂದ್ಯದ ವೇಳೆ ಏಕಾಗ್ರತೆಯನ್ನು ಕಾಯ್ದುಕೊಳ್ಳುವಲ್ಲಿ ಎಡವಿದ್ದೇ ಸೋಲಿಗೆ ಕಾರಣ ಎಂದಿದ್ದಾರೆ. ಕೆಳ ದಿನಗಳ ಹಿಂದಷ್ಟೇ ಭಾರತೀಯ ಬ್ಯಾಡ್ಮಿಂಟನ್ ತಂಡದ ಮುಖ್ಯ ಕೋಚ್ ಪ್ರಕಾಶ್ ಪಡುಕೋಣೆ ಕನಿಷ್ಠ 1 ಪದಕವನ್ನು ಕೂಡ ಗೆಲ್ಲಲಾಗದ ಬ್ಯಾಡ್ಮಿಂಟನ್ ತಂಡದ ಬಗ್ಗೆ ವಾಗ್ದಾಳಿ ನಡೆಸಿದ್ದರು. ಇದೀಗ ಪಡುಕೋಣೆ ಅವರಿಗೆ ಸುನೀಲ್ ಗವಾಸ್ಕರ್ ಕೂಡ ಬೆಂಬಲಕ್ಕೆ ನಿಂತಿದ್ದಾರೆ. ಪ್ರಕಾಶ್ ಪಡುಕೋಣೆ ಹೇಳಿಕೆಯನ್ನು ಬೆಂಬಲಿಸಿರುವ ಸುನೀಲ್ ಗಾವಸ್ಕರ್, ಲಕ್ಷ್ಯ ಸೇನ್ ಅಂತಹ ಆಟಗಾರರ ದುರ್ಬಲ ಮನಸ್ಥಿತಿಯು ಮಹತ್ವದ ಘಟ್ಟದಲ್ಲಿ ಬ್ಯಾಡ್ಮಿಂಟನ್‌ನಲ್ಲಿ ಪದಕ ನಷ್ಟಕ್ಕೆ ಕಾರಣವಾಯಿತು ಎಂದು ಹೇಳಿದ್ದಾರೆ. ಆಟಗಾರರು ತಾವೇ ಮುಂದೆ ಬಂದು ಪದಕ ಗೆಲ್ಲುವ ಮನಸ್ಸು ಮಾಡಬೇಕು. ಉನ್ನತ ಮಟ್ಟದಲ್ಲಿ ಪ್ರದರ್ಶನ ನೀಡಲು ಅಗತ್ಯವಿರುವ ಎಲ್ಲಾ ಬೆಂಬಲ ಮತ್ತು ಹಣಕಾಸು ಭಾರತೀಯ ಆಟಗಾರರಿಗೆ ನೀಡಲಾಗುತ್ತಿದೆ. ನಮ್ಮ ಆಟಗಾರರಿಗೆ ಸೌಲಭ್ಯಗಳು ಮತ್ತು ಹಣದ ಕೊರತೆಯಿದ್ದ ಹಿಂದಿನ ದಿನಗಳಂತೆ ಈಗ ಆ ಪರಿಸ್ಥಿತಿ ಇಲ್ಲ ಎಂದು ಹೇಳುವ ಮೂಲಕ ಬ್ಯಾಡ್ಮಿಂಟನ್ ಆಟಗಾರರ ವೈಫಲ್ಯದ ಬಗ್ಗೆ ವಾಗ್ದಾಳಿ ನಡೆಸಿದ್ದರು.

ಪಡುಕೋಣೆ ಅಸಮಾಧಾನ

ಲಕ್ಷ್ಯ ಉತ್ತಮವಾಗಿ ಆಡಿದ್ದರು. ಸೋಲಿನಿಂದ ನಾನು ನಿರಾಶೆಗೊಂಡಿದ್ದೇನೆ. ಅವರು ಸೆಮಿಫೈನಲ್‌ನಲ್ಲಿಯೂ ಉತ್ತಮವಾಗಿ ಆಡಿದ್ದರು. ಆದರೆ ಅಂಗಣದೊಳಗಿನ ಓಡಾಟ ಅವರಿಗೆ ಸಾಧ್ಯವಾಗಲಿಲ್ಲ, ಆ ನಿಟ್ಟಿನಲ್ಲಿ ಅವರು ಕೆಲಸ ಮಾಡಬೇಕಾಗಿದೆ' ಎಂದು ಪಡುಕೋಣೆ ಅಸಮಾಧಾನ ಹೊರಹಾಕಿದ್ದರು.

ವಿಶ್ವಕಪ್‌ಗೆ ಭಾಕರ್ ಅಲಭ್ಯ?

ಪ್ಯಾರಿಸ್: ಭಾರತಕ್ಕೆ 2 ಕಂಚಿನ ಪದಕಗಳನ್ನು ಗೆದ್ದುಕೊಟ್ಟ ಮನು ಭಾಕರ್, ಈ ವರ್ಷ ಭಾರತದಲ್ಲೇ ನಡೆಯುವ ಶೂಟಿಂಗ್ ವಿಶ್ವಕಪ್‌ನಲ್ಲಿ ಭಾಗವಹಿಸುವುದು ಅನುಮಾನ ಎನ್ನಲಾಗಿದೆ. ಈ ಬಗ್ಗೆ ಮಾಹಿತಿ ನೀಡಿರುವ ಮನು ಅವರ ಕೋಚ್ ಜಸ್ಪಾಲ್ ರಾಣಾ, ಶೂಟಿಂಗ್ ವಿಶ್ವಕಪ್‌ನಲ್ಲಿ ಮನು ಭಾಗವಹಿಸುವ ಸಾಧ್ಯತೆ ತೀರ ಕಡಿಮೆ ಎಂದಿದ್ದಾರೆ.

ಈ ಬಗ್ಗೆ ಮಾತನಾಡಿದ ಅವರು, ಸದ್ಯ ಮನು ಮೂರು ತಿಂಗಳ ವಿರಾಮ ಕೇಳಿದ್ದಾರೆ. ಹೀಗಾಗಿ ಅವರು ಶೂಟಿಂಗ್ ವಿಶ್ವಕಪ್‌ನಲ್ಲಿ ಭಾಗವಹಿಸುವುದಿಲ್ಲ ಎಂದು ತಿಳಿಸಿದ್ದಾರೆ. ಅಕ್ಟೋಬರ್‌ನಲ್ಲಿ ನಡೆಯಲಿರುವ ವಿಶ್ವಕಪ್‌ನಲ್ಲಿ ಮನು ಆಡುತ್ತಾರೋ ಇಲ್ಲವೋ ನನಗೆ ತಿಳಿದಿಲ್ಲ. ಏಕೆಂದರೆ ಅವರು 3 ತಿಂಗಳ ವಿರಾಮ ತೆಗೆದುಕೊಳ್ಳುತ್ತಿದ್ದಾರೆ. ಸತತವಾಗಿ ಸ್ಪರ್ಧೆಯಲ್ಲಿ ತೊಡಗಿಸಿಕೊಂಡ ಬಳಿಕ ದೀರ್ಘ ವಿರಾಮ ತೆಗೆದುಕೊಳ್ಳುವುದು ಎಲ್ಲಾ ಕ್ರೀಡೆಯಲ್ಲೂ ಸರ್ವೆ ಸಾಮಾನ್ಯ. ಅಲ್ಲದೆ ಪ್ರಸ್ತುತ ಮನು ಭಾಕರ್ ಅವರ ಗಮನವು 2026 ರ ಏಷ್ಯನ್ ಗೇಮ್ಸ್ ಮತ್ತು ಕಾಮನ್ವೆಲ್ತ್ ಗೇಮ್ಸ್ ಮೇಲಿದೆ ಎಂದು ಮನು ಭಾಕರ್ ಅವರ ತರಬೇತುದಾರ ಜಸ್ಪಿಲ್ ರಾಣಾ ಹೇಳಿದ್ದಾರೆ. ಇನ್ನು ಶೂಟಿಂಗ್ ವಿಶ್ವಕಪ್ ಅಕ್ಟೋಬರ್ 13 ರಿಂದ 18 ರವರೆಗೆ ದೆಹಲಿಯಲ್ಲಿ ನಡೆಯಲಿದೆ. ಪ್ರಪಂಚದಾದ್ಯಂತದ ಅನುಭವಿ ಶೂಟರ್‌ಗಳು ಈ ವಿಶ್ವಕಪ್‌ನಲ್ಲಿ ಭಾಗವಹಿಸಲಿದ್ದಾರೆ. ಮನು ಭಾಕರ್ ಅವರು ಒಲಿಂಪಿಕ್ಸ್‌ನಲ್ಲಿ ವಿಶೇಷ ಗಮನ ಸೆಳೆದಿದ್ದಾರೆ. ಈ ವರೆಗೂ ವಿಶ್ವಕಪ್‌ಗಳಲ್ಲಿ 9 ಚಿನ್ನ ಗೆದ್ದಿರುವ ಅವರು 2 ಕಂಚು ಹಾಗೂ 2 ರಜತ ಪದಕ ಗೆದ್ದಿದ್ದಾರೆ. ಈ ಹಿಂದಿನ ಒಲಿಂಪಿಕ್ಸ್‌ನಲ್ಲಿ 10ಮೀ ಏರ್ ಪಿಸ್ತೂಲ್ ಸಿಂಗಲ್ಸ್ ಹಾಗೂ ಮಿಶ್ರ ತಂಡದಲ್ಲಿ ಕಂಚು ಗೆದ್ದಿದ್ದ ಅವರು ವಿಶ್ವಕಪ್‌ನಲ್ಲಿ ಚಿನ್ನ ಗೆಲ್ಲುವ ನೆಚ್ಚಿನ ಆಟಗಾರ್ತಿಯಾಗಿದ್ದರು. ಆದರೆ ಅವರು ಆಡುವುದು ಅನುಮಾನ ಎನ್ನಲಾಗಿದ್ದು, ಬೇಸರ ವ್ಯಕ್ತವಾಗಿದೆ.

ನೀರಜ್, ಭಾಕರ್ ಮದುವೆ ಊಹಾಪೋಹಗಳ ಬಗ್ಗೆ ಶೂಟರ್ ತಂದೆ ಸ್ಪಷ್ಟನೆ

ಮನು ಇನ್ನೂ ಚಿಕ್ಕವಳು, ಮದುವೆ ಬಗ್ಗೆ ಯೋಚಿಸಿಲ್ಲ

ದೆಹಲಿ: ಮನು ಭಾಕರ್ ಹಾಗೂ ನೀರಜ್ ಚೋಪ್ರಾ ಕುರಿತಾಗಿ ಹಬ್ಬಿರುವ ವದಂತಿಗೆ ತೆರೆ ಬಿದ್ದಿದೆ. ಈ ಹಿಂದೆ ಎರಡು ಕಂಚು ಗೆದ್ದ ಮನು ಅವರ ತಾಯಿ ಬೆಳ್ಳಿ ಗೆದ್ದ ನೀರಜ್ ಅವರಿಗೆ ಭೇಟಿ ಮಾಡಿರುವ ಕುರಿತಂತೆ ಹಲವಾರು ಊಹಾಪೋಹ ಹಬ್ಬಿಸಲಾಗಿತ್ತು.ಆದರೆ ಇದೀಗ ಈ ಬಗ್ಗೆ ಸ್ಪಷ್ಟನೆ ನೀಡಿರುವ ಮನು ಭಾಕರ್ ಅವರ ತಂದೆ ರಾಮ್ ಕಿಶನ್ ಭಾಕರ್ ಈ ವದಂತಿಗಳನ್ನು ತಿರಸ್ಕರಿಸಿದ್ದಾರೆ. ಮನು ಭಾಕರ್ ಇನ್ನೂ ತುಂಬಾ ಚಿಕ್ಕವಳಾಗಿದ್ದು, ಅವರ ಮದುವೆಯ ಬಗ್ಗೆ ಇನ್ನೂ ಯೋಚಿಸುತ್ತಿಲ್ಲ. ಮನುವಿನ ತಾಯಿ ನೀರಜ್ ಚೋಪ್ರಾರನ್ನು ತನ್ನ ಮಗನಂತೆ ಪರಿಗಣಿಸುತ್ತಾರೆ ಎಂದು ರಾಮ್ ಕಿಶನ್ ಹೇಳಿದ್ದಾರೆ.

ಒಲಿಂಪಿಕ್ಸ್‌ನಲ್ಲಿ ಎರಡೆರಡು ಪದಕ ಗೆದ್ದ ಮನು ಅವರನ್ನು ಒಲಿಂಪಿಕ್ಸ್ ಸಮಾರೋಪ ಸಮಾರಂಭದಲ್ಲಿ ಭಾರತದ ಧ್ವಜಧಾರಿಯಾಗಿ ನೇಮಿಸಲಾಗಿತ್ತು. ಹೀಗಾಗಿ ಈ ಸಮಾರಂಭದಲ್ಲಿ ಪಾಲ್ಗೊಳ್ಳಲು ಮನು ಭಾಕರ್ ತಮ್ಮ ತಾಯಿ ಸುಮೇಧಾ ಭಾಕರ್ ಅವರೊಂದಿಗೆ ಪ್ಯಾರಿಸ್‌ಗೆ ತೆರಳಿದ್ದರು. ಈ ಮಧ್ಯೆ, ಮನು ಭಾಕರ್ ಮತ್ತು ಅವರ ತಾಯಿ, ಬೆಳ್ಳಿ ಪದಕ ವಿಜೇತ ನೀರಜ್ ಚೋಪ್ರಾ ಅವರನ್ನು ಭೇಟಿಯಾಗಿದ್ದಾರೆ. ಈ ಭೇಟಿಯ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿವೆ.

ಇದೀಗ ಈ ವಿಡಿಯೋವನ್ನು ನೋಡಿದ ನೆಟ್ಟಿಗರು ಮನು ಭಾಕರ್ ಮತ್ತು ನೀರಜ್ ಚೋಪ್ರಾ ಇಷ್ಟರಲ್ಲೇ ಮದುವೆಯಾಗಲಿದ್ದಾರೆ ಎಂಬ ವದಂತಿಯನ್ನು ಹಬ್ಬಿಸಲು ಶುರು ಮಾಡಿದ್ದಾರೆ. ಈ ವದಂತಿ ಗಾಳಿಯಂತೆ ಎಲ್ಲೆಡೆ ಪಸರಿಸುವುದನ್ನು ಕಂಡ ಮನು ಭಾಕರ್ ಅವರ ತಂದೆ ಈ ಬಗ್ಗೆ ಪ್ರತಿಕ್ರಿಯೆ ನೀಡಿದ್ದಾರೆ.

ಬ್ರ್ಯಾಂಡ್ ಶುಲ್ಕ ಹೆಚ್ಚಳ

ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದ ನಂತರ ಮನು ಭಾಕರ್ ಜನಪ್ರಿಯತೆ ಗಗನದೆತ್ತರಕ್ಕೇರಿದೆ. ಈ ಜನಪ್ರಿಯತೆಯ ಲಾಭ ಪಡೆದುಕೊಳ್ಳಲು ಹೊರಟಿರುವ ಹಲವು ಪ್ರತಿಷ್ಠಿತ ಬ್ರ್ಯಾಂಡ್‌ಗಳು ಮನು ಅವರನ್ನು ತಮ್ಮ ಬ್ರ್ಯಾಂಡ್ ಅಂಬಾಸಿಡರ್ ಆಗಿ ನೇಮಿಸಿಕೊಳ್ಳಲು ಮುಂದಾಗಿವೆ. ಇದಕ್ಕೆ ಪೂರಕವಾಗಿ ಮನು ಕೂಡ ತಮ್ಮ ಬ್ರ್ಯಾಂಡ್ ಶುಲ್ಕವನ್ನು ಆರೇಳು ಪಟ್ಟು ಹೆಚ್ಚಿಸಿಕೊಂಡಿದ್ದಾರೆ ಎಂದು ವರದಿಯಾಗಿದೆ.

ಸಿಯಲ್ಲಿ ಮೆಡಿಕಲ್ ಮಾಫಿಯಾ



ಟೈಟಲ್‌ನಲ್ಲಿಯೇ ಕ್ಯೂರಿಯಾಸಿಟಿ ಮೂಡಿಸಿರುವ ಸಿ ಚಿತ್ರದ ಟ್ರೇಲರ್ ರಿಲೀಸ್ ಆಗಿದೆ. ನಟ ರಾಜವರ್ಧನ್ ಟ್ರೇಲರ್ ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಸಿಯಲ್ಲಿ ಮೆಡಿಕಲ್ ಮಾಫಿಯಾ ಕಥೆಯಿದ್ದು, ಅಪ್ಪ-ಮಗಳ ಬಾಂಧವ್ಯದ ಜತೆಗೆ ಥ್ರಿಲ್ಲರ್ ಅಂಶಗಳನ್ನು ಬೆರೆಸಿ ತೆರೆಯಲ್ಲಿ ಕಟ್ಟಿಕೊಡಲಾಗಿದೆ.

ಕಿರಣ್ ಸುಬ್ರಮಣಿ ಚಿತ್ರ ನಿರ್ದೇಶನ ಮಾಡುವುದರ ಜತೆಗೆ ನಾಯಕನಾಗಿಯೂ ನಟಿಸಿದ್ದಾರೆ. ಕಣ್ಣು ಕಾಣದ ಮಗಳಿಗೆ ಶಸ್ತ್ರ ಚಿಕಿತ್ಸೆ ಮಾಡಿಸಲು ಒದ್ದಾಡುವ ತಂದೆಯ ಪಾತ್ರ ಅವರದ್ದು. ಮಗಳ ಶಸ್ತ್ರ ಚಿಕಿತ್ಸೆಗಾಗಿ ಏನು ಬೇಕಾದರೂ ಮಾಡುವ ಹಠಕ್ಕೆ ಬೀಳುವ ಅಪ್ಪ, ಹೇಗೆ ಸಮಾಜವನ್ನು ಮುಕ್ಕಿ ತಿನ್ನುತ್ತಿರುವ ಮೆಡಿಕಲ್ ಮಾಫಿಯಾದ ಬುಡ ಅಲುಗಾಡಿಸುತ್ತಾನೆ ಎಂಬ ಸ್ಟೋರಿಯನ್ನು ಈ ಸಿನಿಮಾ ಒಳಗೊಂಡಿದೆ.

ಸಾನ್ವಿ, ಪ್ರಶಾಂತ್ ನಟನ, ಮಧುಮಿತಾ, ಶ್ರೀಧರ್ ರಾಮ್, ಶ್ರೀಕಾಂತ್, ಚೈತ್ರಾ, ನಿರ್ಮಲಾ ಮತ್ತಿತರರು ತಾರಾಗಣದಲ್ಲಿದ್ದಾರೆ. ಟ್ರೇಲರ್‌ನಲ್ಲಿಯೇ ನಿರೀಕ್ಷೆ ಹೆಚ್ಚಿಸಿರುವ ಸಿ ಚಿತ್ರಕ್ಕೆ ಎಲ್ಲೆಡೆ ಬೇಡಿಕೆ ಬರುತ್ತಿದ್ದು, ಪರಭಾಷೆಗೂ ಡಬ್ ಆಗುವ ಎಲ್ಲಾ ಲಕ್ಷಣಗಳು ಇವೆ. ಎಬಿ ಮುರಳೀಧರನ್ ಸಂಗೀತ ನಿರ್ದೇಶನ, ನವೀನ್ ಸೂರ್ಯ ಮತ್ತು ವೀರೇಶ್ ಕುಮಾರ್ ಛಾಯಾಗ್ರಹಣ ನಿರ್ವಹಿಸಿದ್ದಾರೆ. ಸಿ ಮುಂದಿನ ವಾರ ರಾಜ್ಯಾದ್ಯಂತ ತೆರೆಗೆ ಬರಲಿದೆ.

ಸಿ ಎಂಬುದಕ್ಕೆ ಸಿನಿಮಾದಲ್ಲಿ ಮೂರು ಅರ್ಥವಿದೆ. ಆದರೆ ಟ್ರೇಲರ್‌ನಲ್ಲಿ ಒಂದು ಸಿ ಬಗ್ಗೆ ಮಾತ್ರ ಹೇಳಿದ್ದೇವೆ. ಮತ್ತೆರಡು ಸಿ ಏನು ಹೇಳುತ್ತದೆ, ಅದರ ಅರ್ಥವೇನು ಎಂಬುದನ್ನು ಚಿತ್ರ ನೋಡಿಯೇ ತಿಳಿಯಬೇಕು. ಸಮಾಜಕ್ಕೆ ಅಗತ್ಯವಾದ ಸಂದೇಶವೂ ಚಿತ್ರದಲ್ಲಿದೆ.

-ಕಿರಣ್ ಸುಬ್ರಮಣಿ ನಿರ್ದೇಶಕ

ಭಾವನೆಗಳ ಪ್ರತಿರೂಪ ಲಕ್ಷ್ಮಿ



ಇಂದು ಸಿನಿಮಾಗಳ ನಡುವೆಯೇ ಅಲ್ಲಲ್ಲಿ ಕಿರುಚಿತ್ರಗಳು ಸದ್ದು ಮಾಡುತ್ತಿವೆ. ಅದರಲ್ಲಿ ಲಕ್ಷ್ಮಿ ಚಿತ್ರವೂ ಒಂದು. ಒಬ್ಬ ಮಗ ತನ್ನ ತಾಯಿಯ ಕನಸನ್ನು ನನಸು ಮಾಡುವ ಹಾಗೂ ಪೂರ್ವಜರ ಸಂಸ್ಕೃತಿ, ಆಚಾರ ವಿಚಾರಗಳನ್ನು ತೆರೆದಿಡುವ ಪ್ರಯತ್ನ ಈ ಕಿರುಚಿತ್ರದಲ್ಲಿದೆ. ಇದು ಅಭಿಜಿತ್ ಅವರ ತಾಯಿಯ ನಿಜವಾದ ಕಥೆಯಾಗಿದೆ. ಇಲ್ಲಿ ಲಕ್ಷ್ಮಿಯಾಗಿ ಹಿರಿಯ ನಟಿ ಪದ್ಮಜಾರಾವ್ ಅಭಿಯಿಸಿದ್ದಾರೆ. ನಳಿನಿ ಪುರೋಹಿತ್ ಹಾಗೂ ಆಕೆಯ ಮನೆಯ ಲಕ್ಷ್ಮಿ ನಡುವಿನ ಭಾವನಾತ್ಮಕ ಸಂಬಂಧ, ಅವರಿಬ್ಬರ ಮಧ್ಯೆ ನಡೆಯುವ ಮನದ ಮಾತುಗಳು, ಆಕೆಯ ಚಿತ್ರಕಲೆಯ ಕನಸನ್ನು ನನಸು ಮಾಡುವ ಮಗ ಇದಿಷ್ಟನ್ನು ಅರ್ಧ ಗಂಟೆಯ ಈ ಕಿರುಚಿತ್ರದಲ್ಲಿ ಕಟ್ಟಿಕೊಡಲಾಗಿದೆ. ಅಭಿಜಿತ್ ಪುರೋಹಿತ್ ಈ ಕಿರುಚಿತ್ರವನ್ನು ನಿರ್ದೇಶಿಸುವ ಜತೆಗೆ ಪುರೋಹಿತ್ ಪ್ರೊಡಕ್ಷನ್ಸ್ ಮೂಲಕ ನಿರ್ಮಾಣ ಮಾಡಿದ್ದಾರೆ.

ನಳಿನಿ ಪುರೋಹಿತ್, ಮಾಸ್ಟರ್ ವೇದ್ ಪುರೋಹಿತ್, ಶಾರದಾ ಜಾದೂಗರ್, ರಾಮ ರಾವ್, ಕಮಲಾ, ಬೇಬಿ ತನಿಷ್ಕಾ, ಬೇಬಿ ತ್ರಿಶಿಕಾ, ದೀಪ್ತಿ, ವೆಂಕಟನಾರಾಯಣಾಚಾರ್ಯ ತಾರಾಗಣದಲ್ಲಿದ್ದಾರೆ. ಅಭಿಜಿತ್ ಪುರೋಹಿತ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ಸಂಕಲನದ ಜತೆಗೆ ನಿರ್ದೇಶನ ಮಾಡಿದ್ದಾರೆ. ವಿಶ್ವಜಿತ್ ರಾವ್ ಛಾಯಾಗ್ರಹಣ, ಪ್ರಣವ್ ಅಯ್ಯಂಗಾರ್ ಸಂಗೀತ ನಿರ್ದೇಶನ ಸ್ನೇಹಾ ತೆಗ್ಗಿಹಾಳ್ ಸಾಹಿತ್ಯ ಈ ಕಿರುಚಿತ್ರಕ್ಕಿದೆ.

ಅಭಿ ಈ ಕಥೆ ಹೇಳಿದಾಗ ಮನಸಿಗೆ ನಾಟಿತು. ತಾಯಿ ಮಗನ ಪ್ರೀತಿ, ಎಮೋಷನಲ್ ಆದ ಸ್ಟೋರಿಯ ಜತೆಗೆ ನನಗೂ ಒಂದು ಚಿತ್ರ ನಿರ್ದೇಶನ ಮಾಡಲು ಇದು ಪ್ರೇರೇಪಿಸಿತು. ಯಾವಾಗಲೂ ಹಣವೇ ಮುಖ್ಯವಾಗಲ್ಲ ಎನ್ನುವುದನ್ನು ಈ ಕಿರುಚಿತ್ರದ ಮೂಲಕ ಸಾರಿ ಹೇಳಲಾಗಿದೆ.

-ಪದ್ಮಜಾ ರಾವ್ ನಟಿ

ಸಲ್ಲು ಡಾಕ್ಯುಮೆಂಟರಿಯಲ್ಲಿ ರಾಕಿಬಾಯಿ

ಸಲೀಂ ಖಾನ್ ಹಾಗೂ ಜಾವೇದ್ ಅಖ್ತರ್ ಜೋಡಿ ಹಿಂದಿ ಚಿತ್ರರಂಗದಲ್ಲಿ ಹೊಸ ಕ್ರಾಂತಿಯನ್ನೇ ಮಾಡಿತ್ತು. ಎಪ್ಪತ್ತರ ದಶಕದಲ್ಲಿ ಆಂಗ್ರಿ ಯಂಗ್ ಮ್ಯಾನ್ ಕಥೆಗಳನ್ನು ಹೆಣೆದ ಈ ಜೋಡಿ ಹಲವು ಹಿಟ್ ಚಿತ್ರಗಳನ್ನು ನೀಡಿತ್ತು. ಅಲ್ಲಿಯವರೆಗೆ ರೊಮ್ಯಾಂಟಿಂಗ್, ಫ್ಯಾಮಿಲಿ ಡ್ರಾಮಾ ಜಾನರ್‌ನಲ್ಲಿ ಮೂಡಿಬರುತ್ತಿದ್ದ ಸಿನಿಮಾಗಳು ಆಂಗ್ರಿ ಮ್ಯಾನ್ ಸ್ಟೋರಿಗಳಿಂದ ಪ್ರೇರೆಪಿತರಾಗಿ ಹೊಸ ಜಾನರ್‌ಗೆ ಹೊರಳಿದವು. ಶೋಲೆ, ಜಂಜೀರ್, ತ್ರಿಶೂಲ್.. ಹೀಗೆ ಹಲವು ಸಿನಿಮಾಗಳು ಸಲೀಂ ಹಾಗೂ ಜಾವೆದ್ ಕಥೆಯಿಂದ ಮೂಡಿಬಂದವಾಗಿವೆ. ಈ ಇಬ್ಬರು ದಿಗ್ಗಜರು ಹೊಸೆದ ಕಥೆಯನ್ನು ಆಧರಿಸಿ ಸಿದ್ಧವಾದ ಇಪ್ಪತ್ತಕ್ಕೂ ಹೆಚ್ಚು ಚಿತ್ರಗಳು ಸೂಪರ್ ಹಿಟ್ ಆಗಿವೆ. ಪ್ರೇಕ್ಷಕರು ಕೂಡ ಹೊಸತನದ ಕಥೆಗೆ ಮಾರು ಹೋಗಿದ್ದರು. ವಿಶೇಷ ಎಂದರೆ ಸಲೀಂ ಖಾನ್ ಮತ್ತಾರು ಅಲ್ಲ, ಬಾಲಿವುಡ್ ಖ್ಯಾತ ನಟ ಸಲ್ಮಾನ್ ಖಾನ್ ಅವರ ತಂದೆ. ಹೌದು, ಈಗ ಸಲ್ಲು ಬಾಯ್, ಈ ಭಲೆ ಜೋಡಿಯ ಕುರಿತು ಆಂಗ್ರಿ ಯಂಗ್ ಮ್ಯಾನ್ ಟೈಟಲ್‌ನಲ್ಲಿ ಡಾಕ್ಯುಮೆಂಟರಿ ಸೀರೀಸ್ ನಿರ್ಮಿಸುತ್ತಿದ್ದಾರೆ. ಈ ರೊಮ್ಯಾಂಟಿಕ್ ಡಾಕ್ಯೂಮೆಂಟರಿ ಇದೇ 20 ರಿಂದ ಓಟಿಟಿಯಲ್ಲಿ ಪ್ರಸಾರವಾಗಲಿದೆ.

ಸಲೀಂ ಖಾನ್ ಹಾಗೂ ಜಾವೇದ್ ಅಖ್ತರ್ ಅವರ ಈ ಡಾಕ್ಯುಮೆಂಟರಿಯ ಕುರಿತಂತೆ ಅಮಿತಾಭ್ ಬಚ್ಚನ್, ಧರ್ಮೇಂದ್ರ, ಹೃತಿಕ್ ರೋಷನ್, ಕರಣ್ ಜೋಹರ್, ಜಯಾ ಬಚ್ಚನ್ ಹೀಗೆ ಹಲವರು ಟ್ರೇಲರ್‌ನಲ್ಲಿ ಕಾಣಿಸಿಕೊಂಡು ಮಾತನಾಡಿದ್ದಾರೆ. ಅದರಲ್ಲೂ ಕನ್ನಡ ಚಿತ್ರರಂಗದಿಂದ ನಟ ಯಶ್, ಡಾಕ್ಯುಮೆಂಟರಿ ಟ್ರೇಲರ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಯಶ್, ಕೆಜಿಎಫ್ ಚಿತ್ರದಲ್ಲಿ ನಟಿಸಿ ಪ್ರಸಿದ್ಧಿ ಪಡೆದಿದ್ದರು. ಆಂಗ್ರಿ ಮ್ಯಾನ್ ಕಥೆಗೆ ಈ ಚಿತ್ರ ನಿದರ್ಶನವಾಗಿತ್ತು. ಹಾಗಾಗಿ ಟ್ರೇಲರ್ ಕುರಿತಂತೆ ಅಭಿಪ್ರಾಯ ವ್ಯಕ್ತಪಡಿಸಲು ಯಶ್‌ಗೂ ಅವಕಾಶ ಸಿಕ್ಕಿದೆ. ಇವತ್ತಿಗೂ ಜನ ಯಾಕೆ ಸಲೀಂ ಖಾನ್ ಹಾಗೂ ಜಾವೇದ್ ಅಖ್ತರ್ ಚಿತ್ರಗಳ ಡೈಲಾಗ್ಸ್ ಬಗ್ಗೆ ಮಾತನಾಡುತ್ತಾರೆ, ನೆನಪಿಸಿಕೊಳ್ಳುತ್ತಾರೆ ಎಂದರೆ ಅದು ಬರೀ ಡೈಲಾಗ್ಸ್ ಅಲ್ಲ, ಫಿಲಾಸಫಿ ಎಂದು ಹೇಳಿದ್ದಾರೆ. ಒಟ್ಟಾರೆ ಚಿತ್ರರಂಗದ ದಿಗ್ಗಜರ ಯಶೋಗಾಥೆಯನ್ನು ಡಾಕ್ಯುಮೆಂಟರಿ ಮೂಲಕ ಕಟ್ಟಿಕೊಡುತ್ತಿರುವುದು ಸಿನಿಪ್ರಿಯರಲ್ಲಿ ಸಂತಸ ತಂದಿದೆ.

ಎಡಗೈಯೇ ಅಪಘಾತಕ್ಕೆ ಕಾರಣ ಹೊಸ ಪೋಸ್ಟರ್ ರಿಲೀಸ್

ಅಂತಾರಾಷ್ಟ್ರೀಯ ಎಡಗೈ ಬಳಕೆದಾರರ ದಿನದ ಅಂಗವಾಗಿ ಎಡಗೈ ಅಪಘಾತಕ್ಕೆ ಕಾರಣ ಸಿನಿಮಾ ತಂಡ ಹೊಸ ಪೋಸ್ಟರ್ ಬಿಡುಗಡೆ ಮಾಡಿದೆ. ಎಡಗೈ ಬಳಸುವವರನ್ನೇ ಗಮನದಲ್ಲಿಟ್ಟುಕೊಂಡು, ಅವರ ಜೀವನ ಶೈಲಿ ಕುರಿತು ಈ ಚಿತ್ರವನ್ನು ಕಟ್ಟಿಕೊಡಲಾಗಿದೆ. ಅದರಂತೆಯೇ ಪೋಸ್ಟರ್ ಕೂಡ ಆಕರ್ಷಕವಾಗಿದೆ. ಸೆಟ್ಟೇರಿದ ದಿನದಿಂದಲೂ ಚಿತ್ರತಂಡ ವಿಭಿನ್ನ ಪೋಸ್ಟರ್ ಅನಾವರಣ ಮಾಡುವ ಮೂಲಕ ಕುತೂಹಲ ಮೂಡಿಸುತ್ತಿದೆ. ಎಡಗೈ ಬಳಸುವುದೇ ಕೆಲವು ಅವಘಡಗಳಿಗೆ ಕಾರಣವೇ ಎಂಬ ನಂಬಿಕೆ ಕೆಲವರಲ್ಲಿದೆ, ಅದು ಯಾಕೆ, ಹೇಗೆ ಅದೆಲ್ಲವೂ ಮೂಢನಂಬಿಕೆ ಎಂಬುದನ್ನು ಚಿತ್ರದಲ್ಲಿ ಹೇಳುವ ಪ್ರಯತ್ನ ಮಾಡಲಾಗುತ್ತಿದೆ.

ಸಮರ್ಥ್.ಬಿ.ಕಡಕೊಳ್ ಈ ಚಿತ್ರದ ನಿರ್ದೇಶನ ಮಾಡುತ್ತಿದ್ದು, ಈ ಸಿನಿಮಾದ ಮೂಲಕ ಚಂದನವನದಲ್ಲಿ ನಿರ್ದೇಶಕರಾಗಿ ಗುರುತಿಸಿಕೊಳ್ಳುತ್ತಿದ್ದಾರೆ. ಮರ್ಡರ್ ಮಿಸ್ಟರಿ ಸ್ಟೋರಿಯ ಜತೆಗೆ ಸಸ್ಪೆನ್ಸ್, ಥ್ರಿಲ್ಲರ್ ಅಂಶಗಳನ್ನು ಒಳಗೊಂಡ ಕಥೆ ಈ ಸಿನಿಮಾದಲ್ಲಿದೆ. ದಿಗಂತ್ ನಾಯಕನಾಗಿ ನಟಿಸಿದ್ದು, ದಿಗ್ಗಿಗೆ ಜತೆಯಾಗಿ ಹೊಸ ಧನು ಹರ್ಷ ನಟಿಸುತ್ತಿದ್ದಾರೆ. ನಿಧಿ ಸುಬ್ಬಯ್ಯ, ರಾಧಿಕಾ ನಾರಾಯಣ್, ಭಜರಂಗಿ ಲೋಕಿ, ಕೃಷ್ಣ ಹೆಬ್ಬಾಳ್ ಕೂಡಾ ಚಿತ್ರದ ಪ್ರಮುಖ ಪಾತ್ರದಲ್ಲಿದ್ದಾರೆ.

ಹೈಫನ್ ಪಿಕ್ಚರ್ಸ್ ಹಾಗೂ ಗುರುದತ್ ಗಾಣಿಗ ಫಿಲಂಸ್ ಬ್ಯಾನರ್‌ನಲ್ಲಿ ಗುರುದತ್ ಗಾಣಿಗ ಹಾಗೂ ಸಮರ್ಥ್.ಬಿ.ಕಡಕೊಳ್ ಜಂಟಿಯಾಗಿ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಅಭಿಮನ್ಯು ಸದಾನಂದ್ ಛಾಯಾಗ್ರಹಣ, ರಾಹುಲ್.ವಿ.ಪಾರ್ವತಿಕರ್ ಹಾಗೂ ಶ್ರೀಪಾದ್ ಜೋಶಿ ಸಂಭಾಷಣೆ ಈ ಈ ಚಿತ್ರಕ್ಕಿದೆ. ಚಿತ್ರೀಕರಣ ಮುಗಿಸಿರುವ ಎಡಗೈ ಅಪಘಾತಕ್ಕೆ ಕಾರಣ ಶೀಘ್ರದಲ್ಲಿಯೇ ತೆರೆಗೆ ಬರಲಿದೆ.



ಚಂದನವನದಲ್ಲಿ ಮದ್ದಾನೆ

ಎಸ್.ಸತೀಶ್ ಕುಮಾರ್ ನಿರ್ದೇಶನದಲ್ಲಿ ಸೆಟ್ಟೇರಿರುವ ಮದ್ದಾನೆ ಚಿತ್ರದ ಮುಹೂರ್ತ ಸಮಾರಂಭ ಬಂಡೆ ಮಹಾಕಾಳಿ ದೇವಸ್ಥಾನದಲ್ಲಿ ನೆರವೇರಿತು. ಸಿನಿಮಾ ನಿರ್ದೇಶನ ನನ್ನ ಕನಸು, ಅದಕ್ಕಾಗಿಯೇ ನಿರ್ದೇಶನದ ಬಗ್ಗೆ ಕಲಿತು ಬಂದಿದ್ದೇನೆ. ಅದೆಲ್ಲದರ ಅನುಭವದಿಂದ ಈಗ ಮದ್ದಾನೆಗೆ ಆ್ಯಕ್ಷನ್ ಕಟ್ ಹೇಳುತ್ತಿದ್ದೇನೆ. ಇದೊಂದು ಹಳ್ಳಿ ಹಾಗೂ ಕಾಡಿನ ನಡುವೆ ನಡೆಯುವ ಕಥೆ. ಹೆಚ್ಚಿನ ಭಾಗದ ಚಿತ್ರೀಕರಣ ಚಿಕ್ಕಮಗಳೂರಿನಲ್ಲೇ ನಡೆಯಲಿದೆ ಎಂದು ನಿರ್ದೇಶಕ ಸತೀಶ್‌ಕುಮಾರ್ ಹೇಳಿದರು.

ನಿಹಾನ್ ರಾಜ್ ನಾಯಕನಾಗಿ ನಟಿಸುತ್ತಿದ್ದು, ಅರವಿಂದ್ ರಾವ್ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಉಳಿದ ತಾರಾಬಗದ ಆಯ್ಕೆ ನಡೆಯುತ್ತಿದೆ. ವಿನೋದ್ ಭಾರತಿ ಛಾಯಾಗ್ರಹಣ, ಸ್ವಾಮಿನಾಥನ್ ಸಂಗೀತ ನಿರ್ದೇಶನ, ಪುನೀತ್ ಆರ್ಯ ಸಾಹಿತ್ಯ ಹಾಗೂ ಡಿಫರೆಂಟ್ ಡ್ಯಾನಿ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಪ್ಯಾಂಥರ್ಸ್ ಕ್ರಿಯೇಟಿವ್ ಸಿನಿಮಾಸ್ ಲಾಂಛನದಲ್ಲಿ ರಂಜನ.ಎಂ. ಕುಮಾವತ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ.

ಜಂಗಮರ ಸ್ತುತಿಸಿದ ರವೀಂದ್ರ

ಚುಟು ಚುಟು ಖ್ಯಾತಿಯ ಗಾಯಕ ರವೀಂದ್ರ, ಸೊರಗಾವಿ, ಇಂಚಗೇರಿ ಆಧ್ಯಾತ್ಮಿಕ ಸಂಪ್ರದಾಯ ಗುರುಲಿಂಗ ಜಂಗಮ ಮಹಾರಾಜ ಭಕ್ತಿ ಪ್ರಧಾನ ಹಾಡಿಗೆ ದನಿಯಾಗಿದ್ದಾರೆ. ಕೃಷ್ಣಾ ನದಿ ತೀರದ ಹಿಪ್ಪರಗಿಯ ಇಂಚಗೇರಿ ಮಠದ ಕಲ್ಪತರುವಾದ ಸಂಗಮೇಶ್ವರ ಮಹಾರಾಜರ ಜೀವನ ಆಧಾರಿತ ಸಮರ್ಥ ಸದ್ಗುರು ಶ್ರೀಸಂಗಮೇಶ್ವರ ಮಹಾರಾಜರು ಚಿತ್ರ ಮೂಡಿಬರುತ್ತಿದೆ. ಈ ಚಿತ್ರದಲ್ಲಿ ಗುರುಪರಂಪರೆ ಹೇಳುವ ಹಾಡಿದ್ದು, ನಿರ್ದೇಶಕ ರಾಜಾ ರವಿಶಂಕರ್ ಸಾಹಿತ್ಯ ರಚಿಸಿದ್ದಾರೆ. ಎ.ಟಿ.ರವೀಶ್ ಸಂಗೀತ ಸಂಯೋಜಿಸಿದ್ದು, ಈ ಹಾಡಿಗೆ ರವೀಂದ್ರ ದನಿಯಾಗಿದ್ದಾರೆ. ರಾಜಾ ರವಿಶಂಕರ್ ನಿರ್ದೇಶಿಸುತ್ತಿರುವ ಈ ಚಿತ್ರವನ್ನು ಗಿರಿಮಲ್ಲೇಶ್ವರ ಕಂಬೈನ್ಸ್‌ನಲ್ಲಿ ಮಾಧವಾನಂದ ನಿರ್ಮಾಣ ಮಾಡುತ್ತಿದ್ದಾರೆ. ರವಿ ನಾರಾಯಣ್, ಸಂಗಮೇಶ್ವರರ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಹಿರಿಯ ನಟ ರಾಮಕೃಷ್ಣ, ವಿಜಯಕಾಶಿ, ಸಂದೀಪ್ ಮಲಾನಿ, ನಾರಾಯಣ ಸ್ವಾಮಿ, ತುಷಾರ್ ಮಲಗೊಂಡ, ನಟಿಯರಾದ ವಿನಯಾ ಪ್ರಸಾದ್, ಭವ್ಯಶ್ರೀ ರೈ ಮುಂತಾದವರು ತಾರಾಬಳಗದಲ್ಲಿದ್ದಾರೆ. ಸಿ.ನಾರಾಯಣ್ ಛಾಯಾಗ್ರಾಹಣ, ಎ.ಟಿ.ರವೀಶ್ ಸಂಗೀತ, ಡಿ ರವಿ ಸಂಕಲನ ಈ ಚಿತ್ರಕ್ಕಿದೆ.